ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 6
ಸಂಚಿಕೆ 2
ಏಪ್ರಿಲ್ - ಜೂನ್–1977

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE: Kannada Quarterly of the Bangalore University, Bangalore
Vol. 6. No. 2, April-June 1977

Chief Editor: **Dr. G. S. Sivarudrappa**

ವಾರ್ಷಿಕ ಚಂದಾ : ರೂ. 8-00
ರೂ. 5-00 (ವಿದ್ಯಾರ್ಥಿಗಳಿಗೆ)

ಪ್ರಕಾಶಕರು : ಹೆಚ್. ಆರ್. ದಾಸೇಗೌಡ
ನಿರ್ದೇಶಕರು, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಪರಿವಿಡಿ

ಮಗು

ವೇಣುಗೋಪಾಲ ಸೊರಬ

ಬಚ್ಚ ಬರಿದಾದ ಕರಿಹಲಗೆಯ ಮೇಲೆ
ಮಗು ಎಳೆದ ಮೊದಲ ಗೆರೆ :
ಏನು ಸಾಹಸ, ಅಬ್ಬ ! ಎಂಥ ಧೈರ್ಯ !
ಗೆರೆ ಎನ್ನುವುದು ಗೆರೆಯಾಗಿ ಉಳಿಯುವುದಿಲ್ಲ–
ಆ ಈ ಕಡೆಗೆ ರೆಕ್ಕೆ ಮೂಡುವುದು.
ಮೈಯೆಲ್ಲ ಕಣ್ಣು ಮೂಗು ಕಿವಿ
ದೇಹವೆಲ್ಲ ಬರಿ ಹೊಟ್ಟೆಯೇ.

ಮಗು ಬರೆದ ಚಿತ್ರ ಅಷ್ಟುದಿನವೂ
ಅಷ್ಟಾವಕ್ರನ ತರಹ
ಒಂದೊಂದು ಗೆರೆಗೂ
ನೂರಾರು ರೂಪ, ನೂರಾರು ರಾದ್ಧಾಂತ !
ಕೀಚಕನ ಮೀಸೆ ದ್ರೌಪದಿಗೆ ಬಡಾಯಿಸುವ
ಕರ್ಣನ ಕುಂಡಲ ಸುಭದ್ರೆಗೆ ಹರಡುವ
ರಾಮನ ಬಿಲ್ಲು ಲಕ್ಷ್ಮಣನ ತುಟಿಯ ಕಿಚಾಯಿಸುವ
ಕೋಗಿಲೆಗೆ ನವಿಲಿನ ಪುಚ್ಛ ಅಂಟಿಸುವ
ಮಹಡಿಯ ಮನೆಗೆ ಗಿರಣಿಯ ಚಿಮಣಿಗಳ ಹೊಂದಿಸುವ
ಕುದುರೆಯ ಬಾಲಕ್ಕೆ ನಾಯಿಯ ಮೂತಿ ಜೋಡಿಸುವ
ಮಗುವಿನ ಪ್ರಚಂಡ ಬುದ್ಧಿಗೆ, ಕಸುವಿಗೆ
ಇಲ್ಲ ಮಿತಿ, ಇಲ್ಲ ಖತಿ.

ಶ್ರುತಿ ಕೂಡಿದಷ್ಟೇ ಹಾಡು–
ಉಳಿದಿದ್ದೆಲ್ಲ ಮಾತು, ಕೇಕೆ, ಆರ್ಭಟ, ಹಾರಾಟ
ಹೆಜ್ಜೆ ಹೆಜ್ಜೆಗೂ ಮೆಟ್ಟಿಲನ್ನೇರಿ
ಹೂ ಹೂವಿನ ತೇರನ್ನೇರಿ
ತಿರುಗಣಿಯ ತೇರಿನ ತುಂಬ ಉತ್ಸಾಹ ಕೆಚ್ಚು.

ಮಗುವಿಗೆ ಮೀಸೆ ಬಲಿತು
ಮಗುವಿಗೆ ಹಾಸ್ಯ ಹೊಳೆತು
ನಿಂತನಿಂತಲ್ಲೆಲ್ಲ ಕಾಡುಹರಟೆ, ವ್ಯಾಖ್ಯಾನ
ಅಣಕು ನಾಟಕ, ಅನಧ್ಯಯನದ ಉಪನ್ಯಾಸ
ಭಾಗವಂತಿಕೆ ಮೇಳ, ಹರಿಕತೆ, ಕಟ್ಟುಕತೆ
ಗೆಜ್ಜೆ ಗೆಜ್ಜೆಯ ಉಲಿಹ ಸಜ್ಜುಗೊಳಿಸುವ ವಿನಯ, ವೀತಭಯ.

ಮಗುವಿಗೆ ಪಲ್ಲಂಗದಲ್ಲಿ ಕನಸು
ಕೋಲಿನ ತುದಿಗೆ ಗೆಣಸು ನೋಡಿ ಹಾರಾಡುವಂತ ಇರುಸುಮುರುಸು
ತೂಕ ತಪ್ಪಿದರೆ ಅಪ್ಪೀತಪ್ಪಿ
ಕುದುರೆಯೇರಿದ್ದಾಗ ಕಾಲುಜಾರಿದರೆ
ಕೊಳಲು ತುಂಬುವ ತುಂಡು ತುಂಡು ಉಸುರು
ಘಾಸಿಗೊಳ್ಳುವ ಪಿಕಾಸಿ ಹಾರೆಗಳ
ಗುದ್ದಲಿಯ ಬುದ್ದಲಿಯ ಕಪ್ಪುಸ್ವರ
ಅದರದೇ ಅನುರಣನ.

ಮಗುವಿಗೆ ಹಲ್ಲು ಉದುರಿ
ತಾತನ ಖ್ಯಾತಿಗೆ ಊರೆಗೋಲಿನ ಬಳುಕು !
ತಾನು ಮಾಡಿದ್ದಾದರೂ ಏನು ?
ತಾನು ಮಾಡದೆ ಇದ್ದದ್ದು ಏನು ?
ಯಾರಯಾರದೋ ಬೆನ್ನುಹಿಡಿದು
ಯಾರಯಾರದೋ ಬೆರಳು ಕತ್ತರಿ ಹಿಡಿದು
ಎಲ್ಲಕ್ಕೂ ಎಲ್ಲದಕ್ಕೂ ಅಪಹಾಸ್ಯ ತರಿಸುವ
ಮುಖಾಮುಖಿ, ಮುಖವೆ ಇಲ್ಲದ ದುರ್ಮುಖಿ.

ಮಗುವಿನ ಮುಂದೆ ಮುರಿದ ಸ್ಲೇಟು ಬಿದ್ದಿದೆ
ಆಟಪಾಟ ಊಟಗಳ ಗತಿಗೀಳು
ಬದಲಾಗಿ ಬಯಲಾಗಿ
ಮಗುವಿಗೆ ಚಣಚಣಕ್ಕೂ ಹೊಸಕನಸು
ಹೊತ್ತು ಬೆಳಕಿನ ಬಾಲ ಮಾರುದ್ದ ಬೆಳೆಯುವ ನೆಗಸು.

ಮಗುವಿಗೆ ಕನ್ನಡಿಯಾಚೆಗಿನ ಬಿರುಕು
ಗೋಚರವಾಗಿ, ಗೋಚಾರಗಳ ಲೆಕ್ಕ ಅರಿವಾಗಿ

ಇನ್ನೂ ಅದೇ ಗೊಣಗು,
ಮೊದಲಿನದ್ದೇ ಮೊಳಗು,
ಒಂದೊಂದಲೆ ಒಂದು !
ಲೆಕ್ಕಕ್ಕೆ ತೇಜಿ ಏರುವ ಹೊತ್ತು
ಕೈಕಟ್ಟಿ ಕುಳಿತುಕೊಳಬಹುದೇನು ?
ಮಗುವಿನ ಮನಸ್ಸು ಅತ್ತಿಹಣ್ಣು
ಬ್ರಹ್ಮಾಂಡ ಬಿರಿಯುವುದು ಅಲ್ಲಿ !

ಶರತ್‌ಚಂದ್ರರ ಕೆಲವು ಸ್ತ್ರೀಪಾತ್ರಗಳು*

ಸೂ. ವೆಂ. ಅರಗ

ಶರತ್‌ಚಂದ್ರ ಚಟರ್ಜಿಯವರು ಬಂಗಾಳದ ಅತ್ಯಂತ ಜನಪ್ರಿಯ ಕಾದಂಬರಿಕಾರರು. ಅವರ ಕಾದಂಬರಿಗಳು, ಕಥೆಗಳು ಆ ಕಾಲದಲ್ಲಿ ಮಾತ್ರವಲ್ಲ, ಈಗಲೂ ಬಂಗಾಳದಲ್ಲಿ ಮಾತ್ರವಲ್ಲ, ಭಾರತದಾದ್ಯಂತ ಜನಪ್ರಿಯವಾಗಿ ಉಳಿದಿವೆ. ಈ ಜನಪ್ರಿಯತೆಗೆ ಕಾರಣ ಅವರು ಚಿತ್ರಿಸಿದ ಬಂಗಾಳದ ಸಾಮಾಜಿಕ ಜೀವನ. ಅದನ್ನು ಅವರು ಮೇಲೆ ನೋಡಿ ಚಿತ್ರಿಸಿಲ್ಲ ; ಅದರ ಆಳವನ್ನೂ ಹೊಕ್ಕು ನೋಡಿದ್ದಾರೆ, ವಿಸ್ತಾರವನ್ನೂ, ವೈವಿಧ್ಯವನ್ನೂ ಕಂಡು ಚಿತ್ರಿಸಿದ್ದಾರೆ. ಬಡತನ, ರೋಗರುಜಿನಗಳು, ಅಂಧ ಸಂಪ್ರದಾಯಗಳು, ಮೂಢನಂಬಿಕೆಗಳು, ಸಾಮಾಜಿಕ ಕಟ್ಟುಪಾಡುಗಳು, ನೀತಿನಿಯಮಗಳು ; ಶ್ರೀಮಂತರ ಸ್ವಚ್ಛಂದ ವರ್ತನೆ, ದಬ್ಬಾಳಿಕೆ ದೌರ್ಜನ್ಯ. ಇವೆಲ್ಲವುಗಳಿಂದ ತುಂಬಿರುವ ಆ ಬಂಗಾಳೀ ಸಾಮಾಜಿಕ ಜೀವನದ ನಡುವೆಯೂ ಶರತ್‌ರವರು ಹೊಸಭಾವನೆಗಳನ್ನೂ, ಸುಧಾರಣೆಗಳನ್ನೂ, ಮನೋವೈಶಾಲ್ಯವನ್ನೂ ಗುರುತಿಸಿದ್ದಾರೆ. ಉದಾತ್ತವ್ಯಕ್ತಿಗಳನ್ನೂ, ಅವರ ತ್ಯಾಗವನ್ನೂ ಚಿತ್ರಿಸಿ ಆ ಸಾಮಾಜಿಕ ಮರುಭೂಮಿಯಲ್ಲಿಯೂ ಸಿಹಿ ನೀರೊರತೆಗಳನ್ನು ಕಂಡಿದ್ದಾರೆ. ಆದ್ದರಿಂದಲೇ ಆ ಕಾದಂಬರಿಗಳು ಅಷ್ಟು ಜನಪ್ರಿಯವಾಗಿವೆ ; ಆ ಪಾತ್ರಗಳು ಅಷ್ಟು ಧೀಮಂತವಾಗಿವೆ–ಅಂಥ ಹಲವು ಸ್ತ್ರೀಪಾತ್ರಗಳು ಅವರ ಕಾದಂಬರಿಗಳಲ್ಲಿ ತೊಳಗಿ ಬೆಳಗಿವೆ.

1

ಶರತ್‌ರವರ ಸ್ತ್ರೀಪಾತ್ರಗಳನ್ನು ಪರಿಶೀಲಿಸುವಾಗ ಮೊದಲು ಗ್ರಾಮ್ಯ ಜೀವನದಲ್ಲಿ ಬರುವ ಪಾತ್ರಗಳನ್ನು ಗಮನಿಸಬೇಕು. ಬಾಲ್ಯ ವಿವಾಹದ ಕಠಿಣ ನಿಯಮವನ್ನೊಳಗೊಂಡ ಆ ಹಿಂದೂ ಸಮಾಜದಲ್ಲಿ ಹುಡುಗಿ ದೊಡ್ಡವಳಾಗುವುದಕ್ಕೆ ಮುಂಚೆಯೇ ಕನ್ಯಾಸೆರೆ ಬಿಡಿಸಬೇಕೆಂಬ ಪದ್ಧತಿಗೆ ಬಲಿಬಿದ್ದು, ವರದಕ್ಷಿಣೆಯ ಪಿಡುಗಿಗೂ ಸಿಕ್ಕಿಬಿದ್ದು ತಪ್ಪಿಸಿಕೊಳ್ಳಲಾಗದ ಬಡ ಕುಟುಂಬಗಳಲ್ಲಿ ಚಿಕ್ಕ ಹುಡುಗಿಯನ್ನು ವಯಸ್ಸಾದ ಮುದುಕನಿಗೆ, ಹಲವು ಪತ್ನಿಯನ್ನುಳ್ಳ 'ಕುಲೀನ'ನಿಗೆ ಕೊಟ್ಟು

* ಶರತ್‌ಚಂದ್ರ ಶತಮಾನೋತ್ಸವ ಸಮಾರಂಭದಂದು (ಅಕ್ಟೋಬರ್ 10) ನಡೆದ ವಿಚಾರ ಗೋಷ್ಠಿಯಲ್ಲಿ ಓದಿದ ಪತ್ರಿಕೆ.

ಮದುವೆ ಮಾಡುತ್ತಿದ್ದ ಪ್ರಸಂಗಗಳು ಅವರ ಹಲವಾರು ಕಾದಂಬರಿಗಳಲ್ಲಿ ಬರುತ್ತವೆ. 'ಶ್ರೀಕಾಂತ'ದಲ್ಲಿ ಬರುವ '**ರಾಜಲಕ್ಷ್ಮಿ**' ಹಾಗೆ ಮದುವೆಯಾದವಳು; ಅವಳ ಸೋದರ ಮಾವ ಅವಳನ್ನೂ ಅವಳಕ್ಕನನ್ನೂ ಒಂದೇ ಹಸೆಮಣೆಯ ಮೇಲೆ ಒಬ್ಬ ಅಡಿಗೆಯ ಭಟ್ಟನಿಗೆ 70 ರೂಪಾಯಿ ವರದಕ್ಷಿಣೆಯೊಡನೆ ಕೊಡುತ್ತಾನೆ. ಮದುವೆಯ ನಂತರ ಆ ಭಟ್ಟನ ಪತ್ತೆಯೇ ಇಲ್ಲ. ಸಕಾಲದಲ್ಲಿ ಮದುವೆಯಾಗದೆ ಸಾಮಾಜಿಕ ಕಿರುಕುಳಕ್ಕೆ ಸಿಕ್ಕು ತೊಳಲಾಡುವ ಹೆಣ್ಣಿನ ಮನಕರಗುವ ಚಿತ್ರ 'ಅರಕ್ಷಣೀಯ'ದ '**ಜ್ಞಾನದಾ**' ಇಂಥದೇ ಇನ್ನೊಂದು ಚಿತ್ರ. 'ಬ್ರಾಹ್ಮಣರ ಹುಡುಗಿ'ಯಲ್ಲಿ ಬರುವ '**ಸಂಧ್ಯಾ**' ಅವಳನ್ನು ಮದುವೆಯಾಗಲು ಮುಂದೆ ಬಂದ ಊರಿನ ಶ್ರೀಮಂತ, ಕುಲೀನ, ಗೋಕುಲ ಚಟರ್ಜಿಗೆ ಅವಳ ಅಜ್ಜನ ವಯಸ್ಸು—ಅವಳು ಆ ಮಾತನ್ನೆತ್ತಿ ಅವರನ್ನು ಹೀಯಾಳಿಸಿದ್ದರಿಂದ ಕೋಪದಿಂದ ಅವರು ಇವಳಿಗೆ ಗೊತ್ತಾಗಿದ್ದ ಮದುವೆಯನ್ನು ತಪ್ಪಿಸಿ, ಅವರು ಸಮಾಜದಲ್ಲಿ ತಲೆಯೆತ್ತದಂತೆ ಮಾಡುತ್ತಾರೆ. 'ಗೃಹದಾಹ'ದಲ್ಲಿ ಬರುವ **ಮೃಣಾಳ** ಇನ್ನೂ ಚಿಕ್ಕವಯಸ್ಸಿನಲ್ಲಿಯೇ ಅರುವತ್ತು ವರ್ಷದ ಪತಿಯನ್ನು ಮದುವೆಯಾಗಿ ನಗುನಗುತ್ತಲೇ ಅವನೊಡನೆ ಸಂಸಾರಮಾಡಿ ಕೊಂಡಿರುವುದನ್ನು ಕಾಣುತ್ತೇವೆ.

2

ಇಂಥ ಮದುವೆಗಳ ಪರಿಣಾಮವೆಂದರೆ ಆ ಹೆಣ್ಣುಮಕ್ಕಳ ವೈಧವ್ಯ. ಶರತ್‌ರ ಕಾದಂಬರಿಗಳಲ್ಲಿ ಬಾಲವಿಧವೆಯರ ಪಾತ್ರಗಳು ಸಾಕಷ್ಟು ಅಧಿಕ ಸಂಖ್ಯೆ ಯಲ್ಲಿಯೇ ಇವೆ. 'ಶುಭದಾ' ದಲ್ಲಿ ಬರುವ **ಲಲನಾ** ಬಾಲವಿಧವೆ. ತಾನು ಬಾಲ್ಯದಲ್ಲಿ ಪ್ರೀತಿಸಿದ್ದ ಶಾರದಾಚರಣ ಶ್ರೀಮಂತನಾದರೂ ತಂದೆಯ ಮಾತನ್ನು ಮೀರಲಾರದವನಾದ್ದರಿಂದ ಬಡವರ ಮಗಳು ಲಲನಾ ಒಬ್ಬ ವೃದ್ಧನನ್ನು ಮದುವೆ ಯಾಗಿ ಬೇಗಲೇ ವಿಧವೆಯಾಗುತ್ತಾಳೆ. ಬಾಲ್ಯ ಪ್ರಣಯವನ್ನು ಮರೆಯಲಾರದೆ ಅವಳು ಶಾರದಾಚರಣನೊಡನೆ ಪ್ರೀತಿಯಿಂದಲೇ ಇದ್ದರೂ ತಿಳಿವಳಿಕೆ ಬಂದಮೇಲೆ, ಸಾಮಾಜಿಕ ನೀತಿನಿಯಮಗಳಿಗಂಜಿ ಅವನ ಸಂಪರ್ಕ ತ್ಯಜಿಸುತ್ತಾಳೆ. ತಮಗೆ ಕಡುದಾರಿದ್ರ್ಯ ಬಂದು ಒಂದೊಂದು ಹೊತ್ತಿನ ಊಟಕ್ಕೂ ತೊಂದರೆಯಾದಾಗ ಈಕೆ ಧೈರ್ಯಮಾಡಿ ಶಾರದಾಚರಣನನ್ನು ಗುಟ್ಟಾಗಿ ಕಂಡು ತನ್ನನ್ನು ಕೈಹಿಡಿಯುವ ಧೈರ್ಯವಿದೆಯೇ ಎಂದು ಕೇಳುತ್ತಾಳೆ. ಅವನು ಆಗಲೂ ತಂದೆಗೆ ಹೆದರಿ ನಿರಾಕರಿಸಲು ಈಕೆ ಆತ್ಮಹತ್ಯೆಗೆ ಪ್ರಯತ್ನಿಸುತ್ತಾಳೆ. ಆದರೆ ಅದಕ್ಕೆ ಅಡ್ಡಿಯೊದಗಿ ಒಬ್ಬ ಅವಿವಾಹಿತ ಶ್ರೀಮಂತ ಯುವಕನ ಕೈಗೆ ಸಿಕ್ಕಿ ಅವನ ಪ್ರೇಯಸಿಯಂತೆ ಇರತೊಡಗುತ್ತಾಳೆ. ಬ್ರಾಹ್ಮಣರ ಹುಡುಗಿಯಲ್ಲಿ ಬರುವ '**ಜ್ಞಾನದಾ**' ಚಿಕ್ಕ ವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡರೂ ವೃದ್ಧರಾದ ಅತ್ತೆಮಾವಂದಿರ ಸೇವೆ ಮಾಡಿಕೊಂಡು ಇರುತ್ತಾಳೆ. ಅಕ್ಕನಿಗೆ ಬಾಯಿಲೆಯೆಂದು ಕೇಳಿ ಅವಳ ಸೇವೆಗಾಗಿ

ಹೋದಾಗ ಅಕ್ಕ ತನ್ನ ಮಗನನ್ನು ಇವಳ ಕೈಲಿಟ್ಟು ಮೃತಳಾಗುತ್ತಾಳೆ. ಭಾವ ಪತ್ನಿಯ ಮರಣದ ದುಃಖದ ನಡುವೆ ನಾದಿನಿಯನ್ನು 'ಚಿಕ್ಕ ಯಜಮಾನೀ' ಎಂದು ಕರೆಯುತ್ತಾ ಅವಳಲ್ಲಿ ಇಲ್ಲದ ಆಸೆಗಳನ್ನು ಹುಟ್ಟಿಸಿ ವಶಪಡಿಸಿಕೊಳ್ಳುತ್ತಾನೆ. ತಾನು ಗರ್ಭಿಣಿಯೆಂದು ಅರಿತ ಜ್ಞಾನದಾ ಇತ್ತ ತನ್ನನ್ನೇ ನಂಬಿಕೊಂಡಿದ್ದ ಅತ್ತೆ ಮಾವನ ಬಳಿಗೂ ಹೋಗುವಂತಿಲ್ಲ, ಇತ್ತ ಭಾವ ಬೇರೊಂದು ಹೆಣ್ಣನ್ನು ಮದುವೆ ಯಾಗುವ ಸಿದ್ಧತೆಯಲ್ಲಿದ್ದಾನೆ. ವೈದ್ಯರನ್ನು ಕರೆಸಿ ಇವಳಿಗೆ ಔಷಧ ಕೊಡಿಸುವ ಯತ್ನ ಮಾಡುತ್ತಿದ್ದಾನೆ. ವೈದ್ಯ ಭ್ರೂಣಹತ್ಯೆಯ ಪಾಪಕ್ಕೆ ನಾನು ಸಿದ್ಧನಿಲ್ಲ ನೆನ್ನಲು ಅವನೇ ಅವಳ ಆ ಸ್ಥಿತಿಗೆ ಕಾರಣನೆಂದು ಆಪಾದಿಸಿ ಜ್ಞಾನದಾಳನ್ನು ಅವಳ ಖರ್ಚಿಗೆ 50 ರೂಪಾಯಿ ಕೊಟ್ಟು ಮನೆಯಿಂದ ಹೊರಗೆ ಹಾಕುತ್ತಾನೆ. ಆ ಕುಲೀನ ಗೋಕುಲ ಚಟರ್ಜಿ–ಶ್ರೀಕಾಂತದಲ್ಲಿ ಬರುವ **'ಕಮಲಲತೆ'** ಯ **ಪಾತ್ರ** ಇನ್ನೂ ಮನಕರಗುವಂಥದು. ಈಕೆ ಹದಿನೇಳನೇ ವಯಸ್ಸಿನಲ್ಲಿಯೇ ವಿಧವೆ ಯಾಗುತ್ತಾಳೆ. ತಮ್ಮ ಮನೆಯಲ್ಲಿ ಕಾರಕೂನನಾಗಿದ್ದ ಮನ್ಮಥನೊಡನೆ ಸಂಬಂಧ ವಿಟ್ಟುಕೊಂಡು ಗರ್ಭಿಣಿಯಾದಳು. ಸಾಮಾಜಿಕ ಹಾಗೂ ಧಾರ್ಮಿಕ ಭೀತಿಯಿಂದ ವಿಷಪ್ರಾಶನ ಮಾಡಲು ನಿಶ್ಚಯಿಸಿ ತಮ್ಮ ಮನೆಯಲ್ಲಿ ಓದಿಕೊಂಡಿದ್ದ, ತಮ್ಮ ನಂಶಿದ್ದ ಮನ್ಮಥನ ಅಣ್ಣನ ಮಗನನ್ನು ತನಗೆ ವಿಷ ತಂದುಕೊಡೆಂದು ಕೇಳುವಳು. ಅವನು ಇವಳನ್ನು ದೇವಿಯೆಂದು ತಿಳಿದಿದ್ದ. ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಎರಡು ಪಾಪ ಮಾಡಿದಂತಾಗುತ್ತದೆಂದು ಬುದ್ಧಿವಾದ ಹೇಳಿ ತಪ್ಪಿಸಿದ. ವಿಷಯ ಅವಳ ತಂದೆಗೆ ತಿಳಿಯಿತು. ಮಗಳನ್ನು ಅವಮಾನದಿಂದ ತಪ್ಪಿಸಲು ಮನ್ಮಥನ ಕಾಲು ಹಿಡಿದುಕೊಂಡು ಅವನಿಗೆ ಹತ್ತು ಸಾವಿರ ರೂಪಾಯಿ ಕೊಡುವು ದಾಗಿ ಹೇಳಿ ನವದ್ವೀಪಕ್ಕೆ ಹೋಗಿ ವೈಷ್ಣವ ದೀಕ್ಷೆ ಪಡೆದು ಕಮಲಲತೆಯ ಕೈಹಿಡಿ ಯುವಂತೆ ಒಪ್ಪಿಸಿದನು. ಎಲ್ಲ ಸಿದ್ಧತೆಗಳೂ ಆದವು. ಮನ್ಮಥ ಕೊನೆ ಗಳಿಗೆ ಯಲ್ಲಿ ಒಂದು ಹೊಸ ಉಪಾಯ ತೆಗೆದ. 'ಕಮಲಲತೆಯ ಈ ಸ್ಥಿತಿಗೆ ತನ್ನ ಸೋದರನ ಮಗ ಯತೀನ ಹೊಣೆಗಾರ, ಕುಲಗೆಡುವುದೇ ಇದ್ದಲ್ಲಿ, ಅನ್ಯರ ಮಗನ ತಂದೆತನವನ್ನೇ ಹೊತ್ತುಕೊಳ್ಳುವುದೇ ಇದ್ದಲ್ಲಿ ಇಪ್ಪತ್ತು ಸಾವಿರಕ್ಕೆ ಕಡಿಮೆ ತೆಗೆದುಕೊಳ್ಳುವುದಿಲ್ಲ' ಎಂದು ಹಟಹಿಡಿದ. ಇವಳ ತಂದೆ ಯತೀನನ ಮೇಲೆ ಹರಿಹಾಯ್ದರು; ಅವನು ತನಗೇನೂ ತಿಳಿಯದೆಂದ. ಅವರು ಕಮಲಲತೆಯೇ ಹೇಳಿದಳು ಎಂದರು–ಇವನು ಅಸಹಾಯಕನಾಗಿ ಹೌದೆ? ಜೀಜಿ ಹಾಗೆ ಹೇಳಿದಳೆ? ಎಂದು ಪ್ರಶ್ನಿಸಿದ–ಅನಂತರ ಸುಮ್ಮನಾದ. ಮಾರನೇದಿನ ನೇಣುಹಾಕಿಕೊಂಡು ಮೃತನಾದ–ಮನ್ಮಥ ಕಮಲಲತೆಗೆ ಹೂಮಾಲೆ ಹಾಕಿ ಕೈಹಿಡಿದ. ಕೆಲವು ದಿನಗಳಲ್ಲಿ ಸತ್ತಮಗುವನ್ನು ಹಡೆದಳು–ತಾಯಿಗೆ ಮುಖತೋರಿಸಲಾಗದೆ ತಾನು ಸತ್ತಳೆಂದು ಅವಳಿಗೆ ತಿಳಿಸಿರೆಂದು ತಂದೆಗೆ ಹೇಳಿ, ಅವರಿಂದ ಬೀಳ್ಕೊಂಡು ಯಾತ್ರಿಕರ ಗುಂಪಿನಲ್ಲಿ ಸೇರಿಕೊಂಡು ಬೃಂದಾವನದ ಕಡೆಗೆ ತೆರಳುವಳು. ಈ ಅಭಾಗಿನಿಯ

ಕಥೆ ಇಲ್ಲಿಗೂ ಮುಗಿಯುವುದಿಲ್ಲ. ಇವಳ ರೂಪ ಹಾಗೂ ಕಂಠಕ್ಕೆ ಮರುಳಾಗಿ ಶ್ರೀಕಾಂತನ ಗೆಳೆಯ ಗೌಹರ ಅವಳಲ್ಲಿ ಅನುರಕ್ತನಾಗುತ್ತಾನೆ. ಅವಕಾಶ ಒದಗಿದ್ದರೆ ಅವನೂ ವೈಷ್ಣವನಾಗಿ ಬಿಡುತ್ತಿದ್ದನೇನೋ! ತನ್ನ ಆಸ್ತಿಯ ಬಹುಭಾಗವನ್ನೂ, ಹಣವನ್ನೂ ಇವರ ಆಶ್ರಮಕ್ಕಾಗಿ ವ್ಯಯಮಾಡುತ್ತಾನೆ. ಅವನಿಂದಲೇ ಶ್ರೀಕಾಂತನಿಗೆ ಕಮಲಲತೆಯ ಪರಿಚಯವಾಗುವುದು. ಕಮಲಲತೆ ಶ್ರೀಕಾಂತನನ್ನು ಪ್ರೀತಿಸತೊಡಗುವಳು. ತನ್ನ ಕಥೆಯನ್ನೆಲ್ಲಾ ಅವನಿಗೆ ತಿಳಿಸಿ ಮನ್ಮಥ ತನ್ನನ್ನು ಹಿಂಬಾಲಿಸುತ್ತಿರುವನೆಂದೂ ಅವನಿಂದ ತಪ್ಪಿಸಿಕೊಂಡು ಎಲ್ಲಿಗಾದರೂ ಹೋಗಬೇಕಾಗಿದೆಯೆಂದೂ ಹೇಳಿ ತನ್ನನ್ನು ಎಲ್ಲಿಗಾದರೂ ಕರೆದೊಯ್ಯಿರಿ ಎಂದು ಶ್ರೀಕಾಂತನಲ್ಲಿ ಅಂಗಲಾಚುವಳು. ಕೊನೆಗೆ ಗೌಹರ ಖಾಯಿಲೆ ಮಲಗಿದಾಗ ಉಳಿದೆಲ್ಲರೂ ಅವನನ್ನು ತಿರಸ್ಕರಿಸಿದರೂ ಕಮಲಲತೆ ಅವನ ಪ್ರೇಮವನ್ನು ಅರಿತುಕೊಂಡು ಅವನ ಅಂತಿಮ ಸೇವೆ ಮಾಡುವಳು. ಅವನೂ ಬದುಕಲಿಲ್ಲ; ಇತ್ತ ಆಶ್ರಮದಿಂದಲೂ ಅವಳಿಗೆ ಬಹಿಷ್ಕಾರ ಒದಗುವುದು—ಮತ್ತೆ ಅವಳು ಬೃಂದಾವನಕ್ಕೆ ತೆರಳುವಳು.

ಶರತ್‌ಚಂದ್ರರ ವಿಧವಾಪಾತ್ರಗಳಲ್ಲಿ ಮತ್ತೊಬ್ಬಳು 'ಚರಿತ್ರಹೀನ'ದ **ಸಾವಿತ್ರಿ.** ಅವಳು ಒಂಭತ್ತು ವರ್ಷದವಳಿರುವಾಗಲೇ ವಿಧವೆಯಾದಳು. ಅವಳ ಅಕ್ಕನ ಗಂಡ ಭುವನಮುಖರ್ಜಿ ತಾನು ಮದುವೆಯಾಗುವುದಾಗಿ ಆಸೆ ಹುಟ್ಟಿಸಿ ಅವಳನ್ನು ನಗರಕ್ಕೆ ಕರೆತಂದ. ಅವನು ಮಹಾಪಾಪಿ, ದುಷ್ಟ–ಸಾವಿತ್ರಿ ಅವನ ಮೋಸವನ್ನರಿತುಕೊಂಡಳು. ಹಿಂದಿರುಗುವ ದಾರಿ ಬಂದಾಯಿತು. ಅವನೂ ಇವಳನ್ನು ಬಿಟ್ಟುಹೋದ. ಸಾವಿತ್ರಿ ಒಂದು ಮೆಸ್ಸಿನಲ್ಲಿ ಕೆಲಸಮಾಡತೊಡಗಿದಳು. ಅಲ್ಲಿ ಅವಳಿಗೆ ಸತೀಶನ ಪರಿಚಯವಾಯಿತು. ಅವನ ಗುಣಗಳಿಗೆ ಮನಸೋತು ಮನಸ್ಸಿನಲ್ಲೇ ಅವನನ್ನು ಪ್ರೀತಿಸತೊಡಗಿದಳು. ಇದರ ಸುಳಿವು ಅವನಿಗೂ ಹತ್ತಿತು. ಆದರೆ ಅವನನ್ನು ಮದುವೆಯಾಗುವ ಆಲೋಚನೆ ಅವಳಿಗಿರಲಿಲ್ಲ. ಸತೀಶನಿಗೆ ಇವಳ ಪ್ರೀತಿ ಒಂದು ಒಗಟಿನಂತಾಯಿತು. ಕೆಲವು ಸನ್ನಿವೇಶಗಳಲ್ಲಿ ಅವನು ಅವಳನ್ನು ತಪ್ಪಾಗಿಯೂ ತಿಳಿದುಕೊಂಡ. ಕೋಪಗೊಂಡು ಅವಳಿಂದ ದೂರವಾದ. ಅವಳೊಡನೆ ಅವನಿಗೆ ಯಾವ ರೀತಿಯ ಶರೀರ ಸಂಬಂಧವಿಲ್ಲದಿದ್ದರೂ ಅವನ ಮೇಲೆ ಆಪಾದನೆಗಳು ಬಂದವು- ಅವಮಾನವೂ ಆಯಿತು—ಸಾವಿತ್ರಿ ಅವನಿಂದ ದೂರವಿದ್ದರೂ ಅವನ ಹಿತವನ್ನೇ ಹಾರಯಿಸುತ್ತಿದ್ದಳು. ಅವಳೊಬ್ಬಳಲ್ಲದೆ ಪ್ರಪಂಚದಲ್ಲಿ ಬೇರೆ ಯಾರೂ ಅವನನ್ನು ಹಿಡಿತದಲ್ಲಿರಿಸಿಕೊಳ್ಳಲಾರರೆಂಬುದು ಅವಳಿಗೂ ಗೊತ್ತಿತ್ತು. ಅವನ ಕುಡಿತದ ಚಾಳಿಯನ್ನು ಬಿಡಿಸಿದ್ದವಳು ಅವಳು. ತಂದೆ ಸತ್ತಮೇಲೆ ಅವನು ಮತ್ತೆ ಹಾದಿತಪ್ಪಿ ಹಾಳಾಗುತ್ತಿರುವನೆಂದೂ, ಆರೋಗ್ಯವನ್ನೂ ಕೆಡಿಸಿಕೊಳ್ಳುತ್ತಿರುವನೆಂದೂ ತಿಳಿದೊಡನೆ ಸಾವಿತ್ರಿ ಬಂದು ಅವನ ಜವಾಬ್ದಾರಿ ವಹಿಸಿಕೊಳ್ಳುವಳು—ಅವನ ಆರೈಕೆ ಮಾಡಿ ಗುಣಪಡಿಸಿದ್ದಲ್ಲದೆ ಅವನ

ವ್ಯವಹಾರಗಳನ್ನೂ ನೆಟ್ಟಗೆ ಮಾಡುವಳು. ಅವಳನ್ನು ಮದುವೆಯಾಗುವುದಾಗಿ ಸತೀಶ ಹೇಳಿದಾಗ ಸಾವಿತ್ರಿ ಹೇಳುವ ಮಾತು ಅತ್ಯಂತ ಮಾರ್ಮಿಕವಾಗಿದೆ; "ಛೀ, ನಾನಂತೂ ವಿಧವೆ, ಕುಲತ್ಯಾಗಿನಿ, ಸಮಾಜದಿಂದ ಪರಿತ್ಯಕ್ತೆ. ನನ್ನೊಡನೆ ವಿವಾಹ ವಾಗುವುದರಿಂದ ಆಗುವ ಪರಿಣಾಮಗಳನ್ನು ನೀವು ಅರಿತಿಲ್ಲ...ನೀವು ಅನ್ನಬಹುದು– 'ನಾನು ಸಮಾಜವನ್ನೂ ಲಕ್ಷಿಸುವುದಿಲ್ಲ. ನನಗೆ ಬೇಕಾದವಳು ನೀನು' ಎಂದು ಆದರೆ ನನಗೆ ಗೊತ್ತು ಸಮಾಜಕ್ಕೆ ನಾನು ಬೇಡ–ಅದು ನನ್ನನ್ನು ಒಪ್ಪುವುದಿಲ್ಲವೆಂದು. ಶ್ರದ್ಧೆಯಿಲ್ಲದ ಪ್ರೇಮವು ಎಂದೂ ಎದ್ದುನಿಲ್ಲದು. ಸಮಾಜ ಯಾವ ಸ್ತ್ರೀಗೆ ಸನ್ಮಾನ ಪೂರ್ವಕ ಸ್ಥಾನ ಕೊಡಲಾರದೋ–ಅಂಥ ಸ್ಥಾನವನ್ನು ಪತಿಯಾದವನು ಅವಳಿಗೆ ಕೊಡಲಾರ." ಮೊದಲು ಅವಳನ್ನು ತಪ್ಪಾಗಿ ಭಾವಿಸಿದ್ದ ಉಪೇಂದ್ರನೂ ಕೊನೆಗೆ ಅವಳ ಸಂಗತಿಯನ್ನರಿತು ತನ್ನ ತಪ್ಪನ್ನರಿತು ಅವಳಿಗೆ ಗೌರವವನ್ನು ಕೊಡುತ್ತಾನೆ. ಸತೀಶ ಸರೋಜಿನಿಯನ್ನು ಮದುವೆಯಾಗುವುದು ನಿಶ್ಚಿತವಾದಾಗ ಸಾವಿತ್ರಿ ಬಹಳ ವಿಹ್ವಲಳಾದಳು—ತನ್ನ ಸಮಸ್ತ ಭಾವನೆ, ವಾಸನಾ–ಸುಖ-ದುಃಖ ಎಲ್ಲವೂ ಅವಳ ಕಣ್ಣೆದುರಿಗೇ ಸಮಾಧಿಗೊಂಡು ಅವಳ ಹೃದಯ ಛಿದ್ರ ಛಿದ್ರವಾಗ ತೊಡಗಿದರೂ ಅವಳು ಸರ್ವಂಸಹೆಯಾದ ಪೃಥಿವಿಯಂತೆ ಎಲ್ಲವನ್ನೂ ನುಂಗಿದಳು. ಉಪೇಂದ್ರ ಸಾಯುವಾಗ ತನ್ನ ಮೃತ್ಯು ಪತ್ರದಲ್ಲಿ ಅವಳಿಗಾಗಿ ಇಪ್ಪತ್ತೈದು ಸಾವಿರ ರೂಪಾಯಿ ಬಿಟ್ಟಿದ್ದ–ಸತೀಶನನ್ನು ತನ್ನ ತಮ್ಮನಂತಿದ್ದ ದಿವಾಕರನನ್ನೂ ಮನುಷ್ಯರನ್ನಾಗಿ ಮಾಡುವ ಹೊಣೆಯನ್ನು ಅವಳ ಮೇಲೆ ಹಾಕಿ ಕಣ್ಮುಚ್ಚು ತ್ತಾನೆ.

ವಿಧವೆಯರ ಸಾಲಿನಲ್ಲಿ ನಿಲ್ಲುವ ಮತ್ತೊಂದು ಪಾತ್ರ 'ಪಳ್ಳಿಯ ಸಮಾಜ'ದ **ರಮಾ.** ಬಾಲವಿಧವೆಯಾದ ರಮಾ ತಂದೆಯ ಆಸ್ತಿಯ ವಹಿವಾಟನ್ನೆಲ್ಲಾ ನಡೆಸುತ್ತಾ ತಮ್ಮನ ಪೋಷಣೆಯನ್ನು ಮಾಡುತ್ತಾ ಮಹಾ ದುಷ್ಟನೂ ಧೂರ್ತನೂ ಆದ ದಾಯಾದಿ ಅಣ್ಣನೊಡನೆ ಆಸ್ತಿಯ ವ್ಯವಹಾರದಲ್ಲಿ ಏಗುತ್ತಾ ರೈತರನ್ನು ಹಿಡಿತದಲ್ಲಿ ಟ್ಟುಕೊಂಡಿರುತ್ತಾಳೆ. ಅದೇ ಊರಿನ ಘೋಷಾಲರ ಪತ್ನಿಗೆ ಇವಳನ್ನು ತಮ್ಮ ಮಗ ರಮೇಶನಿಗೆ ತಂದುಕೊಳ್ಳಬೇಕೆಂಬ ಅಪೇಕ್ಷೆಯಿದ್ದರೂ, ಇನ್ನೂ ಚಿಕ್ಕವಯಸ್ಸಿ ನವರಾದ ಇವರಿಬ್ಬರಿಗೂ ಪರಸ್ಪರ ಪ್ರೀತಿ ಇದ್ದರೂ ಎರಡೂ ಮನೆತನಗಳ ದ್ವೇಷ ದಿಂದಾಗಿ ಈ ಮದುವೆಯಾಗದೆ ಇವಳ ಮದುವೆ ಬೇರೊಂದು ಕಡೆ ಆಗಿ ಇವಳು ವಿಧವೆಯಾದಳು. ರಮೇಶನ ತಾಯಿ ತೀರಿಕೊಂಡಮೇಲೆ ಘೋಷಾಲರು ಮಗ ನನ್ನು ಅವನ ಸೋದರಮಾವನ ಮನೆಗೆ ಕಳಿಸಿಬಿಟ್ಟರು—ಅವನು ಅಲ್ಲಿ ಇಂಜಿನಿಯ ರಿಂಗ್ ಓದುತ್ತಿದ್ದ—ತಂದೆ ಇದ್ದಕ್ಕಿದ್ದಂತೆ ಮೃತರಾದ ಸುದ್ದಿಕೇಳಿ ಊರಿಗೆ ಹಿಂದಿರುಗಿದ—ಹಿಂದೆ ತನ್ನೊಡನೆ ಶಾಲೆಯಲ್ಲಿ ಓದುತ್ತಿದ್ದ, ಜೊತೆಯಲ್ಲಿ ಆಟ ವಾಡುತ್ತಿದ್ದ ರಮಾ ಈಗ ವಿಧವೆಯಾಗಿದ್ದಾಳೆ. ಆದರೆ ಹಿಂದಿನ ಆ ಪ್ರೀತಿ ಅವನ

ಹೃದಯದಿಂದ ಇನ್ನೂ ಮಾಸಿಲ್ಲ. 'ರಾಣೀ' ಎಂದು ಹಿಂದಿನಂತೆ ಅವಳನ್ನು ಕೂಗಿದಾಗ ಅವಳ ಹೃದಯದಲ್ಲಿಯೂ ಪ್ರೇಮದ ಭಾವತರಂಗಗಳೇಳುವುವು. ಆದರೆ ವ್ಯಾವಹಾರಿಕವಾಗಿ ಅವರಿಬ್ಬರೂ ಈಗ ಪರಸ್ಪರ ವೈರಿಗಳು. ಹಲವಾರು ವ್ಯವಹಾರಗಳಲ್ಲಿ ಇಬ್ಬರ ನಡುವೆ ಘರ್ಷಣೆಗಳು ಒದಗುತ್ತವೆ. ಅದು ಅವರ ಅಂತಃಕರಣವನ್ನೂ ಜರ್ಝರಿತಗೊಳಿಸುತ್ತದೆ. ಅದನ್ನು ಮೀರಿ ಅವರ ಪ್ರೇಮ ಎದ್ದು ನಿಲ್ಲುತ್ತದೆ. ಅವಳ ಪ್ರಭಾವ ಅವನ ಮೇಲೆ ಎಷ್ಟಿದೆಯೆಂಬುದು ಇತರರಿಗೂ ಗೊತ್ತಾಗುತ್ತದೆ. ಇದು ಅವರ ಸಂಬಂಧದ ವಿಚಾರದಲ್ಲಿಯೂ ತಪ್ಪುಭಾವನೆಗಳಿಗೆ ಎಡೆಯಾಗಿ ಇಬ್ಬರೂ ಅಪವಾದಗಳನ್ನೆದುರಿಸಬೇಕಾಗುತ್ತದೆ. ಈ ಅಪವಾದ ತಪ್ಪಿಸಿಕೊಳ್ಳುವ ಭರದಲ್ಲಿ ರಮಾ ಕೋರ್ಟಿನಲ್ಲಿ ರಮೇಶನಿಗೆ ವಿರುದ್ಧವಾಗಿ ಸಾಕ್ಷಿ ಹೇಳಿ ಅವನಿಗೆ ಜೈಲು ಶಿಕ್ಷೆಯೂ ಆಗುತ್ತದೆ. ಒಂದು ಕಡೆ ತನ್ನ ಅಪರಾಧ—ಇನ್ನೊಂದು ಕಡೆ ಪ್ರೇಮ—ಮತ್ತೊಂದು ಕಡೆ ಧರ್ಮ, ಸಮಾಜ—ಇವುಗಳ ತಿರುಗಣೆಯಲ್ಲಿ ಸಿಕ್ಕು ರಮಾ ಕೃಷಳಾಗಿ ಸಾಯಲಾಗುತ್ತಾಳೆ. ತನ್ನಿಂದ ರಮೇಶನಿಗೆ, ಅವನ ಭವಿಷ್ಯಕ್ಕೆ ತೊಂದರೆಯಾಗಬಾರದೆಂದು ರಮಾ ತಮ್ಮನ ಹೊಣೆಯನ್ನು ರಮೇಶನಿಗೇ ವಹಿಸಿ ತಾನು ಕಾಶಿಗೆ ಹೊರಟುಹೋಗುತ್ತಾಳೆ. 'ಶೇಷ ಪ್ರಶ್ನೆ'ಯಲ್ಲಿ ಬರುವ **ನೀಲಿಮಾ.** ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾಗಿ ನಿಷ್ಠೆಯಿಂದ ವೈಧವ್ಯವನ್ನು ಆಚರಿಸುತ್ತಾ ಪರರಿಗಾಗಿ ತನ್ನನ್ನು ತಾನು ನಿವೇದಿಸಿಕೊಂಡು ನಿಸ್ವಾರ್ಥಿಯಾಗಿ ಜೀವಿಸುತ್ತಿರುವಳು. ಅಕ್ಕ ಮೃತಳಾದ ಮೇಲೆ ಭಾವನ ಮನೆಗೆ ಬಂದು ಅಕ್ಕನ ಮಗುವಿನ ಯೋಗಕ್ಷೇಮ ನೋಡಿಕೊಳ್ಳುತ್ತಾ ಇರುವಳು. ಇತರರು ತನ್ನನ್ನು ಈ ನಿಸ್ವಾರ್ಥತೆಗಾಗಿ ಹೊಗಳುವುದನ್ನು ಕೇಳಿ ಪ್ರೈಮರೆತು ಅದೇ ತನ್ನ ಜೀವನ ಪರಮ ಸಾಫಲ್ಯವೆಂದು ಭಾವಿಸುವಳು. ಆದರೆ ಕಮಲೆಯು ಕ್ರಾಂತಿಕಾರೀ ಆದರೂ ವಾಸ್ತವಿಕವಾದ ಮಾತುಗಳಿಂದ ಅವಳ ಮನಸ್ಸು ಜಾಗೃತವಾಗುವುದು—ಪುರುಷರಿಂದ ತಾವು ಹೇಗೆ ಮೋಸಹೋಗುತ್ತಿರುವೆವೆಂದು ಅವಳು ಅರಿತುಕೊಳ್ಳುವಳು. ಭಾವ ಅವಿನಾಶರು ಊರಿಗೆ ಹಿಂದಿರುಗಿದಾಗ ಅವಳಿಗೆ ನೆಲೆಯಿಲ್ಲವಾಗುವುದು. . ಲಾಲಾಜಿ ಎಂದು ಪ್ರೀತಿಯಿಂದ ಕರೆಯುತ್ತಿದ್ದ, ಆದರಿಸುತ್ತಿದ್ದ ಹರೇಂದ್ರನ ಆಶ್ರಮದಲ್ಲಿ ಅವನ ಈ ಅತ್ತಿಗೆಗೆ ಸ್ಥಳವಿಲ್ಲ. ಕೊನೆಗೆ ಅವಿನಾಶರ ಗೆಳೆಯ ಆಶುಬಾಬುಗಳ ಮನೆಯಲ್ಲಿ ಅವಳು ಆಶ್ರಯ ಪಡೆಯುವಳು. ತನ್ನ ನಡುವಯಸ್ಸಿನಲ್ಲಿ ಆಕೆಯ ಹೃದಯದಲ್ಲಿ ವೃದ್ಧರೂ, ಸ್ಥೂಲಕಾಯರೂ, ವಾಯುಪೀಡಿತರೂ, ಮೃತಪತ್ನಿಯನ್ನೇ ಆರಾಧಿಸುವವರೂ ಆದ ಆಶುಬಾಬುಗಳ ಮೇಲೆ ಪ್ರೇಮ ಮೂಡಿದುದು ಅತ್ಯಂತ ಆಶ್ಚರ್ಯ. ಆ ಬಗ್ಗೆ ಅವಳಿಗೇ ನಾಚಿಕೆ, ಅವಮಾನ. ಆದರೂ ಅವರಿಗೆ ಮುಖವನ್ನೂ ತೋರಿಸಲಾರದೆ ಮೈದುನ ಹರೇಂದ್ರನ ಮನೆಗೆ ಹೊರಟುಹೋಗುತ್ತಾಳೆ—ಗೃಹದಾಹದಲ್ಲಿ ಬರುವ **ಮೃಣಾಳಳನ್ನು** ವಿಧವೆಯರ ಸಾಲಿನಲ್ಲಿಯೂ ಪರಿಗಣಿಸಬಹುದು. . ಮಹಿಮನನ್ನು ಪ್ರೀತಿಸಿದ್ದರೂ ಸಹ ವೃದ್ಧನನ್ನು ಮದುವೆಯಾಗಿ ಪತಿಯ, ಅವನ ವೃದ್ಧ ಮಾತಾ

ಪಿತರ ಸೇವೆಯಲ್ಲಿ ತನ್ನ ಜೀವನದ ಸಫಲತೆಯನ್ನು ಕಾಣುತ್ತಾಳೆ. ಮಹಿಮನ ಪತ್ನಿಯನ್ನು ಅವಳು 'ಬ್ರಾಹ್ಮಣ'ಳಾದ್ದರಿಂದ ತಿರಸ್ಕೃತಳಾದರೂ ಇವಳು ಅಪ್ಪಿಕೊಂಡು ಆದರಿಸುತ್ತಾಳೆ. ತನ್ನ ವೈಧವ್ಯದಲ್ಲಿಯೂ ನಿಷ್ಠೆಯಿಂದ ಮಹಿಮನ ಖಾಯಿಲೆಯ ಸಮಯದಲ್ಲಿ ಆವನ ಸೇವೆ ಮಾಡುತ್ತಾಳೆ. ಕೊನೆಯಲ್ಲಿ ವೃದ್ಧ ಕೇದಾರ ಬಾಬುಗಳ ಮೇಲೆ ಅವಳು ತನ್ನ ಜೀವನದಿಂದಲೂ, ನಿಷ್ಠೆಯಿಂದಲೂ ಬೀರುವ ಪ್ರಭಾವ ಅಧಿಕವಾದದ್ದು. ಬ್ರಾಹ್ಮರಾದ ಅವರೂ ತಲೆದೂಗಿ ತಮ್ಮ ಭಾವನೆಗಳನ್ನು ಬದಲಿಸಿಕೊಂಡು ಹಿಂದೂ ಧರ್ಮಕ್ಕೆ ಹಿಂದಿರುಗಲು ಸಿದ್ಧವಾಗುವುದೂ, ಇವಳನ್ನು ತಮ್ಮ ಮಗಳೆಂದು ಆದರಿಸುವುದೂ ವಿಸ್ಮಯಕರ–ದಾರಿತಪ್ಪಿದ್ಧ ಅಚಲೆಗೂ ಇವಳು ದಾರಿ ತೋರಿಸುವಳು. ಅವಳ ವೈಧವ್ಯಕ್ಕಾಗಿ ಇತರರು ಮರುಗಿ ಕನಿಕರಿಸು ತ್ತಿದ್ದರೆ, ಆಕೆ ಅದನ್ನೊಪ್ಪಿಕೊಂಡು ನಿಷ್ಠೆಯಿಂದ ಆ ಜೀವನವನ್ನೇ ನಡೆಸುತ್ತಾಳೆ. ಇತರರೂ ತಲೆದೂಗುವಂತೆ ಮಾಡುತ್ತಾಳೆ.

3

ಶರತ್‌ಚಂದ್ರರ ಸ್ತ್ರೀಪಾತ್ರಗಳಲ್ಲಿ ಇನ್ನೊಂದು ಗುಂಪು ವಿದ್ಯಾವತಿಯರಾದ ಆಧುನಿಕ ನಾಗರಿಕ ವಾತಾವರಣದಲ್ಲಿ, ಪಟ್ಟಣಗಳಲ್ಲಿ ಇರುವ ಸ್ತ್ರೀಯರು. ನಗರ ದಲ್ಲಿದ್ದುಕೊಂಡು ಕಾಲೇಜುಗಳಲ್ಲಿ ಓದಿ, ಶಿಷ್ಟ ಸಮಾಜದ ಪರಿಚಯ ಮಾಡಿಕೊಂಡು ಪ್ರತಿಷ್ಠಿತ ಸಮಾಜದಲ್ಲಿಯೇ ಸದಾ ಬೆರೆಯುವ ವನಿತೆಯರು ಇವರು. ಇವರೆಲ್ಲರೂ ಬಹುಮಟ್ಟಿಗೆ ಆಂಗ್ಲ ಸಂಸ್ಕೃತಿಗೆ ಮಾರುಹೋಗಿ ಭಾರತೀಯ ಸಂಸ್ಕೃತಿಯಿಂದ ಸ್ವಲ್ಪದೂರವಾಗಿರುವರು; ಅಂಧಶ್ರದ್ಧೆ, ಜಾತೀಯತೆ, ಧಾರ್ಮಿಕ ಆಚರಣೆಗಳು, ಮಡಿ–ಮೈಲಿಗೆ, ಶಾಖಾಹಾರ ಮೊದಲಾದ ಹಿಂದೂ ಪದ್ಧತಿಗಳನ್ನು ಟೀಕಿಸುವರು ಇಲ್ಲವೆ ತಾತ್ಸಾರದಿಂದ ಕಾಣುವರು. ಆದರೆ ಇವರೆಲ್ಲಾ ಕಟ್ಟಾ ಹಿಂದೂ ಆಚಾರ ಗಳಲ್ಲಿ ನಿಷ್ಠೆಯುಳ್ಳ ವ್ಯಕ್ತಿಗಳ ಪ್ರಭಾವಕ್ಕೆ ಸಿಕ್ಕುಬಿದ್ದು ತಮ್ಮ ಕಣ್‌ತೆರೆದು ತಮ್ಮ ಧೋರಣೆಗಳನ್ನು ಬದಲಾಯಿಸಿಕೊಳ್ಳುತ್ತಾರೆ. 'ವಿಪ್ರದಾಸ'ದಲ್ಲಿ ಬರುವ ವಂದನಾ ಇವರಲ್ಲೊಬ್ಬಳು. ವಿಲಾಯತಿಯಿಂದ ಹಿಂದಿರುಗಿದ ತಂದೆಯ ಏಕಮಾತ್ರ ಪುತ್ರಿ ಯಾದ ಇವಳು ಆಧುನಿಕ ರೀತಿ ನೀತಿಗಳನ್ನೇ ಅನುಸರಿಸುತ್ತಿದ್ದರೂ, ಶಿಷ್ಟ ಸಮಾಜ ದಲ್ಲೇ ಬೆಳೆದು ದೊಡ್ಡವಳಾಗಿದ್ದರೂ ತನ್ನ ಅಕ್ಕನನ್ನು ನೋಡಲು ಹಳ್ಳಿಗೆ ಬಂದ ವಳು ಅವರ ಮಡಿಮೈಲಿಗೆಗೆ ಹೇಸಿ ಕೋಪಮಾಡಿಕೊಂಡು ಊಟವನ್ನೂ ಮಾಡದೆ ಹೊರಟವಳು ವಿಪ್ರದಾಸನ ಪ್ರಭಾವಕ್ಕೆ ಸಿಕ್ಕಿ, ಅವರ ಮನೆಯ ದಾಸಿಯೂ ಎಷ್ಟು ಗೌರವದ ಸ್ಥಾನಮಾನಗಳನ್ನು ಪಡೆದಿರುವಳೆಂಬುದನ್ನು ಕಂಡು ಅವರೆಲ್ಲರ ಉದಾರ ಮನಸ್ಸನ್ನೂ, ಅಲ್ಲಿರುವ ಪ್ರೀತಿಯನ್ನೂ ಗುರುತಿಸಿ ತನ್ನ ನಡತೆಗೆ ನಾಚಿಕೊಳ್ಳು ತ್ತಾಳೆ. ಇವರೊಡನೆ ಹೋಲಿಸಿ ತನ್ನ ಶಿಷ್ಟ ಸಮಾಜದಲ್ಲಿರುವ ವ್ಯಕ್ತಿಗಳ ಸ್ವಾರ್ಥ ವನ್ನೂ, ಸಂಕುಚಿತ ಭಾವನೆಯನ್ನೂ ಕಂಡು ತನ್ನ ಸಮಾಜವನ್ನು ತೊರೆದು ಈ

ನಿಷ್ಠಾವಂತ ಹಿಂದೂ ಸಮಾಜಕ್ಕೆ ಬರಲು ಹವಣಿಸುತ್ತಾಳೆ, ತನ್ನ ಅಕ್ಕನ ಅಪೇಕ್ಷೆಯಂತೆ ದ್ವಿಜದಾಸನನ್ನು ಕೈಹಿಡಿದು ಆ ಮನೆಯ ಸೊಸೆಯಾಗುತ್ತಾಳೆ. **ವಿಜಯಾ** ಬ್ರಾಹ್ಮಸಮಾಜಕ್ಕೆ ಸೇರಿದವಳಾದರೂ, ಅವಳ ತಂದೆಯ ಮಿತ್ರನ ಮಗನೊಡನೆ ಅವಳ ಮದುವೆ ಸಹ ಗೊತ್ತಾಗಿದ್ದರೂ, ಹಳ್ಳಿಗೆ ಬಂದು, ತನ್ನ ಜಮೀನುದಾರಿ ವ್ಯವಹಾರವನ್ನು ನಡೆಸುವಾಗ ತನ್ನ ತಂದೆಯ ಇನ್ನೊಬ್ಬ ಹಿಂದೂ ಗೆಳೆಯನ ಮಗ ಬಡವನಾದರೂ ವಿದ್ಯಾವಂತನೂ ಸುಶಿಕ್ಷಿತನೂ ಆದ ನರೇಂದ್ರನ ಪ್ರಭಾವಕ್ಕೆ ಸಿಕ್ಕು ಅವನನ್ನು ಪ್ರೀತಿಸತೊಡಗುತ್ತಾಳೆ. ಆ ಸಮಾಜದ ಹಿರಿಮೆಗಳನ್ನೊಂದೊಂದಾಗಿ ಅರಿತು ಅದೇ ಸಮಯದಲ್ಲಿ ತನ್ನ ಪತಿಯಾಗಲಿದ್ದ ವಿಲಾಸನ ಮತ್ತು ಅವನ ತಂದೆ ರಾಸ ಬಿಹಾರಿ ಇವರ ಸ್ವಾರ್ಥವನ್ನೂ ಕಂಡು ನಿಶ್ಚಿತವಾಗಿದ್ದ ಮದುವೆಯನ್ನು ತಪ್ಪಿಸಿ ಹಿಂದೂ ಪದ್ಧತಿಯಂತೆ ನರೇಂದ್ರನನ್ನು ಮದುವೆಯಾಗುವಳು. 'ಶೇಷಪ್ರಶ್ನೆ'ಯಲ್ಲಿ ಇಂಥ ಎರಡು ಪಾತ್ರಗಳು ಬರುತ್ತವೆ. ಆಶುಬಾಬುಗಳ ಮಗಳು **ಮನೋರಮಾ** ವಿದ್ಯಾವಂತೆ. ಅಜಿತನೊಡನೆ ಅವಳ ಮದುವೆ ಗೊತ್ತಾಗಿದ್ದರೂ ಅದನ್ನು ಮೂರು ವರ್ಷ ಮುಂದಕ್ಕೆ ಹಾಕಲಾಗಿತ್ತು. ಈ ನಡುವೆ ಅಜಿತ ವಿಲಾಯತಿಗೆ ಹೋಗಿ ಹಿಂದಿರುಗಿದ. ಅವನು ಕಟ್ಟಾ ಹಿಂದೂ,ಶಾಖಾಹಾರಿ. ಅವನ ಪ್ರಭಾವದಿಂದ ಇವಳೂ ಶಾಖಾಹಾರಿಯಾಗುತ್ತಾಳೆ. ಈ ನಡುವೆ ಇವರು ಅಗ್ರಾದಲ್ಲಿರುವಾಗ ಕಮಲೆ ಮತ್ತು ಶಿವನಾಥರೆಂಬ ದಂಪತಿಗಳ ಪರಿಚಯುವಾಗುತ್ತದೆ. ಮೊದಲು ಶಿವನಾಥನ ಸಂಗೀತಕ್ಕೆ ಮರುಳಾದ ಮನೋರಮೆ ಅವನನ್ನು ಮನೆಗೆ ಆಹ್ವಾನಿಸುತ್ತಿದ್ದರೂ ಅವನು ಕೈಹಿಡಿದ ಹೆಂಡತಿಯನ್ನು ಅವಳು ರೋಗಿಷ್ಟಳೆಂಬ ಕಾರಣ ತ್ಯಜಿಸಿ ರೂಪಕ್ಕಾಗಿ ಕಮಲೆಯೊಡನೆ ಮದುವೆಯಾಗಿರುವ ಸಂಗತಿ ತಿಳಿದು ಅವನನ್ನು ತಿರಸ್ಕರಿಸತೊಡಗುತ್ತಾಳೆ. ಆ ತಿರಸ್ಕಾರವೂ ಅನಂತರ ಪ್ರೀತಿಯಾಗಿ ಬದಲಾಗಿ ಅವನೊಡನೆ ಅವಳು ಓಡಿಹೋಗಿ ಮದುವೆಯಾಗುತ್ತಾಳೆ. **ಬೇಲಾ** ಆಶುಬಾಬುಗಳ ಸ್ನೇಹಿತನ ಮಗಳು. ವಿದ್ಯಾವತಿ, ಸುಸಂಸ್ಕೃತೆ. ಮದುವೆಯಾದ ಗಂಡನೊಡನೆ ಕೆಲ ದಿವಸಗಳಿದ್ದು ಅವನ ಕೆಟ್ಟ ನಡತೆಯ ಕಾರಣ ವಿಚ್ಛೇದ ಮಾಡಿಕೊಳ್ಳುತ್ತಾಳೆ. ಅವನಿಂದ ಬರುವ ಜೀವನಾಂಶದಿಂದಲೇ ಜೀವಿಸುತ್ತಾ ಶಿಷ್ಟ ಸಮಾಜದಲ್ಲಿ ತಾನು ಸ್ವತಂತ್ರ ವ್ಯಕ್ತಿ, ಸ್ತ್ರೀಸ್ವಾತಂತ್ರ್ಯಕ್ಕೆ ಮಾದರಿ ಎಂದು ಪ್ರತಿಷ್ಠೆ ನಡೆಸುತ್ತಿರುತ್ತಾಳೆ. ಆದರೆ ಕಮಲಾ ಹಾಗೂ ನೀಲಿಮಾ ಇವರ ರೀತಿಯನ್ನು ಕಂಡು, ತಾನು ತಿರಸ್ಕರಿಸಿದ ಗಂಡನ ಹಂಗಿನಲ್ಲಿಯೇ ತಾನು ಜೀವಿಸುತ್ತಿರುವದರ ಅರಿವಾಗಿ ಪರಿವರ್ತಿತಳಾಗುತ್ತಾಳೆ. ಗೃಹದಾಹದಲ್ಲಿ ಬರುವ **ಅಚಲಾಳ** ಪಾತ್ರ ಅತ್ಯಂತ ಕರುಣಾಜನಕವಾದುದು. ಬ್ರಾಹ್ಮಸಮಾಜದ ಆ ಕಲಿತ ಹೆಣ್ಣು ತಮ್ಮ ಸಮಾಜದವನೇ ಆದ ಮಹಿಮನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಾಳೆ. ಇಬ್ಬರಿಗೂ ಮದುವೆ ಗೊತ್ತಾಗುತ್ತದೆ. ಅವನು ಬಡವ, ಮದುವೆಯ ನಂತರ ಹಳ್ಳಿಗೆ ಹೋಗಿ ಅವನೊಡನೆ ಜೀವಿಸಬೇಕೆಂಬುದೂ ಅವಳಿಗೆ ಗೊತ್ತು. ಆದರೆ ಮಹಿಮನ ಗೆಳೆಯ ಕಟ್ಟಾ ಹಿಂದೂ

'ಬ್ರಾಹ್ಮ' ದ್ವೇಷಿ. ಅವನು ತನ್ನ ಗೆಳೆಯನನ್ನು ಈ ಪ್ರಸಂಗದಿಂದ ಬಿಡಿಸಬೇಕೆಂದು ಪವಣಿಸಿ ತಾನೇ ಅವರಲ್ಲಿ ಸಿಕ್ಕಿಕೊಳ್ಳುತ್ತಾನೆ. ಅಚಲಾಳ ಮೇಲೆ ಅವನಿಗೂ ಮೋಹ ಉಂಟಾಗುತ್ತದೆ. ಅವಳ ತಂದೆಗೆ ಹಣ ಸಾಲಕೊಟ್ಟು ತನ್ನ ಶ್ರೀಮಂತಿಕೆಯನ್ನು ಅವರ ಮುಂದೆ ಮೆರೆದು ಅವರು ತಮ್ಮ ಮೊದಲಿನ ನಿರ್ಧಾರ ಬದಲಿಸಿ ಸುರೇಶನಿಗೇ ಅಚಲೆಯನ್ನು ಕೊಡುವ ನಿರ್ಧಾರ ಮಾಡಲು ಕಾರಣನಾಗುತ್ತಾನೆ. ಅಚಲಾ ಅಂತ ರಂಗದಲ್ಲಿ ಮಹಿಮನನ್ನು ಪ್ರೀತಿಸುತ್ತಿದ್ದರೂ ಸುರೇಶನ, ದುರ್ದಮನೀಯ ಮೋಹದ ಜಾಲದಲ್ಲಿ ಸಿಕ್ಕಿಕೊಳ್ಳುತ್ತಾಳೆ. ಮುಂದೆ ಮಹಿಮನೊಡನೆಯೇ ಅವಳ ಮದುವೆಯಾಗಿ ಹಳ್ಳಿಗೆ ಅವನೊಡನೆ ಪ್ರಯಾಣಮಾಡುತ್ತಾಳೆ. ಅಲ್ಲಿನ ಪರಿಸ್ಥಿತಿ ಕಂಡಾಗ ಅವಳ ಭ್ರಮ ನಿರಸನವಾಗುತ್ತದೆ. ಮೃಣಾಳ ಪರಿಚಯದಿಂದ ಅವಳಿಗೆ ಲಾಭವಾದರೂ ಅವಳು ತನ್ನ ಕೈಲಿಮಾಡಿದ ಅಡಿಗೆ ಊಟಮಾಡುವುದಿಲ್ಲವೆಂಬ ಕಾರಣ ತಿರಸ್ಕಾರ ಉಂಟಾಗುತ್ತದೆ. ತನ್ನ ಗಂಡ-ಮೃಣಾಳ-ಇವರ ಸಂಬಂಧದ ಬಗೆಗೂ ಅವಳು ಶಂಕೆ ಪಡುತ್ತಾಳೆ. ಅದೇ ಸಮಯಕ್ಕೆ ಅಲ್ಲಿಗೆ ಸುರೇಶ ಬರಲು ಇವಳ ಮನಸ್ಸು ಮತ್ತಷ್ಟು ಚಂಚಲವಾಗಿ ಮಹಿಮನೊಡನೆ ಜಗಳಕಾದು ಅವ ನನ್ನು ಬಿಟ್ಟುಹೋಗುವೆನೆಂದೂ ಹೇಳಿ ಬಿಡುತ್ತಾಳೆ. ಮಹಿಮನ ಮನೆಗೆ ಬೆಂಕಿ ಬಿದ್ದು ಸುಟ್ಟುಹೋಗಲು ಅವನು ಜೀವದ ಹಂಗು ತೊರೆದು ಇವಳ ಸಾಮಾನು ಗಳನ್ನು ರಕ್ಷಿಸುತ್ತಾನೆ. ತಂದೆಯ ಮನೆಗೆ ಹಿಂದಿರುಗಿದ ಅಚಲಳ ಮನ ಮತ್ತೆ ಹೊಯ್ದಾಡ ತೊಡಗುತ್ತದೆ. ಕಾಯಿಲೆ ಬಿದ್ದ ಮಹಿಮನನ್ನು ಉಪಚರಿಸಿ ಅವನಿಗೆ ಗುಣವಾದ ಮೇಲೆ ಹವಾಬದಲಾವಣೆಗೆಂದು ಅವನೊಡನೆ ಪ್ರಯಾಣ ಮಾಡುವಾಗ ಅವನನ್ನು ಮತ್ತೆ ಪಡೆದೆನೆಂಬ ಸಮಾಧಾನ ಅವಳಿಗಾಗುತ್ತದೆ. ಆದರೆ ಸುರೇಶ ಅವಳದೊಂದು ಕನಿಕರದ ಮಾತನ್ನೇ ತಪ್ಪಾಗಿ ಭಾವಿಸಿ ಅವಳನ್ನು ಪ್ರಯಾಣದ ನಡುವೆ ಅಪಹರಿಸಿ ಬೇರೊಂದು ಕಡೆಗೆ ಕರೆದೊಯ್ದು ಅವಳನ್ನು ಪಡೆಯಲು ಪ್ರಯತ್ನಿಸುತ್ತಾನೆ. ಅವಳು ಹಾರ್ದಿಕವಾಗಿ ಮಹಿಮನನ್ನೇ ಪ್ರೀತಿಸುವಳೆಂದು ಅವನಿಗರಿವಾದಮೇಲೆ ಸುರೇಶ ಅವಳಿಂದ ದೂರವಾಗಿ ಪ್ಲೇಗಿನ ರೋಗಿಗಳನ್ನು ಚಿಕಿತ್ಸೆ ಮಾಡಹೋಗಿ ಅದಕ್ಕೆ ಬಲಿಯಾಗುತ್ತಾನೆ. ಇತ್ತ ಅಚಲಾ ಮಹಿಮನನ್ನೇ ಮತ್ತೆ ಆಶ್ರಯಿಸುತ್ತಾಳೆ. ಬ್ರಾಹ್ಮ ಸಮಾಜದ ಮತ್ತು ಹಿಂದೂ ಪದ್ಧತಿಯ ನಡು ವಣ ಘರ್ಷಣೆಯಂತೆ ಇಲ್ಲಿ ಅಚಲೆ ತನ್ನ ಮನಸ್ಸನ್ನೇ ತಾನು ಅರ್ಥಮಾಡಿಕೊಳ್ಳದೆ ಒಬ್ಬನ ಶಾಂತವಾದ ಪ್ರೇಮದ ಇನ್ನೊಬ್ಬನ ದುರ್ದಮನೀಯ ಘೋರ ವ್ಯಾಮೋಹದ ನಡುವೆ ಸಿಕ್ಕಿ ಜರ್ಝರಿತಳಾಗುವುದನ್ನು ಶರತ್‌ಚಂದ್ರರು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. 'ಚರಿತ್ರ ಹೀನ'ದಲ್ಲಿ ಬರುವ **ಕಿರಣ್ಮಯಿಯ**ಪಾತ್ರ ಇದಕ್ಕೂ ಶೋಚನೀಯ. ಆಕೆ ವಿದ್ಯಾವತಿ. ವಿದ್ಯಾವಂತನಾದ ಪತಿಯನ್ನು ಮದುವೆಯಾಗಿ ಬಂದರೂ ಅವಳಿಗೆ ಗಂಡನಿಂದ ಸುಖ ಸಿಗಲಿಲ್ಲ. ಸದಾ ವಿದ್ಯಾರ್ಜನೆ ಯಲ್ಲಿಯೇ ಆಸಕ್ತನಾದ ಅವನಿಗೆ ಪತ್ನಿಯೂ ಶಿಷ್ಯಳಾಗಿ ಬಿಟ್ಟಳು. ಅನಂತರ

ಅವನು ರೋಗಿಯಾಗಿ ಹಾಸಿಗೆ ಹಿಡಿದುಬಿಟ್ಟ. ಪತಿಯಿಂದ ಪಡೆಯಲಾರದ ಸುಖಕ್ಕಾಗಿ ಕಿರಣ್ಮಯಿಯ ಗಮನ ಅತ್ತ ಇತ್ತ ಚಲಿಸಿತು. ಇದನ್ನೇ ಕಾಯುತ್ತಿದ್ದ ಡಾಕ್ಟರು ಅವಳ ಗಂಡನ ಚಿಕಿತ್ಸೆಯ ನೆವದಲ್ಲಿ ಅವಳನ್ನು ವಶಪಡಿಸಿಕೊಳ್ಳ ಬಯಸಿದ. ಅಷ್ಟರಲ್ಲಿ ಅವಳಿಗೆ ಗಂಡನ ಗೆಳೆಯ ಉಪೇಂದ್ರನ ಪರಿಚಯವಾಗಿ ಅವನು ಗೆಳೆಯನ ವಿಚಾರದಲ್ಲಿ ತೋರಿಸುತ್ತಿದ್ದ ಪ್ರೀತಿಯಿಂದ ಅವಳಿಗೂ ಗಂಡನ ಮೇಲೆ ಪ್ರೀತಿ ಹುಟ್ಟಿತು. ಉಪೇಂದ್ರನ ಸಂಸಾರ ಸುಖದ ಕತೆಯನ್ನು ಸತೀಶನಿಂದ ಕೇಳಿದ ಮೇಲಂತೂ ಅವಳ ಪತಿಭಕ್ತಿಯೂ ಜಾಗೃತವಾಗಿ ಬಹಳ ನಿಷ್ಠೆಯಿಂದ ಗಂಡನ ಸೇವೆಗೆ ತೊಡಗಿದಳು. ಆದರೆ ಅವನನ್ನುಳಿಸಿಕೊಳ್ಳಲಾಗಲಿಲ್ಲ. ಕ್ರಮೇಣ ಅವಳಿಗೆ ತಾನು ಉಪೇಂದ್ರನನ್ನು ಒಳಗೊಳಗೇ ಪ್ರೀತಿಸುತ್ತಿರುವೆನೆಂಬುದರ ಅರಿವಾಯಿತು. ಅದನ್ನವಳು ಅವನ ಮುಂದೆ ಪರೋಕ್ಷವಾಗಿ ವ್ಯಕ್ತಪಡಿಸಲೂ ಹಿಂಜರಿಯಲಿಲ್ಲ. ಅದೇ ಸಮಯದಲ್ಲಿ ತನ್ನ ಮನೆಯಲ್ಲಿ ಓದುವುದಕ್ಕಾಗಿ ಇದ್ದ ಉಪೇಂದ್ರನ ಸೋದರನೊಡನೆ ಆಕೆ ಸಲಿಗೆಯಿಂದಿದ್ದುದನ್ನು ಅವಳ ಅತ್ತೆ ತಪ್ಪುತಿಳಿದುದರ ಜೊತೆಗೇ ಉಪೇಂದ್ರನೂ ತಪ್ಪುತಿಳಿದ. ಅವನನ್ನು ಕರೆದುಕೊಂಡುಹೋಗಲು ಸಿದ್ಧನಾದ. ಕಿರಣ್ಮಯಿಗೆ ಇದರಿಂದ ಅಪಮಾನವಾದಂತಾಯಿತು; ಉಪೇಂದ್ರನಮೇಲೆ ಸೇಡು ತೀರಿಸಿಕೊಳ್ಳಬೇಕೆಂದು ದಿವಾಕರನೊಡನೆ ಗುಟ್ಟಾಗಿ ಅರಕಾನಿಗೆ ಹೊರಟುಹೋದಳು. ದಿವಾಕರ ಏನೂ ಅರಿಯದ ಬಾಲಕ. ಕಿರಣ್ಮಯಿಯ ರೂಪದ ಜ್ವಾಲೆಯಲ್ಲಿ ಬಿದ್ದ ಪತಂಗ. ಅವನನ್ನು ಕಿರಣ್ಮಯಿ ಆಟವಾಡಿಸುವಳು ಹಾವಾಡಿಗ ಹಾವನ್ನಾಡಿಸಿದಂತೆ. ನೋಡಿದವರ ಕಣ್ಣಲ್ಲಿ ಇವರು ಸತಿಪತಿಗಳಂತೆ ನಟಿಸುವರು. ರಂಗೂನಿನಲ್ಲಿ ಕೆಲಕಾಲ ಇವಳ ಒಡವೆ ವಸ್ತು ಮಾರಿ ಜೀವಿಸುವರು. ದಿವಾಕರನಲ್ಲಿ ಈಕೆ ಹೊತ್ತಿಸಿದ್ದ ಕಾಮಜ್ವಾಲೆ ಈಗ ಅವಳನ್ನೇ ಸುಡುವ ಪರಿಸ್ಥಿತಿ ಬಂದಾಗ ಆಕೆ ಗಾಬರಿಯಾಗಿ ಎಚ್ಚೆತ್ತುಕೊಳ್ಳುವಳು. ಸಕಾಲದಲ್ಲಿ ಸತೀಶ ಇವರಿದ್ದಲ್ಲಿಗೆ ಬಂದು ಇವರನ್ನು ಬದುಕಿಸಿದ. ಬಾಯಿಲೆಯಿಂದ ಸಾಯುವ ಸ್ಥಿತಿಯಲ್ಲಿದ್ದ ಉಪೇಂದ್ರನ ಬಳಿಗೆ ಅವಳನ್ನು ಸತೀಶ ಕರೆತಂದ. ಅವನಿಗೆ ಮುಖ ತೋರಿಸಲೂ ಇವಳಿಗೆ ಇಷ್ಟವಿಲ್ಲ. ಈ ಎಲ್ಲಾ ಆಘಾತಗಳಿಂದ ಅವಳ ಮನಸ್ಸು ಸ್ವಾಸ್ಥ್ಯಕಳೆದುಕೊಂಡು ಉನ್ಮಾದದ ಸ್ಥಿತಿಯನ್ನು ಮುಟ್ಟಿತು. ಕಿರಣ್ಮಯಿ ಹುಚ್ಚಿಯಂತೆ ಬಡಬಡಿಸತೊಡಗುವಳು. ಉಪೇಂದ್ರನೂ ಮೃತನಾದಮೇಲೆ ಅವಳ ಬಾಳೇ ಶೂನ್ಯವಾಯಿತು.

4

ಶರತ್‌ಚಂದ್ರರ ಸ್ತ್ರೀಪಾತ್ರಗಳಲ್ಲಿ ಇನ್ನೊಂದು ವರ್ಗದವರನ್ನು ಪ್ರಸ್ತಾಪಿಸದೆ ಈ ಪರಿಶೀಲನೆ ಪೂರ್ಣವಾಗದು. ಹಿಂದೂಗಳಲ್ಲದ ಆದರೆ ಹಿಂದೂ ಪದ್ಧತಿಯಲ್ಲಿ ನಿಷ್ಠರಾದ ಕೆಲವು ಪಾತ್ರಗಳು ಅವರ ಕಾದಂಬರಿಗಳಲ್ಲಿ ಬರುತ್ತವೆ. 'ಅಧಿಕಾರ'ದಲ್ಲಿ ಬರುವ '**ಭಾರತಿ**' ಈ ಗುಂಪಿನಲ್ಲಿ ಒಬ್ಬಳು. ಬ್ರಾಹ್ಮಣರ ಮಗಳೇ ಆದರೂ ಇವಳ

ತಂದೆ ಕ್ರಿಶ್ಚಿಯನ್ನನಾದುದರಿಂದ ಇವಳೂ ಮತಪರಿವರ್ತಿತಳಾಗಬೇಕಾಯಿತು. ತಂದೆ ಸತ್ತನಂತರ ತಾಯಿ ಬೇರೊಬ್ಬ ಕ್ರಿಶ್ಚಿಯನ್ನನನ್ನು ಮದುವೆಯಾದಳು. ಇವಳೂ ಅವರೊಡನೆ ಜೀವಿಸಬೇಕಾಯಿತು. ಇವರ ಮನೆಯ ಕೆಳಭಾಗಕ್ಕೆ ವಾಸಕ್ಕಾಗಿ ಬಂದ ವಿದ್ಯಾವಂತ, ತರುಣ, ಆಚಾರನಿಷ್ಠ ಅಪೂರ್ವನನ್ನು ಈಕೆ ಮನಸಾರೆ ಪ್ರೀತಿಸುತ್ತಾಳೆ. ತಾಯಿಯ ಮಗನಾದ ಅವನನ್ನು ಅವನ ದೌರ್ಬಲ್ಯಗಳಿಗಾಗಿಯೇ ಅವಳು ಪ್ರೀತಿಸಿ ಅವನ ಎಲ್ಲ ಹೊಣೆಯನ್ನೂ ವಹಿಸಿಕೊಳ್ಳುತ್ತಾಳೆ. ಅವನ ಹೇಡಿತನದಿಂದಾಗಿ ಅವಳಿಗೂ ಅವಳ ಗೆಳೆಯರಾದ ಥಾಬೀಸಮಿತಿಯ ಸದಸ್ಯರಿಗೂ ಅಪಾಯವೇ ಒದಗಿದರೂ, ಅವನಿಂದಲೇ ಅವಳಿಗೆ ಅವಮಾನವೇ ಆದರೂ ಅವಳ ಪ್ರೇಮ ಕುಂದುವುದಿಲ್ಲ – ತಾಯಿಯನ್ನು ಕಳೆದುಕೊಂಡು ಅನಾಥನಾದ ಆತನನ್ನು ತಾಯಂತೆ ನೋಡಿಕೊಳ್ಳುತ್ತಾಳೆ. ಅವನನ್ನು ಮನುಷ್ಯನನ್ನಾಗಿ ಮಾಡುತ್ತಾಳೆ. ಇದೇ ಕಾದಂಬರಿಯಲ್ಲಿ ಬರುವ ಸುಮಿತ್ರೆಯೂ ಬಂಗಾಲಿ ಬ್ರಾಹ್ಮಣನಿಗೂ ಯಹೂದಿ ಹೆಣ್ಣಿಗೂ ಜನಿಸಿದವಳು. ಹುಟ್ಟಿನಿಂದಲೇ ಧೈರ್ಯಶಾಲಿ, ಹಲವಾರು ಭಾಷೆಗಳನ್ನು ಬಲ್ಲವಳು. ಪುರುಷರ ನಡುವೆಯೇ ಇದ್ದುಕೊಂಡು ಗಾಂಜಾ ಕಳ್ಳಸಾಗಣೆಯಲ್ಲಿ ತೊಡಗಿದ್ದವಳು. ಒಮ್ಮೆ ಪೋಲೀಸರ ಕೈಯಲ್ಲಿ ಸಿಕ್ಕಿಬಿದ್ದಾಗ ಕ್ರಾಂತಿಕಾರೀ ಸವ್ಯಸಾಚಿಯಿಂದ ಬಿಡುಗಡೆ ಪಡೆಯುತ್ತಾಳೆ. ಅವನ ಪ್ರಭಾವಕ್ಕೆಸಿಕ್ಕಿ ತನ್ನ ಹಾದಿಯನ್ನು ಬದಲಾಯಿಸಿಕೊಳ್ಳುತ್ತಾಳೆ. ಥಾಬೀಸಮಿತಿಯ ಅಧ್ಯಕ್ಷಿಣಿಯಾಗಿ ಕೂಲಿಕಾರರ ಸಂಘಟನಾಕಾರ್ಯದಲ್ಲಿ ತೊಡಗುತ್ತಾಳೆ. ಸವ್ಯಸಾಚಿಯನ್ನು ಮನಸಾರೆ ಪ್ರಿತಿಸಿದರೂ ಅವನನ್ನು ಪಡೆಯಲಾರದೆ ನಿರಾಶಳಾಗುತ್ತಾಳೆ. ಮಹಾ ನಿಷ್ಠುರಳು. ತಮ್ಮ ಗುಟ್ಟನ್ನು ಬಯಲುಮಾಡಿದ ಅಪೂರ್ವನಿಗೆ ಮರಣದಂಡಣೆ ವಿಧಿಸಲೂ ಅವಳು ಹಿಂದೆಮುಂದೆ ನೋಡುವುದಿಲ್ಲ. ಅದನ್ನು ತಪ್ಪಿಸಿದ ಸವ್ಯಸಾಚಿಯಮೇಲೆ ಒಳಗೊಳಗೇ ನಡೆದ ಒಳಸಂಚಿನಲ್ಲಿ ಅವಳೂ ಸೇರಿಕೊಳ್ಳುತ್ತಾಳೆ. 'ಶೇಷಪ್ರಶ್ನೆ'ಯಲ್ಲಿ ಬರುವ ಕಮಲಾ ಶರತ್‌ಚಂದ್ರರ ಒಂದು ಅಪೂರ್ವ ಸೃಷ್ಟಿಯೆಂದೇ ಹೇಳಬಹುದು. ಈಕೆಯ ತಾಯಿ ಚಹತೋಟದಲ್ಲಿ ಕೆಲಸಮಾಡುತ್ತಿದ್ದ ಒಬ್ಬ ಸೇವಕಿ; ತಂದೆ ಆಂಗ್ಲೇಯ–ಇವಳು ಬಾಲ್ಯವನ್ನೆಲ್ಲಾ ತಂದೆಯ ಜೊತೆಯಲ್ಲಿಯೇ ಕಳೆದು ಅವನಿಂದ ಅನೇಕ ಸಂಗತಿಗಳನ್ನು ಕಲಿತಳು. ವಿವಾಹವಾಗಿ ವಿಧವೆಯೂ ಆದಳು. ಇವಳ ರೂಪಕ್ಕೆ ಮರುಳಾಗಿ ಶಿವನಾಥ ಇವಳನ್ನು ಮದುವೆಯಾದ. ಅವನು ತನ್ನ ಪತ್ನಿ ರೋಗಿಷ್ಠೆಯೆಂಬ ಕಾರಣ ಅವಳನ್ನು ತ್ಯಜಿಸಿದ್ದರೂ, ಇವಳನ್ನು ಮೋಸದಿಂದಲೇ ಮದುವೆಯಾಗಿದ್ದರೂ ಅವಳದೇನೂ ಅಭ್ಯಂತರವಿಲ್ಲ. ಅವಳು ಶಿವನಾಥನನ್ನು ಪ್ರೀತಿಸುತ್ತಿದ್ದಾಗ ಅಂಥ ಅಪೂರ್ವ ದಂಪತಿಗಳೇ ಪ್ರಪಂಚದಲ್ಲಿಲ್ಲವೆಂದು ಜನರು ಆಡಿಕೊಳ್ಳುವಂತೆ ಇತ್ತು. ಮುಂದೆ ಶಿವನಾಥ ಮನೋರಮೆಯಲ್ಲಿ ಅನುರಕ್ತನಾಗಿ ಇವಳನ್ನು ದೂರಮಾಡಿದಾಗಲೂ ಅವಳು ಅವನನ್ನು ಆಕ್ಷೇಪಿಸುವುದಿಲ್ಲ. ಸ್ವತಂತ್ರವಾಗಿ ಬಡತನದ ಜೀವನ ನಡೆಸುತ್ತಾಳೆ. ಪ್ರಪಂಚದ ಎಲ್ಲ ವಿಚಾರಗಳಲ್ಲಿಯೂ ಆಕೆ ತನ್ನದೇ ಆದ ಅಭಿಪ್ರಾಯ

ಹೋರುತ್ತಾಳೆ. ಆಶು ಬಾಬುಗಳ ಮೃತಪತ್ನೀ ಪ್ರೇಮವನ್ನು ಮಾನಸಿಕ ಮುಪ್ಪು ಎಂದು ಟೀಕಿಸುತ್ತಾಳೆ. ಟಾಜ್‌ಮಹಲ್ ಕಟ್ಟಡದ ಹಿನ್ನೆಲೆ ಅಮರ ಪ್ರೇಮವಲ್ಲವೆಂದೂ ಕಲಾಭಿರುಚಿಯೆಂದೂ ಭಾವಿಸುತ್ತಾಳೆ. ಹರೇಂದ್ರನ ಆಶ್ರಮವನ್ನು ಟೀಕಿಸುತ್ತಾ, "ಇಷ್ಟು ಹುಡುಗರಿಂದ ಹೀಗೆ ಆಡಂಬರದಿಂದ ದರಿದ್ರಾಚರಣೆಮಾಡಿಸುವುದಕ್ಕೇ 'ಮನುಷ್ಯ'ರನ್ನು ಮಾಡುವುದೆಂದು ಹೆಸರೇ" ಎನ್ನುತ್ತಾಳೆ. ಭಾರತೀಯ ಸಂಪ್ರದಾಯ, ಆದರ್ಶ ಮುಂತಾದುವನ್ನು ಕಟುವಾಗಿಯೇ ಟೀಕಿಸುತ್ತಾಳೆ. ತನ್ನ ರೂಪ, ಯೌವನ, ಜಾಣತನ, ವಿದ್ಯೆ—ಇವುಗಳಿಂದ ರಾಣಿಯಂತೆ ಬಾಳಬಹುದಾದ ಅವಕಾಶ ವಿದ್ದರೂ ಅದನ್ನವಳು ಕಡೆಗಣಿಸಿ ಒಪ್ಪೊತ್ತಿನ ಸರಳವಾದ ಊಟದಿಂದಲೇ ಕಾಲಹಾಕುತ್ತಾಳೆ. ಆ ಬಡತನವೂ ಆಡಂಬರಕ್ಕಾಗಿ ಅಲ್ಲ ; ಬೇರೇನೂ ದಾರಿಯಿಲ್ಲದುದಕ್ಕೆ ತನ್ನ ಪತಿಯಾಗಿದ್ದ ಶಿವನಾಥ ಮನೋರಮೆಯನ್ನು ಪ್ರೀತಿಸತೊಡಗಿದಾಗ ಇತರರು ಇವಳ ಬಗ್ಗೆ ಮರುಕ ವ್ಯಕ್ತಪಡಿಸಿದರೆ ಅದರ ಆವಶ್ಯಕತೆಯಿಲ್ಲವೆನ್ನುತ್ತಾಳೆ. ಪ್ರೇಮವಿಲ್ಲದ ಮೇಲೆ ವಿವಾಹನಿಯಮದಿಂದ ಅವರನ್ನು ಕಟ್ಟಿಹಾಕುವುದು ಸರಿಯಲ್ಲವೆನ್ನುತ್ತಾಳೆ. ವಿವಾಹ ಸಂಪ್ರದಾಯದಲ್ಲಿಯೇ ಅವಳಿಗೆ ಶ್ರದ್ಧೆಯಿಲ್ಲ. ಪ್ರೇಮವೇ ನಿಜವಾದ ಬಂಧನ ಎನ್ನುತ್ತಾಳೆ. ವೈಧವ್ಯದ ಪವಿತ್ರ ಆಚರಣೆಯನ್ನೂ ಹಾಗೆಯೇ ಖಂಡಿಸುತ್ತಾಳೆ. ತನ್ನ ಮನೆಯಲ್ಲಿ ಒಂದೇ ಕೋಣೆಯಲ್ಲಿ ಮಲಗು ಎಂದಾಗ ಆಶ್ಚರ್ಯಗೊಂಡ ಹರೇಂದ್ರನನ್ನು ನೀವು ಬ್ರಹ್ಮಚಾರಿಗಳು ಸಂಕೋಚವೇನು, ಭಯವೇನು ? ಎನ್ನುತ್ತಾಳೆ. ಶಿವನಾಥನ ಹಿಂದೆ ಓಡಿಹೋಗಿ ಮದುವೆಯಾದ ಮನೋರಮೆಯ ವಿಚಾರದಲ್ಲಿ ಆಶುಬಾಬುಗಳು ಕೋಪಗೊಂಡರೆ ಇವಳೇ ಸಮಾಧಾನಹೇಳಿ ಕ್ಷಮಿಸಿರೆನ್ನುತ್ತಾಳೆ. ಎಂಥ ಕಷ್ಟ ಬಂದಾಗಲೂ ಇನ್ನೊಬ್ಬರಲ್ಲಿ ಯಾಚಿಸುವುದಿಲ್ಲ, ಪರೋಕ್ಷವಾಗಿ ಬಂದ ಸಹಾಯವನ್ನೂ ನಿರಾಕರಿಸುತ್ತಾಳೆ. ಬದಲು ತಾನೇ ಅವರಿಗೆ ಬಲವಂತವಾಗಿ ಉಣಬಡಿಸುತ್ತಾಳೆ—ಉಪಚರಿಸುತ್ತಾಳೆ. ಅಜಿತನನ್ನು ಪ್ರೀತಿಸಿದರೂ ಅವನೊಡನೆ ಮದುವೆಯಾಗಲು ಅವಳು ಇಷ್ಟಪಡುವುದಿಲ್ಲ. ರಾಜೇಂದ್ರನನ್ನೂ ಅವಳು ಒಮ್ಮೆ ಪ್ರೀತಿಸಿದ್ದಳು. ಸ್ತ್ರೀಯರ ವಿಚಾರದಲ್ಲಿ ಅವನಿಗಿದ್ದ ನಿರ್ಲಕ್ಷ್ಯವೇ ಅವನಲ್ಲಿ ಆಕರ್ಷಿತಳಾಗಲು ಕಾರಣ. ಆದರೆ ಅವನು ಇವಳ ವಶನಾಗದೆ ಹೊರಟು ಹೋದ. ಅವಳ ಪ್ರಭಾವಕ್ಕೆ ಸಿಲುಕದವರೇ ಇಲ್ಲ. ನೀಲಿಮಾ ಪರಿವರ್ತಿತಳಾಗುತ್ತಾಳೆ. ಬೇಲಾ ಬಿಟ್ಟಗಂಡನನ್ನೂ ಕೂಡಿಕೊಳ್ಳುವ ಯೋಜನೆ ಮಾಡುತ್ತಾಳೆ. ಹರೇಂದ್ರ ತನ್ನ ಆಶ್ರಮವನ್ನೂ ಮುಚ್ಚುತ್ತಾನೆ. ಕೊನೆಗೆ ಇವಳ ಕಡುವೈರಿಯಂತಿದ್ದ ನಿಷ್ಠುರ ಭಾಷಿ ಅಕ್ಷಯರೂ ಕೊನೆಯಲ್ಲಿ ಇವಳನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ. ಅವಳ ಹಾದ ರಸವಂತಹ ಬುದ್ಧಿ, ತೀಕ್ಷ್ಣವಾದ ವಿಚಾರಧಾರೆ, ಕಟುವಾದಟೀಕೆ, ಶಾಂತಸ್ವಭಾವ, ಉದ್ರೇಕರಹಿತ ಮಾತುಕತೆ, ವಿನಯಪೂರ್ವಕವಾದ ನಡೆವಳಿಕೆ ಒಂದೊಂದೂ ಅನುಕರಣೀಯವಾಗಿರುತ್ತವೆ. ಅವಳು ಪುರುಷರ ಭೋಗವಸ್ತುವಿನ ಜಾತಿಗೆ ಸೇರಿದವಳಲ್ಲ. 'ಶ್ರೀಕಾಂತ'ದಲ್ಲಿ ಚಿತ್ರಿತಳಾಗಿರುವ **'ಅನ್ನದಾ'** ಈ ಸಾಲಿನಲ್ಲಿ ನಿಲ್ಲುವ

ಇನ್ನೊಂದು ಪಾತ್ರ. ಬಹುಶಃ ಶರತ್‌ಚಂದ್ರರಿಗೆ ಬಹಳ ಮೆಚ್ಚುಗೆಯಾದ ಪಾತ್ರ. ಈಕೆಯೇನೂ ವಿದ್ಯಾವತಿಯಲ್ಲ. ಬಾಲ್ಯದಲ್ಲಿಯೇ ಇವಳಿಗೆ ಮದುವೆಯಾಗಿ ಪತಿಯೂ ಇವಳ ಮನೆಯಲ್ಲಿಯೇ ಇದ್ದ. ಇವಳ ವಿಧವೆ ಅಕ್ಕನನ್ನೂ ಕೊಂದು ಆತ ಮನೆಯಿಂದ ಪಲಾಯನ ಮಾಡಿದ–ಆಕೆಯೊಡನೆ ಅವನ ಸಂಬಂಧ ಯಾವುದಿತ್ತೋ ತಿಳಿಯದು. ಅನ್ನದಾ ಪತಿಯ ನಿರೀಕ್ಷೆಯಲ್ಲಿ ತಂದೆಯ ಮನೆಯಲ್ಲಿಯೇ ಇದ್ದಳು. ಏಳು ವರ್ಷಗಳ ನಂತರ ಇವಳ ಮನೆಯ ಮುಂದೆ ಒಬ್ಬ ಹಾವಾಡಿಗ ಸೊಗಸಾಗಿ ಹಾವಾಡಿಸಿದ. ಅವನು ಮುಸಲ್ಮಾನ. ಬೇರಾರಿಗೂ ಗೊತ್ತಾಗದಿದ್ದರೂ ಇವಳಿಗೆ ಮಾತ್ರ ಅವನೇ ತನ್ನ ಪತಿಯೆಂದು ಗೊತ್ತಾಯಿತು ; ಅವನ ಸಂಕೇತವೂ ಅರ್ಥವಾಯಿತು. ಅಂದೇ ರಾತ್ರಿ ಅವಳು ತನ್ನ ತಂದೆಯ ಮನೆಯನ್ನೂ, ತೌರಿನ ಎಲ್ಲ ಬಂಧನವನ್ನೂ ತ್ಯಜಿಸಿ ಪತಿಯ ಹಿಂದೆ ಹೊರಟುಹೋದಳು. ತಾನು ಮುಸ್ಲಿಮಳಾದಳು. ಅವನೊಡನೆ ಊರೂರು ತಿರುಗುತ್ತಾ ಅವನನ್ನು ಪ್ರೀತಿಸುತ್ತಾ ಸಂಸಾರ ನಡೆಸುವಳು. ತಾನು ಕಷ್ಟಪಟ್ಟು ಅವನಿಗೆ ಭಂಗಿಗೆ ಹಣ ಒದಗಿಸುವಳು. ಭಂಗಿಯ ಮತ್ತಿನಲ್ಲಿ ಅವನು ಹೊಡೆದರೆ ಹೊಡೆಸಿಕೊಳ್ಳುವಳು. ಎಂಥ ಶೋಚನೀಯ ಪರಿಸ್ಥಿತಿಯಲ್ಲಿಯೂ ಅವನನ್ನಗಲದೆ ಇದ್ದು ಕೊನೆಗೆ ಅವನು ಹಾವು ಕಚ್ಚಿ ಮೃತನಾದಾಗ ಅವನಿಗೆ ಮುಸ್ಲಿಂ ಪದ್ಧತಿಯಂತೆ ಶವಸಂಸ್ಕಾರ ನಡೆಸಿ ತಾನು ವಿಧವೆಯಾಗುವಳು. ಮುಂದೆ ಅವಳ ಪಾಡು ಏನಾಯಿತೆಂದು ಲೇಖಕರು ಅವಳ ಅದ್ಭುತ ಜೀವನದಮೇಲೆ ತೆರೆಯೆಳೆದುಬಿಡುತ್ತಾರೆ. ಈ ಎಲ್ಲಾ ಮಹಿಳೆಯರೂ ಬೇರೆ ಧರ್ಮವನ್ನವಲಂಬಿಸಿದ್ದರೂ ಅವರಲ್ಲಿ ಭಾರತೀಯ ಹಿಂದೂ ರಕ್ತ ಹರಿಯುತ್ತಿರುವುದೂ, ಅವರ ಆಚರಣೆಗಳೆಲ್ಲಾ ಹಿಂದೂ ನಾರಿಯ ರೀತಿಯದೇ ಎಂಬುದೂ ಗಮನಾರ್ಹ.

5

ಶರತ್‌ಚಂದ್ರರ ಸ್ತ್ರೀಪಾತ್ರಗಳಲ್ಲಿ ಸತಿಸಾವಿತ್ರಿಯರಂತೆ ಪತಿನಿಷ್ಠರಾದ, ಪತಿಯನ್ನೇ ಪರದೈವವೆಂದು ಬಗೆದು ಆರಾಧಿಸುವ, ಪತಿಯನ್ನು ತಮ್ಮ ಸೆರಗಿಗೆ ಗಂಟು ಹಾಕಿಕೊಂಡು ಕಾಪಾಡಬಯಸುವ ಹಲವು ಸತೀಸಾಧ್ವಿಯರು ಇದ್ದಾರೆ. ಅವರನ್ನೆಲ್ಲಾ ಒಂದು ಗುಂಪಾಗಿ ಎಣಿಸಬಹುದು. ಅವರ ಏಕನಿಷ್ಠ ಪತಿಭಕ್ತಿಯೇ ಅವರ ಪಾತ್ರದ ವೈಶಿಷ್ಟ್ಯ–'ವಿಪ್ರದಾಸ'ದಲ್ಲಿ ಬರುವ **ಸತಿ**, 'ಚರಿತ್ರ ಹೀನ'ದಲ್ಲಿ ಬರುವ '**ಸುರಬಾಲಾ**', 'ಷೋಡಶಿ'ಯಲ್ಲಿ ಬರುವ **ಹೇಮಾಂಗಿನಿ**. '**ಶುಭದಾ**'ದಲ್ಲಿ ಬರುವ **ಶುಭದಾ**, ಶ್ರೀಕಾಂತದ **ರಾಜಲಕ್ಷ್ಮಿ** ಇವರಲ್ಲಿ ಮುಖ್ಯರಾದವರು. ಪತಿಯನ್ನರ್ಥಮಾಡಿಕೊಳ್ಳದೆ ದೂರಮಾಡಿದ್ದು ಅನಂತರ ಅವರನ್ನು ಪಡೆಯುವ ಸತಿಯರಲ್ಲಿ ಕಾಶೀನಾಥದ **ಕಮಲಾ**, ಸ್ವಾಮಿಯ **ಸೌಧಾಮಿನಿ**, **ಷೋಡಶಿಯ ಅಲಕಾ** ಮುಖ್ಯರಾದವರು. ಶ್ರೀಕಾಂತದಲ್ಲಿ ಬರುವ **ಅಭಯಾ** ಪತಿ ಭಕ್ತೆಯೇ ಆಗಿದ್ದರೂ, ತನ್ನನ್ನಗಲಿ ರಂಗೂನಿನಲ್ಲಿ ಬೇರೊಬ್ಬ ಹೆಂಗಸಿನೊಡನೆ ಸಂಸಾರ

ನಡೆಸುತ್ತಿದ್ದ ಪತಿಯನ್ನು ಹುಡುಕಿಕೊಂಡು ಹೋಗಿ ಪತ್ತೆಮಾಡಿ ಅವನನ್ನು ಸೇರಿದರೂ ಕೊನೆಗೆ ಅವನ ಕಿರುಕುಳವನ್ನು ತಾಳಲಾರದೆ ತಾನು ಈ ಮೊದಲು ಪ್ರೀತಿಸಿದ ರೋಹಿಣಿಸಿಂಹನ ಬಳಿಗೆ ಹಿಂದಿರುಗುವಳು.

6

ಶರತ್‌ಚಂದ್ರರ ಸ್ತ್ರೀಪಾತ್ರಗಳಲ್ಲಿ ಪ್ರೇಮಿಗಳ ಒಂದು ಸಾಲನ್ನೇ ಗುರುತಿಸಬಹುದು. ಪ್ರೇಮದ ನವಿರಾದ ಎಳೆಗಳನ್ನು ಬಿಡಿಸುವುದರಲ್ಲಿ, ಅದರ ಮಧುರ ಸೌರಭವನ್ನು ಹರಡುವುದರಲ್ಲಿ ಶರತ್‌ರ ಸರಿಗಟ್ಟುವ ಬೇರೆ ಲೇಖಕರನ್ನು ನಾವು ಕಾಣಲಾರೆವು. ಎಷ್ಟೋ ಮಂದಿ ಮಹಿಳಾ ಲೇಖಕಿಯರಿಗಿಂತಲೂ ಮಿಗಿಲಾಗಿ, ಸ್ತ್ರೀಯರೇ ಅಚ್ಚರಿಯಿಂದ ತಲೆದೂಗುವಂತೆ ಅವರು ನಾರೀಪ್ರೇಮವನ್ನು ಚಿತ್ರಿಸುತ್ತಾರೆ. ಒಲವಿನ ಹಲವು ಸೆಡಕುಗಳು, ಅದು ವ್ಯಕ್ತವಾಗುವ ಹಲವು ವಿಧಾನಗಳು, ಅದರ ಸುಳಿವು, ಒನವು ವೈಯಾರಗಳು, ಅದರ ಮಾಧುರ್ಯ, ಅಭಿಮಾನಗಳು, ಕಲಹ, ಹೊಂದಾಣಿಕೆಗಳು ಹೀಗೆ ಹಲವು ಮಜಲುಗಳಲ್ಲಿ ಪ್ರೇಮದ ಹರವನ್ನು ಅವರು ಚಿತ್ರಿಸುತ್ತಾರೆ. ಅವರ 'ದೇವದಾಸ' ಕಾದಂಬರಿ ಇಂಥ ಪ್ರೇಮವನ್ನು ಚಿತ್ರಿಸುವ ಒಂದು ಅಮರಕೃತಿ. 'ಪರಿಣೀತಾ' ಇದೇ ಸಾಲಿಗೆ ಸೇರುವ ಆದರೆ ಸುಖಾಂತವಾದ ಇನ್ನೊಂದು ಕೃತಿ. ಈ ಪ್ರೇಮಚಿತ್ರಗಳಲ್ಲಿಯೂ ಭಗ್ನ ಪ್ರಣಯವೇ ಅಧಿಕ. ರಮಾ – ರಮೇಶರ ಪ್ರಣಯ ಇಂಥವುಗಳಲ್ಲೊಂದು. ಬ್ರಾಹ್ಮಣರ ಹುಡುಗಿಯಲ್ಲಿ ಬರುವ ಅರುಣ–ಸಂಧ್ಯಾ, ಅರಕ್ಷಣೀಯದಲ್ಲಿ ಬರುವ ಜ್ಞಾನದಾ–ಅತುಲ, ಶುಭದಾದಲ್ಲಿ ಬರುವ ಲಲನಾ–ಸದಾನಂದ, ಚರಿತ್ರಹೀನದ ಸಾವಿತ್ರಿ–ಸತೀಶ, ಅಧಿಕಾರದ ಅಪೂರ್ವ–ಭಾರತಿ ಇವು ಆ ಪ್ರಣಯ ಚಿತ್ರಕ್ಕೆ ಕೆಲವು ಉದಾಹರಣೆಗಳು. ಒಂದು ದೃಷ್ಟಿಯಲ್ಲಿ ನೋಡಿದರೆ ಶರತ್‌ರವರ ಬಹುಪಾಲು ಸ್ತ್ರೀಪಾತ್ರಗಳು ಪ್ರೇಮಿಗಳೇ–ಅದೂ ಭಗ್ನ ಪ್ರೇಮಿಗಳೇ. ಅಷ್ಟು ಮಾತ್ರವಲ್ಲ. ಈ ಪ್ರೇಮಿಗಳಲ್ಲಿ ಕಾಣುವ ಸಂಯಮ, ಸ್ವಾಭಿಮಾನ, ಬಿಂಕ, ಸಂಕೋಚ ಅದೆಷ್ಟು? ಹೃದಯದಲ್ಲಿ ಪ್ರೇಮವು ಉಕ್ಕಿಹರಿಯುತ್ತಿದ್ದರೂ ಅದನ್ನು ಒಮ್ಮೆಯೂ ವ್ಯಕ್ತಪಡಿಸಲಾಗದ ಸನ್ನಿವೇಶದಲ್ಲಿ ಸಿಕ್ಕ ಪ್ರೇಮಿಗಳೆಷ್ಟು ಮಂದಿ! ಅದನ್ನರಿತುಕೊಳ್ಳಲಾರದೆ ಮೋಸಹೋದ ಪುರುಷರೆಷ್ಟು ಮಂದಿ ? ಸಾಮಾಜಿಕ, ಧಾರ್ಮಿಕ, ಕಾರಣಗಳಿಂದ ವಿಫಲವಾಗುವ, ದುರಂತವಾಗುವ ಪ್ರಣಯಗಳೆಷ್ಟು ? ಕಿರಣ್ಮಯಿ ಉಪೇಂದ್ರನನ್ನು ಪ್ರೀತಿಸುವುದೂ, ನೀಲಿಮಾ ಆಶುಬಾಬುಗಳನ್ನು ಪ್ರೀತಿಸುವುದೂ, ಕಮಲಲತೆ ಶ್ರೀಕಾಂತನನ್ನು ಪ್ರೀತಿಸುವುದೂ ಎಷ್ಟು ವಿಸ್ಮಯಕರ! ಎಷ್ಟು ವಿಚಿತ್ರ! ಹಾಗೆಯೇ ದೇವದಾಸನನ್ನು ಪ್ರೀತಿಸುವ ಚಂದ್ರಮುಖಿ, ಕಮಲಲತೆಯನ್ನು ಪ್ರೀತಿಸುವ ಗೌಹರ, ಡಾಕ್ಟರ್ ಸವ್ಯಸಾಚಿಯನ್ನು ಪ್ರೀತಿಸುವ ಸುಮಿತ್ರಾ ಇವರ ಬಗ್ಗೆ ಏನು ಹೇಳಬಹುದು ? ಪ್ರೇಮ ಕುರುಡು, ಅದಕ್ಕೆ ಜಾತಿ ಮತ ಭೇದ

ವಿಲ್ಲ, ಬಡವ-ಬಲ್ಲಿದನೆಂಬ ವ್ಯತ್ಯಾಸವಿಲ್ಲ, ವಯಸ್ಸಿನ ಅಂತರವಿಲ್ಲ, ಎಂದು ಹೇಳುವ ಮಾತು ಮೇಲೆ ಪ್ರಸ್ತಾಪಿಸಿದ ಹಲವು ಪಾತ್ರಗಳಮಟ್ಟಿಗೆ ಸತ್ಯವಾಗಿದೆ. ಈ ಎಲ್ಲ ಪ್ರೇಮ ಚಿತ್ರಣದಲ್ಲಿಯೂ ಶರತ್‌ಚಂದ್ರರು ಕೇವಲ ಹೃದಯ ಭಾವವನ್ನು, ಅದರ ಹಲವು ಅಭಿವ್ಯಕ್ತಿಗಳನ್ನು ಗುರುತಿಸುವರೇ ಹೊರತು ಗಂಡು-ಹೆಣ್ಣಿನ ಶರೀರ ಸಂಬಂಧ ಪ್ರಸ್ತಾಪಿಸುವುದಿಲ್ಲ. ಒಮ್ಮೆಯೂ ಪರಸ್ಪರ ಸ್ಪರ್ಶಿಸದೆ ಗಾಢವಾಗಿ ಪ್ರೇಮಿಸಿದ ಹಲವು ಪ್ರಣಯಗಳ ಚಿತ್ರ ಅವರ ಕೃತಿಗಳಲ್ಲಿ ಕಾಣಬರುತ್ತವೆ. ಪ್ರೇಮಕ್ಕೆ ಶರೀರ ಸಂಪರ್ಕದ ಅವಶ್ಯಕತೆ ಅಷ್ಟೇನೂ ಮುಖ್ಯವಲ್ಲ ಎಂಬುದೇ ಶರತ್‌ರವರ ಅಭಿಪ್ರಾಯವೆಂದು ಕಾಣಿಸುತ್ತದೆ.

7

ಶರತ್‌ಚಂದ್ರರ ಸ್ತ್ರೀಪಾತ್ರಗಳಲ್ಲಿ ಕಾಣಬರುವ ಕೆಲವು ಸಾಮಾನ್ಯ ಗುಣಗಳನ್ನು ಗುರುತಿಸಬಹುದು. ಇದು ಬಂಗಾಲೀ ಹಿಂದೂ ಸಮಾಜಕ್ಕೇ ವಿಶೇಷವೆಂದೂ ಎನ್ನಿಸುತ್ತದೆ. ಮೊದಲನೆಯದಾಗಿ ಅವರ ಅತಿಥಿ ಸತ್ಕಾರ ಗುಣ. ಪುರುಷರನ್ನು ಉಪಚರಿಸುವ, ಊಟಮಾಡಿಸುವ ಗುಣ-ತಮಗೆ ಪ್ರಿಯರಾದವರನ್ನು ಅವರು ಸತ್ಕರಿಸುವ ವಿಧಾನ ಅತ್ಯಂತ ವಿಸ್ಮಯಕರ. ಅವರ ಇಷ್ಟ, ಅನಿಷ್ಟಗಳನ್ನು, ರುಚಿ, ಅಭಿರುಚಿಗಳನ್ನು ಹೇಗೋ ಅರಿತುಕೊಂಡು ಅವುಗಳನ್ನೊದಗಿಸುವ ಮೂಲಕ ಅವರನ್ನು ಊಟ ಮಾಡಿಸುವ ರೀತಿ ಆಶ್ಚರ್ಯಕರ. ಮಣೆ ಹಾಕಿ, ನೆಲ ಶುದ್ಧ ಮಾಡಿ ಪದಾರ್ಥಗಳನ್ನು ಬಡಿಸಿ, ಹತ್ತಿರ ಕುಳಿತು ಗಾಳಿ ಹಾಕುತ್ತಲೋ, ಉಪಚರಿಸುತ್ತಲೋ ಅವರ ಗಮನ ಊಟವನ್ನು ಬಿಟ್ಟು ಬೇರೆಡೆ ಹೋಗದಂತೆ, ಬಡಿಸುವವರಿಗೆ ತೃಪ್ತಿಯಾಗುವಂತೆ ಊಟ ಮಾಡಿಸುವ ಆ ಅನ್ನಪೂರ್ಣೆಯರು ಶರತ್‌ಚಂದ್ರರ ವಿಶೇಷ ಸೃಷ್ಟಿ. ರಾಜಲಕ್ಷ್ಮಿ, ಕಮಲೆ, ಅಭಯಾ, ರಮಾ, ನೀಲಿಮಾ, ಭಾರತಿ, ಭೈರವಿ ಇವರೆಲ್ಲಾ ಈ ಕಲೆಯಲ್ಲಿ ಚತುರರು. ಇವರ ಇನ್ನೊಂದು ಗುಣ ಅವರ ಸೇವಾವೃತ್ತಿ. ಖಾಯಿಲೆಯವರ ಶುಶ್ರೂಷೆ ಮಾಡುವುದರಲ್ಲಿ ಈ ರಮಣಿಯರು ತುಂಬಾ ಕುಶಲೆಯರು; ಅವರಿಗೆ ಪತಿಯೇ ಆಗಬೇಕೆಂದಿಲ್ಲ—ಯಾರೇ ಆಗಬಹುದು—ಅವರು ರೋಗಿಯಷ್ಟೆ! ಖಾಯಿಲೆ ಮನುಷ್ಯನೇ ಆದ ಶ್ರೀಕಾಂತನನ್ನು ಆರೈಕೆ ಮಾಡುವ ರಾಜಲಕ್ಷ್ಮಿ, ಅಭಯಾ; ಕೊನೆಗೆ ಅವನು ಯಾವುದೋ ಗೊತ್ತಿಲ್ಲದ ಹಳ್ಳಿಯೊಂದಕ್ಕೆ ಹೋಗಿ ಖಾಯಿಲೆ ಮಲಗಿದಾಗ ಆ ಅಪರಿಚಿತ ಅತಿಥಿಯನ್ನು ತನ್ನ ಮಗನೋ ಎಂಬಂತೆ ಉಪಚರಿಸುವ ಚಕ್ರವರ್ತಿಗಳ ಪತ್ನಿ; ಸದಾನಂದನನ್ನು ಉಪಚರಿಸುವ ಷೋಡಶಿ, ಸತೀಶನನ್ನು, ಉಪೇಂದ್ರನನ್ನು ಉಪಚರಿಸುವ ಸಾವಿತ್ರಿ, ವಿಪ್ರದಾಸನನ್ನು ಸೇವಿಸುವ ವಂದನಾ, ಅಪೂರ್ವನನ್ನೂ, ತಿವಾರಿಯನ್ನೂ ಸೇವಿಸುವ ಭಾರತಿ, ಮಹಿಮನ ಸೇವೆಮಾಡುವ ಮೃಣಾಳ, ಮುಚ್ಚಿಗರ ಕೇರಿಗೆ ಹೋಗಿ ರೋಗಿಗಳ ಸೇವೆ ಮಾಡುವ ಕಮಲಾ, ಇನ್ನೂ ಒಂಭತ್ತು ವರ್ಷದವಳಿರುವಾಗಲೇ

ಸಿಡುಬಿನಿಂದ ನರಳುತ್ತಿದ್ದ ಅತುಲನನ್ನು ಸೇವೆಮಾಡಿ ಬದುಕಿಸಿಕೊಂಡ ಜ್ಞಾನದಾ–ಹೀಗೆ ಹಲವರನ್ನು ಹೆಸರಿಸಬಹುದು. ಇವರ ಈ ಸೇವಾವೃತ್ತಿ ಅದೆಷ್ಟು ಹಿರಿದೆಂದರೆ, ಇವರ ಆರೈಕೆಯಲ್ಲಿ ಖಾಯಿಲೆ ಮಲಗುವುದೂ ಒಂದು ಪುಣ್ಯವೆನ್ನಬೇಕು. ವೈದ್ಯರ ಔಷಧಿಗಿಂತಲೂ ಇವರ ಸೇವೆಯಿಂದಲೇ ರೋಗ ಗುಣವಾಗಬೇಕು. ಈ ಮಹಿಳೆಯರ ಇನ್ನೊಂದು ಗುಣ ಅವರ ಸೋದರ ವಾತ್ಸಲ್ಯ–ಅಣ್ಣನೆಂದೋ, ಅಕ್ಕನೆಂದೋ, ಮೈದುನನೆಂದೋ ಕರೆದು ಅದೆಷ್ಟು ಬೇಗ ವ್ಯಕ್ತಿಗಳನ್ನು ಹತ್ತಿರಮಾಡಿಕೊಳ್ಳುತ್ತಾರೆ! ಮೈದುನರನ್ನು ಅಕ್ಕರೆಯಿಂದ ಪ್ರೀತಿಸುತ್ತಾ ಅವರನ್ನು ಕೆಲವು ವೇಳೆ ಹಾಳು ಮಾಡುವ ಅತ್ತಿಗೆಯರೂ ಕಡಿಮೆಯಿಲ್ಲ. ಅವರು ತಮ್ಮ ಪತಿಗಿಂತಲೂ ಮೈದುನರನ್ನೇ ಹೆಚ್ಚು ಪ್ರೀತಿಸುವರೇನೋ ಎಂಬ ಅನುಮಾನ ಬರುವಂತಿರುತ್ತದೆ ಅವರ ಅಕ್ಕರೆ. ದ್ವಿಜದಾಸನ ಅತ್ತಿಗೆ ಸತಿ, ಹರೇಂದ್ರನ ಅತ್ತಿಗೆ ನೀಲಿಮಾ, ಸತೀಶನ ಅತ್ತಿಗೆ ಕಿರಣ್ಮಯಿ, ದಿವಾಕರನ ಅತ್ತಿಗೆ ಸುರಬಾಲಾ–ಹೀಗೆ ಇವರ ಸಂಖ್ಯೆ ಬೆಳೆಯುತ್ತದೆ. ಸನ್ಯಾಸಿ ವಜ್ರಾನಂದನನ್ನೂ ಸನ್ಯಾಸಿ ಮೈದುನನನ್ನಾಗಿ ಮಾಡಿಕೊಂಡ ರಾಜಲಕ್ಷ್ಮಿಯ ಅಕ್ಕರೆ ಅಸಾಮಾನ್ಯವಾದುದು. ಈ ಪಾತ್ರಗಳ ಧೈರ್ಯ, ಆತ್ಮಾಭಿಮಾನವೂ ಕಡಿಮೆಯದಲ್ಲ. ಕಮಲಾ ತನ್ನ ಸುತ್ತಮುತ್ತಲ ಪ್ರತಿಷ್ಠಿತ ಜನರನ್ನೂ ಧೈರ್ಯವಾಗಿ ಎದುರಿಸಿ ತನಗೆನ್ನಿಸಿದ್ದನ್ನು ಖಂಡಿತವಾಗಿ ನುಡಿಯುತ್ತಾಳೆ. ಅವರೆಲ್ಲರ ಅಭಿಪ್ರಾಯಗಳನ್ನೂ ಖಂಡಿಸುತ್ತಾಳೆ. ಸಮಾಜವನ್ನೆದುರಿಸಿ ತನಗೆ ಸರಿಯೆನಿಸಿದಂತೆ ನಡೆಯುತ್ತಾಳೆ. ಅವಳ ನಡತೆಯನ್ನು ನೋಡಿದಾಗ ಸ್ತ್ರೀ ಅಬಲೆ ಎಂಬ ಮಾತು ಎಷ್ಟು ಹಾಸ್ಯಾಸ್ಪದ ಎನ್ನಿಸುತ್ತದೆ. ಷೋಡಶಿಯೂ ಅಷ್ಟೆ. ಸತ್ಯಕ್ಕಾಗಿ, ದುರ್ಬಲರ ಹಿತಕ್ಕಾಗಿ ಹಳ್ಳಿಯ ಪ್ರತಿಷ್ಠಿತ ವ್ಯಕ್ತಿಗಳನ್ನೇ ಎದುರು ಹಾಕಿಕೊಳ್ಳುತ್ತಾಳೆ. ದುರಾಚಾರಿಯೂ, ಕುಡುಕನೂ, ಸ್ತ್ರೀಲಂಪಟನೂ, ದ್ರವ್ಯ ಮೋಹಿಯೂ, ನಾಸ್ತಿಕನೂ ಆದ ಜಮೀನ್ದಾರನ ವಿರುದ್ಧ ಹೋರಾಡುತ್ತಾಳೆ. ಅವನನ್ನು ಪರಿವರ್ತಿಸುತ್ತಾಳೆ. ಅವಳು ಕಾಳಿಮಾತೆಯ ಭೈರವಿ ; ಕಾಳಿಮಾತೆಯೇ ಅವಳಲ್ಲಿ ಆವಿರ್ಭವಿಸಿದಂತೆ ಅವಳು ಧೈರ್ಯದಿಂದ ನಡೆಯುತ್ತಾಳೆ. ಅವರ ಆತ್ಮಾಭಿಮಾನವೂ ಅಂಥದೇ. ಸಾವಿತ್ರಿ ತನಗೆ ಮೇಲಿಂದ ಮೇಲೆ ಒದಗಿದ ಕಷ್ಟ, ಅಪಮಾನ, ತಿರಸ್ಕಾರ ಎಲ್ಲವನ್ನೂ ಮೌನವಾಗಿ ಅನುಭವಿಸುವಳೇ ಹೊರತು ಯಾರ ಸಹಾಯಕ್ಕಂತೂ ಯಾಚಿಸುವುದಿಲ್ಲ. ಕಮಲೆ ಒಂದೊಂದು ಹೊತ್ತಿನ ಊಟಕ್ಕೆ ತೊಂದರೆಯಾಗಿದ್ದಾಗಲೂ ಯಾರ ಸಹಾಯವನ್ನೂ ತೆಗೆದುಕೊಳ್ಳುವುದಿಲ್ಲ. ಭಾವ ಮಾಡಿದ ಆಸ್ತಿ ಅನ್ಯಾಯದ್ದೆಂದು ತಿಳಿದಕೂಡಲೇ ಅವರ ನೆರಳನ್ನೂ, ಅನ್ನವನ್ನೂ ಕಡೆಗಣಿಸಿ ಯಾರು ಎಷ್ಟು ಸಮಾಧಾನ ಹೇಳಿದರೂ ಕೇಳದೆ ಗಂಡನೊಡನೆ ಹೊರ ಬಂದು ಒಂದು ಚಿಕ್ಕಗುಡಿಸಲಿನಲ್ಲಿ ಕಾರ್ಪಣ್ಯ ಜೀವನವನ್ನು ನಡೆಸಲು ಸಿದ್ಧವಾಗುತ್ತಾಳೆ ಸುನಂದೆ ('ಶ್ರೀಕಾಂತ'ದಲ್ಲಿ). ತನಗೊಪ್ಪಿಗೆಯಿಲ್ಲದೆ ಮದುವೆಯಾದ

ಗಂಡದೊಡನೆ ಒಂದೇ ಹಾಸಿಗೆಯಲ್ಲಿ ಮಲಗಲು ನಿರಾಕರಿಸಿ ಬೇರೆಯಾಗಿಯೇ ಮಲಗುತ್ತಾಳೆ ಸೌಧಾಮಿನಿ ('ಸ್ವಾಮಿ').

ಅಂತು ಶರತ್‌ಚಂದ್ರರು ತಾವು ಚಿತ್ರಿಸಿದ ಸ್ತ್ರೀ ಪಾತ್ರಗಳಲ್ಲಿ ಭಾರತ ನಾರಿಯ ಸಮಗ್ರ ಸ್ವರೂಪವನ್ನು ಕಂಡರಿಸಿದ್ದಾರೆಂದು ಹೇಳಲಡ್ಡಿಯಿಲ್ಲ. ಅವಳು ಎಂದೂ ದುರ್ಬಲಳಲ್ಲ, ಅಬಲೆಯಲ್ಲ, ಪುರುಷನ ಹಂಗಿನಲ್ಲಿ ಇರುವವಳಲ್ಲ–ಪುರುಷನೊಡನೆ ಸಹಭಾಗಿನಿಯೂ, ಸಹಧರ್ಮಿಣಿಯೂ ಆಗಿ ಅವನನ್ನು ತಿದ್ದಿ, ನಡೆಸುವವಳು. ಅವಳು ಧೀರೆ, ಆತ್ಮಾಭಿಮಾನಿ, ಪ್ರೇಯಸಿ, ಸತಿ, ಅಕ್ಕ, ತಂಗಿ, ತಾಯಿ ಆಗಿದ್ದಾಳೆ. ಅನ್ನಪೂರ್ಣೆಯಾಗಿದ್ದಾಳೆ. ಪುರುಷನ ಭೋಗವಸ್ತುವಾಗದೆ ಆತ್ಮಪ್ರತಿಷ್ಠೆಯುಳ್ಳ ವ್ಯಕ್ತಿಯಾಗಿದ್ದಾಳೆ. ಕಮಲಾ ಹೇಳುವಂತೆ ಅವಳು ಪುರುಷವರ್ಗಕ್ಕೆ "ಸ್ತ್ರೀಜೀವನದ ಸತ್ಯಾಸತ್ಯತೆಯನ್ನು ನಿರ್ಣಯಿಸುವ ಭಾರ ಸ್ತ್ರೀಯರಿಗೆ ಬಿಟ್ಟುಬಿಡಿ. ಅದರ ನಿರ್ಣಯದ ಅಧಿಕಾರ ಗಂಡಸರು ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ" ಎಂದು ಹೇಳುವವಳಾಗಿದ್ದಾಳೆ. ಆದರೂ ಈ ಭಾಗ್ಯಹೀನ ದೇಶದಲ್ಲಿ, ರೋಗಗ್ರಸ್ತ ಸಮಾಜದಲ್ಲಿ ಆಕೆ ಬಹಳ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾಳೆ. ಪುರುಷನಿರ್ಮಿತ ನೀತಿ ನಿಯಮ ಶಾಸ್ತ್ರ ಸಂಕೋಲೆಯೊಳಗೆ ಸಿಕ್ಕಿ ನರಳುತ್ತಿದ್ದಾಳೆ. ಆದರೆ ಆ ಸೋಷಿನ, ಆ ದುಃಖದ ನಡುವೆಯೂ ಅವಳ ಆತ್ಮತೇಜ ಕಳೆಗುಂದಿಲ್ಲ. ಕಷ್ಟಗಳನ್ನನುಭವಿಸುತ್ತಲೇ ತನಗಾಗುತ್ತಿರುವ ಅನ್ಯಾಯವನ್ನು ಪುರುಷನು, ಸಮಾಜವು ಕಂಡುಕೊಳ್ಳುವಂತೆ ಮಾಡುತ್ತಿದ್ದಾಳೆ. ತನ್ನ ಪಾಲಿಗೆ ಬಂದುದನ್ನೆಲ್ಲಾ ಪ್ರತಿಭಟಿಸದೆ ಮೌನವಾಗಿ ಅನುಭವಿಸುವ ಶುಭ್ರದಾ ಪಾತ್ರದಿಂದ ಹಿಡಿದು ಇಡೀ ಹಿಂದೂ ಸಮಾಜವನ್ನೇ, ಪುರುಷ ವರ್ಗವನ್ನೇ ಅದರ, ಅವರ ಅರ್ಥಹೀನ ರೀತಿ ನೀತಿಗಳಿಗಾಗಿ ಪ್ರತಿಭಟಿಸಿ ಟೀಕಿಸಿ ಬಾಯಿಮುಚ್ಚಿಸುವ ಕಮಲೆಯವರೆಗೆ ಶರತ್‌ಚಂದ್ರರು ಭಾರತ ನಾರಿ ಇದ್ದ, ಇರುವ, ಇರಬೇಕಾದ ಸ್ಥಿತಿಯನ್ನು ವೈವಿಧ್ಯಮಯವಾಗಿ ಚಿತ್ರಿಸಿದ್ದಾರೆ. 'ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರದೇವತಾ' ಎಂಬ ಮಾತು ಈ ಸ್ತ್ರೀ ಪಾತ್ರಗಳ ವಿಚಾರದಲ್ಲಿ ಬಹುಮಟ್ಟಿಗೆ ಹೊಂದಿಕೊಳ್ಳುತ್ತದೆ.

ಕಾಗದ ಕೈಗಾರಿಕೆ—ಪ್ರಗತಿಯ ಮುನ್ನೋಟ

ದಾಮೋದರ ಕೃಷ್ಣ ಪೋತುವಲ್

ಹಿಂದಿನ ಮಾನ್ಸೂನ್ ಮಳೆಯ ಅಭಾವದಿಂದಾಗಿ ದೇಶದಲ್ಲುಂಟಾಗಿರುವ ಜಲ ಹಾಗೂ ಅನ್ನಕ್ಷಾಮಗಳು ಅನೇಕ ಪ್ರದೇಶಗಳ ಜನರನ್ನು ದಂಗು ಬಡಿಸಿದವು. ಇದರ ಕೂಡ, ಕೈಗಾರಿಕೆಗಳಿಗೆ ಉಸಿರಾದ ವಿದ್ಯುಚ್ಛಕ್ತಿ ಮತ್ತು ಕಚ್ಚಾವಸ್ತುಗಳ ಬರಗಾಲವೂ ಉದ್ಭವಿಸಿ, ಕ್ಷಾಮಜರ್ಜರ ಭೂಮಿಗೆ ಸಿಡಿಲ ಪ್ರಹಾರವಾದಂತಾಗಿತ್ತು. ಇವು ಹಿಂದೆ ಕಂಡಷ್ಟು ಭೀಕರವಾಗಿ ಇಂದು ಅನ್ನಿಸುತ್ತಿಲ್ಲವಾದರೂ ಮುಂದೆ ಸಂಭವಿಸ ಬಹುದಾದ ಸಮಸ್ಯೆಗಳನ್ನು ಇಂದೇ ಯೋಚಿಸಿ, ಯೋಜನೆಗಳನ್ನು ಕೈಗೊಳ್ಳು ವುದು ಅತ್ಯಂತ ಮಹತ್ವದ್ದು. ಕಾಗದದ ಕ್ಷಾಮವೂ ಮುಂದೆ ತಲೆದೋರಬಹುದಲ್ಲವೆ?

ಆರ್ಥಿಕ ಸಮಸ್ಯೆಗಳ ವಿರುದ್ಧ ವ್ಯವಸಾಯ ಮತ್ತು ಕೈಗಾರಿಕಾರಂಗಗಳಲ್ಲಿ ಕ್ರಾಂತಿಕಾರಕ ಉತ್ಪಾದನೆ ನಡೆಯಬೇಕಾಗಿದೆ. ಸಾಕಷ್ಟು ಪ್ರಮಾಣದ ಉತ್ಪಾದನೆ ಹಣದುಬ್ಬರವನ್ನು ತಡೆಯುತ್ತದೆ, ಉದ್ಯೋಗಾವಕಾಶಗಳನ್ನು ಹೆಚ್ಚುಹೆಚ್ಚಾಗಿ ಕಲ್ಪಿಸುತ್ತದೆ, ಇನ್ನಿತರ ಆರ್ಥಿಕ ಸುಧಾರಣೆಗಳನ್ನೂ ತರುತ್ತದೆ.

ವಿಶ್ವದ ಬೃಹತ್ತರ ಕ್ರಾಂತಿಗಳಿಗೆ ನಾಂದಿಹಾಡಿ ನೆರವಾದ ಕಾಗದದ ಬೇಡಿಕೆ ಮುಂದಿನ ದಿನಗಳಲ್ಲಿ ಏರುವುದು ಸಹಜವಾಗಿದೆ. ವರ್ಷಂಪ್ರತಿ ಶೇ. 7 ರಷ್ಟು ಅಧಿಕ ವಾಗುವ ಬೇಡಿಕೆಗನುಗುಣವಾಗಿ ಉತ್ಪಾದನೆಯೂ ಹೆಚ್ಚಾಗಬೇಕಾಗಿದೆ. ಐದನೆ ಪಾಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ (1978–79) ಉತ್ಪಾದನೆಯಲ್ಲಿ ಗಣನೀಯ ಪ್ರಗತಿ ಸಾಧಿಸುವುದು ಅತ್ಯಾವಶ್ಯಕ.

ಅಂಕೆ-ಅಂಶ ಪಟ್ಟಿಕೆ : 1

ಪಂಚಮ ಪಾಂಚವಾರ್ಷಿಕ ಯೋಜನಾ ಅಂಕಿ ಅಂಶಗಳು

ಯೋಜಿತ ಗುರಿಗಳು	ಕಾಗದ ಮತ್ತು ಹಲಗೆ (ಟನ್ನುಗಳಲ್ಲಿ)	ಕಚ್ಚಾ ಮುದ್ರಣ ಕಾಗದ	ಪಲ್ಪ್ ರೇಯಾನ್ ದರ್ಜೆ	ಪಲ್ಪ್ ಕಾಗದ ದರ್ಜೆ
ಉತ್ಪಾದನೆ	13,50,000	3,50,000	—	1,20,000
ಸಾಮರ್ಥ್ಯ	15,90,000	4,10,000	2,08,000	1,40,000

ಸರ್ಕಾರ ಈ ದಿಶೆಯಲ್ಲಿ ಯೋಜನಾರೂಪರೇಷೆಗಳನ್ನು ಹಾಕಿಕೊಂಡಿದೆ. ಮುಂದೆ ತಲೆದೋರಬಹುದಾದ ಅಭಾವ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ರೂಢಿಸಲು ಅಥವಾ ಸಮಸ್ಯೆಯನ್ನು ಹತ್ತಿಕ್ಕಲು ಕೆಲವು ಹೆಜ್ಜೆಗಳನ್ನು ತೆಗೆದುಕೊಳ್ಳುವುದರ ಸಾಧ್ಯಾಸಾಧ್ಯತೆಗಳನ್ನು ಈ ಲೇಖನ ಪರಿಶೀಲಿಸುತ್ತದೆ. ಇಂದು ದೇಶದಲ್ಲಿರುವ 58 ಬೃಹತ್ ಪ್ರಮಾಣದ (ಅನುಬಂಧ-4) ಕಾಗದದ ಕಾರ್ಖಾನೆಗಳಲ್ಲಿ ವರ್ಷಕ್ಕೆ 7,50,000 ಟನ್ನುಗಳಷ್ಟು ಕಾಗದದ ಉತ್ಪಾದನೆಯಾಗುತ್ತದೆ. ಕಲಾಯುತ ಹಾಗೂ ವ್ಯಾವಹಾರಿಕ ಕಾಗದದ ಬೇಡಿಕೆ ಇತರ ನಮೂನೆಯ ಕಾಗದದ ಬೇಡಿಕೆಯಂತೆ ದ್ವಿಗುಣಗೊಳ್ಳಲಿದೆ. 1980ರ ಸಮಯಕ್ಕೆ ಉತ್ಪಾದನೆ 12,00,000 ಟನ್ನುಗಳಿಗೇರಬಹುದು. ಇದೂ ಬೇಡಿಕೆಯನ್ನು ಪೂರೈಸಲು ಸಾಲದು. ಈಗ ಕಾರ್ಯವೆಸಗುತ್ತಿರುವ ಘಟಕಗಳ ವಿಸ್ತರಣೆ ಹಾಗೂ ಹೊಸ ಘಟಕಗಳ ಸ್ಥಾಪನೆಯಿಂದ ಮಾತ್ರವೇ ಮುಂದೆ ತಲೆದೋರುವ ಮುಗ್ಗಟ್ಟನ್ನು ಪರಿಹರಿಸಿಕೊಳ್ಳಬೇಕಾಗಿದೆ. ವಿಸ್ತರಣಾಯೋಜನಾರೀತ್ಯ ಕೆಲವು ಬಾಕಿಯಿರುವ ಯಂತ್ರಸಾಮಗ್ರಿಗಳನ್ನು ಸೇರಿಸಿಕೊಳ್ಳುವುದರಿಂದ 18,000 ಟನ್ನು ಉತ್ಪಾದಿಸುವ ಶಕ್ತಿಮಟ್ಟವು 50,000 ಟನ್ನುಗಳಿಗೇರಲಿದೆ.

ಕಾಗದವ ಬಳಸುವಿಕೆಯಲ್ಲಿ ನಮ್ಮ ದೇಶವು ಪ್ರಪಂಚದಲ್ಲಿ 96ನೆ ಸ್ಥಾನ ಗಳಿಸಿದೆ. ನೀಡಲಾದ ವಿವಿಧ ಸವಲತ್ತುಗಳನ್ನು ಕಾಗದ ಕೈಗಾರಿಕೆಯು ಬಳಸಿಕೊಂಡಿಲ್ಲ ಎಂಬ ವಾದವನ್ನು ಅನೇಕರು ಮಂಡಿಸುತ್ತಾರೆ. ಆದರೆ ಭಾರತದ ಕಾಗದ ಕಾರ್ಖಾನೆಗಳ ಸಮಿತಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇತ್ತೀಚೆಗೆ ಅದರ ಅಧ್ಯಕ್ಷ ಶ್ರೀ ಎಸ್. ಘೋಷ್‌ರವರು ತಿಳಿಸಿರುವಂತೆ ಕೈಗಾರಿಕೆಯು ಇನ್ನೂ ದುರ್ಭರ ಪರಿಸ್ಥಿತಿಯನ್ನು ಎದುರಿಸುತ್ತಲಿದೆ; ಉತ್ಪಾದನಾ ವೆಚ್ಚ ಅಧಿಕವಾಗುತ್ತಿರುವ ಪ್ರಸಕ್ತ ಕಾಲದಲ್ಲಿ ಪ್ರತಿಫಲವೊತ್ತದ ಕುಸಿತ ಅನಿವಾರ್ಯವಾಗಿದೆ; ಇದರಿಂದ ಅನೇಕ ಭಾವೀ ಉದ್ಯಮಿಗಳಿಗೆ ಕೈಗಾರಿಕೆಯು ಗಗನ ಕುಸುಮವಾಗಿ ಕಂಡರೆ ಆಶ್ಚರ್ಯವಿಲ್ಲ. ಬಂಡವಾಳ ತೊಡಗಿಸಿದವರ ಹಿತರಕ್ಷಿಸಲು ಬಂಡವಾಳದ ಮೇಲೆ ಅಧಿಕವಾದ ಪ್ರತಿಫಲವಿರಬೇಕು. ಶ್ರೀಯುತರು ಇದು ಶೇ. 20 ಇದ್ದರೆ ಉತ್ತಮ ಎಂದು ಅಭಿಪ್ರಾಯ ಪಡುತ್ತಾರೆ. ಅದರ ಕೂಡ ಸಾಲ–ಬಂಡವಾಳ ಪ್ರಮಾಣವೂ ಅಧಿಕಗೊಳ್ಳುವುದು ಅತ್ಯಾವಶ್ಯಕ. ನಾಗಾಲೋಟದಿಂದ ಧಾವಿಸುತ್ತಿರುವ ಬೆಲೆಗಳು ಸರ್ವದಿಕ್ಕುಗಳಿಗೂ ವ್ಯಾಪಿಸಲು ಹವಣಿಸುತ್ತಿವೆ; ಉಕ್ಕಿನಿಂದ ತೊಡಗಿ ಉಗ್ರಾಣದ ಚಿಲ್ಲರೆ ಸಾಮಗ್ರಿ ಕ್ರಯವೂ ದ್ವಿಗುಣಗೊಳ್ಳುತ್ತಲಿದೆ. ಇಂಥ ಸಂಕ್ರಮಣ ಕಾಲದಲ್ಲಿ 2:1ರ ಸಾಲ--ಬಂಡವಾಳ ಪ್ರಮಾಣ ಯಾವ ಮೂಲೆಯದು? ಇದು 3:1 ರಷ್ಟಾಗಬೇಕು.

ಹೊಸ ಕಾರ್ಖಾನೆಗಳಿಗೆ ಲೈಸೆನ್ಸ್ ನೀಡಿಕೆಯಲ್ಲಿರುವ ಲೋಪದೋಷಗಳು ಹಾಗೂ ಹಳೆಯ ಗಿರಣಿಗಳಿಗೆ ವಿಸ್ತರಣೆಗಾಗಿ ಅನುಮತಿಯೀಯುವುದರಲ್ಲಿನ ವಿಳಂಬ

ಕಾರಿ ವಿಧಾನಗಳು ಈಗಿನ ಕಾಗದ ದೊರೆಯುವಿಕೆಯನ್ನು ಇನ್ನಷ್ಟು ಬಿಗಿಗೊಳಿಸಿದೆ. ಈ ಸಮಸ್ಯೆ ಗಡುತರವಾಗಿ ತೋರಿಬಂದುದರಿಂದ ಉತ್ಪಾದನಾ ಪ್ರಮಾಣ ಅಧಿಕ ಗೊಳಿಸುವ ಒಂದು ಕ್ರಾಂತಿಯುತ ಕಾರ್ಯಕ್ರಮ ರೂಢಿಸಲಾಗಿದೆ. ಆದರೂ ಯೋಜ ನಾಗುರಿಯಾದ 1 ಲಕ್ಷ ಟನ್ನುಗಳನ್ನು ಕ್ಲುಪ್ತಕಾಲದಲ್ಲಿ ಸಾಧಿಸಲು ಬಹುಶ್ರಮ ಅಗತ್ಯ.

ಇಂದು ವಿಶ್ವದಲ್ಲಿ ಭಾರತವ ಹೊರತಾಗಿ ಉಳಿದ ಪ್ರಗತಿಹೊಂದಿದ ದೇಶ ಗಳಲ್ಲಿ ಮಿತಿಮೀರಿದ ಕಾಗದದ ಉತ್ಪಾದನೆಯಿದೆ; ಇದರಿಂದಾಗಿ, ಆ ದೇಶಗಳಲ್ಲಿ ಕಾಗದ ತಯಾರಿಕಾ ಯಂತ್ರಗಳ ಬೆಲೆ ತುಲನಾತ್ಮಕವಾಗಿ ಕಡಿಮೆ. ತಲುಪಲು ತೆಗೆದುಕೊಳ್ಳುವ ಅವಧಿಯೂ ಅಲ್ಪ. ಸದ್ಯಕ್ಕೆ ದೇಶದಲ್ಲಿ ಸ್ವದೇಶಿತಜ್ಞತೆಯಿಂದ ತಯಾರಿಸಲ್ಪಟ್ಟ ಮಿತವ್ಯಯಿ ಅತೀವೇಗ ಚಾಲಿತ ಯಂತ್ರ ಸಾಮಗ್ರಿ ಇಲ್ಲದಿರುವುದ ರಿಂದ ನವದೆಹಲಿ ಈ ಮೇಲಿನ ಅಂಶದತ್ತ ಗಂಭೀರಗಮನ ಹರಿಸಬೇಕಾಗಿದೆ. ವಿದ್ಯು ಚ್ಛಕ್ತಿ ಕೊರತೆಯಿಂದ ಹಿಂದೆ ನಿಲ್ಲಿಸಿದ ಯಂತ್ರ ಸಾಮಗ್ರಿಯ ಆಮದನ್ನು ಸರ್ಕಾರವು ಪುನಃ ಕೈಗೆ ತೆಗೆದುಕೊಂಡಿದೆ. ಇದೇ ಕ್ರಮವನ್ನು ಕಾಗದ ಘಟಕಗಳಿಗೇಕೆ ಅನ್ವ ಯಿಸಕೂಡದು ? (ಅನುಬಂಧಗಳು 1 ಮತ್ತು 3).

ಅಂಕಿ–ಅಂಶ ಪಟ್ಟಿಕೆ–2

ಕಾಗದದುತ್ಪಾದನೆಯ ಸಾಮರ್ಥ್ಯ ಹಾಗೂ ಸಾಧನೆ

ವರ್ಷ	ಸಾಮರ್ಥ್ಯ	ಉತ್ಪಾದನೆ
	ಸಾವಿರ ಟನ್ನುಗಳಲ್ಲಿ	
1951-52	137.0	132.0
60-61	418.0	350.0
65-66	680-0	550.0
66-67	711.0	580.0
67-68	730.0	620.0
68-69	750.0	640.0
1970	768.0	759.0
71	882.0	781.0
72	962.0	804.0
73	962.0	796.0
74	992.0	825.0

ಭಾರತದಲ್ಲಿ (ಯಂತ್ರಗಳಿಂದ) ಕಾಗದ ಉತ್ಪಾದನೆ 1870 ರಲ್ಲಿ ಶುರು ವಾಯಿತು. ಅದಕ್ಕೂ ಮುಂಚೆ ತಾಳೆಗರಿ ಮತ್ತು ಭೂರ್ಜಪತ್ರದ ಮೇಲೆ ಬರೆಯು

ವುದೇ ಹೆಚ್ಚು ರೂಢಿಯಲ್ಲಿತ್ತು ಎಂದು ಚೀನಿ ಯಾತ್ರಿಕ ಇತ್ಸಿಂಗ್ ಬರೆದಿದ್ದಾನೆ. ಮೇಲಿನ ಅಂಕಿ–ಅಂಶ ಪಟ್ಟಿ ತೋರಿಸುವಂತೆ ಸಾಮರ್ಥ್ಯ ಹಾಗೂ ಉತ್ಪಾದನೆಗಳು ವರುಷದಿಂದ ವರುಷ ಹೆಚ್ಚುತ್ತಬಂದಿದ್ದರೂ ಗಣನೀಯ ಹೆಚ್ಚಳ ಸಾಧಿಸದಿರುವುದು ಕಂಡುಬರುತ್ತದೆ.

ಪ್ರಥಮ ಪಾಂಚವಾರ್ಷಿಕ ಯೋಜನೆ ಪ್ರಾರಂಭವಾದಾಗ ನಮ್ಮ ದೇಶದಲ್ಲಿ 17 ಕಾಗದ ಕಾರ್ಖಾನೆಗಳಿದ್ದವು. ಆ ಯೋಜನೆಯಾವಧಿಯಲ್ಲಿ 3 ಹೊಸ ಕಾರ್ಖಾನೆಗಳು ಸ್ಥಾಪಿತವಾದದ್ದಲ್ಲದೆ 14 ಕಾರ್ಖಾನೆಗಳ ನವೀಕರಣ ಕಾರ್ಯ ನಡೆಯಿತು. ದ್ವಿತೀಯ ಪಾಂಚವಾರ್ಷಿಕ ಯೋಜನಾವಧಿ ಒಂದು ಹೊಸ ಸಂಸ್ಥೆಯ ಉದಯಕ್ಕೆ ನಾಂದಿ ಹಾಡಿತು. ಈಗ ಭಾರತದಲ್ಲಿರುವ 57 ಕಾರ್ಖಾನೆಗಳಲ್ಲಿ ಒಂದನ್ನುಳಿದು ಎಲ್ಲವೂ ಖಾಸಗಿ ಕ್ಷೇತ್ರದಲ್ಲಿವೆ. ನಮ್ಮ ದೇಶದ ಕೇವಲ 10 ಕಾರ್ಖಾನೆಗಳು ತಲಾ 30,000 ಟನ್ನುಗಳಷ್ಟು ವಾರ್ಷಿಕ ಉತ್ಪಾದನಾ (ಅಮೇರಿಕಾ ಮತ್ತು ಸ್ಕಾಂಡಿನೇವಿಯಾಗಳಲ್ಲಿ ಪ್ರತಿದಿನ 500 ರಿಂದ 1000 ಟನ್ ಕಾಗದ ಉತ್ಪಾದಿಸುವ ಕಾರ್ಖಾನೆಗಳಿವೆ) ಸಾಮರ್ಥ್ಯ ಹೊಂದಿವೆ. ಅಂದರೆ ಕಾಗದ ಕೈಗಾರಿಕೆಯು ಪ್ರಥಮ ಹಾಗೂ ದ್ವಿತೀಯ ಪಾಂಚವಾರ್ಷಿಕ ಯೋಜನಾವಧಿಯಲ್ಲಿ ಅದ್ಭುತ ಪ್ರಗತಿ ಸಾಧಿಸಿತು. ಅಷ್ಟು ಮಾತ್ರವಲ್ಲ, ಯೋಜನಾ ಆಯೋಗವು ನಿರ್ದೇಶಿಸಿದ ಗುರಿ ತಲುಪಿದ ಕೆಲವೇ ಕೆಲವು ಕೈಗಾರಿಕೆಗಳಲ್ಲಿ ಒಂದಾಯಿತು. ಆದರೆ, ಅವನತಿಯ ಚಿಹ್ನೆಗಳು ತೃತೀಯ ಯೋಜನಾವಧಿಯಲ್ಲಿ ತಲೆದೋರಲಾರಂಭಿಸಿದವು : ಯೋಜನಾ ಉತ್ಪಾದನಾ ಗುರಿಯಾದ 6,50,000 ಟನ್ನುಗಳ ಬದಲು 5,37,000 ಟನ್ನುಗಳ ಉತ್ಪಾದನೆ.

ಇದರ ಜೊತೆಗೆ ಕಾಗದದ ಬೆಲೆಯನ್ನು ಸಕಾರಣಯುತ ಮಿತಿಯೊಳಕ್ಕೆ ತರದಿದ್ದರೆ ಸರ್ಕಾರವು ಬೆಲೆ ಹಾಗೂ ವಿತರಣೆಯ ಮೇಲೆ ಅನಿವಾರ್ಯವಾಗಿ ಪ್ರಯತ್ನಿಸಬೇಕಾಗುವುದು ಎಂಬುದಾಗಿ ಕಳೆದ ಸಪ್ಟೆಂಬರಿನಲ್ಲಿ (1976) ಕೇಂದ್ರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಎಚ್ಚರಿಸಿದ್ದಾರೆ. ಬೆಲೆಗಳ ವಿಷಯದಲ್ಲಿ ಇತರ ಕೈಗಾರಿಕೆಗಳ ಪ್ರಗತಿ ಕಾಗದದ ಕೈಗಾರಿಕೆಗಿಂತ ಉತ್ತಮವೇನೂ ಇಲ್ಲ. ಹಾಗಿದ್ದರೂ, ಕಾಗದದ ಕೈಗಾರಿಕೆಯತ್ತ ಮಾತ್ರ ಬೊಟ್ಟುಮಾಡಿ ತೋರಿಸುವುದು ಯಾವ ಸೀಮೆಯ ನ್ಯಾಯ ? ಹಾಗೆ ನೋಡಿದರೆ, ಆರ್ಥಿಕ ರಂಗದಲ್ಲಿ ತಾನೇತಾನಾಗಿ ಹಬ್ಬಿರುವ ಅನೇಕ ಕೈಗಾರಿಕೆಗಳು ಬೆಲೆಯೇರಿಕೆ ಪ್ರತಿಬಂಧಿಸಲು ನಡೆಸಿರುವ ಪ್ರಯತ್ನಗಳಲ್ಲಿ ಕಾಗದದ ಕೈಗಾರಿಕೆಯದೂ ಪಾಲಿದೆ. ಅಲ್ಲದೆ ಅದು ಕೈಗೊಂಡ ಹೆಜ್ಜೆಗಳೆಲ್ಲ ಈ ದಿಶೆಯಲ್ಲಿ ಪರಿಣಾಮಕಾರಿಯಾಗಿವೆ ಹಾಗೂ ಬೃಹತ್ ಪ್ರಯತ್ನಗಳನ್ನೇ ಅದು ಹೂಡಿದೆ : ಕಲಾ ಮಾಧ್ಯಮಕ್ಕೆ ಬೇಕಾದ ಕಾಗದದ ಉತ್ಪಾದನೆ ಹೆಚ್ಚಿದೆ; ಸುಂಕ ವಿಧಿ ಸುಲಭವಾಗಲು ರೀಮಿನ ಲೇಬಲ್ಲುಗಳ ಮೇಲೆ ಗಿರಣಿಯ ದರಗಳನ್ನು ಮುದ್ರಿಸ

ಲಾಗಿದೆ; ಪ್ರಚಲಿತ ದರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ: ವಿದ್ಯಾರ್ಥಿ ಸಮುದಾಯಕ್ಕೆ ಬೇಕಾಗುವ ಕಾಗದವನ್ನು ರಿಯಾಯಿತಿ ದರದಲ್ಲಿ ಒದಗಿಸುವುದು; ಸಹಕಾರಿ ಗ್ರಾಹಕ ಸಂಘಗಳಿಗೆ ಕಡಿಮೆ ಬೆಲೆಗಳಲ್ಲಿ ಕಾಗದ ವಿತರಣೆ ಮಾಡುವುದು. ಇಷ್ಟೆಲ್ಲಾ ಪ್ರಯತ್ನಗಳು ನಡೆದಾಗ್ಯೂ ಸೂಕ್ಷ್ಮವಾದ ಬೇಡಿಕೆ-ನೀಡಿಕೆ ವ್ಯವಸ್ಥೆಯು ಮಾರುಕಟ್ಟೆಯ ಬೆಲೆಯನ್ನು ಏರಿಸುತ್ತಲೇ ನಡೆದಿರುವುದು ತೋರಿಬರುತ್ತಿದೆ.

ಬೇಡಿಕೆ–ನೀಡಿಕೆ ವ್ಯವಸ್ಥೆ ಕ್ರಮಬದ್ಧವಾಗಿ ಜಾರಿಗೆ ಬರಬೇಕಾದರೆ ಕಾಗದ ಕೈಗಾರಿಕೆ ಇನ್ನೂ ಬಹುದೂರ ಸಾಗಬೇಕಾಗಿದೆ. ಚತುರ್ಥಯೋಜನೆಯಲ್ಲಿ ಸ್ಥಾಪಿಸಲ್ಪಟ್ಟ ಒಂದು ದಶಲಕ್ಷ ಟನ್ನುಗಳಷ್ಟು ಉತ್ಪಾದಿಸುವ ಶಕ್ತಿ ಹೊಂದಿದ ಸ್ಥಾವರವು 8,50,000 ಟನ್ನುಗಳಷ್ಟು ಕಾಗದ ಹಾಗೂ ಕಾಗದದ ಹಲಗೆಗಳನ್ನು ಉತ್ಪಾದಿಸಿತು ಎಂದು ವರದಿಯಾಗಿದೆ. ಲೈಸೆನ್ಸ್‌ಗಳಿಕೆ ಖಚಿತವಾದವುಗಳನ್ನೊಳ ಗೊಂಡು ಈಗಿರುವ ಸ್ಥಾಪಿಸಲ್ಪಟ್ಟ ಘಟಕಗಳ ಉತ್ಪಾದನಾ ಸಾಮರ್ಥ್ಯ ಸುಮಾರು 9,02,000 ಟನ್ನುಗಳು (ಕಾಗದ ಹಾಗೂ ಹಲಗೆ). 75,000 ಟನ್ನುಗಳ ಆಮದು ಸೇರಿದ 13,50,000 ಟನ್ನುಗಳ ಬೇಡಿಕೆ ಪಂಚಮ ಪಾಂಚವಾರ್ಷಿಕ ಯೋಜನೆ ಅಂತ್ಯದವೇಳೆಗೆ ತಲೆದೋರುವುದೆಂದು ಪಲ್ಪ್, ಕಾಗದ ಹಾಗೂ ಸಂಬಂಧಿತ ಇತರ ಕೈಗಾರಿಕಾ ಬೆಳವಣಿಗೆ ಸಮಿತಿಯು ಅಂದಾಜಿಸಿದೆ. ರಾಷ್ಟ್ರೀಯ ವ್ಯವಸಾಯಿಕ ಹಾಗೂ ಆರ್ಥಿಕ ಸಂಶೋಧನಾ ಸಂಸ್ಥೆಯ ಅಂದಾಜು ಪ್ರಕಾರ (NCAER) 1980–81 ರ ಹೊತ್ತಿಗೆ 1.75 ದಶಲಕ್ಷ ಟನ್ನುಗಳಿಗೆ ಕಾಗದದ ಬೇಡಿಕೆ ಏರುತ್ತದೆ. ಪ್ರಚಲಿತ ಕೈಗಾರಿಕಾ ಉತ್ಪಾದನಾ ಶಕ್ತಿ 8,80,000 ರಷ್ಟು. ಇದು ಶೀಘ್ರಗತಿಯಲ್ಲಿ ಹೆಚ್ಚಬೇಕಾಗಿದೆ– ಎರಡು ಪಟ್ಟು.

ಈ ನಿರಾಶಾಮಯ ವಾತಾವರಣದಲ್ಲಿ, ಶ್ರೀ ಘೋಷ್ ಸಲಹೆಯಿತ್ತಿರುವ ವ್ಯಾಪಾರಿ ಪಲ್ಪ್ ಮಿಲ್ಲುಗಳ ತೊಡಗುವಿಕೆಯನ್ನು ಪರಿಶೀಲಿಸಬಹುದಾಗಿದೆ. ದಿನ ವೊಂದಕ್ಕೆ 300–400 ಟನ್ನುಗಳ ಉತ್ಪಾದನಾ ಸಾಮರ್ಥ್ಯವಿರುವ ಎರಡು ಅಥವಾ ಮೂರು ಇಂತಹ ಮಿಲ್ಲುಗಳು ಸರ್ಕಾರಿಕ್ಷೇತ್ರದಲ್ಲಿ ಬೆಳಕು ಕಂಡರೆ ಸಣ್ಣ ಘಟಕಗಳಿಗೆ ರೂ. 1350ರಂತೆ (ಟನ್ನಿಗೆ) ಪಲ್ಪನ್ನು ಒದಗಿಸಬಹುದಾಗಿದೆ. ಕಚ್ಚಾ ಪದಾರ್ಥವನ್ನು ದೊರಕಿಸಿಕೊಳ್ಳುವುದು ತುಂಬ ದುರ್ಭರ ಕಾರ್ಯವಾಗಿದೆ. ಮಿಲ್ಲುಗಳ ಪ್ರದೇಶದಿಂದ ಬಹುದೂರದಿಂದ ಶೇಖರಿಸಲ್ಪಡುವ ಪ್ರಮುಖ ಕಚ್ಚಾ ಪದಾರ್ಥವಾದ ಬಿದರಿನ ಮಟ್ಟಿಗಂತೂ ಈ ಮಾತು ಅಕ್ಷರಶಃ ನಿಜ. ಸಾರಿಗೆ ವೆಚ್ಚ ಗಳನ್ನು ಕಡಿಮೆ ಮಾಡುವುದರ ಬಗ್ಗೆ ಯೋಚಿಸಿ, ಯೋಜಿಸಬೇಕಾಗಿದೆ. ಅನೇಕ ಮಿಲ್ಲುಗಳು ಸರ್ಕಾರದೊಂದಿಗೆ ಈ ದಿಶೆಯಲ್ಲಿ ಸಮಾಲೋಚನೆ ನಡೆಸಿರುವುದು ಸ್ತುತ್ಯ ಕರ. ದಾಂಡೇಲಿಯ ದಿ ವೆಸ್ಟ್ ಕೋಸ್ಟ್ ಕಾಗದ ಗಿರಣಿ(ಲಿ) ಸಾಕಷ್ಟು ಪ್ರಮಾಣದ ಕಚ್ಚಾ ಸಾಮಗ್ರಿಯನ್ನು ಸ್ವಂತವಾಗಿ ಬೆಳೆಯುವ ಕಾರ್ಯಕ್ರಮದಲ್ಲಿ ಮೊದಲಿನ

ದಾಗಿದೆ; 1962 ರಿಂದ ಈ ಕಾರ್ಯ ಸಾಗಿಬಂದಿರುವುದು ಶ್ಲಾಘನೀಯ. ಇತರ ಮಿಲ್ಲುಗಳು ಇದನ್ನನುಸರಿಸಬಹುದಾಗಿದೆ. ಉತ್ಪಾದನೆಯ ಹೆಚ್ಚಳಕ್ಕೂ—ಕ್ಲುಪ್ತ ಕಾಲದಲ್ಲಿ ಸಾಮಗ್ರಿಯ ಪೂರೈಕೆ ಹಾಗೂ ಸಾಗಾಣಿಕೆ ವೆಚ್ಚದ ಮಿತವ್ಯಯದ ಜತೆ— ಇದು ಹಾದಿ ಮಾಡಿಕೊಡುತ್ತದೆ. ಬೆಂಗಳೂರಿನ ದಿ ಮೈಸೂರು ಕಾಗದ ಕಾರ್ಖಾನೆಯ ನಿರ್ವಹಣಾ ಮಂಡಳಿಯು ಬಿದಿರಿನ ಹಾಗೂ ನೀಲಗಿರಿ ಮರ, ಪಲ್ಪ್ ಮಾಡಲು ಬರುವ ಇತರ ಮೃದುಮರಗಳ ವಿತರಣೆಗಾಗಿ ಸರ್ಕಾರದೊಂದಿಗೆ ಶಾಶ್ವತ ಒಪ್ಪಂದವನ್ನು ಮಾಡಿಕೊಳ್ಳಲು ಒಡಂಬಟ್ಟಿರುವುದನ್ನು ಇಲ್ಲಿ ನಮೂದಿಸಬಹುದಾಗಿದೆ.

ಕಾಡಿನ ಉತ್ಪನ್ನಗಳ ಕ್ರಮಬದ್ಧವಾದ ಅಭಿವೃದ್ಧಿಗಾಗಿ ರೂಪರೇಷೆಗಳನ್ನು ರೂಢಿಸಿಕೊಳ್ಳಬಹುದಾಗಿದೆ. ಬಿದಿರಿನ ದೊರೆಯುವಿಕೆ ಕೇಂದ್ರಗಳನ್ನು ಮೂರು ವಲಯಗಳಾಗಿ ವಿಂಗಡಿಸಬಹುದು :

ಉತ್ತರವಲಯ	2,60,526 ಟನ್ನುಗಳು
ಮಧ್ಯವಲಯ	1,75,000 ,,
ದಕ್ಷಿಣವಲಯ	1,43,000 ,,
ಒಟ್ಟು	5,78,526 ,,

ಈಗಿರುವ ವ್ಯವಸ್ಥೆ ಅತೃಪ್ತಿಕರವಾಗಿದೆ. ಒಟ್ಟು ಇರುವ ದೇಶದ ಭೂಪ್ರದೇಶದಲ್ಲಿ ಶೇ. 23 ಕಾಡುಗಳಿಂದ ಆಕ್ರಮಿಸಲ್ಪಟ್ಟಿದ್ದರೂ ಅವುಗಳ ಕೊಡುಗೆ ರಾಷ್ಟ್ರೀಯ ಆದಾಯಕ್ಕೆ ಕೇವಲ ಶೇ. 1.6ರಷ್ಟು ಮಾತ್ರ. ಈ ಅಂಶದತ್ತ ಪ್ರಾಂತ್ಯಸರ್ಕಾರಗಳು ಕಣ್ಣು ಹಾಯಿಸಬೇಕು. ವಾಸ್ತವಾಂಶದ ಬಗ್ಗೆ ಅಂಕಿಅಂಶಯುತ ಮಾಹಿತಿಪಡೆದು ತಕ್ಕ ಸುದೃಢ ಕಾರ್ಯಕ್ರಮ ಕೈಗೊಳ್ಳುವುದು ಅವುಗಳ ಪರಮಕರ್ತವ್ಯವೀಗ. ಕಾಗದದ ಕಾರ್ಖಾನೆಗಳ ಒಡೆಯರನ್ನು ಸೇರಿ ಉಳಿದ ಮುಂದಾಳುಗಾರರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ರಾಯಲ್ಟಿ ಮತ್ತಿತರ ರೂಪಗಳಲ್ಲಿ ನೀಡುವುದು ಮೊದಲಾಗಬೇಕು.

ಹಾಗಿದ್ದರೂ ವಿದ್ಯುಚ್ಛಕ್ತಿ ಕೊರತೆ ಬಾಧಿಸಿದಾಗ ಸಮಸ್ಯೆ ಗಂಭೀರವಾಗುತ್ತದೆ. ಇದುವರೆಗೆ ರೈತನಿಗೆ ಮಳೆಯ ಚಿಂತೆ ಇದ್ದರೆ, ಈಗದು ಕೈಗಾರಿಕೋದ್ಯಮಿಗೂ ಬಾಧಿಸುತ್ತಲಿದೆ. ಕಾಲದ ವೈಚಿತ್ರ್ಯ !

ಉತ್ಪಾದನೆ ಕುಸಿಯಲವಕಾಶ ಕೊಡದಿರಲು ಸರ್ಕಾರ ವಿದ್ಯುಚ್ಛಕ್ತಿ ಕೊರತೆ ನೀಗಲು ವಿವಿಧ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ. 1974 ಮೇ ನಂತರ ನಿಷೇಧಿಸ

ಲ್ಪಟ್ಟ ಅಭಿವೃದ್ಧಿ ವಿನಾಯಿತಿಯ ಬದಲು ಹೊಸದಾದ ಯಾವುದಾದರೊಂದು ಉತ್ತೇಜನ ಮಿಲ್ಲುಗಳಿಗೆ ಲಭಿಸಿಲ್ಲ. ಇದನ್ನು ರೂಪಿಸುವುದು ಸರ್ಕಾರದ ಹೊಣೆಗಾರಿಕೆಯಾಗಿದೆ. ಈ ಸಮಸ್ಯೆಗಳನ್ನು ಅವಲೋಕಿಸಿದಾಗ ತಟ್ಟನೆ ಹೊಳೆಯುವುದು: ಕ್ರಮಬದ್ಧ, ಸುವ್ಯವಸ್ಥಿತ ಮುಂದಾಲೋಚನೆಯ ಸಮಗ್ರ ಯೋಜನೆಯೊಂದು ಬೇಕಾಗಿದೆ. ಆಗಾಗ್ಗೆ ಎಸಗುವ ಸಣ್ಣಪುಟ್ಟ ಯೋಜನೆಗಳಿಂದ ಕಾಲಧನದ ವ್ಯರ್ಥ ವ್ಯಯವಲ್ಲದೆ ಮತ್ತಾವ ಪ್ರಯೋಜನವೂ ಆಗುತ್ತಿಲ್ಲ.

ದೊರೆಯುವ ಕೈಗಾರಿಕಾ ಶಕ್ತಿ ಸಂಪನ್ಮೂಲವನ್ನು ಸಂಪೂರ್ಣವಾಗಿ ಉಪಯೋಗಿಸುತ್ತ ಸಾಮರ್ಥ್ಯ ಹೆಚ್ಚಿಸಲು ಪ್ರಯತ್ನಿಸಬೇಕು. ಸರಕಾರ ಹಾಗೂ ಆಯ್ಕೆ ಸಮಿತಿ (Select Committee) ಕಚ್ಚಾಸಾಮಗ್ರಿ ಕೊರತೆಯನ್ನು ಗಂಭೀರವಾಗಿ ಯೋಚಿಸಿ ಮಿಲ್ಲುಗಳಿಗೆ ತಮ್ಮ ಪ್ರದೇಶಗಳಲ್ಲಿ ಬಿದಿರನ್ನು ಬೆಳೆಯಲು ಅನುಕೂಲವೇರ್ಪಡಿಸಬೇಕು. ಬಹುತೇಕ ಇಂಧನವಾಗಿ ಉಪಯೋಗವಾಗುತ್ತಿರುವ ಕಬ್ಬಿನಸಿಪ್ಪೆಯ ಉಪಯೋಗದ ಬಗ್ಗೆ ತಕ್ಕ ಕ್ರಮ ಯೋಜಿಸಬಹುದಾಗಿದೆ. ಸಮರ್ಥಶಾಲಿಯಾದ ಹಾಗೂ ರಫ್ತುವ್ಯಾಪಾರ ಸಾಗಿಸಲು ಇಚ್ಛೆಯುಳ್ಳ ಘಟಕಗಳಿಗೆ ವಿದೇಶಿ ವಿನಿಮಯ ಒದಗಿಸಿ ಭಾರತವಲ್ಲಿ ನಿರ್ಮಾಣವಾಗದ ಯಂತ್ರಸಾಮಗ್ರಿಯ ಆಮದಿಗಾಗಿ ಅನುಕೂಲ ಕಲ್ಪಿಸಬಹುದಾಗಿದೆ. ಕಾಗದ ಕೈಗಾರಿಕೆಯಲ್ಲಿ ಕ್ರಾಂತಿಯುತ ಉತ್ಪಾದನೆ ಮಾಡಲು ಇದೊಂದು ದೃಢಹೆಜ್ಜೆ. ಭಾರತದ ಸಾಲ ಮತ್ತು ಬಂಡವಾಳ ಸಂಸ್ಥೆಯು ರೂ. 91ಲಕ್ಷ ವಿದೇಶಿ ವಿನಿಮಯದ ಸಾಲ ಹಾಗೂ ರೂ. 50ಲಕ್ಷದಷ್ಟು ಸಾಲವನ್ನು ದಾಂಡೇಲಿಯ ದಿ ವೆಸ್ಟ್ ಕೋಸ್ಟ್ ಕಾಗದ ಗಿರಣಿ(ಲಿ)ಗೆ ಒದಗಿಸಲು ಒಪ್ಪಿಕೊಂಡಿದ್ದು ಉಳಿದ ರೂ. ಸಾಲದ ಹಣಕ್ಕಾಗಿ ಇತರ ಹಣಕಾಸಿನ ಸಂಸ್ಥೆಗಳೊಂದಿಗೆ ವ್ಯವಹಾರ ಸಂಬಂಧ ಮಾತುಕತೆಗಳು ನಡೆಯುತ್ತಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇಟಲಿಯ ಮಾಸ್ಯ ಓವರ್ ಮೆಕ್ಯಾನಿಕಾ ಆಫ್ ವೆರೋನಾ ಸಂಸ್ಥೆಯೊಂದಿಗೆ ಈ ಕಾರ್ಯಕ್ರಮಕ್ಕಾಗಿ ಬೇಕಾಗುವ ಯಂತ್ರ ಸಾಮಗ್ರಿಗಳಿಗಾಗಿ ಈಗಾಗಲೇ ಆದೇಶ ಕಳಿಸಿಯಾಗಿದೆ.

ಸೂಚನೆ : ಅನುಬಂಧದಲ್ಲಿ ಕೊಟ್ಟಿರುವ ಅಂಕೆ-ಅಂಶ ಪಟ್ಟಿಕೆಗಳನ್ನು ನೋಡಿ.

ಅನುಬಂಧ

1. ಉತ್ಪಾದನೆ-ಆಮದು-ಅನುಭೋಗ

(ಸಾವಿರ ಟನ್ನುಗಳಲ್ಲಿ)

ವರ್ಷ	ಉತ್ಪಾದನೆ	ಆಮದು	ಅನುಭೋಗ
1968-69	30.56	114.46	145.02
69-70	39.28	155.08	194.36
70-71	37.27	144.21	181.48
71-72	40.04	206.86	246.90
72-73	40.77	153.85	194.62
73-74	43.84	153.85	197.69

2. ವಿವಿಧ ಪ್ರಕಾರದ ಉತ್ಪನ್ನ

(ಟನ್ನುಗಳಲ್ಲಿ)

ವರ್ಷ	ಬರವಣಿಗೆ ಮತ್ತು ಅಚ್ಚು ಕಾಗದ	ರ‍್ಯಾಟಿಂಗ್ ಮತ್ತು ಪ್ಯಾಕಿಂಗ್ ಪೇಪರ್	ಪೇಪರ್ ಬೋರ್ಡುಗಳು	ವಿಶೇಷ ತರಹೆಗಳು	ಒಟ್ಟು
1968-69	3,93,670	1,27,399	1,06,063	19,446	6,46,578
69-70	4,15,435	1,46,024	1,24,542	20,516	7,06,517
70-71	4,44,707	1,61,888	1,28,349	23,605	7,58,519
71-72	4,63,447	1,63,436	1,25,749	27,996	7,80,728
72-73	4,43,162	1,99,118	1,32,773	28,031	8,03,084
73-74	4,40,169	1,95,914	1,30,808	29,702	7,96,593

3. ಭಾರತದ ಆಮದು : ಪೇಪರ್ ಹಾಗೂ ಪೇಪರ್ ಬೋರ್ಡ್

(ರೂ. ಕೋಟಿಗಳಲ್ಲಿ)

ವರ್ಷ	ಪ್ರಮಾಣ (ಟನ್ನುಗಳಲ್ಲಿ)	ಬೆಲೆ
1970-71	14,780	6.3
71-72	14,280	7.3
72-73	21,650	10.2
73-74	N.A.	10.4

4. ಕಾಗದ ಕೈಗಾರಿಕೆ : ಉತ್ಪಾದನಾ ಪ್ರಮಾಣರೀತ್ಯ ಕಾರ್ಖಾನೆಗಳ ವಿಂಗಡಣೆ
(1-4-72 ರಂದು ಇದ್ದಂತೆ)

ಕಾರ್ಖಾನೆಗಳ ಗಾತ್ರ (ದಿನವೊಂದರ ಟನ್ನುಉತ್ಪಾದನೆ)	ಬೃಹತ್ ಉದ್ಯೋಗ ಪತಿಗಳಿಗೆ ಸೇರಿದ ಕಾರ್ಖಾನೆಗಳು	ಇತರರಿಗೆ ಒಳಪಟ್ಟ ಕಾರ್ಖಾನೆಗಳು	ಒಟ್ಟು
10 ರ ವರೆಗೆ	1	22	23
10 ರಿಂದ 30	2	15	17
30 ರಿಂದ 50	2	1	3
50 ರಿಂದ 100	3	1	4
100 ರಿಂದ 150	5	—	5
150 ರಿಂದ 200	5	—	5
200 ಹಾಗೂ ಮೇಲೆ	2	—	2
ಮೊತ್ತ	20	39	59

ಬಸವಪುರಾಣ ಬಸವರಾಜದೇವರ ರಗಳೆಗಳಲ್ಲಿರುವ ಸಾಮ್ಯ ವ್ಯತ್ಯಾಸಗಳು

ಗಾಜುಲ ವೀರಯ್ಯ

ಬಸವೇಶ್ವರನ ಜೀವಿತ ಚರಿತ್ರೆಯನ್ನು ಚಿತ್ರಿಸುವ ಪೂರ್ವಕೃತಿಗಳಲ್ಲಿ ಮೊದಲನೆಯದು ಬಸವಪುರಾಣವಾದರೆ ಎರಡನೆಯದು ಬಸವರಾಜದೇವರ ರಗಳೆಯೆಂದು ಹೇಳಬಹುದು. ಕೆಲವರ ಅಭಿಪ್ರಾಯದಲ್ಲಿ ಬಸವರಾಜದೇವರ ರಗಳೆ ಮೊದಲನೆಯದಾಗಿದೆ.[1] ಆದರೆ ಆ ಅಭಿಪ್ರಾಯವು ಸರಿಯೆನ್ನಿಸುವುದಿಲ್ಲ. ಪಾಲ್ಕುರಿಕೆಯ ಸೋಮನಾಥನ ಕೃತಿಗಳಲ್ಲಿ ಮೊದಲನೆಯ ಹಂತಕ್ಕೆ ಸೇರಿದುದು ಬಸವಪುರಾಣ. ಇದನ್ನು ಇವನು ಸುಮಾರು ಮೂವತ್ತು ವರ್ಷದ ಪ್ರಾಯದೊಳಗೆ ಬರೆದಿರುವನೆಂದು ಬಲ್ಲವರು ಹೇಳುತ್ತಾರೆ.[2] ಬಸವಪುರಾಣದಲ್ಲಿ ತನಗೆ ಬಸವಕಥಾಸೂತ್ರವನ್ನು ಅರುಹಿದ ಮಾಹೇಶ್ವರರೊಡನೆ ಇದ್ದಳೆಂದು ಸೋಮನಾಥನಿಂದ ಹೇಳಲ್ಪಟ್ಟ ದೋಚಮಾಂಬೆ[3] ಕ್ರಿ.ಶ. 1290ನೆಯ ಇಸವಿಗೆ ಸಂಬಂಧಿಸಿದ ನೀಲಗಂಗವರಶಾಸನ[4]ದಲ್ಲಿ ಹೆಸರಿಸಲ್ಪಟ್ಟಿದ್ದಾಳೆ. ಶಾಸನಕಾಲಕ್ಕೆ ಅವಳಿಲ್ಲದ ಕಾರಣ[5] ಇದಕ್ಕಿಂತ ಒಂದು ಇಪ್ಪತ್ತು ವರ್ಷ ಮುಂಚಿತವಾಗಿಯಾದರೂ ಬಸವಪುರಾಣವು ಬರೆಯಲ್ಪಟ್ಟಿರಬೇಕು. ಹರಿಹರನು ಸಂಪೂರ್ಣವೀರಶೈವನಾದುದು ದೋರಸಮುದ್ರದಿಂದ ಹಂಪೆಗೆ ಬಂದ ನಂತರವೇ ಎಂದು ಹೇಳಲವಕಾಶವಿದೆ. ಮೊದಲನೆಯ ಹಂತಕ್ಕೆ ಸಂಬಂಧಿಸಿದ ಆತನ ಗಿರಿಜಾಕಲ್ಯಾಣದಲ್ಲಿ ಆರಾಧ್ಯಬ್ರಾಹ್ಮಣರ ಸಂಪ್ರದಾಯಗಳು ಹೆಚ್ಚು ಕಂಡುಬರುವುದೇ ಇದಕ್ಕೆ ಆಧಾರ. ಹಂಪೆಗೆ ಬಂದಮೇಲೆ ಇವನು ಶರಣರ ಕಥೆಗಳನ್ನು ಹೆಚ್ಚು ಬರೆದಿರುತ್ತಾನೆ. ಇವನು ಹಂಪೆಗೆ ಬಂದು ಸ್ಥಿರನಿವಾಸಿಯಾಗಿದ್ದುದು ಕ್ರಿ.ಶ. 1277ನೆಯ ಇಸವಿಯ ನಂತರವೆಂದು ಹೇಳಲು ಪಂಪಾವಿರೂಪಾಕ್ಷದೇವಾಲಯದಲ್ಲಿ ತೆರೆಗೆ ಹತ್ತಿದ ಬೆಂಕಿಯನ್ನಾರಿಸಿದ ಪವಾಡವು ಆಧಾರವಾಗುತ್ತದೆ. ಇದು 1277 ಡಿಸೆಂಬರು 6 ದಶಮೀ ಸೋಮವಾರದಲ್ಲಿ (ಈಶ್ವರ ವರ್ಷದ ಮಾರ್ಗಶಿರದ ಶುದ್ಧ ದಶಮಿ) ಆಗಿದೆ.[6] ಶರಣರ ಕಥೆಗಳಲ್ಲಿ ಬಸವರಾಜದೇವರ ರಗಳೆಯೇ ಮೊದಲನೆಯದೆಂಬ ಆಧಾರವಿಲ್ಲದ ಕಾರಣ ಹರಿಹರನು ಇದನ್ನು ಇಳಿವಯಸ್ಸಿನಲ್ಲೇ ಬರೆದಿರಬಹುದೆಂದು ಹೇಳಲು ಅಡ್ಡಿ ಇಲ್ಲ. ಇದೊಂದೇ ಕಾರಣವಲ್ಲ. ಬಸವಪುರಾಣವು ಮುಂಚಿತವಾಗಿ ಬರೆಯಲ್ಪಟ್ಟಿತೆನ್ನಲು ಇನ್ನೊಂದು ಆಧಾರವಿದೆ. ಬಸವರಾಜದೇವರ ರಗಳೆಯಲ್ಲಿರುವ ಶಿವಯೋಗಸಿದ್ಧಾಮುದ್ರೆಯ ಕಥೆಯು[7] ಸೋಮನಾಥನ ಪಂಡಿತಾರಾಧ್ಯ

ಚರಿತ್ರೆಯಲ್ಲಿವೆ.[8] ಪಂಡಿತಾರಾಧ್ಯಚರಿತ್ರೆಯಲ್ಲಿ ಕೇವಲ ಬಸವೇಶ್ವರನಿಗೆ ಸಂಬಂಧ ಪಟ್ಟ ಕಥೆ ಇದೊಂದೇ ಇದೆ. ಸೋಮನಾಥನು ಇದನ್ನು ವಾರ್ಧಕ್ಯದಲ್ಲಿ ಬರೆದಿದ್ದ ಕಾರಣ, ಬಸವರಾಜದೇವರ ರಗಳೆಯನ್ನು ನೋಡಿದ ಅಥವಾ ಅಲ್ಲಿನ ಕಥೆಗಳನ್ನು ಕೇಳಿದ ಶರಣರು ಯಾರೋ ಹೇಳಿದಮೇಲೆ ಬರೆದಿರಬಹುದೆಂದು ಹೇಳಲು ಅವಕಾಶ ವಿದೆ. ಸೋಮನಾಥನು ಬಸವಪುರಾಣವನ್ನು ಬರೆಯುವ ಕಾಲಕ್ಕೆ ಇಲ್ಲದ ಕೆಲವು ಕಥೆಗಳು[9] ಬಸವರಾಜದೇವರ ರಗಳೆಯಲ್ಲಿ ಬಂದಿರುವುದೂ ಬಸವಪುರಾಣದ ಪೂರ್ವತ್ವ ವನ್ನು ಸೂಚಿಸುತ್ತದೆ. ದೂರದವನಾದ ಸೋಮನಾಥನು ಎಲ್ಲ ಕಥೆಗಳನ್ನೂ ಕೇಳಲು ಹೇಗೆ ಸಾಧ್ಯ? ಆದ್ದರಿಂದ ಸೋಮನಾಥನಿಗಿಂತ ಹರಿಹರನೇ ಬಸವ ಚರಿತೆಯ ವಿಷಯದಲ್ಲಿ ಪ್ರಾಮಾಣಿಕನೆಂದು ಹೇಳಲಡ್ಡಿ ಇಲ್ಲವೆಂದು ವೆಂಕಣ್ಣಯ್ಯ ಮೊದಲಾದವರು ಹೇಳಿದ್ದಾರೆ.[10] ಆದರೆ ಶರಣರ ಸಂಗವು ಸೋಮನಾಥನಿಗೆ ಇದ್ದಷ್ಟು ಹರಿಹರನಿಗೆ ಇದ್ದಿಲ್ಲ. ಸೋಮನಾಥನ ಪ್ರಾಣಸ್ನೇಹಿತನು ಬೇಗಾಪಿಯ ಕಡೆಯಿರುವ ವಡಗಾವಿನ ರಾಮೇಶನ ಶಿಷ್ಯನಾದ ಚೆನ್ನರಾಮನು.[11] ಬಸವಪುರಾಣ ವನ್ನು ಕೇಳಿದವನೂ (ಅಂಕಿತಗೊಂಡವನೆಂತಲೂ ಹೇಳಬಹುದೇನೊ?) ಭಕ್ತರ ಮಾದಿರಾಜನ[12] ಶಿಷ್ಯನೂ ಆದ ಸಂಗನಾಮಾತ್ಯನು ಕರ್ಣಾಟದ ಗೂಬ್ಬೂರು ಅಗ್ರಹಾರಕ್ಕೆ ಅಧ್ಯಕ್ಷನು.[13] ಮಾಹೇಶ್ವರರು ಬಸವಕಥಾಸೂತ್ರವನ್ನು ಸೋಮ ನಾಥನಿಗೆ ಹೇಳಿದರಂತೆ.[14] ಇವರಲ್ಲಿ ಕರ್ಣಾಟಕದವರು ಕೆಲವರಾದರೂ ಇರಬೇಕು. ಇದುಕಾರಣ ಸೋಮನಾಥನು ಬರೆದ ಬಸವಪುರಾಣವು ಹೆಚ್ಚು ವಿಶ್ವಾಸಾರ್ಹವೆನ್ನ ಬಹುದು.

ಸೋಮನಾಥ ಹರಿಹರರಿಬ್ಬರೂ ಒಂದೇ ಕಾಲಕ್ಕೆ ಸಂಬಂಧಿಸಿದವರು. ಇಬ್ಬರೂ ಕಾಕತೀಯ ಪ್ರತಾಪರುದ್ರನ ಕಾಲದಲ್ಲಿ ಬಾಳಿದವರೇ. ಇವರಲ್ಲಿ ಭೇದಗಳಿಗಿಂತ ಸಾದೃಶ್ಯಗಳು ಹೆಚ್ಚು. ಇಬ್ಬರೂ ವೀರಶೈವತತ್ವವನ್ನು ತಮ್ಮ ಕಾವ್ಯಗಳಲ್ಲಿ ಪ್ರಕಟಗೊಳಿಸಿದ್ದಾರೆ. ಇಬ್ಬರೂ ಸಾಮಾನ್ಯರಿಗೆ ಅರ್ಥವಾಗುವ ಭಾಷೆಯನ್ನು ಉಪಯೋಗಿಸಿದ್ದಾರೆ. ಶಿವಶರಣರ ಕಥೆಗಳು ಅನೇಕವಾದ ಕಾರಣ ತಡೆಯಿಲ್ಲದೆ ಸುಸೂತ್ರವಾಗಿ ಬೇಗಬೇಗ ಕಥೆಯನ್ನು ಹೇಳಿಕೊಂಡುಹೋಗಲು ಅನುಕೂಲವಾದ ಛಂದಸ್ಸೊಂದು ಇವರಿಗೆ ಬೇಕಾಗಿತ್ತು. ಇವರು ಹೊಸ ಪದ್ಯಗಳನ್ನು ನಿರ್ಮಿಸ ಲಿಲ್ಲ. ಕ್ವಚಿತ್ತಾಗಿ ಉಪಯೋಗದಲ್ಲಿದ್ದ ದೇಶಿಛಂದಸ್ಸುಗಳನ್ನು ತಮ್ಮ ಕೃತಿಗಳಲ್ಲಿ ಬಳಸಿದ್ದಾರೆ. ಒಬ್ಬನು ರಗಳೆಯ ಕವಿಯಾದರೆ ಇನ್ನೊಬ್ಬನು ದ್ವಿಪದ ಕವಿತಾ ಚಾರ್ಯನಾಗಿದ್ದಾನೆ. ಇಬ್ಬರೂ ಸಂಪ್ರದಾಯ ಶರಣರಲ್ಲ. ಒಬ್ಬನು ರಳಕುಳ ಕ್ಷಳದ ಸಂಬಂಧನಿಯಮವು ಅರ್ಥವಿಲ್ಲದ್ದೆಂದು ಹೇಳಿದರೆ[15] ಇನ್ನೊಬ್ಬನು ಪ್ರಾಸೋ ವಾ ಯತಿರ್ವಾ[16] ಎಂದು ದ್ವಿಪದ ಛಂದಸ್ಸಿನಲ್ಲಿ ನಿಷೇಧಿಸಲ್ಪಟ್ಟ ಪ್ರಾಸಯತಿ ಯನ್ನು ಬಳಸಿದ್ದಾನೆ. ವೀರಶೈವನಾಗಿ ಒಬ್ಬನು ಶಿಷ್ಯನ ಹಲ್ಲು ಮುರಿಯುವಂತೆ

ಹೊಡೆನರೆ,[17] ಇನ್ನೊಬ್ಬನು ಶಿವೇತರ ದೇವತೆಗಳ ವಿಗ್ರಹಗಳನ್ನು ನೋಡಬಾರದೆಂದು ಕೋಟೆಯ ಮೇಲಿನ ಗಜಲಕ್ಷ್ಮಿಯ ವಿಗ್ರಹವನ್ನು ಮುರಿದುಬೀಳುವಂತೆ ಮಾಡಿದ್ದಾನೆ.[18] ಇಬ್ಬರೂ ಮಹಾಪುರುಷರೇ. ಆದರೆ ಇವರ ವ್ಯಕ್ತಿತ್ವಗಳಲ್ಲಿ ಕೆಲವು ವ್ಯತ್ಯಾಸಗಳು ಕೂಡ ಕಂಡುಬರುತ್ತವೆ. ಇಬ್ಬರೂ ಆರಾಧ್ಯಬ್ರಾಹ್ಮಣರೇ. ಸೋಮನಾಥನು ಬಾಲ್ಯದಲ್ಲೇ ಸಂಪೂರ್ಣ ವೀರಶೈವನಾದನು.[19] ಹರಿಹರನು ನಿಧಾನವಾಗಿ ವೀರಶೈವನಾದನು. ಹರಿಹರನಲ್ಲಿ ಎಷ್ಟೇ ವೀರಶೈವ ಮತನಿಷ್ಠೆ ಇದ್ದರೂ, ಸೋಮನಾಥನಲ್ಲಿ ಇದ್ದಷ್ಟು ಕಂಡುಬರುವುದಿಲ್ಲ. ಸೋಮನಾಥನ ಕೃತಿಗಳನ್ನು ನೋಡಿದರೆ ವೀರಶೈವವೇ ಸೋಮನಾಥನು, ಸೋಮನಾಥನೇ ವೀರಶೈವವೆಂದು ಗೋಚರವಾಗುತ್ತದೆ. ಅವನು ಅರುವತ್ತುನಾಲ್ಕು ಶೀಲಗಳನ್ನು ಆಚರಿಸಿದವನು.[20] ವೀರಶೈವರಲ್ಲಿ ಇಂಥವನು ಕೋಟಿಗೊಬ್ಬನಿರುತ್ತಾನೆ. ಹರಿಹರನಲ್ಲಿಯೂ ಮತಾವೇಶವಿದೆ. ಆದರೆ ಅದು ಸೋಮನಾಥನಲ್ಲಿ ಅಮಿತವಾಗಿದೆ. ಭಾವರತ್ನಗಳಿಗೆ ಮಾತ್ರ ಹರಿಹರನು ಮೇರುಪರ್ವತನಾದರೆ ಸೋಮನಾಥನು ವಿರೋಧಿಮತವಾದಿಗಳ ಝುಂಝೂನಿಲಕ್ಕೂ ಕೂಡ ಮೇರುವಾಗುತ್ತಾನೆ. ಸೋಮನಾಥನಲ್ಲಿನ ಪಾಂಡಿತ್ಯ ಕವಿಗಳಲ್ಲಿ ವಿರಳ. ಹರಿಹರನು ಇದ್ದ ವೀರಶೈವವನ್ನು ಆಚರಣೆಯಲ್ಲಿಟ್ಟು ಅದಕ್ಕೆ ಪ್ರೋತ್ಸಾಹವನ್ನು ನೀಡಿದ್ದಾನೆ. ಸೋಮನಾಥನು ಇದ್ದ ವೀರಶೈವವನ್ನು ಆಚರಿಸಿ ಅದಕ್ಕೆ ಪ್ರೋತ್ಸಾಹವನ್ನು ನೀಡಿದವನು ಮಾತ್ರವೇ ಅಲ್ಲ; ಅದು ಶಾಶ್ವತವಾಗಿ ಉಳಿಯುವಂತೆ, ಪರಮತಗಳನ್ನು ಖಂಡಿಸಿ ತನ್ನ ಅಸ್ತಿತ್ವವನ್ನು ಸ್ಥಿರಮಾಡಿಕೊಳ್ಳುವಂತೆ ಶಕ್ತಿಯನ್ನು ಕೊಡುವ ಸೂತ್ರ ಗ್ರಂಥಗಳನ್ನು ಬರೆದಿದ್ದಾನೆ[21]. ಇದೇ ಕಾರಣದಿಂದಲೇ ವೀರಶೈವರೆಲ್ಲರಿಗೂ ಸೋಮನಾಥನು ವಂದನೀಯನಾಗಿದ್ದಾನೆ. ವೀರಶೈವಮತ ಸಾಹಿತ್ಯ ವಿದ್ಯಾಧಿಷ್ಣರಾದ ಶ್ರೀ ಭೂಸನೂರಮಠರ ಪ್ರಕಾರ ಬಸವೇಶ್ವರರ ವಿಷಯದಲ್ಲಿ ಸೋಮನಾಥನದು ಒಬ್ಬನದೇ ಅಧಿಕಾರವಾಣಿ.

ಸೋಮನಾಥನು ಬಸವಪುರಾಣವನ್ನು ತೆಲುಗಿನಲ್ಲಿ ಬರೆದರೆ ಹರಿಹರನು ಬಸವರಾಜದೇವರ ರಗಳೆಯನ್ನು ಕನ್ನಡದಲ್ಲಿ ಬರೆದಿದ್ದಾನೆ. ಆದರೆ ಕನ್ನಡ ದೇಶದಲ್ಲಿಯೂ ಬಸವಪುರಾಣಕ್ಕೆ ಬಂದ ಆದರಣೆ ಬಸವರಾಜದೇವರ ರಗಳೆಗೆ ದೊರೆತಿಲ್ಲ.[22] ಬಸವಪುರಾಣವು ಸ್ವಲ್ಪಕಾಲದಲ್ಲೇ ಕನ್ನಡಕ್ಕೆ ಅನುವಾದಿಸಲ್ಪಡುವ ಆವಶ್ಯಕತೆ ಬಂದಿತು. ಇದಕ್ಕೆ ಕಾರಣಗಳು ಆವುವು ಎಂಬುದು ವಿಚಾರಣೀಯವಾದ ವಿಷಯ.

ಹರಿಹರನು ಬಸವಶರಣರ ಜೀವನ ಚರಿತ್ರೆಗಳನ್ನು ಬಿಡಿ ಮುತ್ತುಗಳಂತೆ ಬರೆದಿದ್ದಾನೆ. ಸೋಮನಾಥನು ಒಂದು ಮಣಿಹಾರದಂತೆ ಮಾಡಿದ್ದಾನೆ. ಬಸವಕಥೆ ಒಂದು ಸೂತ್ರವಾಗಿ ಶರಣರ ಕಥೆಗಳನ್ನು ಒಳಗೊಂಡಿದೆ. ಬಸವಕಥಾ

ಸೂತ್ರವು ಒಬ್ಬನು ಆಲೋಚಿಸಿ ಮಾಡಿದುದು ಅಲ್ಲ. ಶರಣರ ಎಲ್ಲರ ಅಭಿಪ್ರಾಯಗಳನ್ನು ಸ್ವೀಕರಿಸಿ ಮಾಡಿದ್ದುದು.[23] ಮಣಿಗಳಂತೆ ಇರುವ ಶರಣರ ಕಥೆಗಳನ್ನು ಬಸವಕಥಾಸೂತ್ರದಿಂದ ಹೇಗೆ ಕೂಡಿಸಬೇಕೋ ಹಾಗೆ ಔಚಿತ್ಯಪೂರ್ವಕವಾಗಿ ಸೋಮನಾಥನು ಕೂಡಿಸಿದ್ದಾನೆ. ಮಹಾಭಾರತದಲ್ಲಿ ಅನ್ಯಕಥೆಗಳಂತೆ ಈ ಕಥೆಗಳು ಸಂದರ್ಭಕ್ಕೆ ಅನುಗುಣವಾಗಿ ಹೊಂದಿಕೊಂಡಿವೆ. ಇದರಿಂದ ಇವುಗಳನ್ನು ಬೇರೆ ಮಾಡಲಾಗದು. ಒಬ್ಬೊಬ್ಬ ಶರಣನ ಜೀವಿತವು ಒಂದೊಂದು ವೀರಶೈವ ಮತ ಲಕ್ಷ್ಯವನ್ನು ಸೂಚಿಸುತ್ತದೆ. ಆ ಕಥೆಗಳಿಗೆ ವೀರಶೈವ ತತ್ವದ ಬಣ್ಣ ಸಾಕಷ್ಟು ಹಚ್ಚುವುದು ಸೋಮನಾಥನಲ್ಲಿರುವ ಸಾಮರ್ಥ್ಯವೆಂದು ಹೇಳಬಹುದು. ಎಲ್ಲ ಪಾತ್ರಗಳೂ ಬಸವ-ಸೂರ್ಯನ ಸುತ್ತಲೂ ಗ್ರಹಗಳಂತೆ ತಿರುಗುತ್ತವೆ.[24] ಇನ್ನೊಂದು ಕಾರಣವೆಂದರೆ ಹರಿಹರನಿಗಿಂತ ಸೋಮನಾಥನು ಬಸವಚರಿತೆಯನ್ನು ಉದಾತ್ತವಾಗಿ ರಚಿಸಿದ್ದಾನೆ. ಬಸವೇಶ್ವರನ ಅವತಾರವನ್ನು ನಿರೂಪಿಸುವಲ್ಲಿ ಒಂದು ಮಹತ್ತರವಾದ ಲಕ್ಷ್ಯವು ಮೂಡಲಿಲ್ಲ. ಸೋಮನಾಥನ ಲಕ್ಷ್ಯವು ಮಹತ್ತರವಾದುದು. ಬಸವೇಶ್ವರನ ಜೀವನದಲ್ಲಿ ಹರಿಹರನು ಹೆಚ್ಚು ಕಂಡಿದ್ದುದು ಜಂಗಮ ಸೇವೆ ಭಕ್ತಿ ಪ್ರವಣತೆಗಳು ಮಾತ್ರ. ಇವುಗಳನ್ನೇ ಅಲ್ಲ; ಇವುಗಳಿಗಿಂತ ಮುಖ್ಯವಾಗಿ ಸೋಮನಾಥನು ಬಸವಣ್ಣನ ಅವತಾರದಲ್ಲಿ ಕಂಡಿದ್ದುದು ವೀರಶೈವ ಮತೋದ್ಧರಣೆ. ಈ ಇಬ್ಬರ ಎರಡು ಲಕ್ಷ್ಯಗಳೂ ಎರಡು ಕಾವ್ಯಗಳ ಆರಂಭಗಳಲ್ಲೇ ತಿಳಿದು ಬರುತ್ತವೆ. ಇದೇ ಕಾರಣದಿಂದ ಬಸವೇಶ್ವರನ ಜೀವನವನ್ನು ನಿರೂಪಿಸುವಲ್ಲಿ ಇಬ್ಬರಿಗೂ ವ್ಯತ್ಯಾಸಗಳು ಬಂದಿವೆ. ಅವು ಹೀಗಿವೆ:

ಹರಿಹರನು ಶಾಪಗ್ರಸ್ತನಾದ ಒಬ್ಬ ಗಣೇಶನು ಬಸವನಾಗಿ ಹುಟ್ಟಿದಂತೆ ಹೇಳುತ್ತಾನೆ.[25] ಕೈಲಾಸದಲ್ಲಿ ಒಬ್ಬ ಮಾಲೆಗಾರನು ಕಂಪುಳ್ಳ ಸಂಪಿಗೆಯ ಹೂಗಳನ್ನು ಶಶಿಧರನ ಸಿರಿಮುಡಿಗೆ ಬೇಕೆಂದು ತಂದುಕೊಡುವನು. ಶಿವನು ತನ್ನ ಮುಂದಿರ್ದ ವೃಷಭಮುಖನೆಂಬ ಗಣೇಶನನ್ನು ಕರೆದು ನೀನೀ ಪ್ರಸಾದವನ್ನು ಶರಣತತಿಗೀಯೆನ್ನಲು ಅವನು ಪರಮೋತ್ಸಾಹದಿಂದ ಉಕ್ಕಿ ಮೈಯಿಕ್ಕಿ ಪರವಶೀಭೂತನಾಗುತ್ತ ಎಲ್ಲರಿಗೂ ಹೂಗಳನ್ನು ಕೊಡುವಲ್ಲಿ ಸ್ಕಂದನನ್ನು ಮರೆತು ಕೊಡದೇ ಎಲ್ಲರಿಗೂ ಕೊಟ್ಟೆನೆಂದು ಶಿವನಿಗೆ ಹೇಳುವನು. ಸ್ಕಂದನು ತನಗೆ ಪ್ರಸಾದವು ಬರಲಿಲ್ಲವೆಂದು ಶಿವನಿಗೆ ಬಿನ್ನೈಸಲು ವೃಷಭಮುಖನು 'ಪುಸಿಮಾತದೇಕೆನುತ್ತ' ಅವನಿಗೂ ಕೊಟ್ಟುದಾಗಿ ಸಾಧಿಸುತ್ತಾನೆ. ಆಗ ಕುಮಾರನು ತಂದೆಯ ಮೊಗಂನೋಡಿ ಒಂದುಮಂ ನುಡಿಯಲರಿಯದೆ ನಿಲ್ಲಲು, ಮಗನ ಕರುಣಾಸ್ಯಮಂ ಚಂದ್ರಚೂಡಂ ಕಂಡು ಅವನು ತಕ್ಕೈಸಿ ವೃಷಭಮುಖನನ್ನು ನೋಡಿ ಕುಮಾರಂಗೆ ಕೊಡದೆ ಇಂತಹ ಸಭೆಯಲ್ಲಿ ಸಮಕ್ಷದೊಳ್ ಪುಸಿನುಡಿವರೇ ? ನಮಗೆ ಕೊಡದಿದ್ದರೂ ನಾವು ಸೈರಿಸುವವು. ವಿಮಲಶಿಶುವಿಂಗೆ ಪುಸಿನುಡಿಯೆ ಸೈರಿಸೆವಯ್ಯ.

ಇದರಿಂದ ಒಂದು ಜನನವು ನಿನಗೆ ದೊರಕಿತ್ತು. ಧರಣಿಯಲ್ಲಿ ಹುಟ್ಟು ಎಂದು ಬೆಸಸುತ್ತಾನೆ.[25]

ಸಾಮಾನ್ಯವಾಗಿ ಭೂಮಂಡಲದಲ್ಲಿ ಜನಿಸಿದ ಶರಣರೆಲ್ಲರೂ ಪೂರ್ವಜನ್ಮದಲ್ಲಿ ಯಾವುದೋ ತಪ್ಪುಮಾಡಿ ಶಪಿಸಲ್ಪಟ್ಟ ಪ್ರಥಮರೆಂದು ಹರಿಹರನ ಭಾವನೆ.[26] ನಂಬಿಯಣ್ಣ, ಮಹಾದೇವಿ ಇವರ ರಗಳೆಗಳಲ್ಲಿ ಈ ಭಾವನೆ ಕಂಡುಬರುತ್ತದೆ. ನಮ್ಮ ಪುರಾಣಗಳಲ್ಲಿಯೂ ಶಾಪದಿಂದ ಭುವಿಯಲ್ಲಿ ಹುಟ್ಟಿದ ಮಹನೀಯರಿದ್ದಾರೆ. ಮಹಾಭಾರತದಲ್ಲಿ ಶಂತನು, ಗಂಗಾ, ಭೀಷ್ಮರ ವೃತ್ತಾಂತಗಳಲ್ಲಿ ನಾವು ಶಾಪಗಳನ್ನು ಕಾಣಬಹುದು. ಈ ರೀತಿ ಅವರು ಶಾಪದಿಂದ ಭೂಲೋಕದಲ್ಲಿ ಹುಟ್ಟುವುದಕ್ಕೆ ಯಾವುದೋ ಒಂದು ಪ್ರಯೋಜನವು ಇರುತ್ತದೆ. ಇದೇ ರೀತಿ ಹರಿಹರನು ಬಸವಣ್ಣನ ಜನನಕ್ಕೆ ಒಂದು ಪ್ರಯೋಜನವನ್ನು ಇಟ್ಟುಕೊಂಡಿದ್ದನೆಂದು ಹೇಳಬಹುದು. ಗಣಸಮಕ್ಷದಲ್ಲಿ ಹುಸಿಹೇಳಿ ಪ್ರಸಾದವನ್ನು ಕೊಡದ ಕಾರಣ ಭೂಮಿಯಲ್ಲಿ ಅವತರಿಸಿ "ಪ್ರಸಾದವನು ಪಾದಿನಿಂದಂ ಪಡೆದು ಶರಣರ್ಗೆ ಕೊಡುವುದೆಂದು ಶಿವನ ಬೆಸಸನೆ.[27] ನಿಜ ಜೀವನದಲ್ಲಿ ಬಸವನು ಶಿವ ಪ್ರಸಾದವನ್ನು ಶರಣರಿಗೆ ಶಕ್ತಿವಂಚನೆಯಿಲ್ಲದೆ ಹಂಚಿದ್ದಾನೆ. ಈ ಹಂಚಿಕೆಗೆ ಕಾರಣ ಶಾಪ. ವೃಷಭ ಮುಖನು ಬಸವೇಶ್ವರನಾಗಿ ಹುಟ್ಟುವುದಕ್ಕೆ 'ಭಕ್ತಿಯಂ ಇಳೆಗೆ ಕೊಡುವುದು'[28] ಕೂಡ ಒಂದು ಪ್ರಯೋಜನವೇ ಆದರೂ ಶಾಪದ ಮುಂದೆ ಇದು ಅಗೋಚರವಾಗಿ ಹೋಗುತ್ತಿದೆ. ಬಸವೇಶ್ವರನು ಚಾರಿತ್ರಕ ವ್ಯಕ್ತಿ. ಜಂಗಮ ಸೇವೆ ಮಾಡಿ ಭಕ್ತಿಯನ್ನು ಆಚರಿಸಿ, ಮಹಿಮೆಗಳನ್ನು ತೋರಿ, ಮತೋದ್ಧರಣೆ ಮಾಡಲು ಬಾಳಿದವನು. ಆತನ ವಿಷಯದಲ್ಲಿ ಒಂದು ಶಾಪ ಎನ್ನುವುದು ಬಸವೇಶ್ವರನು ಮಾಡಿದ ಕೆಲಸವನ್ನು ಒಂದನ್ನು ನಿರೂಪಿಸಲು ತನ್ನ ಮನಸ್ಸಿಗೆ ತೋಚಿದಂತೆ ಭಾರತಾದಿಗಳನ್ನು ಅನುಸರಿಸಿ ಕವಿ ಬರೆದ ಒಂದು ಕಲ್ಪನೆ ಎಂದು ಸಾಮಾನ್ಯವಾಗಿ ಎಣಿಸುತ್ತದೆ. ನಿಜವಾಗಿ ಈ ಶಾಪವೇ ಬಸವರಾಜದೇವರ ರಗಳೆಗೆ ಶಾಪವಾಯಿತು. ಉಳಿದ ಕಾರಣಗಳಿಗಿಂತಲೂ ಇದೇ ಬಸವರಾಜದೇವರ ರಗಳೆಗೆ ಬಂದ ನಿರಾದರಣೆಗೆ ಕಾರಣವೆಂದು ಹೇಳಬಹುದು.

ಸೋಮನಾಥನು ಲಕ್ಷ್ಯದಲ್ಲಿ ಇಟ್ಟುಕೊಂಡಿದ್ದುದು ಬಸವನ ಮತೋದ್ಧರಣೆ ಎಂದು ಮುಂದೇ ಹೇಳಿದೆವಷ್ಟೆ. ಮತೋದ್ಧರಣೆಯನ್ನು ಬಸವನು ಅನೇಕ ರೀತಿ ಮಾಡಿದ್ದಾನೆ. ವೀರಶೈವಕ್ಕೆ ಜೀವಾಳವಾಗಿ ಅವನೇ ವೀರಶೈವವನ್ನು ಸೃಷ್ಟಿಸಿದ್ದಾನೆ ಎಂಬ ಅಭಿಪ್ರಾಯವೂ ಕಡೆಗೆ ಜನರಲ್ಲಿ ಬರುವಂತೆ ಮಾಡಿದ್ದಾನೆ. ಬಸವಣ್ಣನು ಮಾಡಿದ ಇಂತಹ ಕಾರ್ಯ ಶಾಪಗ್ರಸ್ತನಾದ ಒಬ್ಬನಿಂದ ಆಗುವುದೆಂದರೆ ಅನೇಕ ವೀರಶೈವರ ಪ್ರಕಾರ ತಪ್ಪು ಆಗುತ್ತದೆ. ಸೋಮನಾಥನು ಒಂದು ಅದ್ಭುತ ಕಲ್ಪನೆಯನ್ನು ಮಾಡಿದ್ದಾನೆ. ಮಾಡಿದ್ದುದು ಕಲ್ಪನೆಯಾದರೂ ಅದು ಅಮೋಘ

ವಾಗಿ ನಿಜವೆಂದು ನಂಬುವಂತೆ ಮಾಡಿದ್ದಾನೆ. ಇದು ಬಸವೇಶ್ವರನ ಪೂರ್ವ ವೃತ್ತಾಂತದ ಕಲ್ಪನೆ. ಸೋಮನಾಥನ ಪ್ರಕಾರ ಬಸವನು ಧರ್ಮ ಸ್ವರೂಪನಾದ ಆದಿವೃಷಭನ ಅವತಾರವಾದ ನಂದೀಶನು. ಅವನು ಶಾಪಗ್ರಸ್ತನಲ್ಲ. ಶಿವನ ಬೇಡಿಕೆಯಿಂದ ಭೂಲೋಕಕ್ಕೆ ಬಂದವನು ಅವನು. ನಂದೀಶನು ಭೂಲೋಕಕ್ಕೆ ಬರುವ ವೃತ್ತಾಂತವು ಬಸವಪುರಾಣದಲ್ಲಿ ಒಳ್ಳೆಯ ಲಕ್ಷ್ಯವನ್ನು ಇಟ್ಟುಕೊಂಡು ಬರೆಯಲ್ಪಟ್ಟಿತು. ಅದು ಬಸವಣ್ಣನಿಗೆ ಉನ್ನತವಾದ ಒಂದು ವ್ಯಕ್ತಿತ್ವವನ್ನು ಕೊಡುವುದು. ಅದು ಹೀಗಿದೆ:

ಒಂದು ದಿನ ಕೈಲಾಸದಲ್ಲಿ ಶಿವನು ಪಾರ್ವತಿಯೊಡನೆ ಸುಖಸಂಕಥಾ ವಿನೋದದಲ್ಲಿದ್ದಾಗ ಅಲ್ಲಿ ನಾರದನು ಬಂದು ಭೂಲೋಕ ವೃತ್ತಾಂತವನ್ನೂ, ಅಲ್ಲಿನ ಶಿವಭಕ್ತಿಯ ಸ್ಥಿತಿಗತಿಗಳನ್ನೂ ತಿಳಿಸುತ್ತಾನೆ. ಅನಂತರ ಈಶನೇ! ಭುವಿಯಲ್ಲಿ ನಿಮ್ಮ ಭಕ್ತಿ ತುದಿ ಮೊದಲು ಯಾವುದೋ ತೋರದೇ ಇದೆ. ಜನರು ದೃಷ್ಟ ಪ್ರತ್ಯಯಗಳಿಂದ ಸಂದೇಹಗಳನ್ನು ಬಿಟ್ಟು ಸದ್ಭಕ್ತಿಯಿಂದ ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲಗಳಿಂದ ಸಂಪನ್ನರಾಗಿ ಭಕ್ತಿಯಿಂದ ಬಾಳುವಂತೆ ನೀನೇ ಪ್ರಸನ್ನನಾಗಿ ಬಂದು ಲೋಕವನ್ನು ಪಾವನ ಮಾಡಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಶಿವನು ನಂದಿಕೇಶನಿಗೂ ನನಗೂ ಸ್ವಲ್ಪವೂ ವ್ಯತ್ಯಾಸವಿಲ್ಲದ ಕಾರಣ, ಲೋಕವು ಬೋಧವನ್ನು ಪಡೆಯುವಂತೆ ಈತನನ್ನು ಮರ್ತ್ಯಕ್ಕೆ ಕಳುಹಿಸುವೆನೆಂದು ಹೇಳುತ್ತಾನೆ. ಬಸವಣ್ಣನಿಗಾಗಿ ಸೋಮನಾಥನು ನಂದೀಶನಿಗೆ ಅತ್ಯುನ್ನತವಾದ ಗೌರವವನ್ನು ಕಲ್ಪಿಸಿದ್ದಾನೆ. ಸೋಮನಾಥನ ಪ್ರಕಾರ ನಂದಿಕೇಶನು ದ್ವಿತೀಯ ಶಂಭುವೆನಿಸಿಕೊಂಡ ಧರ್ಮವೃಷಭನು. ಶಿವನ ಆದೇಶದಿಂದ ಶಿಲಾದನಿಗೆ ಹುಟ್ಟಿ ನಂದೀಶನಾಗಿ ತಪಸ್ಸನ್ನು ಮಾಡಿ ಅವನು ಶಿವನ ವಾಹನವಾಗಿದ್ದಾನೆ. ಸೋಮನಾಥನು ಆತನ ಗುಣಶೀಲಗಳನ್ನು ಪಾರ್ವತಿಯಿಂದ ಶಿವನಿಗೆ ಹೇಳಿಸುತ್ತಾನೆ. "ಸರ್ವೇಶನೇ! ಇಂತಹ ನಿರುಪಕಾರವೂ, ಇಂತಹ ಸದಾಚಾರವೂ, ಇಂತಹ ನಿರಂತರ ಭಕ್ತಿ, ಇಂತಹ ಸಿದ್ಧ ಪಾಂಡಿತ್ಯವೂ, ಇಂತಹ ಆತ್ಮತತ್ತ್ವವೂ ನೀನಲ್ಲದೆ ಮತ್ತೆ ಯಾರಿಗೆ ಬರುವವು? ನಿನ್ನನ್ನು ಧರಿಸಲು ನಿನಗಲ್ಲದೆ ಮತ್ತೊಬ್ಬರಿಗೆ ಆಗುವುದೇ? ನಿನ್ನ ಅಂಶವಲ್ಲದವನು ನಿನಗೆ ಇಷ್ಟ ಪ್ರೀತಿಪಾತ್ರನಾಗಬಲ್ಲನೇ?" ಆಗ ಶಿವನು ನಂದೀಶನನ್ನು ನೋಡುತ್ತಾನೆ. ತನ್ನನ್ನು ಹೊಗಳುವಾಗ ಅವನಿಗೆ ಎಷ್ಟು ವಿನಯ. ನಾಚಿಕೆಯಾಗಿ ತಲೆ ಬಾಗಿಸಿಕೊಳ್ಳುತ್ತಾನೆ. ಮಸ್ತಕ ವಿನ್ಯಸ್ತ ಹಸ್ತನಾಗಿ ಶಿವಪ್ರಾರ್ಥನೆ ಮಾಡುತ್ತಾನೆ. ಅವನ ಅವಿಕತ್ಥನತೆ ಒಳ್ಳೆಯ ಔಚಿತ್ಯದ ರೀತಿಯಲ್ಲಿ ಹೇಳಲ್ಪಟ್ಟಿತು. ಆಗ ಶಿವನು ನಂದಿಕೇಶನನ್ನು ಹೀಗೆ ಕೇಳಿದನು "ಇದು ಶ್ರುತಿಮೂಲವು, ಇದು ಧರ್ಮಮೂಲವು, ಇದು ತತ್ತ್ವಸಾರವು, ಇದು ಆದಿಪದವು ಎಂದು ನಿಯತವಾಗುವಂತೆ ನಿನ್ನಿಂದ ಲೋಕದಲ್ಲಿ ಭಕ್ತಿ ಅವಲೋಕಿಸಲ್ಪಟ್ಟಿತು. ಪ್ರಮಥರಿಗೂ ಪಾರ್ವತಿಗೂ

ಹೇಳಿದಕ್ಕಿಂತ ಹೆಚ್ಚಾಗಿ ನನ್ನ ತತ್ವವನ್ನು ಅರುಹಿದೆನು. ನಿನಗೆ ಸರ್ವಜ್ಞ ಪದವು ಎಲ್ಲೆಲ್ಲೂ ಸಲ್ಲುವುದು. ಮರ್ತ್ಯಲೋಕದಲ್ಲಿ ದ್ವಿತೀಯ ಶಂಭುವೆನ್ನುವಂತೆ ಮಹಿಮೆಯನ್ನು ವ್ಯಕ್ತಮಾಡಿ ಲೋಕಹಿತಾರ್ಥವಾಗಿಯೂ, ಭಕ್ತಹಿತಾರ್ಥವಾಗಿಯೂ ನಮ್ಮ ವಿನೋದಾರ್ಥವಾಗಿಯೂ ಭೂಲೋಕವನ್ನು ಪಾವನ ಮಾಡಿ.'[29] ಮರ್ತ್ಯಲೋಕದಲ್ಲಿ ಜನನವನ್ನು ಪಡೆಯಬೇಕೆಂದು ಶಿವನು ಬೆಸಸಿದ ಕೂಡಲೇ ಹರಿಹರನ ವೃಷಭಮುಖನು ಅಂಜುವನು.[30] 'ತಂದೆ ಶರಣಾಗು, ಶರಣೆನಗೆ ಪುಟ್ಟಲ್ಕರಿದು, ಕಾಮಾರಿ ಷಡುವರ್ಗ ದುರ್ಭರಂ ಧರೆಯಲ್ಲಿ, ಸೋಮಧರ ತಾಪತ್ರಯಗಳ ಬೇಗೆ ಪಿರಿದಲ್ಲಿ' ಎಂದು ಹೆದರಿಕೆ ತೋರಿಸುತ್ತಾನೆ. ನಂದಿಕೇಶನು ಭುವಿಗೆ ಬರಲು ಅಂಜುವುದಿಲ್ಲ. ಛಲ ಬೇಕು ಶರಣಂಗೆ. ಶಿವನು ಆಜ್ಞಾಪಿಸಿದ ಕೂಡಲೇ ಆತನು 'ನಿಮ್ಮ ಅನುಜ್ಞೆಯನ್ನು ಶಿರಸಾವಹಿಸಿ ಕೆಲಸ ಮಾಡುವೆನು. ಇಷ್ಟು ಹೇಳಬೇಕೇ? ಮರ್ತ್ಯಲೋಕಕ್ಕೆ ಮತ್ತೊಬ್ಬ ಕರ್ತೃವಿದ್ದನೇ? ಇಲ್ಲಿದ್ದರೇನು? ನನಗೆ ಅಲ್ಲಿದ್ದರೇನು? ಎಲ್ಲಿದ್ದರೂ ನಿನ್ನಲ್ಲಿಯೇ ನನ್ನ ನಿಲವು' ಎಂದು ಹೇಳುತ್ತಾನೆ.[31] ಸೋಮನಾಥನು ಬಸವೇಶ್ವರನ ಭಕ್ತಿ ಸ್ಥೈರ್ಯಗಳನ್ನು ನಂದಿಕೇಶನಲ್ಲಿ ನಿಕ್ಷೇಪಿಸಿಕೊಂಡು ಕಥೆಗೆ ಬೀಜ ಹಾಕಿಕೊಂಡಿದ್ದಾನೆ.

ಹರಿಹರನ ಶಿವನು ವೃಷಭಮುಖನನ್ನು ತಕ್ಕೈಸುತ್ತಾನೆ.[32] ಎನ್ನ ಪ್ರಸಾದ ಸಾಮರ್ಥ್ಯಮಂ ತೋರುತಂ, ಮುನ್ನಣೆಯೊಳಿಲ್ಲಿಗೈತಪ್ಪುದಿದು ನಿರ್ಮಿತವು ಎಂದು ಹೇಳುತ್ತಾನೆ. ಇಷ್ಟೇ ಅಲ್ಲ. ವೃಷಭನಾಮವು ನಿನಗೆ ಹೆಸರಾಗುತ್ತದೆ. ಅಲ್ಲಿ ನಿನಗೆ ವೃಷಭೇಂದ್ರನು ಇಹಪರಕೆ ಗುರುವಾಗುವನೆಂದು ಹೇಳಿ ಕಳುಹಿಸುತ್ತಾನೆ. ಹರಿಹರನ ಪ್ರಕಾರ ಬಸವನಿಗೆ ವೃಷಭನು ಗುರುವು.[33] ಸೋಮನಾಥನ ಪ್ರಕಾರ ಶಿವನೇ ಗುರುವು.[34] ಬಸವನು ವೃಷಭೇಂದ್ರನೇ ಆದಕಾರಣ ಅವನ ಗುರುವು ಶಿವನುವಿನಾ ಆಗುವ ಸಂಭವವಿಲ್ಲ. ಇದೇ ಕಾರಣ ಶಿವನು "ಗುರುಲಿಂಗ ಮೂರ್ತಿಯನ್ನು ಧರಿಸಿ ನಾನೇ ನಿನ್ನನ್ನು ಪರಮತತ್ವಾರ್ಥಪರನನ್ನು ಮಾಡುವೆನು. ಪ್ರಾಣಲಿಂಗವಾಗಿ ನಿನ್ನ ಪ್ರಾಣಂಗಳಲ್ಲಿ ಇರುವೆನು. ಜಂಗಮರೂಪವನ್ನು ಧರಿಸಿ ನಿನ್ನೊಡನೆ ವಿಹರಿಸುವೆನು. ನನ್ನ ಪ್ರಾಣಗಳಿಗೆ ಪ್ರಾಣವಾದ, ಪ್ರಮಥರಿಗೆ ಪ್ರಾಣವಾದ ನಿನಗೂ ನನಗೂ ಸಂದು ಎಲ್ಲಿಯೂ ಇಲ್ಲ"ವೆಂದು ಹೇಳಿಕಳುಹಿಸುತ್ತಾನೆ.[35]

ಒಬ್ಬ ಮಹಾಪುರುಷನು ಹುಟ್ಟುವುದು ಅವನ ತಾಯಿ ತಂದೆಗಳ ಹಲವಾರು ನೋಂಪಿಗಳ ಫಲವಾಗಿ ಎನ್ನುವುದು ಲೋಕವಿಶ್ವಾಸ. ಇದೇ ಕಾರಣ ಸೋಮನಾಥನು ಮಾದಾಂಬೆಯು ಪುತ್ರವತಿಯಾಗುವುದಕ್ಕೆ ಅನೇಕ ವ್ರತಗಳನ್ನು ಮಾಡಿದಹಾಗೆ ಬರೆದಿದ್ದಾನೆ.[36] ಯಾವ ವ್ರತದಿಂದಲೂ ಪುತ್ರರಾಗಲಿಲ್ಲ. ಕಡೆಗೆ ಆದ್ಯರು ಗ್ರಂಥಗಳನ್ನೆಲ್ಲ ಹುಡುಕಿ ನಂದಿಕೇಶ್ವರನ ವ್ರತವು ಕಾಮ್ಯಾರ್ಥಸಿದ್ಧಿಗೆ ಕಾರಣವೆಂದು ಹೇಳಿದ ಕೂಡಲೇ ಅವಳು ನಂದಿಕೇಶ್ವರ ವ್ರತವನ್ನು ಮಾಡಿದ್ದಾಳೆ.[37] ಶಿವನ ಅನುಜ್ಞೆ

ಯಿಂದ ಬಂದ ನಂದಿಕೇಶನೇ ಅವಳಿಗೆ ಪುತ್ರನಾಗಿ ಹುಟ್ಟಿದ್ದಾನೆ. ವೀರಶೈವ ಮತ ತತ್ವಕ್ಕೆ ಅನುಗುಣವಾಗಿ ಇಲ್ಲಿ ನಂದಿಕೇಶ್ವರನ ವ್ರತವು ಹೇಳಲ್ಪಟ್ಟಿರುವುದು ಔಚಿತ್ಯ ಪೂರ್ವಕವಾದ ಸಂಗತಿ. ಹರಿಹರನಲ್ಲಿ ವ್ರತಗಳಿಲ್ಲ. ವೃಷಭಮುಖನು ನೇರವಾಗಿ ಬಂದು ಅವಳ ಗರ್ಭದಲ್ಲಿ ಪ್ರವೇಶಿಸುತ್ತಾನೆ.[38]

ಹರಿಹರನು ಮಾದಾಂಬೆಯ ಗರ್ಭಚಿಹ್ನೆಗಳನ್ನು ವರ್ಣಿಸುವಾಗ ನೂತನತೆ ಯನ್ನು ಅಥವಾ ಸಂದರ್ಭದ ಔಚಿತ್ಯವನ್ನು ತೋರಿಸಲಿಲ್ಲ. ಗರ್ಭವರ್ಣನೆ ಯಾರು ಮಾಡಿದರೂ ಅದೇ ರೀತಿ ಮಾಡಬಹುದು. ಸೋಮನಾಥನು ಔಚಿತ್ಯದಿಂದ ವರ್ಣಿಸಿದ್ದಾನೆ.[39] ಮಾದಾಂಬೆಯ ಗರ್ಭದಲ್ಲಿರುವನು; ಅಮೃತಾಂಶನಾದ ಕಾರಣ ಅವಳಿಗೆ ಹಸಿವೆ ಆಗಲಿಲ್ಲ, ಸದ್ಭಕ್ತಿರುಚಿಕನಾದ ಕಾರಣ ಅವಳಿಗೆ ರುಚಿಗಳು ಅರುಚಿಯಾದವು. ಪಾಂಡುರಾಂಗನ ಮೂರ್ತಿಯಾದ ಕಾರಣ ಅವಳ ಮೈ ಬಿಳುಪೇರಿತು. ಅವನು ಭವಿಪಾಕಗಳನ್ನು ಸಮ್ಮತಿಸದ ಕಾರಣ ಅವಳಿಗೆ ಓಕರಿಕೆಯಾಯಿತು. ಶಿವ ಮೂರ್ತಿಯಾದ ಕಾರಣ ಶಿವಯೋಗ ನಿದ್ರೆಯಂತೆ ಅವಳಿಗೆ ನಿದ್ರೆ ಹೆಚ್ಚಾಯಿತು. ಕಾಲಕಂಧರ ಮೂರ್ತಿಯಾದ ಕಾರಣ ಅವಳ ಕುಚಚೂಚುಕಗಳು ಕಪ್ಪೇರಿದವು. ಇತ್ಯಾದಿಯಾಗಿ ಅವನು ಮಾದಾಂಬೆಯ ಗರ್ಭಚಿಹ್ನೆಗಳನ್ನು ವರ್ಣಿಸಿದ್ದಾನೆ.

ಒಂಬತ್ತನೆಯ ತಿಂಗಳು ಮುಗಿದಕೂಡಲೇ ಮಾದಾಂಬೆ ಬಸವನನ್ನು ಹೆತ್ತಳೆಂದು ಹರಿಹರನು ಬರೆದಿದ್ದಾನೆ.[40] ಸೋಮನಾಥನ ಬಸವನು ಹಾಗೆ ಹುಟ್ಟಲಿಲ್ಲ. ತಾಯಿಯ ಗರ್ಭಸದನವೇ ತನ್ನ ಸುಖಸಮಾಧಿಗೆ ತಾಣ ಮಾಡಿಕೊಂಡಿದ್ದಾನೆ.[41] ಸಿದ್ಧ ಪದ್ಮಾಸನದೊಳಿದ್ದು ವಿಶುದ್ಧತನುವನ್ನು ಪಡೆದು ಯೋಗಿಯಾಗಿದ್ದಾನೆ. ತಾನು ಬಂದ ಕಾರ್ಯವನ್ನೇ ಮರೆತಿದ್ದಾನೆ. ಈಶ್ವರಧ್ಯಾನ ತತ್ಪರನಾಗಿ ಅಲ್ಲೇ ವತ್ಸರ ತ್ರಯವನ್ನು ಕಳೆದಿದ್ದಾನೆ. ಮಾದಾಂಬೆಯು ಸುತಭರಾಲಸೆಯಾಗಿ ನಂದಿಕೇಶ್ವರನನ್ನು ಮೊರೆಹೊಕ್ಕಳು. ನಂತರ ಆತನ ಹೃದಯದಲ್ಲಿರುವ ಪರಂಜ್ಯೋತಿ ಬಂದಿದ್ದ ಮಣಿಹವನ್ನು ಹೇಳುತ್ತಾನೆ. ಆಗ ಶಿಶುವಿನ ಭೂಲೋಕ ಅವತರಣೆಯಾಗುತ್ತದೆ.

ಬಸವೇಶ್ವರನು ಯಾವ ತಿಥಿಯಲ್ಲಿ ಹುಟ್ಟಿದನೆಂಬುದು ಸೋಮನು ಅಥವಾ ಹರಿಹರನು ಯಾರೂ ಬರೆಯಲಿಲ್ಲ. ಬಸವನು ಅರ್ಧೋದಯದಲ್ಲಿ ಹುಟ್ಟಿದನೆಂದು ನಿರೂಪಿಸಲು ಶ್ರೀ ಬಾಡಾಲರಾಮಯ್ಯನವರು ಇತ್ತೀಚಿಗೆ ಪ್ರಯತ್ನಮಾಡಿದ್ದಾರೆ.[42] ಇವರು ಹೀಗೆ ಪ್ರಯತ್ನಮಾಡುವುದಕ್ಕೆ ಕಂಚಿ ಶಂಕರಾರಾಧ್ಯರಿಂದ ರಚಿಸಲ್ಪಟ್ಟವೆಂದು ಭ್ರಮೆಯಿಂದ ಸ್ವೀಕರಿಸಿದ ವ್ಯಾಸೋಕ್ತ ಬಸವಪುರಾಣದಲ್ಲಿನ ಬಾದರಾಯಣನ ಹೆಸರಿನಿಂದ ಬರೆದ ಒಬ್ಬ ಅನಾಮಿಕನ ಶ್ಲೋಕಗಳು ಆಧಾರವಾದವು. ವ್ಯಾಸೋಕ್ತ ಬಸವ ಪುರಾಣಕಾರನು ವೀರಶೈವ ತತ್ವವನ್ನು ಅರಿತವನಾದರೂ ಬ್ರಾಹ್ಮಣನಾದ ಕಾರಣ [ಪೂರ್ವಜನ್ಮದಲ್ಲಿ ರಜಸ್ಸಾಂಕರ್ಯಕದೋಷಮಾಡಿದ ಕಾರಣ ಮಾದಾಂಬೆಗೆ ಪುತ್ರರಾಗಲಿಲ್ಲವೆಂದು ಹೇಳಿದ ಕಾರಣ ಇವನು ಬ್ರಾಹ್ಮಣಾಚಾರ

ಗಳಿರುವ ಆರಾಧ್ಯ ಬ್ರಾಹ್ಮಣನೇ ಇರಬೇಕೆಂದು ನನ್ನ ಭಾವನೆ] ಸೋಮನಾಥನನ್ನು ಅರ್ಥಮಾಡಿಕೊಂಡಿಲ್ಲ. ನಿಜವಾಗಿ ಕಂಚಿಯ ಶಂಕರಾರಾಧ್ಯರ ಬಸವಪುರಾಣದಲ್ಲಿ ಅನುವಾದವು ಹೀಗಿದೆ :

ಪ್ರೀತಿ ಪುತ್ರುಡು ಮೋಡ್ಪು ಜೇತುಲ ತೋಡ
ನಾತಲ್ಲಿ ಗರ್ಭಂಬುನಂದುದಯಿಂಚೆ ;
ನರ್ಥೋದಯಂಬುನ ನತನಿ ಲೋನುನ್ನ
ಯರ್ಧೇಂದು ಮೌಳಿ ಗುಪ್ತಾ ಕೃತಿದಾಲ್ಚಿ
ಯಂಗಂಬು ಪೈ ಕಡು ಪಾಂಗಂಬು ಗಾಗ
ಲಿಂಗ ಸಾಹಿತ್ಯಂಬು ಲೀಲ ನೊನರ್ಚೆ ॥43 —ಮೂಲ ತೆಲುಗು

ಏವಂ ವದತ ಏವಾಸ್ಯ ಸತೀ ಸುತ ಮ ಸೂತ ಸಾ ।
ಪ್ರಣಮಂತ ಮಿವಾಚಾರ್ಯಂ ಶಿರೋ ವಿರಚಿತಾಂಜಲಿಃ ॥
ಅರ್ಥೋದಯೇ ತಸ್ಯಕಂಠೇ ಬಧ್ವಾ ಲಿಂಗಾತ್ಮಕಂ ಶಿವಂ ।
ಅಯಂ ಬಸವ ರಾಜಾಖ್ಯೋ ಭಕ್ತಿ ಭಾಂಡಾಗೃಹಂ ಭವೇತ್ ॥44
ಶಂಕರಾರಾಧ್ಯರ ಬಸವ ಪುರಾಣ ಅನುವಾದ.

ಅರ್ಥೋದಯದಲ್ಲೇ ಬಸವಣ್ಣನಿಗೆ ಲಿಂಗ ಸಾಹಿತ್ಯವನ್ನು ಶಿವನು ಮಾಡಿದನು. ಬಸವಣ್ಣನ ಹೃದಯದಲ್ಲಿ ಇದ್ದ ಶಿವನು ಗುಪ್ತಾಕೃತಿಯನ್ನು ಧರಿಸಿ ಲಿಂಗ ಸಾಹಿತ್ಯವನ್ನು ಮಾಡುವುದು ಅರ್ಥೋದಯದಲ್ಲಿಯೇ ಸಾಧ್ಯ. ಬಸವಣ್ಣನು ಹುಟ್ಟಿದ ಕೂಡಲೇ ವೀರಶೈವನಾಗಬೇಕೆಂಬ ಇಚ್ಛೆ ಸೋಮನಾಥನಿಗಿತ್ತು. ಸೋಮನಾಥನು ಬಸವಣ್ಣನ ಜನನದ ವಿಷಯದಲ್ಲೇ ಅರ್ಥೋದಯ ಶಬ್ದವನು ಉಪಯೋಗಿಸಿ ಇದ್ದರೆ, 'ಅರ್ಥೋದಯಮುನಂದ', ಎಂದು ಹೇಳಬೇಕಾಗುವ ಅವಸರವೇನಿತ್ತು ? 'ಅರ್ಧೋದಯದಲ್ಲೇ' ಎಂದು ಹೇಳುವುದು ಬದುಲು 'ಅರ್ಥೋದಯದಲ್ಲಿ' ಎಂದು ಮಾತ್ರ ಹೇಳುತ್ತಿದ್ದನು. ಅರ್ಥೋದಯದಲ್ಲೇ ಎಂಬುದು ಲಿಂಗ ಸಾಹಿತ್ಯಕ್ಕೆ ಮಾತ್ರ ಸಂಬಂಧಪಟ್ಟಿದೆ. ಸೋಮನಾಥನು 64 ಶೀಲಗಳನ್ನು ಅನುಷ್ಠಾನ ಮಾಡಿದ ಏಕೈಕ ವೀರಶೈವ. ಅವನು ನಿಜವಾಗಿ ಬಸವಣ್ಣನ ಜನನವೇಳೆಗೆ ಲಗ್ನವನ್ನು ಹೇಳುವವನಾದರೆ ಮದುವೆಗೂ ಹೇಳುವವನಾಗುತ್ತಿದ್ದನು. ಹಾಗೆ ಮಾಡಲಿಲ್ಲ. ಅವನಿಗೆ ಬೇಕಾಗಿದ್ದುದು ಶಿವಲಗ್ನವಷ್ಟೇ ; ಭವಿ ಲಗ್ನವಲ್ಲ. ಬಸವಣ್ಣನ ವಿವಾಹದ ಕಾಲದಲ್ಲಿನ ಸ್ಥಿತಿಯನ್ನು ಸೋಮನು ಹೀಗೆ ಹೇಳಿದ್ದಾನೆ :

''ಶಿವಭಕ್ತವನಿತಲು ಸೇಸಲು ಚಲ್ಲ
ಶಿವಬಲಂ ಬಗ್ಗಲಿಂಚಿನ ಮುಹೂರ್ತಮುನ
ವೇದೋಕ್ತ ಶಿವ ಧರ್ಮ ವಿಧಿ ಬಸವನಿಕಿ
ಗಾದಿಲಿಸುತ ಬೆಂಡ್ಲೀ ಗಾವಿಂಚಿನಂತ''45

ಹೀಗೆ ಹೇಳಿದವನು ತಿಥಿ ವಾರ ನಕ್ಷತ್ರಗಳನ್ನು ಸೂಚಿಸುವಂತೆ ಅರ್ಧೋದಯವನ್ನು ಹೇಳುವುದು ಸಾಧ್ಯವೇ ? ಸೋಮನ ಶೀಲಸಂಪಾದನೆಯ ಪ್ರಕಾರ ಅವನ ಐವತ್ತು ಮೂರನೆಯ ಶೀಲ "ಕಾಲಕಲ್ಪಿತಂಗಳ"ನ್ನು ಅತಿಗಳೆಯುವುದು. ಸೋಮನು ತಿಥಿ ಹೇಳುವುದಕ್ಕೆ ಸಾಕಷ್ಟು ವೀರಶೈವ ಸೂತ್ರಗಳು ಅಡ್ಡಿ ಬರುತ್ತವೆ.

ಅಚ್ಚ ಶಿವೈಕ್ಯಂಗೆ ಹೊತ್ತಾರೆ, ಅಮಾವಾಸ್ಯೆ, ಮಟ್ಟ ಮಧ್ಯಾಹ್ನ
ಸಂಕ್ರಾಂತಿ ಮತ್ತೆ ಅಸ್ತಮಾನ ಪೌರ್ಣಮೆ ಎಂಬುವಿಲ್ಲ. ಭಕ್ತನ
ಮನೆಯಂಗಣವೇ ವಾರಣಾಸಿ ಕಾಣಾ ರಾಮನಾಥಾ ![46] ದಾಸಿಮಯ್ಯ

ಸೋಮವಾರ ಮಂಗಳವಾರವೆಂದು ಮಾಡುವ ಲಿಂಗಭಕ್ತಂಗೆಂತು
ಸರಿಯೆಂಬೆನಯ್ಯ. ದಿನ ಶ್ರೇಷ್ಠವೊ ಲಿಂಗಶ್ರೇಷ್ಠವೋ.
ದಿನ ಶ್ರೇಷ್ಠವೆಂದು ಮಾಡುವ ದುರಾಚಾರಿಯ ನೋಡಲಾಗದು.[46] ಬಸವಣ್ಣ

ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ
ರಾಶಿಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯಾ
ಚಂದ್ರ ತಾರಾಬಲ ಉಂಟೆಂದು ಹೇಳಿರಯ್ಯಾ
ನಾಳಿನ ದಿನಕಿಂದಿನ ದಿನವೇ ಲೇಸೆಂದು ಹೇಳಿರಯ್ಯಾ
ಕೂಡಲಸಂಗಮ ದೇವರ ಪೂಜಿಸಿದ ಫಲ ನಿಮ್ಮದಯ್ಯಾ"[46] ಬಸವಣ್ಣ

ಇದು ಕಾರಣ ಸೋಮನಾಥನು ಅರ್ಧೋದಯವನ್ನು ಜ್ಯೋತಿಶ್ಶಾಸ್ತ್ರದ ವಿಷಯದಲ್ಲಿ ಹೇಳಲಿಲ್ಲವೆಂದು ಖಚಿತವಾಗಿ ಹೇಳಬಹುದು.

ಹರಿಹರನು ಬಸವಣ್ಣನಿಗೆ ಜಾತಕರ್ಮ ನಡೆದಂತೆ ಬರೆದಿದ್ದಾನೆ. 'ಆಗಳಾ ಪುತ್ರಂಗೆ ಜಾತಕರ್ಮಂ ಮಾಡಿ' ಎಂದು ಒಂದೇ ಪಾದದಲ್ಲಿ ಜಾತಕ ಕರ್ಮವನ್ನು ಮುಗಿಸಿದ ಕಾರಣ ಅದು ಯಾವ ರೀತಿ ನಡೆಯಿತೋ ತಿಳಿಯದು. ಸೋಮನಾಥನು ಬಸವಣ್ಣನಿಗೆ ಅರ್ಧೋದಯದಲ್ಲಿ ಅಂದರೆ ಹುಟ್ಟಿಹುಟ್ಟಿದಾಗಲೇ ಶಿವನಿಂದ ಲಿಂಗ ಸಾಹಿತ್ಯವನ್ನು ಮಾಡಿಸಿದ್ದಾನೆ. ಶಿವನು ಬಸವಣ್ಣನಿಗೆ ಲಿಂಗಸಾಹಿತ್ಯವನ್ನು ಮಾಡಿದ ನಂತರ ಯೋಗಿರೂಪದಲ್ಲಿ ಎಲ್ಲರಿಗೂ ಕಂಡುಬಂದನು. ಬಂದದಾರಿ ಯಾರೂ ಕಾಣದಂತೆ ಬಂದ ಅವನನ್ನು ನೋಡಿ ಎಲ್ಲರೂ ಅಚ್ಚರಿಗೊಂಡರು. 'ಯೋಗಿ ಕಪ್ಪಡಿ ಸಂಗಮವು ನನ್ನ ನೆಲವು. ಸಂಗಮೇಶ್ವರ ನನ್ನ ಹೆಸರು. ನನ್ನ ಮಗನು ಲೋಕ ಹಿತಾರ್ಥವಾಗಿ ನಿನಗುದಯಿಸಿದ್ದಾನೆ. ಇವನಿಗೆ ಲಿಂಗಾನರ್ಪಿತವು ಕೊಡಬೇಡ' ಎಂದು ಹೇಳಿ ಅದೃಶ್ಯನಾಗುತ್ತಾನೆ.[47] ಹರಿಹರನ ಶಿಶುವು ಲಿಂಗವನ್ನು ನೋಡಿ ಕಣ್ದೆರೆದು ಸುಖಿಯಾಗುವುದು, ಲಿಂಗ ಪ್ರಸಾದವನ್ನು ಕೊಂಡು ಹೊರೆಯೇರುವುದು ಬರೆದಿದ್ದಾನೆಯೇ ಹೊರತು ಲಿಂಗಸಾಹಿತ್ಯವನ್ನು ಹೇಳಲಿಲ್ಲ. ಸೋಮನಾಥನ ಮಾದಾಂಬೆ ಮಾದಿರಾಜರು ಭಕ್ತರನ್ನು ಕರೆದು ಭಕ್ತಿಯಿಂದ ಪ್ರಣಾಮಗಳನ್ನು ಮಾಡಿ ಸಿಂಹಾಸನಗಳನ್ನು ನೀಡಿ, ವಿಭೂತಿ ವೀಡ್ಯಗಳನ್ನು ಅರ್ಪಿಸಿ ಪಾದೋದಕ

ಗಳನ್ನು ಒಡಿದು ಮೈತೊಳೆದು ವಿಭೂತಿಯನ್ನು ಫಾಲದಲ್ಲಿ ಪೂಸಿ ಪಂಚಮಹಾ ವಾದ್ಯ ಪಟಲಗಳು ಶಬ್ದಿಸುತ್ತಿರಲು ಬಾಲಕನಿಗೆ ಬಸವನಾಮವನ್ನು ನೀಡುವರು. ಹರಿಹರನು ಜಾತಕರ್ಮಗಳಲ್ಲಿ ಏನೂ ವಿಶೇಷವನ್ನು ಹೇಳಲಿಲ್ಲ. ಸೋಮನಾಥನು ಹೇಳಿದ ಲಿಂಗಸಾಹಿತ್ಯವೂ ಜಾತಕರ್ಮವೂ ನಿಜವಾದರೆ ಬಸವನು ಹುಟ್ಟುವಿಕೆಯಿಂದ ಸಾಮಾನ್ಯ ಬ್ರಾಹ್ಮಣನಾಗದೇ ಆರಾಧ್ಯ ಬ್ರಾಹ್ಮಣನಾಗುತ್ತಾನೆ. ಬಸವಣ್ಣನ ತಂದೆಯು ಕೇವಲ ಬ್ರಾಹ್ಮಣನಾದರೆ ಭಕ್ತರನ್ನು ಕರೆಯುವುದು ಪಾದೋದಕ ಗಳಿಂದ ಶಿಶುವನ್ನು ಸ್ನಾನ ಮಾಡಿಸುವುದು ಅಸಂಭವ. ಪಾಲ್ಕುರಿಕೆಯ ಸೋಮನ ಪ್ರಕಾರ ಬಸವನು ಮಾಡಿದ ತ್ಯಾಗವೆಂದರೆ ಉಪನಯನವೊಂದೇ ಆಗಿದೆ. ಇದು ಬಿಟ್ಟರೆ ಆತನು ವೀರಶೈವನಾದನೆಂದರೆ ಆತನಲ್ಲಿ ಲಿಂಗಧಾರಣಾದಿಗಳು ಮೊದಲೇ ಇದ್ದವೆಂದು ಹೇಳಬಹುದು. ಹರಿಹರನ ಬಸವನು ಲಿಂಗಧಾರಿಯಾಗಿದ್ದುದು ಕೂಡಲ ಸಂಗಮದಲ್ಲಿ. ಸೋಮನಾಥನ ಬಸವನು ಹುಟ್ಟಿದಕೂಡಲೇ ಆಗಿದ್ದಾನೆ. ಆರಾಧ್ಯ ಬ್ರಾಹ್ಮಣರು ಪಾಶುಪತರು.

> ಪರ ಬ್ರಹ್ಮಾಭಿದಂ ಲಿಂಗಂ ಪಶುಪಾಚ ವಿಮೋಚಕಂ
> ಯೋಧಾರಯತಿ ಸದ್ಭಕ್ತ್ಯಾ ಸ ಪಾಶುಪತ ಉಚ್ಯತೇ

ಎಂಬ ಶ್ರೀಕರ ಭಾಷ್ಯ ಶ್ಲೋಕದ ಪ್ರಕಾರ ಪಾಶುಪತರು ಲಿಂಗಧಾರಣೆ ಉಳ್ಳವರು. ಇವರು ಬ್ರಾಹ್ಮಣರಾಗಿಯೂ, ವೀರಶೈವರಾಗಿಯೂ ಇರುತ್ತಾರೆ. ವೀರಶೈವರಲ್ಲಿ ಇಲ್ಲದ ಕುಲತತ್ವವು ಇವರಲ್ಲಿ ಇರುತ್ತದೆ. ಇವರಿಗೆ ಯಜ್ಞೋಪವೀತ ವೇದಕರ್ಮ ಕಲಾಪಗಳು ಗೋತ್ರಸೂತ್ರ ಪ್ರವರಗಳೂ ಇರುತ್ತವೆ; ಗುರುಕೃಪಾನ್ವಿತ ಜನನವು, ಷಟ್ಸ್ಥಲ ಸಿದ್ಧಾಂತ, ಲಿಂಗೈಕ್ಯ ಮೊದಲಾದವೂ ಇರುತ್ತವೆ. ಇವರು ಆಂಧ್ರದಲ್ಲಿ ಹೆಚ್ಚು ಕಂಡುಬರುತ್ತಾರೆ. ಕರ್ಣಾಟಕದಲ್ಲಿ ಇರುವುದು ಜಂಗಮ ಶೈವವೊಂದೇ. (ಭೇದವನ್ನು ಸೂಚಿಸುವುದಕ್ಕಾಗಿ ಹೀಗೆ ಹೇಳಬೇಕಾಗುತ್ತಿದೆ) ಇವರಲ್ಲಿ ಕುಲತತ್ವ ಗಳಿಲ್ಲ. ಸೂತಕಾದಿಗಳೂ ಇಲ್ಲ. ಮೇಲೆ 'ಸೂಚಿಸಿದ ವಿಷಯಗಳಿಂದ ಬಸವಣ್ಣನ ತಾಯಿ ತಂದೆಗಳು ಲಿಂಗಧಾರಿಗಳೇ ಆದ ಆರಾಧ್ಯ ಬ್ರಾಹ್ಮಣರು ಆಗಿರಬೇಕೆಂಬ ನಿಶ್ಚಯವು ಮೂಡುತ್ತದೆ. ಇದು ಹೀಗಿರಲು ಆಂಧ್ರ ಆರಾಧ್ಯ ಬ್ರಾಹ್ಮಣರಲ್ಲಿ ಒಂದು ಪಾರಂಪರ್ಯವಾಗಿ ಬಂದ ವಿಶ್ವಾಸವಿದೆ. ಬಸವಣ್ಣನ ಪೂರ್ವಿಕರು ಆಂಧ್ರದ ಆರಾಧ್ಯ ಬ್ರಾಹ್ಮಣರು ಎಂಬುದು ಅದು. ಈ ವಿಷಯವನ್ನು ನನ್ನ ಮಾನ್ಯ ಮಿತ್ರ ರಾದ ಡಾ. ಟಿ. ಬಿ. ಯಂ. ಅಯ್ಯವಾರು ಇವರು ಹೇಳಿದ್ದಾರೆ. ಬಸವಣ್ಣನ ಪೂರ್ವಿಕರು ಆಂಧ್ರದವರೋ ಅಲ್ಲವೋ ಪರಿಶೋಧನೆಯ ಮೇಲೆ ತಿಳಿಯಬೇಕಾದ ಅಂಶವು.

ಬಸವನು ಮಾತೆಯ ಮನೋರಾಜ್ಯ ಪಿತನ ಕಣ್ಗಳ ನೋಂಪಾಗಿ ಬಾಲ ಲೀಲೆಯಲ್ಲೊಪ್ಪಿದಂತೆ ಹರಿಹರನು ಹೇಳಿದ್ದಾನೆ. ಅವನ ಬಾಲಲೀಲೆಯ ವರ್ಣನೆ

ಸಾಮಾನ್ಯವಾಗಿಯೇ ಇದೆ. ಅನ್ಯ ಕವಿಗಳಾದರೂ ಹಾಗೆಯೇ ಹೇಳುತ್ತಿದ್ದರೆಂದು ಹೇಳಬಹುದು. ಸೋಮನಾಥನ ಬಸವನು ಬಾಲ್ಯವನ್ನು ಕಳೆದ ರೀತಿ ಇನ್ನೊಂದು ರೀತಿಯಲ್ಲಿದೆ. ಹಿಂದೆ ಕತ್ತಲಿರಲು ತನ್ನದು ಎಂತಹ ತೇಜವೆಂದು ದೀಪವನ್ನು ನೋಡಿ ಆತನು ನಗುವನು. ಲಿಂಗ ಪ್ರಸಾದ ಮಗ್ನನಾಗಿರುವಂತೆ ತಾಯಿಯ ಮೊಲೆಯನ್ನು ಉಣ್ಣುತ್ತ ಉಣ್ಣದೇ ಸುಮ್ಮನಿರುವನು. ಶಿವನ ಸುಖಾಮೃತವನ್ನು ರುಚಿ ನೋಡುವಂತೆ ಅವನು ಹಸ್ತಂಗಳನ್ನು ಹೀರುವನು. ಶಿವಪದ ಧ್ಯಾನದಲ್ಲಿದ್ದಂತೆ ನಿಶ್ಚೇಷ್ಟನಾಗುವನು. ಸಂಸಾರವನ್ನು ಬೆಂಬತ್ತಿ ಪಾಪಿ ತಗುಳ್ದು ನಲಿದಾಡುವಂತೆ ಕೈಯನ್ನು ಬಿಚ್ಚಿಯಾಡುವನು. ಮಾಯಾ ಪ್ರಪಂಚವನ್ನು ಮುಟ್ಟಲೀಯದೇ ಒದೆಯುವಂತೆ ಪಾದಗಳನ್ನು ಆಡಿಸುವನು. ಇಳೆಗೆ ತಾನು ಬಂದ ಕೆಲಸ ತಳವಾಯಿತೆಂದು ಬೆದರುವನು. ಒಲಿದು ಶಿವನನ್ನು ಹಾಡುತಿರಲು ಆನಂದಾಶ್ರುಗಳನ್ನು ಉಗಿಯುವ ರೀತಿ ಕಂಬನಿಗಳನ್ನು ಉಗಿಯುವನು. ಭವದ ಬಾಧೆಗೆ ಮೊರೆಯಿಡುವ ಭಕ್ತರನಾಲಿಸುವಂತೆ ಉಡುಗದೇ ಆಲಿಸುವನು. ಪೊಡವಿಯಲ್ಲಿ ಮರೆಗೊಂಡ ಶಿವಭಕ್ತಿ ತಲೆವಿಡಿದೆತ್ತುವಂತೆ ತಲೆ ಎತ್ತುವನು. ವೃಷಭನು ತಾನೇಯೆಂಬಂತೆ ಅಂಬಳಿಕೆಯಾಡುವನು. ವೀರಮಾಹೇಶ್ವರಾಚಾರವು ಒಂದಾಗಿ ನಿಂದಂತೆ ಎದ್ದು ನಿಂತಿರುವನು.[48] ಈ ರೀತಿ ಸೋಮನಾಥನು ಬರೆಯುವದು ನೋಡಿದರೆ ಬಸವಣ್ಣನಲ್ಲಿ ವೀರಶೈವದ ಭವಿಷ್ಯತ್ತನ್ನು ರೂಪಿಸಿಕೊಂಡು ಬರೆಯ ತೊಡಗಿದನೆಂದು ಸಿದ್ಧವಾಗುತ್ತದೆ.

‘ಮರ್ತ್ಯಲೋಕದೊಳ್ ಪುಟ್ಟಿದ ಗಣೇಶ್ವರನಪ್ಪ ಬಸವರಾಜಂಗೆ ತಾಯ್ತಂದೆಗಳಿಲ್ಲೆಂಬುದ ನಟಿಪ್ರವಂತೆ ಶಿವಭಕ್ತನುಮಂ ಶಿವಭಕ್ತೆಯುಮಂ ಶಿವನಾಜ್ಞೆಯಿಂ ಕೈಲಾಸಕ್ಕೆ ಕೊಂಡೊಯ್ಯೆ’ ಎಂದು ಬಸವಣ್ಣನ ತಾಯ್ತಂದೆಗಳು ಅವನ ಬಾಲ್ಯದಲ್ಲಿಯೇ ಕೈಲಾಸವಾಸಿಗಳಾದಂತೆ ಹರಿಹರನು ಹೇಳುತ್ತಾನೆ.[49] ಈತನ ಪ್ರಕಾರ ಬಸವನು ‘ಮುತ್ತಬ್ಬೆಯ ಪಕ್ಕದೊಳು ಶಿವ ಪ್ರಸಾದ ಸಂತುಷ್ಟ ಹೃದಯನಾಗಿ ನಾಲ್ಕೆರಡುವರುಷಂ ಸುಖದೊಳಿ’ದ್ದನು. ಬಾಲ್ಯ ವಿಮೋಚನವಾಗಿ ಯೌವನವನಾಲಿಂಗಿಸಿ ಹದಿನಾರು ವತ್ಸರದೊಡನೆ ನವಯೌವನಂ ಸಾರ್ದ ಬಸವರಾಜನ ರೂಪದಲ್ಲಿ ವೀರಶೈವದ ಕುರುಹನ್ನು ಹರಿಹರನು ಕಂಡನು. ಬಸವಣ್ಣನ ಯೌವನ ಸೌಂದರ್ಯದಲ್ಲಿ ಹರಿಹರನು ತೋರಿಸಿದ ಔಚಿತ್ಯವು ಮಿಗಿಲಾದುದು. ‘ಶಿವಪ್ರಸಾದಮಂ ಹೊತ್ತು ನಿತ್ತರಿಸುವಂ ತಾನೊರ್ಬನೆಂಬುದಂ ತೋರ್ಪಂತೆ ಮಲ್ಲಿಗೆ ಮೊಲ್ಲೆ ಜಾಜಿ ಕೇತಕೀ ಮೊದಲಾದ ಕುಸುಮ ಕುಲಮನಾಂತು ಮೆರೆವ ಬಟ್ಟ ದುರುಂಬಿ’ನವನು ಬಸವನು. ‘ಗಂಗೆಯಂ ಹೊತ್ತ ಹರನೊಳ್ ಪುರುಡಿಸಿ ಶಿರೋಮಧ್ಯದೊಳಿರಿಸಿದ ಕುಂತಳಕಾಳಿಂದೀನದೀ ಹೊರಸೂಸುಗುಮೆಂದು ಮೇಲಿಕ್ಕಿದ ರುದ್ರಾಕ್ಷಿಯ ಶಿರೋಮಾಲೆಯೆಂಬ ಸುತ್ತೇರಿಯಿಂದೊಸರ್ದ ಕಾಳಿಮ ಜಲಕಣಂಗಳಂತೆಸೊಸಲೊಳು ಕುಣಿವ ನೀಲಾಲಕಂ’ಗಳವನು ಬಸವನು. ಇತ್ಯಾದಿ ವರ್ಣಿಸಿದ್ದಾನೆ. ಅನಂತರ

ಬಸವನು 'ಜನನದ ಬಳಿಪಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯ ವೇಳ್ಕುಂ' ಎಂದು ನಿರ್ಧರಿಸಿ 'ಶಿವಭಕ್ತಿಯುಂ ಕರ್ಮಮುಂ ಎಂದುಂ ಒಂದಾಗಿರದು' ಎಂದು ಬಗೆದು ವೈರಾಗ್ಯಯುಕ್ತನಾಗುತ್ತಾನೆ. ಕರ್ಮಲತೆಯಂತಿರ್ದ ಜನ್ನಿವಾರಮುಂ ಕಳೆದು ಬಿಸುಟು ಬಾಗೆವಾಡಿಯನ್ನು ಬಿಟ್ಟು ಹೊರಟು ಮಲಪ್ರಹರಿ ಕೃಷ್ಣವೇಣಿಗಳ ಸಂಗಮದಲ್ಲಿದ್ದ ಕಪ್ಪಡಿ ಸಂಗಮಕ್ಕೆ ಬರುತ್ತಾನೆ.

ಸೋಮನಾಥನು ಬಸವಣ್ಣನ ತಾಯಿ ತಂದೆಗಳ ಮರಣ ವೃತ್ತಾಂತವನ್ನು ಬಸವಪುರಾಣದಲ್ಲಿ ಎಲ್ಲಿಯೂ ಹೇಳಲಿಲ್ಲ. ಹರಿಹರನ ಪ್ರಕಾರ ಬಸವೇಶ್ವರನಿಗೆ ಉಪನಯನವು ಆಗಿದೆ. ಸೋಮನಾಥನ ಪ್ರಕಾರವಾದರೆ ಇದು ಆಗಲಿಲ್ಲ. ಮಾದಿ ರಾಜನು ಗರ್ಭಾಷ್ಟಕದಲ್ಲೇ ಬಸವೇಶ್ವರನಿಗೆ ಉಪನಯನವನ್ನು ಮಾಡಲು ಯತ್ನಿ ಸುತ್ತಾನೆ.[50] ಇದನ್ನು ಮಾಡಿಕೊಳ್ಳಲು ಬಸವನು ಅಂಗೀಕರಿಸುವುದಿಲ್ಲ. ಪರಮಾತ್ಮ ನನ್ನು ದೇಶಿಕನಾಗಿ ಪಡೆದು ದುರ್ನರರನ್ನು ಗುರುಗಳೆಂದು ಭಜಿಸುವುದು ನರಕವು. ಗತಪೂರ್ವ ಜನ್ಮಸಂಸ್ಕಾರನಾದವನಿಗೆ ದ್ವಿಜತ್ವವು ಪತಿತವಲ್ಲವೇ ? ನಿರ್ಮಲವಾದ ಗುರು ಕೃಪಾನ್ವಿತ ಜನ್ಮವುಳ್ಳವನಿಗೆ ಕರ್ಮ ಜನ್ಮವು ದುಷ್ಕರ್ಮವಲ್ಲವೇ ? ಗುರು ಪಾದ ಗಳನ್ನು ಭಜಿಸುವವನಿಗೆ ಅಗ್ನಿಯಲ್ಲಿ ಹವಿಯನಿಕ್ಕುವುದು ತಪ್ಪಲ್ಲವೇ? ಮಲಹರಾತ್ಮಕ ವಾದ ಮಂತ್ರವನ್ನು ತಿಳಿದು ಹಲವಾರು ಮಂತ್ರಗಳನ್ನು ಸ್ವೀಕರಿಸುವುದು ಪಾಪ ವಲ್ಲವೇ ? ಭಕ್ತರಿಗೆತ್ತುವ ಕೈಗಳನ್ನು ಮುಂಜಿಯ ಚಂಡಾಲರಿಗೆ ಎತ್ತಬೇಕೆ ? ಕರ್ಮ ಪಾಶಗಳನ್ನು ಉಳಿಪಚಿದು ಕರ್ಮದ ಹಗ್ಗಗಳನ್ನು ಕಟ್ಟಿಕೊಳ್ಳಬಹುದೇ ? ವೀರ ಮಾಹೇಶ್ವರಾಚಾರ ದೀಕ್ಷಿತನಾದ, ನಿರ್ಮಿತೋ ಭಯ ಕರ್ಮ ನಿರ್ಮೂಲನಾದ ನನ್ನನ್ನು ಕರ್ಮಾಬ್ಧಿಯಲ್ಲಿ ಮುಳುಗಿಸುವುದು ಧರ್ಮವೇ ? ಎಂದು ಹೇಳುತ್ತಾನೆ. ಮಾದಿರಾಜನು ಬಿಡದೇ ವಿಪ್ರ ಮಾರ್ಗವನ್ನು ಉಪದೇಶಿಸಲು ಪ್ರಯತ್ನಿಸುತ್ತಾನೆ. ಕುಲತತ್ವವನ್ನು ತಿಳಿಸುತ್ತಾನೆ. ನಿಷ್ಠುರೋಕ್ತಿಗಳನ್ನು ನುಡಿಯುತ್ತಾನೆ. ಇದರಿಂದ ಬಸವೇಶ್ವರನಿಗೆ ಗಾಯತ್ರಿಯನ್ನೂ ಬ್ರಹ್ಮಣ್ಯವನ್ನೂ ನಿಂದಿಸಬೇಕಾದ ಸ್ಥಿತಿಯು ಬರುತ್ತದೆ.[51] ಬ್ರಾಹ್ಮಣ್ಯವನ್ನೂ ಗಾಯತ್ರೀ ತತ್ವವನ್ನೂ ಟೀಕಿಸಿ, ಷಡ್ದರ್ಶನಾ ತೀತವಾದ ಶಿವಭಕ್ತಿಯನ್ನು ಆತನು ಹೇಳುತ್ತಾನೆ. ಕರ್ಮಪಾಶ ಬಂಧವು ಫಲಕಾರಿ ವಲ್ಲ. ಭಕ್ತಿಯೆಂಬುದು ಸಹಜ. ಲಿಂಗೈಕ್ಯ ನಿಷ್ಠಾಯುಕ್ತಿ ಉಳ್ಳದ್ದು. ಅದು ಕುಲಪತಿಯಂತೆ ಇರಬೇಕು. ವಿಪ್ರ ಮಾರ್ಗವು ಬಹುದೇವತಾ ಸೇವೆಯನ್ನು ಒಳಗೊಂಡಿದೆ. ಅದು ವೇಶ್ಯೆಯ ಮಾರ್ಗ ಎಂದು ಗರ್ಜಿಸುತ್ತಾನೆ. ನಾನು ಭಕ್ತ್ಯು ದ್ರೇಕಗಳಿಂದ ಪರಮಾರ್ಥವನ್ನು ಬಿಟ್ಟು ಹೇಳುವುದಿಲ್ಲ. ಇದು ಶ್ರುತಿ ಸ್ಮೃತಿ ಮೂಲವೇ ಹೊರತು ಪಥಕವಾದವಲ್ಲವೆಂದು ತಿಳಿಸುತ್ತಾನೆ. ಮಾದಿರಾಜನು ಬಸವನ ಮಾತುಗಳನ್ನು ಕೇಳುವುದಿಲ್ಲ. ಇದು ಕಾರಣ ಬಸವನು ಸಹೋದರಿಯಾದ ನಾಗಾಂಬೆಯೊಡನೆ ಫಣಿಹಾರಿಯ ಮನೆಗೆ ಹೋಗುತ್ತಾನೆ. ಉಪನಯನವನ್ನು

ನೋಡಲು ಬಂದ ಮಾದಾಂಬೆಯು ಸೋದರನು ಶಿವಭಕ್ತನಿಗೆ ಹೊರತು ಭವಿಗೆ ತನ್ನ ಮಗಳನ್ನು ಕೊಡೆನೆಂದು ಮಾಡಿದ ಪ್ರತಿಜ್ಞೆಯನ್ನು ಸ್ಮರಿಸಿ ಬಸವಣ್ಣನನ್ನು ತನ್ನ ಪುರಕ್ಕೆ ಕರೆದುಕೊಂಡು ಹೋಗಿ ಮಗಳಾದ ಗಂಗಾಂಬೆಯನ್ನು ಕೊಟ್ಟು ಮದುವೆ ಮಾಡುತ್ತಾನೆ. ನಂತರ ಸ್ವಲ್ಪ ಕಾಲವಲ್ಲೇ ಬಸವಣ್ಣನಿಗೆ ತನಯಳನ್ನು ಕೊಟ್ಟು ಮದುವೆ ಮಾಡಿದ್ದುದಕ್ಕಾಗಿ ಪ್ರಮಥರು ಮೆಚ್ಚಿ ಕರೆಯಲು ಹೋದ ಹಾಗೆ ಬಲದೇವನು ಕೈಲಾಸಕ್ಕೆ ಹೋಗುತ್ತಾನೆ. ಬಿಜ್ಜಳನು ಬಸವನನ್ನು ಬಲದೇವನ ಸ್ಥಾನದಲ್ಲಿ ಭಂಡಾರಿಯನ್ನು ಮಾಡುತ್ತಾನೆ.

ಇಲ್ಲಿ ಕೆಲವು ವಿಚಾರಣೀಯಾಂಶಗಳು ಹೊರಬರುತ್ತವೆ. ಸಾಮಾನ್ಯವಾಗಿ ಉಪನಯನವು ಗರ್ಭಾಷ್ಟಕದಲ್ಲಿ ಮಾಡುವುದು ಆಚಾರವಾದ್ದರಿಂದ ಬಸವಣ್ಣನಿಗೆ ಮಾದಿರಾಜನು ಉಪನಯನ ಮಾಡಲು ಪ್ರಯತ್ನಿಸಿದ್ದು ದು ಗರ್ಭಾಷ್ಟಕದಲ್ಲೇ ಇರಬೇಕು. ಅವನು ಫಣಿಹಾರಿಯ ಮನೆಗೆ ಹೋದಾಗ ಸಹೋದರಿಯಾದ ನಾಗಾಂಬಿಕೆ ಅವನಿಗಾಗಿ ಹೋಗಿರುತ್ತಾಳೆ. ನಂತರ ಉಪನಯನಕ್ಕಾಗಿ ಬಂದ ಬಲದೇವನು ಅವನನ್ನು ತನ್ನೊಡನೆ ಕರೆದುಕೊಂಡುಹೋಗಿ ಯುಕ್ತವಯಸ್ಸು ಬಂದಮೇಲೆ ಆತನಿಗೆ ವಿವಾಹ ಮಾಡಿರಬಹುದು. ವಿವಾಹವು ಬಾಲ್ಯದಲ್ಲೇ ಮಾಡಿದ್ದರೆ ವಿವಾಹವಾದ ಕೂಡಲೇ ಕೈಲಾಸವಾಸಿಯಾದ ಬಲದೇವನ ಸ್ಥಾನಕ್ಕೆ ಬಸವನು ಬರುವುದು ಅಸಂಭವವು ಆಗುತ್ತದೆ. ಮದುವೆಯಾದಮೇಲೆ ಬಲದೇವನು ಸ್ವಲ್ಪಕಾಲವೇ ಬದುಕಿದ್ದನೆನ್ನಲಿಕ್ಕೆ

> ದಂಡಿ ಬಸವನಿಕಿ ತನಯನಿಚ್ಚುಟಯು
> ಪ್ರಮಧುಲೆಂತಯು ಮೆಚ್ಚಿರಾ ಬಂಪಬೋವು
> ಕ್ರಮವಲನ ಬ್ರಮಥಲೋಕಮುನ ಕೇಗುಡನು[52]

ಎಂಬ ವಾಕ್ಯಗಳು ಆಧಾರವಾಗುತ್ತಿವೆ.

ಬಸವಣ್ಣನು ಭಂಡಾರಿಯಾದ ಪರಿಸ್ಥಿತಿಯನ್ನು ಹರಿಹರನು ಮತ್ತೊಂದು ರೀತಿಯಲ್ಲಿ ಹೇಳಿದ್ದಾನೆ. ಕಪ್ಪಡಿಯ ಸಂಗಮಕ್ಕೆ ಬಂದ ಬಸವನು ಕೇರಿಕೇರಿಗಳನ್ನು ತಿರುಗಿ ಶಂಕರಾಲಯವನ್ನು ಕಂಡನು. ಪೂರ್ವ ಸ್ಮರಣೆ ಕೈಗೂಡಿ ಪರಿತಂದು ರಂಗ ಮಂಟಪವನ್ನು ಹೊಕ್ಕು ಶಿವನನ್ನು ಪ್ರಾರ್ಥಿಸಿ ಸಂಗಶರಣೆನುತ್ತ ಮೂರ್ಛಿಸಲು ಶಿವನು ಅವನ ಚಿತ್ತದೊಳು ಪೊಕ್ಕು 'ಅಂಜದಿ ರಂಜದಿರ್ ಮಗನೆ, ಭವದ ಮಾಲೆಯಂ ಪೊದ್ದಲೀಯದೇ ಸಲಹಿಪೆಪಂ, ನೆಲಂಮೆಚ್ಚೆಮೆಱೆವಂಪೆ' ಎಂದು ಬೆಸಸಿ ನಿಜಲಿಂಗ ಮೂರ್ತಿಯಲ್ಲಿ ಅಂತರ್ಹಿತನಾದನು.[53] ಬಸವನು ಶಿವನ ಕೃಪೆಗೆ ಚಿತ್ತವಂಕುರಿಸಿ ಶಿವಧ್ಯಾನದಲ್ಲಿರಲು ಸ್ಥಾನಪತಿಗಳಾದ ಈಶಾನ್ಯಗುರುಗಳು ನೋಡಿ ಈತನು ಕಾರಣಿಕನಾಗಲೇವೇಳ್ಕುಮೆಂದು ನಿಶ್ಚಯಿಸಿ ಬಂದು ಎಲೆ ಮಗನೆ ನೀನೆಲ್ಲಿಗಂ ಪೋಗಬೇಡ ಸಂಗಮೇಶ್ವರಂಗೆ ಪೊಸ ಪುಷ್ಪಮಂ ತಿಳಿಯಗ್ಘವಣಿಯಂ

ತಂದು ಓಜೆಯಂ ಪೂಜೆಗೈದು ಪ್ರಸಾದಕಾಯಕನಾಗಿ ಸುಖದೊಳಿಪ್ಪುದು ಎಂದು ಹೇಳುತ್ತಾನೆ. ನಂತರ ಶಶಿಧರನನ್ನು ಅರ್ಚಿಸುತ್ತ ಬಸವನು ಅಲ್ಲೇ ಇರುತ್ತಾನೆ. ಒಂದುದಿನ ಬಸವಣ್ಣ ಎಂದಿನಂತೆ ಶಿವಪೂಜೆಯನ್ನು ನಿರ್ವಹಿಸಿ ರಂಗಮಂಟಪದೊಳ್ ಸಂಗಮಧ್ಯಾನನಿದ್ರಾಮುದ್ರೆಯಲ್ಲಿರಲು ಸ್ವಪ್ನದಲ್ಲಿ ಸಂಗಮೇಶ್ವರನು ಬಂದು 'ಎಲೆ ಮಗನೆ ಬಸವಣ್ಣ ! ನಿನ್ನಂ ಮಹೀತಳದೊಳು ಮೆಱೆದಪೆವು. ನೀಂ ಬಿಜ್ಜಲರಾಯ ನಿರ್ಪ ಮಂಗಳವಾಡಕ್ಕೆ ಪೋಗು' ಎಂದಂತಾಯಿತು.[54] ಬಸವನು ಕಣ್ದೆರೆದು ಸುತ್ತುಮುತ್ತು ನೋಡಿದನು. ಸಂಗಮನಿಲ್ಲ. 'ದೇವದೇವ ಸಂಗ, ಕೆಟ್ಟೆಕೆಟ್ಟೆಂ ತೊಟ್ಟಿ ನಿಂತ ಹೋಗೆಂಬರೇ. ಅರ್ಚಿಸಿದಕ್ಕೆ ಫಲವಾಯ್ತು' ಎಂದು ಗೋಳಾಡಿದನು. ವ್ಯಥೆಯಿಂದ ಪ್ರಸಾದವನ್ನು ಸ್ವೀಕರಿಸದೇ ಪಶುಪತಿಯ ಪದತಳದಲ್ಲಿ ನಿರ್ವೇಗದಿಂದ ಬಿದ್ದನು. ಸಂಗಮೇಶ್ವರನು ಮತ್ತೆ ಕನಸಿನಲ್ಲಿ ಬಂದು 'ಎಲೆ ಮಗನೆ ಎಲೆ ಕಂದ ನಿನ್ನನಗಲಿ ನಾನಿರಲಾರೆ ನಿನಗಿನಿತು ವಿರೋಧವೇಕೆ. ನಿನ್ನೊಡನೆ ಬಪ್ಪೆಂ. ನಾಳೆ ಮಧ್ಯಾಹ್ನದೊಳ್ ಶುದ್ಧಾಂಗನಾಗಿ ಬಂದು ನಂದಿಕೇಶ್ವರನ ಮುಂದೆನ್ನಂ ನೆನೆವುತ್ತಂ ಕುಳ್ಳಿರೆ ವೃಷಭ ಮುಖಾಂತರದಿಂದಾವ ಬಂದಪೆವು ಆತಂ ನಿನಗೆ ಸದ್ಗುರು' ಎಂದು ಹೇಳಿದನು. ನಂತರದ ದಿವಸ ಬಸವನು ಶಿವನು ಹೇಳಿದ ರೀತಿ ಮಾಡಲು ನಂದಿ ಮುಖದಿಂದ ಸಂಗಮೇಶ್ವರನು ಲಿಂಗದರೂಪಾಗಿ ಬಂದನು. ಬಸವನು ಅದನ್ನು ತನ್ನ ಹಸ್ತಕ್ಕೆ ವಿಜಯಂಗೈಸಿಕೊಂಡನು. ನಂದೀಶ್ವರನು ಪ್ರತ್ಯಕ್ಷವಾಗಿ ಬಸವನಿಗೆ ಪಂಚಾಕ್ಷರೀ ಮಂತ್ರೋಪದೇಶವನ್ನುಮಾಡಿ ಅಂತರ್ಧಾನನಾದನು. ಶಿವನು ಹೇಳಿದ ಕೂಡಲೇ ಬಸವನು ಮಂಗಳವೇಢೆಗೆ ಹೋಗಲಿಲ್ಲ. ಸಂಗಮೇಶ್ವರನ ಸಾನ್ನಿಧ್ಯವನ್ನು ಬಿಡಲು ಅವನಿಗೆ ಅಸಾಧ್ಯವಾಯಿತು. ಮತ್ತೆ ಶಿವನು ಕನಸಿನಲ್ಲಿ ಬಂದು ಆಜ್ಞಾಪಿಸಿದನು. ಅಕ್ಷರಜ್ಞಾನವಿದೆಯೆಂಬ ಧೈರ್ಯದಿಂದ ಬಸವನು ಗಣಕವೇಷ ಧರಿಸಿ ಮಂಗಳವೇಢೆಗೆ ಹೋದನು. ಪಟ್ಟಣದ ಸೌಂದರ್ಯವನ್ನು ನೋಡುತ್ತ, ಬಿಜ್ಜಲರಾಯನ ಅರಮನೆಗೆ ಬಂದು ಕರಣಶಾಲೆಗೆ ಹೋಗಿ ಅಲ್ಲಿ ಲೆಕ್ಕ ಬರೆಯುತ್ತಿದ್ದ ಗಣಕರ ಕಾರ್ಯಗಳನ್ನು ನೋಡುತ್ತ ನಿಂತನು. ಆಗ ಭಂಡಾರಿಯಾದ ಸಿದ್ಧದಂಡೇಶನು ಅಲ್ಲಿ ಬಂದು ಭಂಡಾರದಲ್ಲಿರಬೇಕಾದ ಹಣದ ಮೊತ್ತವೆಷ್ಟೆಂಬುದನ್ನು ಕೇಳಲು ಗಣಕರು ಐವತ್ತುಲಕ್ಷವೆಂದು ಹೇಳಿದರು. ಲೆಕ್ಕದಲ್ಲಿ ಗಣಕರು ಮಾಡಿದ ತಪ್ಪನ್ನು ಬಸವನು ಮುಂದೇ ನೋಡಿದ ಕಾರಣ ಅದನ್ನು ಭಂಡಾರಿಯ ಗಮನಕ್ಕೆ ತಂದನು.[55] ಸಿದ್ಧದಂಡೇಶನು ಬಸವಣ್ಣನ ಗಣಿತಶಾಸ್ತ್ರಪ್ರಜ್ಞೆಗೆ ಮೆಚ್ಚಿ ಆತನನ್ನು ತನ್ನೊಡನೆ ಅರಮನೆಗೆ ಕರೆದುಕೊಂಡು ಹೋದನು. ಬಿಜ್ಜಳನಿಗೆ ಹೇಳಿ ಆತನ ಅನುಮತಿಯನ್ನು ಪಡೆದು ವರ್ಷಕ್ಕೆ ನೂರೊಂದು ಹೊನ್ನು ಜೀವಿತವನ್ನೀಯುವಂತೆ ಹೇಳಿ ಬಸವಣ್ಣನನ್ನು ತನ್ನ ಭಂಡಾರದಲ್ಲಿ ನಿಯಮಿಸಿಕೊಂಡನು. ಬಸವಣ್ಣನ ಗೋತ್ರವು ತನ್ನ ಗೋತ್ರವು ಒಂದೇ ಎಂದು ತಿಳಿದನಂತರ ಸಿದ್ಧದಂಡೇಶನು ಆತನನ್ನು ತನ್ನ ಮನೆಯಲ್ಲೇ ಇಟ್ಟುಕೊಂಡನು. ಆತನ ಸುಗುಣವನ್ನು ನೋಡಿ

ಸರ್ವಾಧಿಕಾರವೂ ಆತನಿಗೆ ಕೊಟ್ಟನು. ಅನಂತರ ಸ್ವಲ್ಪಕಾಲಕ್ಕೆ ಸಿದ್ಧದಂಡೇಶನು ಸುಖಿಯಾಗಿ ರಜಿತಗಿರಿಗೆಯ್ದಿದನು. ಆಗ ಬಿಜ್ಜಳನು ಬಸವನಿಗೆ ಸಿದ್ಧದಂಡೇಶನ ಭಾಂಡಾರಿಯ ಪದವನ್ನು ನೀಡಿ ದಂಡಾಧಿಪತ್ಯವನ್ನು ನೀಡಿದನು. ಅನಂತರ ಕೆಲವು ದಿನಂಗಳಂ ತಳೆದು ಬಸವನು ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಿದೇವಿಯುವರೊಡನೆ ವಿವಾಹಿತನಾದನು.

ಹರಿಹರನು ಬಸವರಾಜದೇವರ ರಗಳೆಯ 6ನೆಯ ಸ್ಥಳದಲ್ಲಿ ಬಿಜ್ಜಳನ ಸಭಾ ವರ್ಣನೆಯನ್ನು ಮಾಡಿದ್ದಾನೆ. ಸೋಮನಾಥನು ಬಿಜ್ಜಳನ ಆಸ್ಥಾನವನ್ನು ಪ್ರತ್ಯೇಕ ವಾಗಿ ಎಲ್ಲಿಯೂ ವರ್ಣಿಸಲಿಲ್ಲ. 7ನೆಯ ಸ್ಥಳದಲ್ಲಿ ಸುವರ್ಣಕೇತಕೀ ಪುಷ್ಪದ ಪವಾಡ ಬರುತ್ತದೆ. ಇದು ಬಸವ ಪುರಾಣದಲ್ಲಿ ಕಂಡು ಬರುವದಿಲ್ಲ. ಇದೇ ಸ್ಥಲದಲ್ಲಿ ಬರುವ ಬಸವೇಶ್ವರನ ನಿತ್ಯನಿಯಮಗಳು, ಶರಣರಸೇವೆ ತೆಲುಗಿನಲ್ಲಿಯೂ ಪ್ರಾಧಾನ್ಯತೆಯನ್ನು ಪಡೆದಿವೆ. 8ನೆಯ ಸ್ಥಲದಲ್ಲಿ ಬಸವೇಶ್ವರನ ನಿಯಮಗಳನ್ನು ಭಕ್ತರು ಕೊಂಡಾಡುವುದು, ಭಂಡಾರದ ಪವಾಡ ಇವೆ. ಇವು ಬಸವ ಪುರಾಣ ದಲ್ಲಿಯೂ ಕಂಡುಬರುತ್ತವೆ. ಪ್ರತ್ಯೇಕವಾಗಿ ಹೇಳಬೇಕಾದ ವ್ಯತ್ಯಾಸಗಳು ಈ ವೃತ್ತಾಂತಗಳಲ್ಲಿ ಏನೂ ಇಲ್ಲ. 9ನೆಯ ಸ್ಥಳದಲ್ಲಿನ ಬದನೆಯಕಾಯಿಯ ಪವಾಡ ಬಸವ ಪುರಾಣದಲ್ಲಿಯೂ ಇದೆ. ಇದೇ ಸ್ಥಳದಲ್ಲಿ ಇನ್ನೊಂದು ಕಥೆ ಬರುತ್ತದೆ. ಇದು ಕಳ್ಳರು ಆಕಳುಗಳನ್ನು ಕೊಂಡು ಹೋಗುವುದು. ಕಳ್ಳರು ಭಕ್ತರವೇಷದಿಂದ ಬಂದು ಕೀಲಾರವನ್ನು ಕೊಂಡುಹೋಗುತ್ತಾರೆ. ಗೋಪಾಲಕರು ಅವರನ್ನು ನೋಡಿ ಬಸವಣ್ಣನಿಗೆ ತಿಳಿಸುತ್ತಾರೆ. ಆಗ ಬಸವಣ್ಣನು 'ಶಿವಭಕ್ತರಲ್ಲದಾರುಂ ಕೊಳಲ್ ಬಪ್ಪುದೇ? ಸಂಗನೇ ಕೊಂಬವಂ, ಸಂಗನೇ ಕೊಡುವವಂ, ಸಂಗನೇ ಉಂಬವಂ, ಸಂಗನೇ ಉಡುವವಂ, ತಾಯ್ಗಳುಮ್ಮಳಿಸಲಾಗದು ಕರುಗಳಂ ಬಿಡಿ' ರೆಂದು[56] ಹೇಳು ತ್ತಾನೆ. ಈ ವಿಷಯುವು ಬಸವಪುರಾಣದಲ್ಲಿ ಕಂಡುಬರುವುದಿಲ್ಲ. ಇದೇ ಸ್ಥಳದಲ್ಲಿ ರುವ ಶಿವಯೋಗ ನಿದ್ರಾಮುದ್ರೆಯ ಕಥೆ ಬಸವಪುರಾಣದಲ್ಲಿಲ್ಲ. ಸೋಮನಾಥನು ಇದನ್ನು ತನ್ನ ಪಂಡಿತಾ ರಾಧ್ಯ ಚರಿತ್ರೆಯಲ್ಲಿ ಬರೆದಿದ್ದಾನೆ. ಹತ್ತನೆಯ ಸ್ಥಳದಲ್ಲಿ ರುವ ನಾಗಿದೇವನಕಥೆ ಬಸವಪುರಾಣದಲ್ಲಿ ಶಿವನಾಗುಮಯ್ಯನ ಕಥೆಯಾಗಿದೆ. ಇದೇ ಸ್ಥಳದಲ್ಲಿ ಗಂಗಾದೇವಿ ಗರ್ಭವತಿಯಾಗಿ ಪುತ್ರನನ್ನು ಹೆತ್ತಳೆಂತಲೂ, ಪುತ್ರನಿಗೆ ಸಿದ್ಧರಸನೆಂಬ ನಾಮಕರಣ ಮಾಡಲಾಗಿತ್ತೆಂತಲೂ ಹರಿಹರನು ಹೇಳಿದ್ದಾನೆ.[57] ಈ ವಿಷಯುವನ್ನು ಸೋಮನಾಥನು ಎಲ್ಲಿಯೂ ಬರೆಯಲಿಲ್ಲ. ಬಸವರಾಜದೇವರ ರಗಳೆಯ ಹನ್ನೊಂದನೆಯ ಸ್ಥಳದಲ್ಲಿ ಕಿನ್ನರ ಬ್ರಹ್ಮಯ್ಯನ ಕಥೆಯಿದೆ. ಕಿನ್ನರ ಬ್ರಹ್ಮಯ್ಯನ ಕಥೆ ತೆಲುಗಿನಲ್ಲಿಯೂ ಇದೆ. ಆದರೆ ಇವು ಎರಡೂ ಪೂರ್ಣಭಿನ್ನವಾಗಿವೆ. ಕಿನ್ನರ ಬ್ರಹ್ಮಯ್ಯನು ಬಸವಪುರಾಣದ ಪ್ರಕಾರ ಗುಡಿಯನ್ನು ಪ್ರವೇಶಿಸಿದ ಒಂದು ಕುರಿಯನ್ನು ರಕ್ಷಿಸಲು ಪ್ರಯತ್ನ ಮಾಡುತ್ತಾನೆ. ಅದಕ್ಕಾಗಿ ಒಬ್ಬನನ್ನು ಕೊಂದು

ತನ್ನ ಕಾರ್ಯವು ನ್ಯಾಯವೆಂದು ಹೇಳಿ ಅದನ್ನು ನಿಜವೆಂದು ನಿರೂಪಿಸಲು ತ್ರಿಪು ರಾಂತಕನಿಂದ 'ಓ' ಎಂದು ನುಡಿಸುತ್ತಾನೆ.[58] ಹರಿಹರನ ರಗಳೆಯಲ್ಲಿ ಇದು ಉಳ್ಳಿಗೆ ಸಂಬಂಧ ಪಟ್ಟಿದ್ದುದು. ಒಂದುದಿನ ಕಿನ್ನರಯ್ಯನು ತನಗೆ ಪ್ರೀತಿಕರವಾದ ಉಳ್ಳಿ ಯನ್ನು ತರಿಸಿ ಅಡಿಗೆಗಾಗಿ ಅದನ್ನು ಶೋಧಿಸುತ್ತಿರಲು ಈ ಸಂಗತಿಯನ್ನು ಅರಿಯದ ಬಸವಣ್ಣನು ಅದರ ವಾಸನೆಯನ್ನು ತಡೆಯಲಾರದೆ ಈ ಅಭೋಜ್ಯವಾದ ವಸ್ತುವನ್ನು ಯಾರು ತಂದರೆಂದು ಆಕ್ಷೇಪಿಸಿ ತನ್ನ ಅರಮನೆಗೆ ಹೋಗುತ್ತಾನೆ. ಈ ಮಾತನ್ನು ಕೇಳಿ ಕಿನ್ನರಯ್ಯನು ಅಸಮಾಧಾನ ಹೃದಯನಾಗಿ ಮನೆಯಿಂದ ಹೊರಟು ಹೋಗು ತ್ತಾನೆ. ಬಸವಣ್ಣನು ಕಿನ್ನರಯ್ಯನನ್ನು ಕುರಿತು ವಿಚಾರಿಸಲು ಆತನು ಮನೆ ಬಿಟ್ಟು ಹೋದ ಸಂಗತಿ ತಿಳಿಯುತ್ತದೆ. ಆಗ ಉಳ್ಳಿಯಿಂದಲೇ ಆತನ ನಿರೋಧವನ್ನು ತೀರಿಸಬೇಕೆಂದು ಉಳ್ಳಿಯ ಉತ್ಸವವನ್ನು ಮಾಡುತ್ತಾನೆ.[59] ಈ ಕಥೆ ತೆಲುಗಿನಲ್ಲಿ ಇಲ್ಲ. ಬಸವರಾಜದೇವರ ರಗಳೆಯ 12ನೆಯ ಸ್ಥಳದಲ್ಲಿ ಕಳಿಂಗ ದೇಶದ ಮಹಾಭಕ್ತ ನಪ್ಪ ಮಹಾದೇವಿಸೆಟ್ಟಿಯ ವೃತ್ತಾಂತವಿದೆ. ಇದು ತೆಲುಗು ಬಸವಪುರಾಣದಲ್ಲಿ ಕಂಡುಬರುವದಿಲ್ಲ. ಜಂಗಮನಿಗೆ ಬಸವಣ್ಣನು ಮಾಯಿದೇವಿಯನ್ನು ಕೊಡುವ ವೃತ್ತಾಂತವು ಕೂಡ ಬಸವ ಪುರಾಣದಲ್ಲಿ ಬರುವುದಿಲ್ಲ.

ಬಸವರಾಜದೇವರ ರಗಳೆ 25 ಸ್ಥಳಗಳುಳ್ಳ ಗ್ರಂಥವು.[60] 25 ಸ್ಥಳಗಳಿಗೆ 13 ಮಾತ್ರ ಲಭ್ಯವಾಗುತ್ತವೆ. 13ನೆಯ ಸ್ಥಳವು ಪ್ರಕ್ಷಿಪ್ತವಾದಂತೆ ತೋರುತ್ತದೆ. ಉಳಿದ 12 ಸ್ಥಳಗಳಲ್ಲಿ ಬಸವೇಶನನ್ನು ಕುರಿತು ಹರಿಹರನು ಏನು ಬರೆದಿದ್ದನೋ ನೋಡದೇ ಹರಿಹರನು ಬಸವಣ್ಣನ ಜೀವಿತವನ್ನು ಹೀಗೆ ನಿರೂಪಿಸಿದನೆಂದು ನಿಷ್ಕರ್ಷ ವಾಗಿ ಹೇಳುವುದು ಅಸಾಧ್ಯವು. ಇದ್ದ ಸ್ಥಳಗಳಿಗೆ ಸಮಾಂತರವಾದ ಬಸವ ಪುರಾಣದ ಕಥೆಯನ್ನು ನೋಡಿ ಮೇಲಿನ ವಿಮರ್ಶೆಯನ್ನು ಬರೆಯಲಾಗಿದೆ.

ಅರ್ಥಸೂಚಿಕೆಗಳು

1. Page xi ಪೀಠಿಕೆ, ಬಸವರಾಜದೇವರ ರಗಳೆ, Sri T. S. ವೆಂಕಣ್ಣಯ್ಯ
2. P. 160 ಪಾಲಕುರಿಕೆ ಸೋಮನಾಥ ಕವಿ, by B. ತಮ್ಮಯ್ಯ
3. P. 4 ಬಸವಪುರಾಣಮು, Vavilla, Ed. 1952
4. Epigraphia Indica, Vol. 20, Part 6
5. ಪರಿಶೋಧನ, Aug-Nov. 1955, ಸೋಮನಾಥಕವಿ ಕಾಲಮು by ಬಂಡಾರುತಮ್ಮಯ್ಯ
6. An Indian Ephemeris, p. 157 Vol. IV, by Swamikannupillai
7. ಬಸವರಾಜದೇವರ ರಗಳೆ, p. 62, Ed. T. S. ವೆಂಕಣ್ಣಯ್ಯ
8. ಪಂಡಿತಾರಾಧ್ಯಚರಿತ್ರೆ, p. 57, 58 ತೆಲುಗು. Ed. 1974

9. ಶಿವಯೋಗನಿದ್ರಾಮುದ್ರೆಯ ಕಥೆ, ಉಳ್ಳಿಯ ಪವಾಡ ಇತ್ಯಾದಿಗಳು
10. ಬಸವರಾಜದೇವರ ರಗಳೆ, ಪೀಠಿಕೆ. p. xii, Ed. T. S. ವೆಂಕಣ್ಣಯ್ಯ
11. ಬಸವಪುರಾಣ, p. 8
12. ಕೆಲವು ಪ್ರತಿಗಳಲ್ಲೆ ಮಂಡೆಗ-ಮಾದಿರಾಜನಿವನು D 971, D 967, R 156 ಪ್ರತಿಗಳಲ್ಲಿ ಭಕ್ತುಲ ಮಾದಿರಾಜನು, Oriental Research Institute, Tirupati
13. ಬಸವಪುರಾಣ, p. 7 Ed. 1952, Vavilla
14. ಅದೇ, p, 5
15. ಬಸವರಾಜದೇವರ ರಗಳೆಯ ಪೀಠಿಕೆ, p. xxxiv
16. ಪಂಡಿತಾರಾಧ್ಯಚರಿತ್ರೆ, p. 5 Ed. 74
17. ಗುರುರಾಜ ಚರಿತ್ರೆ, 13ನೆಯ ಸಂಧಿ, p. 243 Ed. 1950
18. ಪಾಲ್ಕುರಿಕೆ ಸೋಮೇಶ್ವರಚರಿತ ಯಕ್ಷಗಾನಮು by G. Veeraiah, ಭಾರತಿ May 76
19. ಸೋಮನಾಥನು ಮೊದಲಿನ ಹಂತದ ಪುಸ್ತಕಗಳಲ್ಲಿಯೂ ತನ್ನ ವೀರಮಾಹೇಶ್ವರಾಚಾರ ವ್ರತನಿಷ್ಠೆಯನ್ನು ಹೇಳಿಕೊಂಡಿದ್ದಾನೆ
20. ಪಾಲ್ಕುರಿಕೆಯ ಸೋಮೇಶ್ವರ ಪುರಾಣ 1ನೆಯ ಸಂಧಿ 55
21. ಸೋಮನಾಥಭಾಷ್ಯ, ರುದ್ರಭಾಷ್ಯ, ಚತುರ್ವೇದಸಾರ, ಗಂಗೋತ್ಪತ್ತಿ ರಗಳೆಗಳು
22. ಬಸವರಾಜದೇವರ ರಗಳೆಯ ಪೀಠಿಕೆ p. xii T. S. ವೆಂಕಣ್ಣಯ್ಯ
23. ಬಸವಪುರಾಣಮು, p. 5
24. ಆಂಧ್ರವಾಙ್ಮಯಸರ್ವಸ್ವಮು : ಶಿಷ್ಲಾ ರಾಮಕೃಷ್ಣಶಾಸ್ತ್ರಿ, p.
25. ಬಸವರಾಜದೇವರ ರಗಳೆ, p. 4
26. ಬಸವರಾಜದೇವರ ರಗಳೆಯ ಪೀಠಿಕೆ. p. xvi, xvii
27. ಬಸವರಾಜದೇವರ ರಗಳೆ, p. 4
28. ಅದೇ, p. 4
29. ಬಸವಪುರಾಣಮು, p. 15, ಆಶ್ವಾಸ 1
30. ಬಸವರಾಜದೇವರ ರಗಳೆ, p. 4
31. ಬಸವಪುರಾಣಮು, p. 27, ಆಶ್ವಾಸ 1
32. ಬಸವರಾಜದೇವರ ರಗಳೆ, p. 5
33. ಬಸವರಾಜದೇವರ ರಗಳೆ, p. 4
34. ಬಸವಪುರಾಣಮು, p. 36, ಆಶ್ವಾಸ 1
35. ಬಸವಪುರಾಣಮು, p. 27 ಆಶ್ವಾಸ 1
36. ಬಸವಪುರಾಣಮು, p. 28 ಆಶ್ವಾಸ 1
37. ಅದೇ, p. 29 ಆಶ್ವಾಸ 1
38. ಬಸವರಾಜದೇವರ ರಗಳೆ, p. 4 ಸ್ಥಲ 1
39. ಬಸವಪುರಾಣ, p. 31 ಆಶ್ವಾಸ 1
40. ಬಸವರಾಜದೇವರ ರಗಳೆ, p. 6 ಸ್ಥಲ 1
41. ಬಸವಪುರಾಣಮು, p. 34 ಆಶ್ವಾಸ 1

42. ಪ್ರಬುದ್ಧ ಕರ್ಣಾಟಕ, ಸಂಪುಟ 55, ಸಂಚಿಕೆ 2, pp. 102 - 103
43. ಬಸವಪುರಾಣಮು, p. 28 ಆಶ್ವಾಸ 1
44. ಶಂಕರಾರಾಧ್ಯರ ಬಸವಪುರಾಣ No. 2498, K.U. ವಚನ ಸಂಶೋಧನ ವಿಭಾಗ ತಾಳಪತ್ರ ಸಂಖ್ಯೆ 22, ಶ್ಲೋ. ಸಂ. 56 ಮತ್ತು 57
45. ಬಸವಪುರಾಣಮು, p. 52 ಆಶ್ವಾಸ 1
46. ವಚನಸಂಗ್ರಹ by ಭೂಸನೂರುಮಠ Pp. 360–61.
47. ಬಸವಪುರಾಣಮು, p. 37 ಆಶ್ವಾಸ 1
48. ಬಸವಪುರಾಣಮು, p. 39 ಆಶ್ವಾಸ 1
49. ಬಸವರಾಜದೇವರ ರಗಳೆ, p. 9 ಸ್ಥಲ 2
50. ಬಸವಪುರಾಣಮು, p. 40 ಆಶ್ವಾಸ 1
51. ಬಸವಪುರಾಣಮು, p. 41 ಆಶ್ವಾಸ 1
52. ಬಸವಪುರಾಣಮು, p. 60 ಆಶ್ವಾಸ 2
53. ಬಸವರಾಜದೇವರ ರಗಳೆ, p. 11 ಸ್ಥಲ 2
54. ಬಸವರಾಜದೇವರ ರಗಳೆ, p. 21 ಸ್ಥಲ 4
55. ಬಸವರಾಜದೇವರ ರಗಳೆ, p. 28 ಸ್ಥಲ 5
56. ಬಸವರಾಜದೇವರ ರಗಳೆ, p. 61 ಸ್ಥಲ 9
57. ಬಸವರಾಜದೇವರ ರಗಳೆ, p. 70, 71 ಸ್ಥಲ
58. ಬಸವಪುರಾಣಮು, p. 345 ಆಶ್ವಾಸ 5
59. ಬಸವರಾಜದೇವರ ರಗಳೆ, p. 74, 75
60. ರಾಘವಾಂಕಚಾರಿತ್ರ, p. 255, ಸಂ. 14, ಪ. 120

ಗೃಹಿಣಿ

ಎಚ್. ಎಚ್. ಗಂಗಾಧರಾಚಾರ್

ಅಲೆಯೆದ್ದು ಪಡಕ್ಕಪ್ಪಳಿಸಿ ಮರೆಯಾಗುವಂಥ ಬದುಕು
ಸವೆಸುತ್ತಿದ್ದರೂ, ಇವಳ ಆಸೆಯ ಕುಡಿಕೆ ಬರಿದಾಗುವುದಿಲ್ಲ
ಸಲ್ಲಿಸುವ ಬೇಡಿಕೆಗಳ ಪಟ್ಟಿ ಕಿರಿದಾಗುವುದಿಲ್ಲ
ಯೋಜನೆಗಳ ಯೋಜನ ದೂರ ಕುದುರೆ ಸವಾರಿ ನಿಲ್ಲವುದಿಲ್ಲ.
ಗಂಡು ಶಿಲೆಗೆ ನಿರ್ದಿಷ್ಟ ಆಕಾರ ಕೊಡುವ
ಜಡ್ಡುಗಟ್ಟಿದ ಮೆದುಳ ಮೂಲಕ ವಿದ್ಯುತ್ ಹರಿಸುವ
ಜನಜಂಗುಳಿಯ ನಿಷ್ಠುರ ರಣರಂಗಕ್ಕೆ ದಬ್ಬುವ
ಪ್ರಯೋಗದಲ್ಲಿ ಇವಳು ಸದಾ ನಿರತೆ.
ಸ್ವಂತ ಕಾರು-ಮಹಲುಗಳ ಕನಸು ಕಾಣುವುದರಲ್ಲಿ,
ಮಕ್ಕಳ ರಂಬಾಟದಲ್ಲೇ ಹೊಸ ಜಗತ್ತು ಸೃಷ್ಟಿಸುವುದರಲ್ಲಿ,
ಗಂಡನ ಆಯಾಸಕ್ಕೆ ತಂಪು ಪಾನೀಯವಾಗುವುದರಲ್ಲಿ
ಎಂದೂ ಬತ್ತದ ಉತ್ಸಾಹದ ಒರತೆ.
ಬಂಗಾರದುಂಗುರ, ಎರಡೆಳೆ ಸರ, ಓಲೆ–ಝುಮಕಿಗಳ ತೊಟ್ಟು
ಸಡಗರದ ರೆಕ್ಕೆ ಸಿಕ್ಕಿಸಿಕೊಂಡು ಹಾರಾಡುತ್ತ,
ಹಂಡೆ, ಕೊಳಗ, ಸ್ಟೀಲ್ ಪಾತ್ರೆಗಳ ಶಬ್ದದಲ್ಲಿ ಸಮರಸವಾಗುತ್ತ,
ಚಿಟ್ಟೆ ಬಣ್ಣದ ಸೀರೆ ರವಕೆಗಳಲ್ಲಿ ಬೆತ್ತಲೆಯ ಬೆಲೆ ಹೆಚ್ಚಿಸಿಕೊಳ್ಳುತ್ತ,
ಬದುಕಿಸುವದ್ದಕ್ಕೂ ಬೆಳೆದು ನಿಲ್ಲುತ್ತಾಳೆ.
ಬದುಕಿನ ಕತ್ತಲೆಯ ಕಂದಕಗಳಲ್ಲೆಲ್ಲಾ
ಆಶಾವಾದದ ಹಣತೆ ಹಚ್ಚಿ,
ಇರುಳು ಜಿನುಗುವ ಗಂಡನಿಗೆ
ಸೆರಗು ಹಾಸುವ ಭೂಮಿಯಾಗಿ
ಸುವ್ವಾಲಿ ಹಾಡಿ, ಕ್ಷಣ ಮೃಗವಾಗಿದ್ದವನ
ಮಗುವಾಗಿಸುತ್ತಾಳೆ.
ಕ್ರಾಂತಿ, ಅಸ್ತಿತ್ವ, ಬದುಕಿನ ನಿರರ್ಥಕತೆಗಳ ಬಗ್ಗೆ
ಎಳ್ಳಷ್ಟೂ ತಲೆಕೆಡಿಸಿಕೊಳ್ಳದ ಇವಳು
ನಸುಕಿನಲ್ಲೇ ಎದ್ದು, ಕಸಬರಿಗೆ ಹಿಡಿದರೆ
ದಿನಚರಿಯ ಚಕ್ರ ತಿರುಗತೊಡಗುತ್ತೆ ;
ಋತುಗಳು ಸರಿಯ ತೊಡಗುತ್ತವೆ.

ಅಶೋಕ ಮತ್ತು ಅಕ್ಬರ್

ಮೂಲ : **ಆರ್ನಾಲ್ಡ್ ಟಾಯ್ನ್‌ಬೀ**
ಅನು : **ಎಚ್. ರೇವಣಸಿದ್ಧಪ್ಪ**

ಅಶೋಕನು ತನ್ನ ಪ್ರಭುತ್ವವನ್ನು ನಡೆಸುವುದರಲ್ಲಿ ಆತ್ಮಸಾಕ್ಷಿಯನ್ನು ಅನುಸರಿಸಿದ್ದಕ್ಕಾಗಿ ಸ್ಮರಿಸಲ್ಪಡುತ್ತಾನೆ. ನಮ್ಮ ಪೀಳಿಗೆಯಲ್ಲಿ ಉಪಯುಕ್ತ ವೆನಿಸಿರುವ, ಯುದ್ಧನಿವಾರಣಾ ನೀತಿಯನ್ನು ಅಣುಯುಗದ ಪೂರ್ವದಲ್ಲಿದ್ದ ಅಶೋಕನಿಗೆ ಅಗತ್ಯವಿಲ್ಲದಿದ್ದರೂ ಅದನ್ನು ತನ್ನ ರಾಷ್ಟ್ರೀಯತತ್ತ್ವವನ್ನಾಗಿ ಅನುಷ್ಠಾನಕ್ಕೆ ತಂದದ್ದು ಹೆಚ್ಚು ಗಮನಾರ್ಹ. ಆಗಿನ ಕಾಲದ ಅತ್ಯಂತ ಭಯಾನಕ ಶಸ್ತ್ರಗಳನ್ನು ಬಳಸಿದ್ದರೂ ತನ್ನ ಜನರ ಮತ್ತು ಮಾನವಕುಲದ ಸರ್ವನಾಶವಾಗುವ ಭಯ ಅಶೋಕನಿಗೆ ಇರಲಿಲ್ಲ. ಅಶೋಕನು ಕಳಿಂಗ ಯುದ್ಧವನ್ನು ಮುಂದುವರಿಸಿ ಭಾರತದ ತುದಿಯಲ್ಲಿರುವ ಸಿಂಹಳ ದ್ವೀಪವನ್ನು ಜಯಿಸಿ ಪ್ರಾಪಂಚಿಕ ಸುಖಗಳನ್ನು ಅನುಭವಿಸಲು ಯಾವ ಆತಂಕವೂ ಇರಲಿಲ್ಲ. ಸಾಮಾನ್ಯವಾಗಿ ಅರಸರು ರಾಜ್ಯದ ಗಡಿಗಳನ್ನು ಪ್ರಾಕೃತಿಕ ಸೀಮೆಗಳವರೆಗೆ ವಿಸ್ತರಿಸುವ ಆಕಾಂಕ್ಷೆಯುಳ್ಳವರಾಗಿರುತ್ತಾರೆ. ಈ ದಿಸೆಯಲ್ಲಿ ಅಶೋಕನು ಶಾಂತಿ ಸ್ಥಾಪಿಸುವ ಸದುದ್ದೇಶದಿಂದ ಯುದ್ಧವನ್ನು ಕೈಗೊಂಡು, ರಾಜಕೀಯ ಐಕ್ಯತೆಯನ್ನು ಭಾರತೀಯ ಉಪಖಂಡದಲ್ಲಿ ಸ್ಥಾಪಿಸಬಹುದಾಗಿತ್ತು. ಈ ರೀತಿಯ ಸಾಂಪ್ರದಾಯಿಕ ವಿಚಾರಸರಣಿಯನ್ನು ಹೊಂದಿ ಕಾರ್ಯನಿರ್ವಹಿಸುವ ಬದಲು, ನಮಗೆ ತಿಳಿದಹಾಗೆ ಅಶೋಕನು ಬೇರೊಂದು ಕಾರಣದಿಂದ ಪರಿವರ್ತನೆಗೊಂಡನು. ಅತಿಕ್ರಮಣದ ಕಳಿಂಗ ಯುದ್ಧದಲ್ಲಿ ಉಂಟಾದ ಭೀಕರ ಕ್ರೌರ್ಯದಿಂದ ಅವನಲ್ಲಿ ನೈತಿಕ ಆಂದೋಳನ ಉಂಟಾಗಿ ಜೀವನದ ಕೊನೆಯವರೆಗೂ ಅವನಲ್ಲಿ ಪರಿವರ್ತನೆ ಉಂಟಾಯಿತು. ಈ ಅತಿಕ್ರಮಣದ ದುರುದ್ದೇಶ ಮತ್ತು ಅದರಿಂದಾದ ಸಾವು ನೋವುಗಳನ್ನು ಕಂಡು ಭೀತಿಗೊಂಡನು. ಭ್ರಾತೃತ್ವದ ಭಾವನೆಯ ವಿರುದ್ಧವಾಗಿ ಪಾಪಮಾಡಿದವನಂತೆ ತನ್ನ ಆತ್ಮಸಾಕ್ಷಿಯ ಮುಂದೆ ತಾನೇ ಅಪರಾಧಿಯಾಗಿ ನಿಂತನು. ತನ್ನ ವಂಶ ಅಲ್ಲದೇ ಇತರ ವಂಶಗಳ ರಾಜನೀತಿಯಲ್ಲಿ ಸಂಪೂರ್ಣ ಬದಲಾವಣೆಯನ್ನು ಉಂಟು ಮಾಡಿದನು.

ಮೌರ್ಯರು ಯುದ್ಧದ ಮೂಲಕ ಸಾಮ್ರಾಜ್ಯ ವಿಸ್ತರಣೆ ಮಾಡುವುದು ವಿಶಿಷ್ಟವೇನಾಗಿರಲಿಲ್ಲ. ಇದು ಪ್ರಪಂಚದಲ್ಲಿ ಪ್ರಬಲರಾದ ಎಲ್ಲ ರಾಜರಲ್ಲೂ

ಸಾಮಾನ್ಯವಾಗಿತ್ತು. ಈ ಪರಂಪರೆಯನ್ನು ಅಶೋಕನು ಮುರಿದದ್ದು ಗಮನಾರ್ಹ ವಾಗಿದೆ.

ಅಶೋಕನ ಅಜ್ಜನಾದ ಚಂದ್ರಗುಪ್ತನಿಗೆ ಅಲೆಗ್ಸಾಂಡರನ ಕೆಟ್ಟ ಉದಾಹರಣೆ, ಅಲೆಗ್ಸಾಂಡರನಿಗೆ ಸೈರಸ್‌ನ ಅವರನ್ನು ಕೆರಳಿಸಿತು. ಕ್ರಿ.ಪೂ. 3000ದಲ್ಲಿ ಈಜಿಪ್ಟ್ ಮತ್ತು ಸುಮೇರಿಯನ್ ಸಾಮ್ರಾಜ್ಯಶಾಹಿಗಳ ಕರ್ಮದ ಸರಣಿಯನ್ನು ಉದಾಹರಿಸ ಬಹುದು. ಅಶೋಕನು ಈ ತನ್ನ ಪೂರ್ವಜರ ವಿರುದ್ಧವಾಗಿ ತನ್ನ ಉಳಿದ ಕಾಲ ಮತ್ತು ಪ್ರಭುತ್ವವನ್ನು, ಸಹೋದರತೆಯನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿದನು.

ಅಶೋಕನು ಯುದ್ಧವನ್ನು ತ್ಯಜಿಸುವುದರಲ್ಲಿ ಮಾನವ ಜನಾಂಗವನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ಕೈಬಿಡಲಿಲ್ಲ. ಯುದ್ಧತಂತ್ರದ ಬದಲಿಗೆ ಧರ್ಮ ಸಂಘಗಳನ್ನು ಸ್ಥಾಪಿಸಿ ತನ್ನ ಕಾರ್ಯವನ್ನು ಮುಂದುವರಿಸಿದನು. ಅವನು ತನ್ನ ರಾಜ್ಯದ ಪಶ್ಚಿಮ ಭಾಗದಲ್ಲಿ ಆಳುತ್ತಿದ್ದ ಅಲೆಗ್ಸಾಂಡರನ ಉತ್ತರಾಧಿ ಕಾರಿಗಳು ರಾಜ್ಯದಲ್ಲಿಯಾಗಲಿ, ಸಿಲೋನ್ ದ್ವೀಪದಲ್ಲಿಯಾಗಲಿ ಅವನು ಹಸ್ತಕ್ಷೇಪ ಮಾಡಲಿಲ್ಲ.

ಅಶೋಕನು ತನ್ನ ಸಾಮ್ರಾಜ್ಯದ ಹೊರದೇಶಗಳಿಗೆ ಬೌದ್ಧಧರ್ಮದ ತತ್ತ್ವ ಮತ್ತು ಆಚರಣೆಯನ್ನು ಹರಡುವ ಮೂಲಕ ತನ್ನ ಸಾಮ್ರಾಜ್ಯದ ಗಡಿಪ್ರದೇಶ ವನ್ನು ದಾಟಿ ಹೊರಗಿನ ದೇಶಗಳಿಗೆ ಪ್ರವೇಶಿಸಿದ. ಈ ಧರ್ಮ ಪ್ರಚಾರಕ್ಕೆ ಜನರು ವಾಸಮಾಡುವ ಗಡಿಪ್ರದೇಶಗಳ ಹೊರತಾಗಿ, ರಾಷ್ಟ್ರೀಯ ಗಡಿಯ ಪರಿವೆ ಅವನಿಗಿರಲಿಲ್ಲ. ಇಂದು ಬೌದ್ಧಧರ್ಮವನ್ನು ಪೂರ್ವ ಏಷ್ಯಾದಲ್ಲೆಲ್ಲಾ ಅಂಗೀಕರಿಸಿ ದ್ದಾರೆ. ಆಧ್ಯಾತ್ಮಿಕ ಭ್ರಾತೃತ್ವವು ಬೌದ್ಧ ಧರ್ಮದಲ್ಲಿ ಏಕತೆಯನ್ನು ಮೂಡಿಸುವ ಪ್ರಪಂಚದ ಒಂದು ಮಹಾ ಶಕ್ತಿಯಾಗಿದೆ.

ಭಾರತದ ಪ್ರಮುಖ ಎರಡು ಬೌದ್ಧ ಯಾತ್ರಾಸ್ಥಳಗಳಾದ ಸಾರನಾಥ ಮತ್ತು ಬೌದ್ಧ ಗಯಾಗಳಿಗೆ ನಾನು ಭೇಟಿ ಕೊಟ್ಟಾಗ ನನಗೆ ಬೌದ್ಧಧರ್ಮವು ಭ್ರಾತೃತ್ವದ ಆಧಾರದಮೇಲೆ ಪ್ರಬಲವಾಗಿ ಬೆಳೆಯುತ್ತಿರುವಂತೆ ತೋರಿತು.

ಬೌದ್ಧಧರ್ಮದ ಸರ್ವವ್ಯಾಪಕತೆ ಮತ್ತು ಪ್ರಬಲತೆಗೆ ಅನೇಕ ಕಾರಣ ಗಳನ್ನು ಕೊಡಬಹುದು. ಆದರೆ ಕ್ರಿ. ಪೂ. 3ನೆಯ ಶತಮಾನದಲ್ಲಿ ಅಶೋಕನಲ್ಲಿ ಉಂಟಾದ ಹೃದಯ ಪರಿವರ್ತನೆ ಮತ್ತು ಆ ಅನುಭವದ ಕಾರ್ಯಾಚರಣೆ—ಇವು ಅವುಗಳಲ್ಲಿ ಅತ್ಯಂತ ಪ್ರಬಲವಾದವು.

ಅಶೋಕನ ಕಾರ್ಯಾಚರಣೆಗಳು ಭಾರತದಲ್ಲಿ ಮಾನವೀಯ ಸಹೋದರತ್ವಕ್ಕೆ ಮಾತ್ರ ಸೀಮಿತಗೊಂಡಿರಲಿಲ್ಲ—ಎಂದು ತೋರುತ್ತದೆ. ನನ್ನ ಅಭಿಪ್ರಾಯ ಸರಿ

ಯಾದಲ್ಲಿ ಅಶೋಕನು ಬೇಟೆಯನ್ನು ನಿಷೇಧಿಸಿ, ತನ್ನ ಆಸ್ಥಾನಿಕರನ್ನು ಸಸ್ಯಾಹಾರಿಗಳನ್ನಾಗಿ ಪರಿವರ್ತಿಸಿ, ವರ್ಷದಲ್ಲಿ ಐವತ್ತಾರು ದಿನಗಳಲ್ಲಿ ಪ್ರಾಣಿವಧೆಯು ಕಾನೂನು ಬಾಹಿರವೆಂದು ಘೋಷಿಸಿದನು.

ಈ ವಿಶಾಲ ಭಾವನೆಯ ಪರಂಪರೆಯ ಪ್ರಾಬಲ್ಯ ಅಶೋಕನ ನಂತರ 1800 ವರ್ಷಗಳ ಮೇಲೂ ಮೂರು ವಿಧಾನಗಳನ್ನು ಸೂಚಿಸುವ ಪ್ರಾಣಿವರ್ಗದ ಭ್ರಾತೃತ್ವವನ್ನು ಗಣನೆಗೆ ತಂದುಕೊಂಡು ಅಕ್ಬರ್ ಚಕ್ರವರ್ತಿಯು ಅದೇ ರೀತಿಯ ಕಾನೂನನ್ನು ಜಾರಿಗೆ ತಂದನು.

ಈ ವಿಧಾನಗಳನ್ನು ಅನುಸರಿಸಲು ಅಕ್ಬರನನ್ನು ಪರಿವರ್ತಿಸಿದ ಭಾರತದ ಧಾರ್ಮಿಕ ಪ್ರಭಾವಗಳು ಬೌದ್ಧಧರ್ಮದವರಿಂದ ಬರದೆ ಜೈನರೊಬ್ಬರಿಂದ ಬಂದಂತೆ ಕಾಣುತ್ತದೆ. ಆದಾಗ್ಯೂ ಅದು ಭಾರತೀಯ ಪ್ರಭಾವವಾಗಿತ್ತು. (ಬೌದ್ಧಧರ್ಮವು ಅಕ್ಬರನಿಗಿಂತ 400 ವರ್ಷಗಳ ಮೊದಲೇ ಭಾರತದಲ್ಲಿ ತನ್ನ ಪ್ರಭಾವವನ್ನು ಕಳೆದುಕೊಂಡಿತ್ತು.)

ಅಕ್ಬರನ ಚೈತನ್ಯವು—(ಅವನ ಭಾರತೀಯ ಜೀವನದ ಅವಧಿಯಲ್ಲಿ), ವಿದೇಶಿಯರು ತನ್ನ ಪರಿಧಿಯೊಳಗೆ ಬಂದಾಗ ಅವರನ್ನು ಆಕರ್ಷಿಸುವ ಭಾರತೀಯ ಆಧ್ಯಾತ್ಮಿಕ ಪರಂಪರೆಯ ಶಕ್ತಿಯ—ಮನೋಜ್ಞವಾದ ಉದಾಹರಣೆಯಾಗಿದೆ. ತೈಮೂರನ ತಾತ್ಕಾಲಿಕವಾದ ದಾಳಿಯನ್ನು ಬಿಟ್ಟರೆ ಅಕ್ಬರನ ಪೂರ್ವಿಕರು, ಅವನ ಅಜ್ಜನಾದ ಬಾಬರನವರೆಗೆ, ಭಾರತದಲ್ಲಿ ಕಾಲಿಟ್ಟಿರಲಿಲ್ಲ. ಬಾಬರನೂ ಭಾರತವನ್ನು ತನ್ನ ದೇಶವನ್ನಾಗಿ ಕಾಣಲು ಆಸೆಪಟ್ಟು ತನ್ನ ಜೀವಿತದ ಹೆಚ್ಚು ಕಾಲವನ್ನು ಖೈಬರ್ ಕಣಿವೆಯ ಪಶ್ಚಿಮದಲ್ಲಿಯೇ ಕಳೆದನು.

ಬಾಬರನ ಮೊಮ್ಮಗನಾದ ಅಕ್ಬರನಮಟ್ಟಿಗೆ ಹೇಳುವುದಾದರೆ ಅವನು ಮುಸ್ಲಿಮನಾಗಿ ಬೆಳಸಲ್ಪಟ್ಟನು. ಇಸ್ಲಾಂ ಧರ್ಮವನ್ನು ಭಾರತೀಯ ಧರ್ಮತತ್ತ್ವಗಳೊಂದಿಗೆ ಹೋಲಿಸಿದಾಗ ವಿಭಿನ್ನ ಭಾವನೆಯ ಮತ್ತು ಅಸಹಿಷ್ಣುತೆಯಿಂದ ಕೂಡಿದೆ. ಆದಾಗ್ಯೂ ಭಾರತೀಯ ಪ್ರಭಾವದಲ್ಲಿ ಅಕ್ಬರನು ತನ್ನದೇ ಆದ ಧರ್ಮವನ್ನು ರೂಪಿಸಿಕೊಳ್ಳುವ ಮಟ್ಟಕ್ಕೆ ಹೋದನು. ಅಕ್ಬರನ "ದೈವಧರ್ಮ"ವು (ದೀನ್ಇಲಾಹಿ) ಭಾರತೀಯ ವಿಶಾಲ ಹೃದಯದ ಸಹಿಷ್ಣುತೆಯ ನಿದರ್ಶನವಾಗಿದೆ.

ಅಶೋಕನಂತೆ ಅಕ್ಬರನು ಪ್ರಾಣಿಗಳ ಯುದ್ಧವನ್ನು ತ್ಯಜಿಸಿದಾಗ್ಯೂ ಅಶೋಕನು ಮಾನವರಮೇಲೆ ಯುದ್ಧ ಮಾಡುವುದನ್ನು ತ್ಯಜಿಸಿದಂತೆ ಅಕ್ಬರನು ತ್ಯಜಿಸಲಿಲ್ಲ. ವಾಸ್ತವಿಕತೆಯ ದೃಷ್ಟಿಯಿಂದ ಇದು ಅಶೋಕನಿಗಿಂತಲೂ ಅಕ್ಬರನಿಗೆ ಕಷ್ಟಕರವಾಗಿತ್ತು.

ಅಶೋಕನು ವಿಸ್ತಾರವಾದ ಮತ್ತು ವ್ಯವಸ್ಥಿತವಾದ ಸಾಮ್ರಾಜ್ಯವನ್ನು ಹೊಂದಿದ್ದನು. ಅಕ್ಬರನು ತನ್ನ ಅಜ್ಜನು ಗೆದ್ದುಕೊಂಡ ಮತ್ತು ತನ್ನ ತಂದೆ ಕಳೆದುಕೊಂಡ ರಾಜ್ಯವನ್ನು ಮತ್ತೊಮ್ಮೆ ಸ್ಥಾಪಿಸಬೇಕಾಗಿತ್ತು. ಮಾನವರಮೇಲೆ ಯುದ್ಧ ಮಾಡುವುದನ್ನು ತ್ಯಜಿಸುವುದರಿಂದ ಅಕ್ಬರನು ತನ್ನ ಸಾಮ್ರಾಜ್ಯವನ್ನು, ತನ್ನ ಜೀವವನ್ನು ಪಣವಿಡಬೇಕಾಗಿತ್ತು. ಆದರೂ ಅಕ್ಬರನ ಜನನದ ಸಮಯದಲ್ಲಿ ಅಶೋಕನೇ ಹುಟ್ಟಿದ್ದರೆ ಅಶೋಕನು ಮೊದಲು ಮಾಡಿದಂತೆಯೇ ಈಗಲೂ ಮಾಡುತ್ತಿದ್ದನೆಂದು ಭಾವಿಸಬಹುದು.

ಇಂದಿನ ಅಣುಯುಗದಲ್ಲಿ ರಾಜನೀತಿಜ್ಞರು ಅನುಸರಿಸಬೇಕಾದ ತತ್ತ್ವವು ಖಂಡಿತವಾಗಿಯೂ ಅಶೋಕನ ತತ್ತ್ವವೇ ಆಗಿದೆ. ನಾವು ಐಕ್ಯತೆಯನ್ನು ಬಿಟ್ಟು ಇರಲಾರೆವು. ಅನಿವಾರ್ಯವಾದ ಈ ಗುರಿಯನ್ನು ಮುಟ್ಟಲು ನಾವು ಶಕ್ತಿ ಪ್ರದರ್ಶನ ಮಾಡಲಿಕ್ಕಾಗದು. ಮಾನವತೆಯನ್ನು ಒಂದುಗೂಡಿಸಲು ನಾವು ಬಳಸಬಹುದಾದ ವಿಧಾನ ಪರಿವರ್ತನೆಯೇ ಹೊರತು ಶಕ್ತಿ ಪ್ರದರ್ಶನವಲ್ಲ.

ಈಗಿನ ಅಣು ಯುಗದಲ್ಲಿ ಶಕ್ತಿಯ ಬಳಕೆಯು ನಮ್ಮ ಐಕ್ಯತೆಯಲ್ಲಿ ಕೊನೆಗಾಣದೆ ನಮ್ಮ ಸರ್ವ ನಾಶದಲ್ಲಿ ಪರಿಣಮಿಸುತ್ತದೆ. ಅಶೋಕನು ತನ್ನ ಧೋರಣೆಯನ್ನು ಕೇವಲ ತನ್ನ ಆತ್ಮಸಾಕ್ಷಿಯಿಂದ ಸ್ಫೂರ್ತಿ ಪಡೆದಂತೆ ನಮಗೆ ಈ ಯುಗದಲ್ಲಿ ಭಯ ಮತ್ತು ಆತ್ಮಸಾಕ್ಷಿ ಆಜ್ಞಾಪಿಸುತ್ತಿವೆ.

ಹಿಂದಿಯ ಪ್ರೇಮಾಖ್ಯಾನವೊಂದರಲ್ಲಿ ಹೊಯ್ಸಳ ರಾಜಕುಮಾರ

ಮ. ಸು. ಕೃಷ್ಣಮೂರ್ತಿ

ಕನ್ನಡನಾಡಿನ ಸಂಸ್ಕೃತಿ ಹಾಗೂ ಪರಂಪರೆಯ ಸಂಯಕ್ ಇತಿಹಾಸವನ್ನು ನಿರ್ಮಿಸಬೇಕಾದರೆ ಬರಿಯ ಕರ್ನಾಟಕ ಇಲ್ಲವೇ ಕನ್ನಡ ಸಾಹಿತ್ಯದತ್ತ ಕಣ್ಣು ಹಾಯಿಸಿದರೆ ಸಾಲದು. ಪರಪ್ರಾಂತ ಹಾಗೂ ಸಾಹಿತ್ಯಕ್ಕೂನಾವು ಪ್ರಯಾಣ ಮಾಡಬೇಕಾಗುತ್ತದೆ. ಸಂಸ್ಕೃತ, ಪ್ರಾಕೃತ, ಅಪಭ್ರಂಶ ಹಾಗೂ ಆಧುನಿಕ ಭಾರತೀಯ ಭಾಷೆಗಳಲ್ಲಿ ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಲವಾರು ಪ್ರಸಂಗಗಳು ದೊರೆಯುತ್ತವೆ. ಸಂಸ್ಕೃತ ಮತ್ತು ಪ್ರಾಕೃತಗಳ ಸಾಮಗ್ರಿಗಳ ಮೇಲೆ ವಿದ್ವಾಂಸರು ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಆದರೆ ಅಪಭ್ರಂಶ ಹಾಗೂ ಇತರ ಆಧುನಿಕ ಆರ್ಯಭಾಷಾ ಸಾಹಿತ್ಯಗಳತ್ತ ವಿದ್ವಾಂಸರ ದೃಷ್ಟಿ ಅಷ್ಟಾಗಿ ಹರಿದಿಲ್ಲ. ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಅಜ್ಞಾತ ಸಂಗತಿಗಳು ಹಿಂದಿಯಲ್ಲಿ ದೊರೆಯುತ್ತವೆ. ಕರ್ನಾಟಕ ಸಂಸ್ಕೃತಿ ಹಾಗೂ ಪರಂಪರೆಯ ರತ್ನದರ್ಪಣವಾಗಬಲ್ಲ ಒಂದು ಹಿಂದೀಕೃತಿ 'ಛಿತಾಯೀ ಚರಿತ' ಇಲ್ಲವೆ 'ಛೀತಾಯೀ ವಾರ್ತಾ'.

ಇದರ ಕಥೆ ಇಡೀ ಹಿಂದೀ ಪ್ರದೇಶದಲ್ಲಿ ಅತ್ಯಂತ ಜನಪ್ರಿಯವಾದುದು. ಆದ್ದರಿಂದಲೇ ಏನೋ ಈ ಕಥೆಯನ್ನು ತೆಗೆದುಕೊಂಡು ಅನೇಕರು ಕಾವ್ಯರಚನೆ ಮಾಡಿದ್ದಾರೆ. ಪ್ರಸ್ತುತ 'ಛಿತಾಯೀ ಚರಿತ' ಒಂದು ಪ್ರೇಮಾಖ್ಯಾನ. ಇದನ್ನು ಮೂವರು ಕವಿಗಳು ಬರೆದಿದ್ದಾರೆ. ಮೂಲತಃ ಇದನ್ನು ನಾರಾಯಣದಾಸ ಎಂಬ ಕವಿ ಬರೆದ. ಅನಂತರ 'ರತನರಂಗ' ಎಂಬ ಕವಿ ಅದಕ್ಕೆ ಇನ್ನೂ ಕೆಲವು ಅಂಶಗಳನ್ನು ಬರೆದು ಸೇರಿಸಿದ. ಕೊನೆಗೆ ದೇವಚಂದ್ರ ಎಂಬ ಕವಿ ಅದನ್ನು ತಿದ್ದಿ ಬೆಳೆಸಿದ.

ನಾರಾಯಣದಾಸನ ಮೂಲಕೃತಿ ಇಂದು ನಮಗೆ ದೊರೆಯುವುದಿಲ್ಲ. ಈ ನಾರಾಯಣದಾಸ ಗ್ವಾಲಿಯರ್‌ನ ರಾಜ ವೀರಸಿಂಹನ ಆಸ್ಥಾನಕವಿ ವಿಷ್ಣುದಾಸನ ಮಗ. ಈ ವಿಷ್ಣುದಾಸ ಹಿಂದಿಯಲ್ಲಿ 'ಮಹಾಭಾರತ'ವನ್ನು ಬರೆದಿದ್ದಾನೆ. ನಾರಾಯಣದಾಸ ಈ ಕಾವ್ಯವನ್ನು ವಿಕ್ರಮೀಸಂವತ್ 1583 (ಕ್ರಿ. ಶ. 1526) ರಲ್ಲಿ ಸಾರಂಗಪುರದ ವಿಷ್ಣುದೇವಾಲಯದಲ್ಲಿ ಓದಿ ಹೇಳಿದನಂತೆ.

ಮುಂದೆ ಬಂದ ರತನರಂಗ್ ನಾರಾಯಣದಾಸನಿಗೆ ದೂರದವನೇನೂ ಅಲ್ಲ. ಆವನು ಈತನ ಸಾಕ್ಷಾತ್ ಶಿಷ್ಯ. ನಾರಾಯಣದಾಸ ಕಥೆಯ ಉಪಸಂಹಾರವನ್ನು ಬರೆದಿರಲಿಲ್ಲ. ಅದನ್ನು ರತನರಂಗ್ ಬರೆದ. ಆದರೆ ರತನರಂಗ್ ಅಂಥ ಪ್ರತಿಭಾ ಸಂಪನ್ನ ಕವಿಯಲ್ಲ. ಆದ್ದರಿಂದ ಈ ಕಾವ್ಯಕ್ಕೆ ನೀಡಿದ ಆತನ ಅಂಶದಾನ ಅಷ್ಟೇನೂ ಮಹತ್ವದ್ದಲ್ಲ. ಅದರ ಕಾವ್ಯ ಗುಣವೂ ಅಷ್ಟಕ್ಕಷ್ಟೇ.

ಇವನ ತರುವಾಯ ಬಂದ ದೇಪಚಂದ್ರ ನಿಜಕ್ಕೂ ಪ್ರತಿಭಾಸಂಪನ್ನ. ಆತನ ಅಂಶದಾನ ಮಹತ್ವಪೂರ್ಣವಾದುದು ಹಾಗೂ ಆತನಿಗೆ ಹಿಂದಿಯ ಶ್ರೇಷ್ಠಕವಿಗಳ ಸಾಲಿನಲ್ಲಿ ಸ್ಥಾನ ನೀಡುವಂತಹುದು. ಈತ ಗ್ವಾಲಿಯರ್‌ನ ಮಂತ್ರಿಯ ಮನೆತನ ದವನು. ಇವನು ಸ್ವತಃ ಅನೇಕ ಯುದ್ಧಗಳನ್ನು ಕಣ್ಣಾರೆ ಕಂಡಿದ್ದ. ಆದ್ದರಿಂದ ಇವನು ಯುದ್ಧಗಳ ಅತ್ಯಂತ ರೋಮಹರ್ಷಕವೂ ಹಾಗೂ ಸಜೀವವೂ ಆದ ವರ್ಣನೆಯನ್ನೂ ಕೊಟ್ಟಿದ್ದಾನೆ. ಈತ ಹಿಂದಿಯ ಅತ್ಯಂತ ಹಿರಿಯ ಸೈನಿಕ ಕವಿ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಇದರ ರಚನಾಕಾಲದ ವಿಷಯವಾಗಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಡಾ॥ ಮಾತಾಪ್ರಸಾದ್ ಗುಪ್ತರು ನಾರಾಯಣ ದಾಸ ಕ್ರಿ. ಶ. 1443ರಲ್ಲಿ ಇದನ್ನು ಬರೆದನೆಂದು ಹೇಳಿದ್ದಾರೆ. ಹರಿಹರ ನಿವಾಸ ದ್ವಿವೇದಿಯವರು 1435-1480 ಎಂದು ನಿರ್ಧರಿಸಿದ್ದಾರೆ. ಇದರ ಭಾಷೆ ವ್ರಜಭಾಷೆ. ಪ್ರಧಾನತಃ ಇದು ಚೌಪಾಯಿ ಛಂದಸ್ಸಿನಲ್ಲಿ ರಚಿತವಾಗಿದೆ. ಇದೇ ಕಥೆಯನ್ನು ಆಧರಿಸಿ ಜಾನ್ ಎಂಬ ಮುಸಲ್ಮಾನ ಕವಿ 'ಕಥಾ ಛಿತಾಯೀ ಕೀ' ಎಂಬ ಕಾವ್ಯವನ್ನು ಬರೆದಿದ್ದಾನೆ. ಇದೇ ರೀತಿ ಇನ್ನೂ ಹಲವು ಕಾವ್ಯಗಳು ದೊರೆಯುತ್ತವೆ. ಆದರೆ 'ಛಿತಾಯೀ ಚರಿತ'ದ ಮುಂದೆ ಇವು ನಿಲ್ಲಲಾರವು. ಹಿಂದೀ ಸಾಹಿತ್ಯದಲ್ಲಿ 'ಛಿತಾಯೀ ಚರಿತ' ಕ್ಕಿರುವ ಮಹತ್ವವನ್ನು ಕುರಿತು ಶ್ರೀ ಹರಿಹರನಿವಾಸ ದ್ವಿವೇದಿಯವರು ಹೀಗೆ ಹೇಳುತ್ತಾರೆ :

"ಛಿತಾಯೀ ಚರಿತ ಹಿಂದಿಯ ಗೌರವಗ್ರಂಥ. ಹಿಂದಿಯ ಲೌಕಿಕ ಆಖ್ಯಾನ ಕಾವ್ಯಧಾರೆಯ ಶ್ರೇಷ್ಠಕೃತಿಯ ರೂಪದಲ್ಲಿ, ರಾಜಕೀಯ ಇತಿಹಾಸದ ಘಟನೆಗಳ ಕಥಾ ಬೀಜದ ಮೇಲೆ ಆಧರಿತವಾದ ಸರ್ವಪ್ರಥಮ ಪ್ರಾಮಾಣಿಕ ರಚನೆಯ ರೂಪದಲ್ಲಿ, ತನ್ನ ಯುಗದ ಸಾಂಸ್ಕೃತಿಕ ವೈಭವದ ಸಜೀವ ವಿವರಣೆ ನೀಡುವ ಏಕಮಾತ್ರಕೃತಿಯ ರೂಪದಲ್ಲಿ, ತತ್ಕಾಲೀನ ಸಾಮಾಜಿಕ ಆಕಾಂಕ್ಷೆಗಳು ಹಾಗೂ ಪರಿಸ್ಥಿತಿಗಳ ಪರಿಚಾರ್ಯದ ರೂಪದಲ್ಲಿ, ಜಾಯಸಿ ಹಾಗೂ ತುಳಸೀದಾಸರ ಪ್ರಬಂಧಕಾವ್ಯಗಳ ಪ್ರೇರಕ ಸ್ರೋತದ ರೂಪದಲ್ಲಿ, ಹಿಂದೀ ಭಾಷೆ ಮತ್ತು ಪ್ರಬಂಧ ಕಾವ್ಯಗಳ ರಚನಾ ಪ್ರಕಾರದ ಇತಿಹಾಸದ ಕೊಂಡಿಯಾಗಿ ಮತ್ತು ಎಲ್ಲಕ್ಕೂ ಮಿಗಿ ಲಾಗಿ ಉತ್ಕೃಷ್ಟ ಪ್ರಬಂಧಕಾವ್ಯದ ರೂಪದಲ್ಲಿ ಹಿಂದೀ ಸಾಹಿತ್ಯದಲ್ಲಿ ಛಿತಾಯಿ ಚರಿತಕ್ಕೆ ಅತ್ಯಂತ ಶ್ರೇಷ್ಠವಾದ ಸ್ಥಾನವಿದೆ. ಸುಮಾರು ಐನೂರು ವರ್ಷ ಹಿಂದೆ

ವಿರಚಿತವಾದ ಹಿಂದೀ ಪ್ರಬಂಧಕಾವ್ಯಗಳ ಮಣಿಮಾಲೆಯ ಈ ಅನುಪಮ ರತ್ನವನ್ನು ಅದರ ಸಮಸ್ತ ಕಾಂತಿಯೊಂದಿಗೆ ಪುನಃ ಸಾದರಪಡಿಸುವ ಅವಕಾಶ ಸೌಭಾಗ್ಯಪೂರ್ಣವೆಂದೇ ಭಾವಿಸಲಾಗುವುದು".[1]

ಅಲ್ಲಾವುದ್ದೀನನ ದಕ್ಷಿಣ ದಂಡಯಾತ್ರೆ ಹಾಗೂ ದೇವಗಿರಿಯ ಪತನದ ಕಥೆ ಹಿಂದಿಯ ಕವಿಗಳನ್ನು ಹೆಚ್ಚು ಆಕರ್ಷಿಸಿದೆ. ದೇವಗಿರಿಯ ಪತನವನ್ನು ಕುರಿತು ಹಿಂದಿಯಲ್ಲಿ ಕೊನೆಯ ಪಕ್ಷ ಮೂರು ಕಾವ್ಯಗಳು ದೊರೆಯುತ್ತವೆ. ಅವುಗಳಲ್ಲಿ 'ಛಿತಾಯೀ ಚರಿತ'ವೂ ಒಂದು. ಇದು ಕರ್ಣಾಟಕದ ಇತಿಹಾಸದ ವಿದ್ಯಾರ್ಥಿಗಳಿಗೆ ಒಂದು ಬಹು ಮುಖ್ಯವಾದ ಗ್ರಂಥ. ಇದರ ನಾಯಕ ಒಬ್ಬ ಹೊಯ್ಸಳ ರಾಜಕುಮಾರ. ಆತನ ಕಥೆಯ ಮೂಲಕ ಕನ್ನಡಿಗರ ಕಲಾ ನೈಪುಣ್ಯ ಹಾಗೂ ರಸಿಕತೆಯನ್ನು ಕವಿ ಇನ್ನಿಲ್ಲದಂತೆ ಚಿತ್ರಿಸಿದ್ದಾನೆ. ಇದೊಂದು ಯುದ್ಧ ಹಾಗೂ ಸಂಗೀತ ಪ್ರಧಾನ ಕಾವ್ಯ. ಇದರ ಕಥೆ ಸಂಕ್ಷೇಪದಲ್ಲಿ ಹೀಗಿದೆ:

ರಾಜಾರಾಮದೇವ ದಕ್ಷಿಣ ದೇಶದ ಪರಾಕ್ರಮಿ ವೀರ. ಆತನ ರಾಜಧಾನಿ ದೇವಗಿರಿ. ಆತನ ಬಳಿ ಅಮಿತವಾದ ಅಶ್ವದಳ, ಗಜದಳಗಳಿದ್ದವು, ಅಪಾರ ಧನ ಸಂಪತ್ತಿಯಿತ್ತು: ಆತನ ಪಟ್ಟ ರಾಣಿ ರೇಖಾಮತಿ. ಆಕೆ ಅತ್ಯಂತ ಸುಂದರಿ, ಸೀತೆಯಂಥ ಪತಿವ್ರತೆ.

ಅವಳ ಹೊಟ್ಟೆಯಲ್ಲಿ ಛಿತಾಯಿ ಜನಿಸಿದಳು. ಜ್ಯೋತಿಷಿಗಳನ್ನು ಕರೆಸಿ ಆಕೆಯ ಜಾತಕವನ್ನು ಬರೆಸಿದಾಗ ಆಕೆ ದಮಯಂತಿಯಂತೆ ವಿಖ್ಯಾತಳಾಗುವಳೆಂದೂ ಆದರೆ ಪೂರ್ಣ ಯೌವನದಲ್ಲಿ ಆಕೆಗೆ ವಿಯೋಗ ದುಃಖ ಉಂಟಾಗುವುದೆಂದೂ ನುಡಿದರು. ಜ್ಯೋತಿಷಿಗಳ ಮಾತಿನಿಂದ ನೊಂದು ಅರಸ ಗ್ರಹ ಶಾಂತಿ ಮಾಡಿಸಿದ. ಕನ್ಯೆ ದೊಡ್ಡವಳಾಗಿ ಬೆಳೆದಳು. ಅವಳ ಸೌಂದರ್ಯವೂ ಶುಕ್ಲಪಕ್ಷದ ಚಂದ್ರನಂತೆ ವರ್ಧಿಸತೊಡಗಿತು.

ರಾಜಾರಾಮದೇವ ಮಹಾ ವೀರನೂ ಅಲ್ಲದೆ, ಮಹಾ ರಸಿಕನೂ ಹೌದು. ಆತ ಹದಿನಾಲ್ಕು ವಿದ್ಯೆಗಳಲ್ಲೂ ಪಾರಂಗತ, ಷಡ್ದರ್ಶನ ಕೋವಿದ. ವಿದ್ಯಾವ್ಯಸನಿಯಾದ್ದರಿಂದ ಅನೇಕ ವಿದ್ವಾಂಸರಿಗೆ, ಕಲಾವಿದರಿಗೆ ಅವನು ಆಶ್ರಯವಿತ್ತಿದ್ದ. ಹೀಗಿರಲು ಒಮ್ಮೆ ಅವನ ಬಳಿಗೆ ತಲೆಯ ಮೇಲೆ ಜಟೆ ಕಟ್ಟಿಕೊಂಡು ಒಬ್ಬ ಜಂಗಮ ಬಂದ. ಅವನು ಒಳ್ಳೆಯ ಗಾಯಕ, ವಿರಕ್ತ. ಕೊರಳು ಬೆರಳುಗಳ ಅಪೂರ್ವ ಸಂಗಮ ಆ ಜಂಗಮನಲ್ಲಾಗಿತ್ತು. ವೀಣಾ ವಾದನದಲ್ಲಿ ಅವನು ಎತ್ತಿದ ಕೈ. ಅವನು ನೀರಿನಲ್ಲಿ ಕುಳಿತು ವೀಣೆ ಬಾರಿಸಿದನೆಂದರೆ ಅದರ ರಸಾಲ ಧ್ವನಿಯನ್ನು ಕೇಳಿ ಮೀನುಗಳೂ ಮಾರುಹೋಗುತ್ತಿದ್ದವು. ಅವನ ಗಾಯನ ವಾದನವನ್ನು ಕೇಳಿ

1 ಛಿತಾಯೀ ಚರಿತ–ನಿವೇದನ–ಪುಟ 1

ರಾಜ ಬೆರಗಾದ. ಅವನು ಜಂಗಮನನ್ನು ತನ್ನ ಮಹಲಿನೊಳಕ್ಕೆ ಕರೆದುಕೊಂಡು ಹೋದ. ಅಲ್ಲಿ ಅವನ ಕಲೆಯನ್ನು ರಾಜ ಮನಸಾರೆ ಕೊಂಡಾಡಿದ. ಅದನ್ನು ಕೇಳಿ ರಾಜ ಕಲಾಮರ್ಮಜ್ಞನೆಂದು ಜಂಗಮನಿಗೆ ಸಂತೋಷವಾಯಿತು. ಅವನು ವೀಣಾ ವಾದನವನ್ನು ಕೇಳಿ ರಾಜಾಸ್ಥಾನದ ಕಲಾವಿದರೆಲ್ಲ ಜಿಂಕೆಯಂತೆ ಮೈ ಮರೆತರು.

ರಾಜಕುಮಾರಿಗೆ ವೀಣೆಹೇಳಿಕೊಡುವಂತೆ ರಾಮದೇವ ಜಂಗಮನನ್ನು ಕೇಳಿ ಕೊಂಡ. ಜಂಗಮನ ಪಾಠವನ್ನು ರಾಜಕುಮಾರಿ ತಲ್ಲೀನಳಾಗಿ ಕುಳಿತು ಕೇಳಿ ಶ್ರದ್ಧೆ ಯಿಂದ ಕಲಿಯುತ್ತಿದ್ದಳು.

ರಾಮದೇವನ ಅತುಲ ಸಂಪತ್ತಿ ವೈಭವಗಳೇ ಅವನಿಗೆ ಮೃತ್ಯುವಾದವು. ಅವನ ಐಸಿರಿಯನ್ನು ಕೇಳಿ ದಿಲ್ಲಿಯ ಸುಲ್ತಾನ ಅಲ್ಲಾವುದ್ದೀನ ತನ್ನ ಸೇನಾಪತಿ ನುಸರತ್‌ಖಾನನನ್ನು ಒಂದು ದೊಡ್ಡ ಸೇನೆಯೊಡನೆ ದಕ್ಷಿಣದ ವಿಜಯ ಯಾತ್ರೆಗೆ ಕಳುಹಿಸಿದ. ಆ ಸೇನೆ ಹಾದಿಯಲ್ಲಿದ್ದ ರಾಜ್ಯಗಳನ್ನು ಕೊಳ್ಳೆ ಹೊಡೆದು ಗುಡಿಸಿ ಹಾಕಿತು. ಅಲ್ಲಿಯ ರಾಜರು ಸುಂದರ ನಾರಿಯರನ್ನು ಕಪ್ಪ ಕಾಣಿಕೆಗಳನ್ನು ಸಲ್ಲಿಸಿ ಬಿಡುಗಡೆ ಪಡೆಯುತ್ತಿದ್ದರು. ಜೊತೆಗೆ ತಮ್ಮ ಎಲ್ಲ ಸಂಪತ್ತು ಆನೆ ಕುದುರೆಗಳನ್ನು ಕೊಟ್ಟು ನುಸರತ್‌ಖಾನನ ಜೊತೆಗೂಡಿದಾಗ ಮಾತ್ರ ಅವರ ಪ್ರಾಣ ಉಳಿಯು ತ್ತಿತ್ತು. ಕೊನೆಗೆ ಆ ಸೇನೆ ದೇವಗಿರಿಯ ಬಳಿಗೆ ಬಂದು ಬೀಡು ಬಿಟ್ಟಿತು. ಅಲ್ಲಿ ನಿಂತು ಸೈನಿಕರು ಸುತ್ತಮುತ್ತಣ ಪ್ರದೇಶಗಳ ಮೇಲೆ ಧಾಳಿ ಮಾಡುತ್ತಿದ್ದರು. ರಾಜಧಾನಿಗಳಿಗೆ ಬೆಂಕಿ ಹಚ್ಚುತ್ತಿದ್ದರು. ಸಣ್ಣಪುಟ್ಟ ಹಳ್ಳಿಗಳಿಗೆ ಬೆಂಕಿ ಹಚ್ಚು ತ್ತಿದ್ದರು.

ತುರುಕ್ ಸೇನೆಯಿಂದ ಆಕ್ರಾಂತರಾದ ಜನ ರಾಮದೇವನ ಬಳಿಗೆ ಬಂದು ಮೊರೆಯಿಟ್ಟಿತು. ರಾಜ ತನ್ನ ಮಂತ್ರಿ ಮುಖಂಡರನ್ನು ಕರೆದು ಮಂತ್ರಾ ಲೋಚನೆ ನಡೆಸಿದ. ಮಂತ್ರಿಗಳು ಯುದ್ಧದಿಂದ ಪ್ರಯೋಜನವಿಲ್ಲವೆಂದೂ ಮುಸಲ್ಮಾನ ಸೇನೆ ಬಂದಿರುವುದು ಹಣಕ್ಕಾಗಿ ಹಾಗೂ ಹೆಣ್ಣಿಗಾಗಿ ಎಂದೂ ಆದ್ದರಿಂದ ಸಂಧಿ ಮಾಡಿಕೊಳ್ಳುವುದೇ ಉಚಿತವೆಂದೂ ತಿಳಿಸಿದರು. ಅದರಂತೆ ರಾಮದೇವ ಸುಲ್ತಾನನ ಸೇನಾಪತಿಯನ್ನು ಕಂಡ. ಅದರೊಂದಿಗೆ ಅವನು ಹತ್ತು ಕೋಟಿ ಸ್ವರ್ಣ ಮೊಹರುಗಳು ವಜ್ರ ವೈಡೂರ್ಯಗಳ ರಾಶಿಯೊಂದಿಗೆ ದಿಲ್ಲಿಗೆ ಹೋದ. ಅವನು ಅದೆಲ್ಲವನ್ನೂ ಜೊತೆಗೆ ತನ್ನ ಇಬ್ಬರು ದಾಸಿಯರನ್ನು ಸುಲ್ತಾನನಿಗೆ ಒಪ್ಪಿಸಿದ. ಇದರಿಂದ ಸುಪ್ರೀತನಾದ ಸುಲ್ತಾನ ರಾಜನನ್ನು ಅತ್ಯಂತ ಆದರದಿಂದ ಕಂಡ. ಅವನನ್ನು 'ಗೈರ್ ಮಹಲ್'ನಲ್ಲಿ ಇಳಿಸಿದ. ಅವರಿಬ್ಬರಲ್ಲಿ ಪರಸ್ಪರ ಅನ್ಯೋನ್ಯ ಹೆಚ್ಚಿತು. ಅವರು ತಮ್ಮ ಆಂತರಿಕ ವಿಷಯಗಳನ್ನೂ ಕೂಡ ಮರೆಮಾಚದೆ ಒಬ್ಬರಿಗೊಬ್ಬರು ಹೇಳಿ ಕೊಳ್ಳುತ್ತಿದ್ದರು. ರಾಮದೇವ ಛಂದಸ್ಸು,

ಗೀತ, ವಾದ್ಯ, ಅಭಿನಯ ಹಾಗೂ ವಿನೋದದಲ್ಲಿ ಕುಶಲ. ಸುಲ್ತಾನನನ್ನು ಈ ಎಲ್ಲ ಗುಣಗಳೂ ಮಾರುಗೊಂಡವು. ಈ ರೀತಿ ರಾಮದೇವ ದಿಲ್ಲಿಯಲ್ಲಿ ಮೂರು ವರ್ಷಗಳ ಕಾಲ ಇದ್ದ. ಸುಲ್ತಾನನ ಸ್ನೇಹ ಮನೆಯನ್ನು ಮರೆಯುವಂತೆ ಮಾಡಿತು.

ಎಷ್ಟು ದಿನಗಳಾದರೂ ರಾಜ ಮರಳದಿದ್ದುದನ್ನು ಕಂಡು ರಾಣಿ ರೇಖಾಮತಿ ಹೌಹಾರಿದಳು. ಅಷ್ಟು ಹೊತ್ತಿಗಾಗಲೇ ರಾಜಕುಮಾರಿ ಮದುವೆಗೆ ನಿಂತಿದ್ದಳು. ಅದರಿಂದ ಚಿಂತೆಗೊಂಡ ರಾಣಿ ಮಂತ್ರಿಯನ್ನು ಕರೆದು ಆಲೋಚನೆ ನಡೆಸಿ ರಾಜನಿಗೆ ಪತ್ರ ಬರೆಸಿದಳು. ಪತ್ರವಾಹಕರು ಶೀಘ್ರದಲ್ಲಿಯೇ ದಿಲ್ಲಿಯನ್ನು ಮುಟ್ಟಿ ರಾಜನಿಗೆ ಪತ್ರ ನೀಡಿ 'ಮಹಾರಾಣಿಯವರು ವಿರಹದಲ್ಲಿ ಅನ್ನ ನೀರನ್ನೂ ತೊರೆದಿರುವರೆಂದು' ಅರಿಕೆ ಮಾಡಿಕೊಂಡರು.

ಇದನ್ನು ಕೇಳಿ, ಓಲೆಯನ್ನು ಓದಿ ರಾಜನಿಗೆ ಮನೆಯ ನೆನಪು ಬಂದಿತು. ತನ್ನ ತಪ್ಪು ಅರಿವಾಯಿತು. ಅವನು ಸುಲ್ತಾನನಿಗೆ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು ಊರಿಗೆ ಮರಳಲು ಅನುಮತಿ ಬೇಡಲು ನಿಶ್ಚಯಿಸಿದ. ಆಗ ಮಂತ್ರಿ ಹೇಳಿದ: "ಮಹಾಸ್ವಾಮಿ, ರಾಜಕುಮಾರಿ ವಿವಾಹ ಯೋಗ್ಯಳಾಗಿರುವ ಮಾತನ್ನು ಸುಲ್ತಾನನಿಗೆ ಹೇಳಬೇಡಿ. ನೀವು ಕೊಟ್ಟ ಕುರೂಪಿ ದಾಸಿಯರನ್ನೇ ಅವನು ಅಪ್ಸರೆಯರೆಂದುಕೊಂಡಿದ್ದಾನೆ. ಅಂತಃಪುರದಲ್ಲಿ ಇನ್ನು ರಾಜಕುಮಾರಿಯ ಸುದ್ದಿ ಹೇಳಿದರೆ ಅವನು ನಿಮ್ಮನ್ನು ದಿಲ್ಲಿಯಿಂದ ಹೊರಕ್ಕೇ ಕಳುಹಿಸುವುದಿಲ್ಲ. ಮತ್ತೆ ಇಲ್ಲಿಂದ ತಪ್ಪಿಸಿಕೊಳ್ಳಬೇಕಾದರೆ ಛಿತಾಯಿಯನ್ನು ತಂದೊಪ್ಪಿಸಬೇಕಾಗುತ್ತದೆ."

ಆದರೆ ರಾಜನಿಗೆ ಮಂತ್ರಿಯ ಮಾತುಗಳು ಪಥ್ಯವಾಗಲಿಲ್ಲ. ಅವನು ಸುಲ್ತಾನನೊಂದಿಗೆ ಮುಚ್ಚುಮರೆ ಮಾಡುವುದು ತರವಲ್ಲವೆಂದು ತಿಳಿದು ವಸ್ತುಸ್ಥಿತಿಯೆಲ್ಲವನ್ನೂ ತಿಳಿಸಿದ. ಸುಲ್ತಾನ ಹರ್ಷದಿಂದ ಅವನಿಗೆ ದೇವಗಿರಿಗೆ ಹಿಂದಿರುಗಲು ಅನುಮತಿ ನೀಡಿದ ಮತ್ತು ತನ್ನ ಸ್ನೇಹದ ಕುರುಹಾಗಿ ಏನನ್ನಾದರೂ ಕಾಣಿಕೆ ನೀಡುವೆನೆಂದೂ, ತಿಳಿಸಬೇಕೆಂದೂ ಹೇಳಿದ. ಕೊನೆಗೆ ರಾಜ ತನ್ನ ರಾಜ್ಯಕ್ಕೆ ಒಬ್ಬ ಚಿತ್ರಕಾರನನ್ನು ಕಳಿಸಿಕೊಡುವಂತೆ ಕೇಳಿದ. ಅದರಂತೆ ಸುಲ್ತಾನ ಒಬ್ಬ ಚಿತ್ರಕಾರನನ್ನು ರಾಜನೊಡನೆ ಕಳಿಸಿದ. ಸ್ವಹಸ್ತದಿಂದ ರಾಜನಿಗೆ ಪೋಷಾಕು ತೊಡಿಸಿ ಆನೆ, ಕುದುರೆ, ಧನಕರುಗಳನ್ನಿತ್ತು, ಸತ್ಕರಿಸಿ ಕಳಿಸಿದ.

ಚಿತ್ರಕಾರನನ್ನು ಕೇಳಿದುದೂ ಮಂತ್ರಿಗೆ ಹಿಡಿಸಲಿಲ್ಲ. ಅವನ ವಿರೋಧವನ್ನು ರಾಜ ಕಿವಿಗೆ ಹಾಕಿಕೊಳ್ಳಲಿಲ್ಲ.

ರಾಜ ಸುರಕ್ಷಿತವಾಗಿ ಮರಳಿದುದನ್ನು ಕಂಡು ಜನ ಸಂತಸದಲ್ಲಿ ಮುಳುಗಿತು. ರಾಜ ಚಿತ್ರಕಾರನನ್ನು ಕರೆದು ಅರಮನೆಯ ಗೋಡೆಗಳ ಮೇಲೆ ಚಿತ್ರ ಬರೆಯು ವಂತೆ ಹೇಳಿದ. ಆದರೆ ಅವನು ಹೇಳಿದ 'ಹಳೆಯ ಗೋಡೆ ಹಾಗೂ ಮುದಿ ಶರೀರ ಇವುಗಳ ಮೇಲೆ ಬಣ್ಣ ಕಂಗೊಳಿಸದು.' ಅದರಂತೆ ರಾಜ ಹೊಸ ಭವನ ವೊಂದನ್ನೇ ನಿರ್ಮಾಣ ಮಾಡಿಸಿದ. ಚಿತ್ರಕಾರ ಅದರ ಗೋಡೆಗಳ ಮೇಲೆ ಚಿತ್ರ ಬರೆಯಲಾರಂಭಿಸಿದ. ಒಂದು ದಿನ ರಾಜಕುಮಾರಿ ಛಿತಾಯಿ ತನ್ನ ಸಖಿಯ ರೊಂದಿಗೆ ಚಿತ್ರಗಳನ್ನು ನೋಡಲು ಅಲ್ಲಿಗೆ ಬಂದಳು. ಅವಳ ಅಲೌಕಿಕ ಸೌಂದರ್ಯ ವನ್ನು ಕಂಡು ಚಿತ್ರಕಾರ ಮೂರ್ಛೆ ಹೋದ. ಅಂಥ ಚೆಲುವನ್ನು ಅವನು ಆದುವರೆಗೂ ಕಂಡಿರಲಿಲ್ಲ. ಅವನು ಅವಳ ಚಿತ್ರವನ್ನು ತದ್ವತ್ತಾಗಿ ಬರೆದು ಕೊಂಡ.

ಭವನ ನಿರ್ಮಾಣ, ಶೃಂಗಾರವೆಲ್ಲ ಮುಗಿದಮೇಲೆ ರಾಜ ತನ್ನ ಮಗಳಿಗೆ ಗಂಡು ಹುಡುಕಿಕೊಂಡು ಬರಲು ಬ್ರಾಹ್ಮಣರನ್ನು ಕಳಿಸಿದ. ಅವರು ದೇಶ ದೇಶ ಗಳನ್ನು ಸುತ್ತಿ ಕೊನೆಗೆ ದ್ವಾರಸಮುದ್ರದ ರಾಜ ಶ್ರೀಮನ್ನಾರಾಯಣನ ಕುಮಾರ ಸೌರಸೀ ಅಥವಾ ಸಮರಸಿಂಹ ರಾಜಕುಮಾರಿಗೆ ತಕ್ಕ ವರನೆಂದು ನಿಶ್ಚಯಿಸಿ ವಿವಾಹವನ್ನು ನಿಶ್ಚಯಿಸಿಕೊಂಡು ಬಂದರು. ಅನಂತರ ಅತ್ಯಂತ ವೈಭವದಿಂದ ವಿವಾಹ ಜರುಗಿತು, ರಾಜ ಛಿತಾಯಿಗೆ ಅತುಲ ಸಂಪತ್ತನ್ನು, ಆನೆ, ಕುದುರೆ, ದಾಸದಾಸಿಯರನ್ನು ಬಳುವಳಿಯಾಗಿ ನೀಡಿದ. ಛಿತಾಯಿ ಸಮರಸಿಂಹರು ದ್ವಾರ ಸಮುದ್ರದಲ್ಲಿ ಸುಖಸಮುದ್ರದಲ್ಲಿ ಮುಳುಗಿದರು.

ರಾಮದೇವ ಅಳಿಯ ಮಗಳನ್ನು ದೇವಗಿರಿಗೆ ಮತ್ತೆ ಬರಮಾಡಿಕೊಂಡ. ರಾಮದೇವನ ಸಮೀಪ ಮಹಲಿನಲ್ಲಿ ಮಗಳು ಅಳಿಯ ತಂಗಿದರು. ಸಮರಸಿಂಹನಿಗೆ ಬೇಟೆಯೆಂದರೆ ಪಂಚಪ್ರಾಣ. ಅವನು ನಿತ್ಯವೂ ಬೇಟೆಗೆ ಹೋಗತೊಡಗಿದ. ಒಮ್ಮೊಮ್ಮೆ ಛಿತಾಯಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದ. ರಾಮದೇವ ಬೇಟೆಯಿಂದ ಸೌರಸೀಯನ್ನು ವಿರತನನ್ನಾಗಿ ಮಾಡಿಸಲು ಬಹಳ ಪ್ರಯತ್ನಿಸಿದ, ಬೇಟೆ ಕೆಟ್ಟದೆಂದು ಬುದ್ಧಿವಾದ ಹೇಳಿದ. ಆದರೆ ಕುಮಾರನ ಮೃಗಯಾವ್ಯಸನ ತಪ್ಪಲಿಲ್ಲ.

ಒಮ್ಮೆ ಸಮರಸಿಂಹ ಬೇಟೆಯಾಡುತ್ತ ಕಾಡಿನಲ್ಲಿ ಅಲೆಯುತ್ತಿದ್ದ. ದಿನವೆಲ್ಲ ಯಾವ ಮೃಗವೂ ಕೈಹತ್ತಲಿಲ್ಲ. ಕೊನೆಗೆ ಸಂಜೆಯವೇಳೆಗೆ ಒಂದು ಜಿಂಕೆ ಕಣ್ಣಿಗೆ ಬಿದ್ದಿತು. ಸಮರಸಿಂಹ ಅದನ್ನು ಬೆನ್ನಟ್ಟಿದ. ಓಡುತ್ತ ಓಡುತ್ತ ಕೊನೆಗೆ ಅದು ಗೊಂಡಾರಣ್ಯವೊಂದರಲ್ಲಿ ಕಣ್ಮರೆಯಾಯಿತು. ಅದನ್ನು ಹುಡುಕುತ್ತ ಹುಡುಕುತ್ತ ಸಮರಸಿಂಹ ಕೊನೆಗೆ ಭರ್ತೃಹರಿಯ ಆಶ್ರಮವನ್ನು ಮುಟ್ಟಿದ. ಭರ್ತೃಹರಿ ಸಮಾಧಿಯಲ್ಲಿದ್ದ. ಅಲ್ಲಿದ್ದ ಜಿಂಕೆಯನ್ನು ಬೆನ್ನಟ್ಟುವುದರಲ್ಲಿ ಆತನ ಸಮಾಧಿ

ಭಂಗವಾಯಿತು. ಯೋಗಿ ಜಿಂಕೆಯನ್ನು ಬಿಟ್ಟುಬಿಡುವಂತೆ ಹೇಳಿದ. ಆದರೆ ಸೌರಸೀ ಕೇಳಲಿಲ್ಲ. ಬಲವಂತದಿಂದ ಅದನ್ನು ಕಿತ್ತುಕೊಂಡು ಅವನಿಗೆ ಪ್ರಿಯಾ ವಿಯೋಗವಾಗುವಂತೆ ಶಾಪಕೊಟ್ಟ.

ಶಾಪವನ್ನು ಕೇಳಿ ಸಮರಸಿಂಹನಿಗೆ ಮೈಮೇಲೆ ಪ್ರಜ್ಞೆ ಬಂದಿತು. ತನ್ನ ಅಪರಾಧ ಅವನಿಗೆ ಅರಿವಾಯಿತು. ಅವನು ಅದರ ದುಃಖದಲ್ಲಿ ದಿನವೆಲ್ಲ ತೊಳಲಾಡಿದ. ಅತ್ತ ಸಮರಸಿಂಹ ರಾತ್ರಿಯಾದರೂ ಬಾರದುದನ್ನು ಕಂಡು ಛಿತಾಯಿ ಗಾಭರಿಗೊಂಡಳು. ವಿರಹದ ಬೆಂಕಿಯಲ್ಲಿ ಬೆಂದಳು. ಶಾಪದಿಂದ ತೇಜೋ ಹೀನನಾಗಿ ಸಮರಸಿಂಹ ಮರುದಿನ ಸೂರ್ಯಾಸ್ತವಾದಮೇಲೆ ದೇವಗಿರಿಗೆ ಮರಳಿದ. ಅತಿಸ್ನೇಹದ ಪರಿಣಾಮ ವಿಯೋಗ. ಅಧಿಕ ಭೋಗದ ಪರಿಣಾಮ ರೋಗ. ಸಮರಸಿಂಹನ ಸುಖಕೂಡ ಅತಿಯನ್ನು ಮುಟ್ಟಿರಬೇಕು. ಅದನ್ನು ಕಂಡು ದೇವತೆಗಳೂ ಕರುಬಿರಬೇಕು.

ಯಾರು ಕರುಬಲಿ ಬಿಡಲಿ ಚಿತ್ರಕಾರ ಮಾತ್ರ ತುಂಬ ಕರುಬಿದ್ದ. ಅವನು ತನ್ನ ಕೆಲಸ ಮುಗಿದನಂತರ ಅರಸನಿಂದ ಬೀಳ್ಕೊಂಡ. ರಾಮದೇವ ಅವನನ್ನು ಧನಕನಕಗಳಿಂದ ಸತ್ಕರಿಸಿ ಸುಲ್ತಾನನಿಗೆ ಭೀಮಸೇನೀಕರ್ಪೂರ, ಅಮೂಲ್ಯರತ್ನಗಳು, ಚೀನಾಂಬರಗಳು ಮತ್ತು ಉತ್ತಮ ಜಾತ್ಯಶ್ವಗಳನ್ನು ಕಾಣಿಕೆಯಾಗಿ ಕೊಟ್ಟು ಕಳಿಸಿದ. ಚಿತ್ರಕಾರ ದಿಲ್ಲಿಗೆ ಹೋಗಿ ಸುಲ್ತಾನನಿಗೆ ಇವೆಲ್ಲವನ್ನು ಒಪ್ಪಿಸಿದ. ಸುಲ್ತಾನ ರಾಜನ ಕುಶಲ ಸಮಾಚಾರವನ್ನು ವಿಚಾರಿಸಿಕೊಂಡ. ಮದುವೆ ಹೇಗೆ ನಡೆಯಿತು ಎಂದು ಕೇಳಿದ. ಚಿತ್ರಕಾರನ ಮುಖ ಸಪ್ಪೆಗಿರುವುದನ್ನು ಕಂಡು ಸುಲ್ತಾನ ಕೇಳಿದ: ''ಏಕೆ ನೀನು ಅಲ್ಲಿ ಸುಖವಾಗಿರಲಿಲ್ಲವೇ?''

ಚಿತ್ರಕಾರ ಸುಲ್ತಾನನಿಗೆ ತಲೆಬಾಗಿ ವಂದಿಸಿ ಇದು ಉತ್ತರ ಹೇಳುವ ಸಂದರ್ಭ ವಲ್ಲವೆಂದು ಸೂಚಿಸಿದ. ಅವನು ಕೊಟ್ಟ ಸಾಮಾನುಗಳನ್ನು ಕೊಠಾರಿಯ ವಶಕ್ಕೆ ಕೊಡಲಾಯಿತು. ಆ ಕರ್ಪೂರವನ್ನು ಕಂಡು ಅಲ್ಲಾವುದ್ದೀನ್ ಹೇಳಿದ, "ಓ ಈ ಕರ್ಪೂರ ಅನುಪಮವಾದುದು! ಅದ್ಭುತವಾದುದು!"

ಇದನ್ನು ಕಂಡು ದೇವಗಿರಿಯಿಂದ ಬಂದಿದ್ದ ಒಬ್ಬ ದಾಸಿ ಬಿದ್ದು ಬಿದ್ದು ನಕ್ಕಳು. ಆಗ ಅವಳತ್ತ ಸುಲ್ತಾನ್ ದೃಷ್ಟಿ ಬೀರಿದ. ಅದೇನು ಸಮಾಚಾರ ಹೇಳು ಎಂದು ಒತ್ತಾಯ ಮಾಡಿದ. ದಾಸಿ ಹೇಳಿದಳು, "ನೀವು ಈ ಕರ್ಪೂರಕ್ಕೇ ಮಾರು ಹೋದಿರಿ! ಇದು ರಾಣಿಯರ ಒಡವೆಗಳಿಗೆ ಹಾಕುವ ಕರ್ಪೂರದ ಚೂರ್ಣ ಅಷ್ಟೆ. ರಾಜಾ ರಾಮದೇವ ತಿನ್ನುವ ಕರ್ಪೂರದ ಮರ್ಮ ವರ್ಣನಾತೀತ".

ಸುಲ್ತಾನ ಚಿತ್ರಕಾರನತ್ತ ದೃಷ್ಟಿ ಬೀರಿದ. ಚಿತ್ರಕಾರ ದಾಸಿಯ ಮಾತನ್ನೇ ಸಮರ್ಥಿಸಿದ. ಬಾದಷಹ ಕೂಡಲೆ ಸಭೆಯನ್ನು ವಿಸರ್ಜಿಸಿದ; ಅನಂತರ ಚಿತ್ರಕಾರ

ನನ್ನು ತನ್ನ ಅಂತರಂಗ ಕೋಣೆಗೆ ಕರೆಸಿಕೊಂಡ. ಅಲ್ಲಿ ಚಿತ್ರಕಾರ ರಾಜಕುಮಾರಿಯ ಅಲೌಕಿಕ ರೂಪವನ್ನು ಬಣ್ಣಿಸಿದ. ಕೊನೆಗೆ ಆಕೆಯ ಚಿತ್ರವನ್ನು ನೀಡಿದ. ಅದನ್ನು ಕಂಡಕೂಡಲೆ ಬಾದಷಹ ಮೂರ್ಛಿತನಾದ. ಅಂಥ ಸೌಂದರ್ಯವನ್ನು ಅವನು ತನ್ನ ಜೀವನದಲ್ಲೇ ಕಂಡಿರಲಿಲ್ಲ, ಅವನು ಕಂತುಸಂತಾಪದಿಂದ ವಿಲವಿಲನೆ ಒದ್ದಾಡ ತೊಡಗಿದ. ಅವನ ಅಂತಃಪುರದಲ್ಲಿ ಹಯಪತಿ ಎಂಬ ಹಿಂದೂ ರಮಣಿ ಇದ್ದಳು. ಅವಳು ಸುಲ್ತಾನನ ಒಲವಿನ ರಾಣಿ. ಅವಳಿಗೆ ಸುಲ್ತಾನ ಛಿತಾಯಿಯ ಚಿತ್ರವನ್ನು ತೋರಿಸಿದ. ಅದನ್ನು ಕಂಡು ಅವಳು ನಿಡುಸುಯ್ಯತೊಡಗಿದಳು. ಛಿತಾಯಿ ಯನ್ನು ಜೀವಸಹಿತ ಹಿಡಿದು ತಂದು ನನಗೆ ತೋರಿಸು ಎಂದು ಅವಳು ಒತ್ತಾಯ ಮಾಡಿದಳು.

ಸುಲ್ತಾನ ತನ್ನ ಸೇನಾಪತಿಯನ್ನು ಕರೆದು ದೇವಗಿರಿಯಮೇಲೆ ದಂಡೆತ್ತಿ ಹೋಗುವಂತೆ ಅಪ್ಪಣೆಮಾಡಿದ. ಉಲೂಗ ಖಾನ್‌ನನ್ನು ದಿಲ್ಲಿಯ ರಕ್ಷಣೆಗೆ ಬಿಟ್ಟು ಸ್ವತಃ ಬಾದಷಹನೇ ಆ ಸೇನೆಯೊಂದಿಗೆ ದೇವಗಿರಿಯ ವಿಜಯ ಯಾತ್ರೆಗೆ ಹೊರಟ. ಲೆಕ್ಕವಿಲ್ಲದಷ್ಟು ಆನೆ, ಕುದುರೆ, ಕಾಲಾಳುಗಳಿಂದ ಕೂಡಿದ ಆ ಭಯಂಕರ ಸೇನೆ ಪಯಣದ ಮೇಲೆ ಪಯಣಮಾಡಿ ಆರು ತಿಂಗಳಲ್ಲಿ ದೇವಗಿರಿಯನ್ನು ಮುಟ್ಟಿತು, ಹಾದಿಯಲ್ಲಿದ್ದ ಊರು ಕೇರಿಗಳನ್ನು ಸೈನಿಕರು ನಾಶಮಾಡಿದರು, ದೇವಮಂದಿರ ಗಳನ್ನು ಪುಡಿಗುಟ್ಟಿ ಅವುಗಳ ಸ್ಥಾನದಲ್ಲಿ ಮಸೀದಿಗಳನ್ನು ನಿರ್ಮಿಸಿದರು. ರಾಜ ತನ್ನ ಮಂತ್ರಿ ಪೀಪಾನ ಜೊತೆ ಮಂತ್ರಾಲೋಚನೆ ನಡೆಸಿದ. ಅನಂತರ ಅವನು ತನ್ನ ಸಾಮಂತರು, ಪಾಳೆಯಗಾರರು ಮತ್ತು ದಕ್ಷಿಣದ ಇತರ ಅರಸರ ಸೇನೆಗಳನ್ನು ಕೂಡಿಸಿ ಅಲ್ಲಾವುದ್ದೀನನನ್ನು ಎದುರಿಸಲು ಸಜ್ಜಾದ. ಹಿಂದೂ ಸೇನೆ ಮುಸ್ಲಿಂ ಪಡೆಯನ್ನು ಧೈರ್ಯವಾಗಿ ಎದುರಿಸಿತು. ಆದರೂ ಅಲ್ಲಾವುದ್ದೀನ್ ಎದೆಗುಂದಲಿಲ್ಲ. ಅವನು ದೇವಗಿರಿಯನ್ನು ಮುತ್ತಿ ಭಯಂಕರವಾದ ಯುದ್ಧಮಾಡಿದ. ಎರಡು ಕಡೆಯೂ ಅಸಂಖ್ಯ ಸಾವು ನೋವುಗಳಾದರೂ ಸೋಲುಗೆಲವಿನ ನಿಶ್ಚಯವಾಗಲಿಲ್ಲ. ಸುಲ್ತಾನ ಬಂದು ಆರು ತಿಂಗಳಾದರೂ ಅವನಿಗೆ ದುರ್ಗ ಮಣಿಯಲಿಲ್ಲ. ಅವನು ಮುತ್ತಿಗೆ ತೆಗೆಯಲಿಲ್ಲ. ಕೊನೆಗೆ ರಾಮದೇವ ತನ್ನ ಮಂತ್ರಿಗಳೊಡನೆ ವಿಚಾರ ಮಾಡಿ ತನ್ನ ಅಳಿಯ ಮಗಳನ್ನು ದ್ವಾರಸಮುದ್ರಕ್ಕೆ ಗುಪ್ತವಾಗಿ ಕಳಿಸಿಕೊಡಲು ನಿಶ್ಚಯ ಮಾಡಿದ. ಆದರೆ ಅಳಿಯ ಸಮರಸಿಂಹ ಆಪತ್ಕಾಲದಲ್ಲಿ ಮಾವನನ್ನು ತೊರೆದು ಹೋಗಲು ಒಪ್ಪಲಿಲ್ಲ. ಕೊನೆಗೆ ದ್ವಾರಸಮುದ್ರದಿಂದ ಸೇನೆ ತಂದು ನಮಗೆ ನೆರವಾಗು ಎಂದು ಹೇಳಿದಾಗ ಅವನು ಒಪ್ಪಿದ. ಛಿತಾಯಿಯನ್ನು ದುರ್ಗ ದಲ್ಲೇ ಬಿಟ್ಟು ದ್ವಾರಸಮುದ್ರಕ್ಕೆ ಹೋದ. ಹೋಗುವಾಗ ಛಿತಾಯಿ ತಾನೂ ಬರುವೆನೆಂದು ಹಟಮಾಡಿದಳು. ಆದರೆ ಬೇಗ ಬರುವೆನು, ಚಿಂತಿಸದಿರು ಎಂದು

ಹೇಳಿ ಅವನು ಹೊರಟು ಹೋದ. ಪತಿಯು ವಿರಹದಲ್ಲಿ ಆಕೆ ಶಿವಪೂಜೆ, ಶಿವ ಧ್ಯಾನದಲ್ಲಿ ನಿರತಳಾದಳು.

ಸಮರಸಿಂಹ ದೇವಗಿರಿಯಿಂದ ಹೊರಗೆ ಹೋದ ಸುದ್ದಿ ಸುಲ್ತಾನನಿಗೂ ಮುಟ್ಟಿತು. ಅವನ ಜೊತೆ ಛಿತಾಯಿಯೂ ಹೋಗಿರಬಹುದೇ ಎಂಬ ಶಂಕೆ ಯುಂಟಾಯಿತು. ಸುಮ್ಮನೆ ವ್ಯರ್ಥವಾಗಿ ಕಾಲಕಳೆಯುತ್ತಿದೆ; ಏನಾದರೂ ಮಾಡ ಬೇಕೆಂದು ಅವನು ತನ್ನ ಆಪ್ತ ರಾಘವ ಚೇತನನನ್ನು ಬರಮಾಡಿಕೊಂಡು ಹೇಳಿದ: "ನಿನ್ನ ಮಾತು ಕೇಳಿಕೊಂಡು ನಾನು ಪದ್ಮಿನಿಗೆ ಬಾಯಿಬಿಟ್ಟು ಚಿತ್ತೂರಿನಲ್ಲಿ ಮಣ್ಣು ಮುಕ್ಕಿದೆ. ಇಲ್ಲಿಯೂ ಅಂಥದೇ ಸ್ಥಿತಿಯಾಗುವಂತೆ ಕಾಣುತ್ತಿದೆ. ರಾಮದೇವ ತನ್ನ ಮಗಳನ್ನು ಒಪ್ಪಿಸುತ್ತಿಲ್ಲ, ಇಸ್ಲಾಂ ಧರ್ಮವನ್ನು ಸ್ವೀಕರಿಸಲೂ ಸಿದ್ಧವಿಲ್ಲ. ಸಮರಸಿಂಹ ತಪ್ಪಿಸಿಕೊಂಡು ಹೋಗಿದ್ದಾನೆ. ಇವೆಲ್ಲ ನೋಡಿದರೆ ಇಲ್ಲಿಯೂ ನಾನು ಮೋಸಹೋಗುವೆನೆಂದು ಕಾಣುತ್ತದೆ. ಈಗ ಛಿತಾಯಿಯೇನಾದರೂ ತಪ್ಪಿಸಿ ಕೊಂಡಿದ್ದರೆ ನಮ್ಮ ಯತ್ನವೆಲ್ಲ ಮಣ್ಣುಪಾಲಾದಂತೆಯೇ ಸರಿ. ಆದ್ದರಿಂದ ನೀನು ಹೇಗಾದರೂ ಮಾಡಿ ಛಿತಾಯಿ ದುರ್ಗದಲ್ಲೇ ಇದ್ದಾಳೋ ಇಲ್ಲವೆ ತಪ್ಪಿಸಿಕೊಂಡು ಹೋಗಿದ್ದಾಳೋ ಎಂಬುದನ್ನು ಪತ್ತೆಮಾಡಬೇಕು."

ರಾಘವಚೇತನ ಸುಲ್ತಾನನ ಮಾತು ಕೇಳಿ ತಲೆಯಮೇಲೆ ಕೈಹೊತ್ತು ಕುಳಿತ. ಅವನು ದಿನವೆಲ್ಲ ಯೋಚಿಸುತ್ತಾ ಕುಳಿತ. ಕೊನೆಗೆ ಅವನು ತನ್ನ ಕುಲದೇವಿ ಪದ್ಮಾವತಿಯನ್ನು ಸ್ಮರಿಸುತ್ತ ಆ ರಾತ್ರಿಯೆಲ್ಲಾ ಜಾಗರಣೆ ಮಾಡಿದ. ನಡುರಾತ್ರಿಯಲ್ಲಿ ಅವನು ಮಂಪರಿನಲ್ಲಿದ್ದಾಗ ಪದ್ಮಾವತೀ ದೇವಿ ಹಂಸಾರೂಢಳಾಗಿ ಅವನಿಗೆ ದರ್ಶನವಿತ್ತಳು. "ದುರ್ಗಕ್ಕೆ ದೂತಿಯರನ್ನು ಕಳಿಸು. ಅವರು ಛಿತಾಯಿಯ ಸುದ್ದಿಯನ್ನು ತರುತ್ತಾರೆ" ಎಂದು ಹೇಳಿ ದೇವಿ ಅಂತರ್ಧಾನಳಾದಳು. ಮರುದಿನ ಬೆಳಿಗ್ಗೆ ಬಾದಷಹನ ಬಳಿಗೆ ಹೋಗಿ ರಾಘವಚೇತನ ತನ್ನ ಉಪಾಯ ವನ್ನು ಸೂಚಿಸಿದ.

ರಾಘವನ ಉಪಾಯವನ್ನು ಕೇಳಿ ಬಾದಷಹ ಕುಣಿದಾಡಿಬಿಟ್ಟ. ಅವನನ್ನು ಮನಸಾರೆ ಹೊಗಳಿದ. ಸುಲ್ತಾನನ ಅಪ್ಪಣೆಯಂತೆ ದಿವ್ಯಸುಂದರಿಯರಿಬ್ಬರನ್ನು ದೂತಕಾರ್ಯಕ್ಕೆ ನೇಮಿಸಲಾಯಿತು. ಆದರೆ ಆ ದೂತಿಯರು ಬಂದು ಗಢ ದುರ್ಭೇದ್ಯವೆಂದು ಒಳಗೆ ಹೋಗುವುದು ಅಸಾಧ್ಯವೆಂದು ಹೇಳಿದರು. ಮತ್ತೆ ರಾಘವ ಚೇತನನಿಗೆ ಕರೆಹೋಯಿತು. ಅವನು ಬಂದು ಸಂಧಿಯ ಪ್ರಸ್ತಾಪದೊಡನೆ ರಾಜದೂತನನ್ನು ದೇವಗಿರಿದುರ್ಗಕ್ಕೆ ಕಳುಹಿಸಬೇಕೆಂದೂ ಅವನ ಜೊತೆಯಲ್ಲೇ ದೂತಿಯರು, ಹೋಗಬೇಕೆಂದೂ ಸೂಚಿಸಿದ. ಸುಲ್ತಾನನಿಗೆ ತಟಕ್ಕನೆ ಏನೋ ಹೊಳೆಯಿತು. ತಾನೇ ಏಕೆ ವೇಷಾಂತರದಲ್ಲಿ ದುರ್ಗದೊಳಕ್ಕೆ ಹೋಗಬಾರದು ಎನ್ನಿಸಿತು. ಬೇಡವೆಂದು ರಾಘವ ಎಷ್ಟು ಹೇಳಿದರೂ ಕೇಳಲಿಲ್ಲ. ಕೊನೆಗೆ

ದೂತನಾದ ರಾಘವ ಪಲ್ಲಕ್ಕಿಯಲ್ಲಿ ಹೋಗಬೇಕೆಂದೂ ಅವನ ಅನುಚರನಾಗಿ ಬಾದಷಹ ಹೋಗಬೇಕೆಂದೂ ನಿಶ್ಚಯವಾಯಿತು. ಒಳ ಹೋದಾಗ ಸುಲ್ತಾನ ಅಲ್ಲಿ ಭವ್ಯವಾದ ಮಹಲು ಅಶ್ವಶಾಲೆ ಅನೇಕ ದೇವಾಲಯಗಳು ಮೊದಲಾದವುಗಳನ್ನು ಕಂಡು ಮುಗ್ಧನಾದ. ಅವನು ರಾಘವನನ್ನು ಅರಮನೆಗೆ ಹೋಗಲು ಬಿಟ್ಟು ತಾನು ಬೇರೆ ದಾರಿಹಿಡಿದ. ಮರುವೇಷದಲ್ಲಿ ಅವನು ಕೋಟೆ, ಪೇಟೆ ಎಲ್ಲವನ್ನೂ ನೋಡಿದ. ಕೊನೆಗೆ 'ರಾಮ ಸರೋವರ' ಎಂಬ ಸರೋವರದ ಬಳಿಗೆ ಹೋದ. ಅದರ ಆಚೆಯ ದಡದಲ್ಲಿ ಶಿವ ವಿಷ್ಣು ದೇವಾಲಯಗಳಿದ್ದವು. ಅಲ್ಲಿಗೆ ನಿತ್ಯವೂ ರಾಜಕುಮಾರಿ ಬರುತ್ತಿದ್ದಳು. ಅನಿರೀಕ್ಷಿತವಾಗಿ ಅಂದು ರಾಜಕುಮಾರಿ ಅದೇ ವೇಳೆಗೆ ಅಲ್ಲಿಗೆ ಬಂದಿದ್ದಳು. ಸರೋವರದ ತೀರದಲ್ಲಿದ್ದ ಪಕ್ಷಿಗಳನ್ನು ಬೇಟೆಯಾಡ ಬೇಕೆಂದು ಅವನಿಗೆ ಆಸೆಯಾಯಿತು. ಅವನು ತನ್ನ ಮಿಡಿಬಿಲ್ಲನ್ನು ಹಿಡಿದು ಕೊಂಡು ಗುಂಡು ಹೊಡೆಯತೊಡಗಿದ. ಶಬ್ದಕ್ಕೆ ಹಕ್ಕಿಗಳು ಹಾರಿಹೋದವು. ಇದರಿಂದ ರಾಜಕುಮಾರಿ ಮತ್ತು ಅವಳ ಸಖಿಯರ ಗಮನ ಈ ಅಪರಿಚಿತನತ್ತ ಹರಿಯಿತು. ರಾಜಕುಮಾರಿ ಆ ಛದ್ಮಪುರುಷನ ಬಗೆಗೆ ವಿಚಾರಣೆ ನಡೆಸುವಂತೆ ತನ್ನ ಸಖಿಗೆ ಹೇಳಿ ಹೊರಟುಹೋದಳು.

ಸಖಿ ಅವನ ಬಳಿಗೆ ಬಂದು ಅವನ ಚಲನವಲನಗಳನ್ನು ವೀಕ್ಷಿಸತೊಡಗಿದಳು. "ಗೂಢಚರ್ಯೆಯಲ್ಲಿ ನಿರತನಾಗಿರುವ ನಿನ್ನನ್ನು ಸೆರೆ ಹಿಡಿಯುತ್ತೇನೆ'' ಎಂದು ಅವಳು ಗದರಿಸಿದಳು. ಕೊನೆಗೆ ಅವನು ಅವಳಿಗೆ ತನ್ನ ಸಂಗತಿಯೆಲ್ಲವನ್ನೂ ತಿಳಿಸಿ ತಾನು ಕೂಡಲೇ ಮುತ್ತಿಗೆ ತೆಗೆಯುವುದಾಗಿಯೂ ತನ್ನನ್ನು ದಯವಿಟ್ಟು ಬಿಟ್ಟುಬಿಡ ಬೇಕೆಂದೂ ಹೇಳಿದ. ಅವಳು ನಂಬದಿರಲು ತನ್ನ ಸ್ವಹಸ್ತಾಕ್ಷರದಲ್ಲಿ ಹಾಗೆ ಬರೆದು ಕೊಟ್ಟುದೇ ಅಲ್ಲದೆ ಕುರಾನಿನ ಮೇಲೆ ಆಣೆ ಇಟ್ಟ. ಅವಳಿಗೆ ಯಥೇಚ್ಛ ಧನ ನೀಡುವ ಆಶೆ ತೋರಿಸಿದ. ಕೊನೆಗೆ ಅವಳಿಂದ ಬಿಡಿಸಿಕೊಂಡು ಅವನು ಅಲ್ಲಿಂದ ಪೇಟೆಗೆ ಹೋದ; ಅಷ್ಟು ಹೊತ್ತಿಗೆ ಅಲ್ಲಿಗೆ ಬಂದಿದ್ದ ರಾಘವನನ್ನು ಕೂಡಿಕೊಂಡ.

ರಾಮದೇವನ ಆಸ್ಥಾನದಲ್ಲಿ ರಾಘವಚೇತನ ತೀರ ಅನುಚಿತವಾಗಿ ವರ್ತಿಸಿದ. ಮಗಳನ್ನು ಒಪ್ಪಿಸದೇ ಬೇರೆ ದಾರಿಯೇ ಇಲ್ಲ ಎಂದು ಹೇಳಿದ. ಅವನ ಮಾತು ಕೇಳಿ ರಾಜನಿಗೆ ಮೈಯೆಲ್ಲ ಬೆಂಕಿಯಾಯಿತು. ಆದರೆ ದೂತ ಅವಧ್ಯ ಎಂದು ತಿಳಿದು ಅವನನ್ನು ಹೊರಕ್ಕೆ ಸಾಗಹಾಕಿಸಿದ. ಶೀಘ್ರದಲ್ಲಿಯೇ ಸುಲ್ತಾನ ಮತ್ತು ರಾಘವ ದುರ್ಗದಿಂದ ಹೊರಬಂದರು.

ಛಿತಾಯಿಯ ಸಖಿ ತಾನು ಏನೋ ಮಹತ್ಕಾರ್ಯ ಸಾಧಿಸಿರುವುದಾಗಿ ಬಂದು ರಾಜನಿಗೆ ಎಲ್ಲವನ್ನೂ ತಿಳಿಸಿದಳು. ಸುಲ್ತಾನನ ಓಲೆಯನ್ನು ಕೊಟ್ಟಳು. ಅವಳ ಅವಿವೇಕಕ್ಕೆ ರಾಜ ಹಣೆಹಣೆ ಚಚ್ಚಿಕೊಂಡ. ಪಂಜರದೊಳಕ್ಕೆ ಬಂದಿದ್ದ ಪಕ್ಷಿ ಅವಳ ಅವಿವೇಕದಿಂದ ಹಾರಿಹೋಗಿತ್ತು.

ಅಲ್ಲಾವುದ್ದೀನನೊಡನೆ ಇಬ್ಬರು ದೂತಿಯರೂ ದೇವಗಿರಿದುರ್ಗದೊಳಕ್ಕೆ ಹೋಗಿದ್ದರು. ಅವರು ಯೋಗಿನಿಯರ ವೇಷದಲ್ಲಿ ಹೋಗಿ ಛಿತಾಯಿಯನ್ನು ಕಂಡರು. ಪತಿವಿರಹದಲ್ಲಿದ್ದ ಛಿತಾಯಿ ಆ ಯೋಗಿನಿಯರನ್ನು ಭಕ್ತಿಯಿಂದ ಸತ್ಕರಿಸಿದಳು. ಅವರು ತಾವು ತೀರ್ಥಯಾತ್ರೆಗೆ ಬಂದಿರುವುದಾಗಿಯೂ ರಾಮೇಶ್ವರಕ್ಕೆ ಹೊರಟಿರುವುದಾಗಿಯೂ ಹೇಳಿದರು. ಆ ಮಾತು ಈ ಮಾತು ಆಡುತ್ತ ಕೊನೆಗೆ ಅವರು ಛಿತಾಯಿಗೆ ಯೌವನವನ್ನು ವ್ಯರ್ಥಮಾಡಬಾರದೆಂದು ತಿಳಿಸಿದರು. ಅದನ್ನು ಕೇಳಿ ಛಿತಾಯಿಗೆ ಅವರ ಬಗೆಗೆ ಸಂಶಯವುಂಟಾಯಿತು. ಆದರೆ ಅವರು ವಿಷಯಾಂತರ ಮಾಡಿ ಮೇಲೆದ್ದರು. ಛಿತಾಯಿ ಅವರನ್ನು ಕೆಲವು ದಿನ ದೇವಗಿರಿಯಲ್ಲಿ ತಂಗುವಂತೆ ಕೇಳಿಕೊಂಡಳು. ಆದರೆ ಅವರು ಒಪ್ಪಲಿಲ್ಲ. ಕೊನೆಗೆ ಛಿತಾಯಿ ನಿತ್ಯವೂ ಹೋಗುತ್ತಿದ್ದ ರತ್ನೇಶ್ವರ ದೇವಾಲಯಕ್ಕೆ ಹೋಗಿ ದೇವರ ದರ್ಶನಮಾಡಿ, ಛಿತಾಯಿಗೆ ಆಶೀರ್ವಾದಮಾಡಿ ಹೊರಟರು.

ಈ ರೀತಿ ಆ ಛದ್ಮನಾರಿಯರು ದುರ್ಗದ ರಹಸ್ಯವೆಲ್ಲವನ್ನೂ ತಿಳಿದುಕೊಂಡು ಬಂದ ದಾರಿ ಹಿಡಿದರು. ಸುಲ್ತಾನನ ಬಳಿಗೆ ಹೋಗಿ ಛಿತಾಯಿ ನಿತ್ಯವೂ ಹೋಗಿ ಬರುವ ರತ್ನೇಶ್ವರ ದೇವಾಲಯದ ಸುಳುಹು ಕೊಟ್ಟರು.

ಮಾರನೆಯ ದಿನ ಎಂದಿನಂತೆ ಛಿತಾಯಿ ಶಿವಪೂಜೆಗಾಗಿ ದೇವಾಲಯಕ್ಕೆ ಹೊರಟಳು. ಸಮಯ ಸಾಧಿಸಿ ಸುಲ್ತಾನ ಅಲ್ಲಿಗೆ ಹೋಗಿ ನಿರಸ್ತ್ರಳಾಗಿ ಪೂಜಾ ಮಗ್ನಳಾದ ಛಿತಾಯಿಯನ್ನು ಅಪಹರಿಸಿಕೊಂಡು ಹೋದ. ಅವನನ್ನು ಎದುರಿಸಿದ ಛಿತಾಯಿಯ ಸಖಿಯರಲ್ಲಿ ಕೆಲವರು ಅಸು ನೀಗಿದರು, ಕೆಲವರನ್ನು ಸೆರೆಹಿಡಿದರು.

ಸುದ್ದಿ ತಿಳಿದಕೂಡಲೆ ರಾಮದೇವ, ತನ್ನ ಸೇನೆಯೊಡನೆ ಸುಲ್ತಾನನನ್ನು ಬೆನ್ನಟ್ಟಿದ. ಆದರೆ ಅಷ್ಟು ಹೊತ್ತಿಗಾಗಲೇ ಸುಲ್ತಾನ ತನ್ನ ತಂಗು ತೆಗೆದು ದಿಲ್ಲಿಯತ್ತ ಧಾವಿಸಿದ್ದ. ಅವರನ್ನು ಬೆನ್ನಟ್ಟುವ ಸಾಹಸದಲ್ಲಿ ವಿಫಲನಾಗಿ ರಾಜ ಹಿಂತಿರುಗಿದ.

ಛಿತಾಯಿಯನ್ನು ದಿಲ್ಲಿಯಲ್ಲಿ ಸುಲ್ತಾನ ರಾಜ ವೈಭವದಲ್ಲಿಟ್ಟ. ಆದರೆ ಆಕೆ ವಿರಾಗಿಣಿಯಂತೆ ಅನ್ನ ನೀರನ್ನು ತೊರೆದು ಗೋಳಾಡುತ್ತಿದ್ದಳು. ಅವಳನ್ನು ಸಂತೈಸುವುದರಲ್ಲಾಗಲೀ, ಅವಳ ಮನ ಒಲಿಸುವುದರಲ್ಲಾಗಲೀ ಸುಲ್ತಾನ ಯಶಸ್ವಿಯಾಗಲಿಲ್ಲ. ಕೊನೆಗೆ ಅವಳ ಮೇಲ್ವಿಚಾರಣೆಗೆ ನೂರಾರು ದಾಸಿಯರನ್ನು ನೇಮಿಸಿ ಅವಳ ಹೃದಯ ಪರಿವರ್ತನೆಗೆ ಪ್ರಯತ್ನಿಸಿದ. ಅವಳೊಂದಿಗೆ ಬಲಾತ್ಕಾರ ಮಾಡಲಿಲ್ಲ. ಅವಳಿಗೆ ಸಂಗೀತ ಶಿಕ್ಷಣ ನೀಡಲು ಅವನು ದಕ್ಷಿಣಭಾರತದಿಂದ ಬಂದು ದಿಲ್ಲಿಯ ಆಸ್ಥಾನದಲ್ಲಿದ್ದ ಗೋಪಾಲನಾಯಕನನ್ನು ನೇಮಿಸಿದ.

ಅತ್ತ ದ್ವಾರಸಮುದ್ರಕ್ಕೆ ಹೋಗಿದ್ದ ಸಮರಸಿಂಹ ಛಿತಾಯಿಯ ಅಪಹರಣ ವಾರ್ತೆಯನ್ನು ಕೇಳಿ ಹುಚ್ಚುಹಿಡಿದವನಂತಾದ. ಅವನು ಸರ್ವಸಂಗಪರಿತ್ಯಾಗಿಯಾಗಿ ಮನೆಮಾರನ್ನು ತೊರೆದು ವಿರಾಗಿಯಾಗಿಹೋದ. ಚಂದ್ರಗಿರಿಗೆ ಹೋಗಿ ಯೋಗಿ ಚಂದ್ರನಾಥನಿಂದ ಯೋಗದೀಕ್ಷೆ ಪಡೆದ. ತನ್ನ ವೀಣೆಯನ್ನು ತೆಗೆದುಕೊಂಡು ಕಂಡಕಂಡಲ್ಲಿ ಅಲೆಯತೊಡಗಿದ. ಹಾಗೆ ಹೋಗುತ್ತಿದ್ದಾಗ 'ಜಟಾಶಂಕರ'ದ ಸಾಧುಗಳಿಂದ ಛಿತಾಯಿಯ ಸುದ್ದಿ ಅವನಿಗೆ ದೊರೆಯಿತು. ಅದರಂತೆ ಅವನು ಅವಳನ್ನು ಅರಸಿಕೊಂಡು ಹೋದ. ಉತ್ತರಾಭಿಮುಖವಾಗಿ ಹೋಗುತ್ತಿದ್ದಾಗ ಮಧ್ಯೆ ಯಮುನಾತೀರದ ಚಂದವಾರ ಎಂಬ ಊರಿನಲ್ಲಿ ತಂಗಿದ. ಅಲ್ಲಿಯ ರಮಣೀಯ ಪ್ರಾಕೃತಿಕ ಪರಿಸರದಲ್ಲಿ ವೀಣಾವಾದನ ಮಾಡುತ್ತ ಅವನು ಕೆಲಕಾಲ ತನ್ನ ದುಃಖವನ್ನು ಮರೆತ. ಅವನ ವೀಣಾವಾದನದಿಂದ ಅಲ್ಲಿಯ ತರುಣಿಯರು ಹುಚ್ಚೆದ್ದು ಹೋದರು. ಖಗಮೃಗಗಳೂ ಅವನ ವೀಣಾವಾದನಕ್ಕೆ ಮನಸೋತು ಮೈಮರೆತವು. ಸಮರಸಿಂಹನ ಈ ಸಂಗೀತಮಾಯೆಯ ಸುದ್ದಿ ದಿಲ್ಲಿಗೂ ಮುಟ್ಟಿತು.

ಛಿತಾಯಿ ಸಮರಸಿಂಹನ ವೀಣಾ ಪ್ರಾವೀಣ್ಯವನ್ನು ಚೆನ್ನಾಗಿ ಅರಿತಿದ್ದಳು. ಆದ್ದರಿಂದ ಅವನನ್ನು ಪತ್ತೆಮಾಡುವ ಉದ್ದೇಶದಿಂದ ಆಕೆ ತನ್ನ ವೀಣೆಯನ್ನು ದಿಲ್ಲಿಯ ಖ್ಯಾತ ಸಂಗೀತಗಾರ ಗೋಪಾಲನಾಯಕನ ಬಳಿ ಇಟ್ಟು ಆ ವೀಣೆಯಲ್ಲಿ ನಾದ ಸಂಧಾನ ಮಾಡಿದಾತನನ್ನು ತನ್ನ ಬಳಿಗೆ ಕರೆತರಬೇಕೆಂದು ತಿಳಿಸಿದಳು. ಸಮರ ಸಿಂಹ ದಿಲ್ಲಿಯ ಹೊರವಲಯದಲ್ಲಿ ವೀಣೆ ಬಾರಿಸಿದಾಗ ಕಾಡುಮೃಗಗಳು ಪಕ್ಷಿಗಳೆಲ್ಲ ತಮ್ಮ ಜನ್ಮಜಾತ ವೈರವನ್ನು ಮರೆತು ಅವನ ನಾದಮಾಧುರಿಗೆ ಕಿವಿಗೊಟ್ಟು ಕಂಬನಿ ಮಿಡಿಯುತ್ತ ನಿಂತವು. ಅವನು ಅವುಗಳ ಕೊರಳಿಗೆ ತನ್ನ ಆ ಭೂಷಣ ಗಳನ್ನು ತೊಡಿಸಿ ಮುಂದೆ ಸಾಗಿದನು. ದಿಲ್ಲಿಗೆ ಅವನು ಹೋದಾಗ ವೀಣೆಯನ್ನು ಅವನ ಕೈಗೆ ಕೊಡಬೇಕೆಂದು ಜನರು ಗೋಪಾಲನಾಯಕನಿಗೆ ಹೇಳಿದರು. ಆ ವೀಣೆಯಲ್ಲಿ ಸ್ವತಃ ಗೋಪಾಲನಾಯಕನೂ ಸ್ವರ ಸಂಧಾನ ಮಾಡ ಹೋಗಿ ವಿಫಲ ನಾಗಿದ್ದ. ಕೊನೆಗೆ ಸಮರಸಿಂಹ ಆ ವೀಣೆಯನ್ನು ಕೈಗೆತ್ತಿಕೊಂಡು ಲೀಲೆಯಿಂದ ಬಾರಿಸತೊಡಗಿದ. ಅದರ ನಾದಮಾಧುರಿಗೆ ಗೋಪಾಲನಾಯಕ ಮೂರ್ಛೆ ಹೋದ. ಛಿತಾಯಿ ದಾಸಿಯೊಬ್ಬಳು ಇದನ್ನೆಲ್ಲ ನೋಡಿ ತನ್ನ ಒಡತಿಯ ಬಳಿಗೆ ಓಡಿಹೋಗಿ ಇದೆಲ್ಲವನ್ನೂ ತಿಳಿಸಿದಳು. ರಾಘವಚೇತನನ ಜೊತೆ ಸಮರಸಿಂಹ ಅಲ್ಲಾವುದ್ದೀನನ ದರಬಾರಿಗೆ ಹೋದ. ಸುಲ್ತಾನನನ್ನು ದಿಲ್ಲಿಯ ಹೊರವಲಯಕ್ಕೆ ಕರೆದುಕೊಂಡುಹೋಗಿ ತನ್ನ ಸಂಗೀತದ ಮಾಯಿಕ ಪ್ರಭಾವವನ್ನು ತೋರಿಸಿದ. ದಿಗ್ಭ್ರಾಂತನಾದ ಬಾದಷಹ ತನ್ನ ದರ್ಬಾರಿನಲ್ಲೂ ವೀಣೆ ಬಾರಿಸಬೇಕೆಂದೂ ಅವನು ಕೇಳಿದ್ದನ್ನು ಕೊಡುವುದಾಗಿಯೂ ಕೇಳಿಕೊಂಡ. ಇಡೀ ದಿಲ್ಲಿಯೇ ಅಲ್ಲಿ ನೆರೆಯಿತು. ಛಿತಾಯಿಯೂ ಬಂದಿದ್ದಳು. ಸಮರಸಿಂಹನ ವೀಣಾವಾದನವನ್ನು ಕೇಳಿ ಅವಳ

ಕಣ್ಣುಗಳಿಂದ ಧಾರಕಾರವಾಗಿ ನೀರು ಹರಿಯಿತು. ಉಪ್ಪರಿಗೆಯ ಮೇಲಿದ್ದ ಆಕೆಯ ಕಂಬನಿ ಬಾದಷಹನ ಮೇಲೆ ಉರುಳಿತು. ಅದರ ಬಗೆಗೆ ವಿಚಾರಿಸಿದಾಗ ಅದು ಛಿತಾಯಿಯ ಕಂಬನಿ ಎಂದು ಸುಲ್ತಾನನಿಗೆ ತಿಳಿಯಿತು. ಕೊನೆಗೆ ಯೋಗಿ ಅವಳ ಗಂಡನೇ ಎಂಬ ಅಂಶವೂ ತಿಳಿದುಬಂದಿತು. ಅಲ್ಲಾವುದ್ದೀನನ ಕಲ್ಲೆದೆಯನ್ನೂ ಸಮರಸಿಂಹನ ವೀಣೆ ಕರಗಿಸಿತು. ಅವನು ತನ್ನ ಎಲ್ಲ ಕಾಠಿಣ್ಯವನ್ನೂ ತೊರೆದು ತನ್ನ ಮಾತಿನಂತೆ ಛಿತಾಯಿಯನ್ನು ಸಮರಸಿಂಹನಿಗೆ ಒಪ್ಪಿಸಿದ. ತನ್ನ ಮಗಳು-ಅಳಿಯ ಎಂದು ಭಾವಿಸಿ ಅವರನ್ನು ರಾಜಗೌರವದಿಂದ ಉಪಚರಿಸಿದ; ಆನೆ, ಕುದುರೆ, ವಸ್ತ್ರ ಭೂಷಣಗಳನ್ನು ಕೊಟ್ಟು ಅವರನ್ನು ಪ್ರೀತಿಯಿಂದ ಕಂಬನಿಗರೆಯುತ್ತ ಬೀಳ್ಕೊಟ್ಟ.

ಇದು ಸಂಕ್ಷೇಪದಲ್ಲಿ ಈ ಕಾವ್ಯದ ಕಥೆ. ಇದನ್ನು ಇತಿಹಾಸದ ಒರೆಗಲ್ಲಿಗೆ ಹಚ್ಚಿದಾಗ ಅನೇಕ ತಥ್ಯಗಳು ಹೊರಬೀಳುತ್ತವೆ. ಇದರ ಪ್ರಧಾನ ಪಾತ್ರಗಳು, ಘಟನೆಗಳು ಇವೆಲ್ಲವೂ ಐತಿಹಾಸಿಕ. ಅಲ್ಲಾವುದ್ದೀನನ ದಕ್ಷಿಣ ದಂಡಯಾತ್ರೆ, ದೇವಗಿರಿಯ ಪತನ ಇವೆಲ್ಲ ಐತಿಹಾಸಿಕವಾಗಿ ಸತ್ಯಾಂಶಗಳು. ಆದರೆ ರಾಮದೇವನ ಮಗಳ ಕಥೆ ಕಲ್ಪನೆಯಿರಬೇಕೆಂದು ವಿದ್ವಾಂಸರು ಶಂಕಿಸಿದ್ದಾರೆ. ಇತಿಹಾಸದ ಪ್ರಕಾರ ರಾಮದೇವನ ಅಳಿಯ ಹರಪಾಲ. ಬರನಿಯ ಪ್ರಕಾರ ಕ್ರಿ.ಶ. 1317 ರಲ್ಲಿ ಕುತುಬ್ ದೀನ್ ದೇವಗಿರಿಯನ್ನು ಮುತ್ತಿ ರಾಮದೇವನ ಅಳಿಯನಾದ ಹರಪಾಲನನ್ನು ಸೋಲಿಸಿ, ಸೆರೆಹಿಡಿದ. ಕೊನೆಗೆ ಸಜೀವವಾಗಿ ದಹನ ಮಾಡಿದ. ತಾಜಿಯಾತ್ ಉಲ್ ಅನ್ಸಾರನ ಪ್ರಕಾರ ದೇವಗಿರಿಯ ದೊರೆ ರಾಮದೇವ ದಿಲ್ಲಿಯ ಸುಲ್ತಾನ ಅಲ್ಲಾವುದ್ದೀನನಿಗೆ ತನ್ನ ಮಗಳನ್ನು ಒಪ್ಪಿಸಿ ತನ್ನನ್ನೂ ಮತ್ತು ದೇಶವನ್ನೂ ಉಳಿಸಿಕೊಂಡ.

ಕರ್ಣಾಟಕದ ಚರಿತ್ರೆಯ ದೃಷ್ಟಿಯಿಂದ ಸೌರಸೀ ಇಲ್ಲವೆ ಸಮರ ಸಿಂಹನ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ಸೌರಸೀ, ಛಿತಾಯಿ, ಗೋಪಾಲ ನಾಯಕ ಮತ್ತು ಜಂಗಮ ಈ ಪಾತ್ರಗಳು ಕನ್ನಡ ಸಂಸ್ಕೃತಿಯ ರತ್ನದೀಪಗಳು. ಇವರ ಐತಿಹಾಸಿಕತೆಯ ಬಗೆಗೆ ವಿವೇಚನೆ ನಡೆಯಬೇಕು. ಕವಿಯ ಪ್ರಕಾರ ಸೌರಸೀ ದ್ವಾರಸಮುದ್ರದ ಅರಸ ಶ್ರೀಮನ್ನಾರಾಯಣನ ಮಗ. ಇತಿಹಾಸದ ಪ್ರಕಾರ ರಾಮದೇವ ದೇವಗಿರಿಯನ್ನು ಆಳುತ್ತಿದ್ದಾಗ ದ್ವಾರಸಮುದ್ರದಲ್ಲಿ 3ನೆಯ ವೀರ ನರಸಿಂಹ ಮತ್ತು ಮೂರನೆಯ ಬಲ್ಲಾಳ (1291–1327) ಇವರು ಆಳಿದರು. ಹೊಯ್ಸಳರೂ ಯಾದವರೂ ಬದ್ಧದ್ವೇಷಿಗಳು. ವೀರನರಸಿಂಹನ ತಂದೆ ರಾಮದೇವನ ತಂದೆಯೊಡನೆ ಯುದ್ಧಮಾಡಿದ್ದ. ಅಲ್ಲಾವುದ್ದೀನ ದ್ವಾರ ಸಮುದ್ರದ ಮೇಲೆ ಮುತ್ತಿಗೆ ಹಾಕಿದಾಗ ದೇವಗಿರಿಯ ರಾಮದೇವ ಅವನಿಗೆ ನೆರವಾದ. ರಾಮದೇವನ ಮಗಳನ್ನು ಹೊಯ್ಸಳ ರಾಜಕುಮಾರನಿಗೆ ಕೊಟ್ಟಿದ್ದರೆ ಇದು ಸಾಧ್ಯವೆ ?

ಕಿಂಕೇಡ್ ಮತ್ತು ಪಾರಸನೀಸ್ ಅವರ ಪ್ರಕಾರ ದೇವಲದೇವಿಯೇ ದೇವಗಿರಿಯ ಪತನಕ್ಕೆ ಕಾರಣ. ಹಾಗಾದರೆ ದೇವಲದೇವಿ ಮತ್ತು ಛಿತಾಯಿ ಅಭಿನ್ನರೆ ? ಅಮೀರ್ ಖುಸ್ರೋವಿನ ಪ್ರಕಾರ ಗುಜರಾತಿನ ರಾಜ ಕರ್ಣನ ಮಗಳು ದೇವಲದೇವಿ ಮತ್ತು ದೇವಗಿರಿಯ ರಾಮದೇವನ ಮಗ ಶಂಕರದೇವ ಇವರ ಮದುವೆ ನಿಶ್ಚಯವಾಗಿತ್ತು. ಆದರೆ ಇತಿಹಾಸದಲ್ಲೆಲ್ಲೂ ರಾಮದೇವನ ಮಗಳ ಹೆಸರು ಬರುವುದಿಲ್ಲ. ದ್ವಾರಸಮುದ್ರದ ಅರಸ ಮೂರನೆಯ ವೀರಬಲ್ಲಾಳನಿಗೆ ಚಿಕ್ಕಾಯಿ ಇಲ್ಲವೆ ಚಿಕ್ಕತಾಯಿ ಎಂಬ ಹೆಸರಿನ ಒಬ್ಬಳು ರಾಣಿ ಇದ್ದಳಂತೆ.

ಇನ್ನು ಸಮರಸಿಂಹ. ಆತನ ಬಗೆಗೂ ಇತಿಹಾಸ ಮೌನತಳೆದಿದೆ. ಪ್ರಿಯಾವಿಯೋಗದಿಂದ ಅವನು ವಿರಾಗಿಯಾಗಿ ಚಂದ್ರಗಿರಿಗೆ ಹೋಗುತ್ತಾನೆ. ಈ ಚಂದ್ರಗಿರಿ ಶ್ರವಣಬೆಳುಗೊಳದ ಚಿಕ್ಕ ಬೆಟ್ಟ ಇಲ್ಲವೆ ಚಂದ್ರಗಿರಿಯೇ ಇರಬೇಕೆಂದು ಹಿಂದೀ ವಿದ್ವಾಂಸರು ಊಹಿಸಿದ್ದಾರೆ. ಗೋಪಾಲನಾಯಕ ಕನ್ನಡಿಗ ಎಂದು ಡಾ॥ ಶ್ರೀಕಂಠಶಾಸ್ತ್ರಿಯವರು ತಮ್ಮ ಲೇಖನವೊಂದರಲ್ಲಿ ಪ್ರತಿಪಾದಿಸಿದ್ದಾರೆ. ಅಲ್ಲಾವುದ್ದೀನ್ ದಕ್ಷಿಣಕ್ಕೆ ಬಂದಾಗ ಅವನ ಕೈವಶವಾದ ರತ್ನಗಳಲ್ಲಿ ಇವನೂ ಒಬ್ಬ. ಗೋಪಾಲನಾಯಕನ ಬಗೆಗೂ ಸಾಕಷ್ಟು ಬೆಳಕು ಬೀಳಬೇಕಾಗಿದೆ. ಗೋಪಾಲನಾಯಕ್,ಅಮೀರ್ ಖುಸ್ರೋ ಮೊದಲಾದ ಸಂಗೀತ ರತ್ನಗಳಿಂದ ತನ್ನ ದರ್ಬಾರನ್ನು ಅಲಂಕರಿಸಿದ ಅಲ್ಲಾವುದ್ದೀನ ಸಂಗೀತ ಪ್ರೇಮಿ ಎಂಬುದರಲ್ಲಿ ಸಂದೇಹವೇಇಲ್ಲ. ಅಲ್ಲಾವುದ್ದೀನ ಕಲಾಪ್ರೇಮಿ ಎಂಬುದಕ್ಕೆ ಇತಿಹಾಸದಲ್ಲಿ ಮತ್ತೊಂದು ಸಾಕ್ಷ್ಯ ದೊರೆಯುತ್ತದೆ. ಅಲ್ಲಾವುದ್ದೀನನ ಸೇನೆ ಶ್ರೀರಂಗವನ್ನು ಮುತ್ತಿ ರಂಗನಾಥನ ವಿಗ್ರಹವನ್ನು ಹೊತ್ತುಕೊಂಡು ಹೋಯಿತಂತೆ. ಆ ದೇವಾಲಯದ ಸಂಗೀತಗಾರರು ಮತ್ತು ನರ್ತಕರ ವೇಷಾಂತರದಿಂದ ದಿಲ್ಲಿಯವರೆಗೂ ಹೋಗಿ ತಮ್ಮ ಕಲೆಯಿಂದ ಅಲ್ಲಾವುದ್ದೀನನನ್ನು ಮೆಚ್ಚಿಸಿ ರಂಗನಾಥನ ಮೂರ್ತಿಯನ್ನು ಮರಳಿ ತಂದರೆಂದು ಡಾ॥ ಎಸ್. ಕೃಷ್ಣಸ್ವಾಮಿ ಐಯಂಗಾರ್ ಅವರು ತಮ್ಮ 'South India and her Muhammadan Invaders' ಎಂಬ ಗ್ರಂಥದಲ್ಲಿ ಹೇಳಿದ್ದಾರೆ.

ಇಲ್ಲಿಯ ಕಥೆ, ಕೆಲವು ಪಾತ್ರಗಳ ಸತ್ಯಾಸತ್ಯತೆಯನ್ನು ಕುರಿತು ಹೆಚ್ಚಿನ ಸಂಶೋಧನೆ ನಡೆಸಬೇಕು. ಅದು ಹೇಗಾದರೂ ಇರಲಿ ಗೋಪಾಲನಾಯಕನೂ ಸ್ವರ ಸಂಧಾನ ಮಾಡಲಾಗದ ವೀಣೆಯನ್ನು ಮಿಡಿದು ಅಲ್ಲಾವುದ್ದೀನನ ಕಲ್ಲೆದೆಯನ್ನೂ ಕರಗಿಸಿದ ಸಮರಸಿಂಹನ ಪಾತ್ರ ಕನ್ನಡಿಗರ ವೈಣಿಕ ಪರಂಪರೆಯ ಕಲಾಸಿದ್ಧಿಯ ವಿಜಯ ವೈಜಯಂತಿ. "ವೀಣೆಯ ಬೆಡಗಿದು ಮೈಸೂರು'' ಎಂಬ ಮಾತಿನ ಸತ್ಯತೆಗೆ ಇದೆಂಥ ಅದ್ಭುತ ಸಾಕ್ಷಿ! ಇಡೀ ಕಾವ್ಯ ಸಂಗೀತದ ಸ್ವರ ಮಾಧುರಿಯಿಂದ ಅನುರಣಿತವಾಗಿದೆ. ಇಲ್ಲಿಯ ರಾಮದೇವ ಸಂಗೀತ ರಸಿಕ, ಛಿತಾಯಿ ಸಂಗೀತ ಶಿಖಾಮಣಿ, ಸಮರಸಿಂಹನಂತೂ ಸಂಗೀತ ಚಕ್ರವರ್ತಿ, ಗೋಪಾಲನಾಯಕ ವಿಖ್ಯಾತ ವಾಗ್ಗೇಯಕಾರ.

ಅಷ್ಟೇ ಏಕೆ ಕ್ರೂರಿಯೆಂದು ವಿಖ್ಯಾತನಾದ ಅಲ್ಲಾವುದ್ದೀನನೂ ರಸಿಕ ಚಕ್ರ. ಭಿತಾಯಿ ಗುರು ಜಂಗಮ ವೀಣಾವಾದನದಲ್ಲಿ ಅನುಪಮ. ಈ ಹೊತ್ತಿಗಾಗಲೇ ದೇವಗಿರಿಯಲ್ಲೂ ಜಂಗಮರು ಕಾಣಿಸಿಕೊಂಡಿರಬೇಕು. ಜಂಗಮನ ಪಾತ್ರದಲ್ಲಿ ನಾದ ಮತ್ತು ಅನಹದನಾದ ಇವೆರಡರ ಅಪೂರ್ವ ಮೇಳವನ್ನು ಕಾಣಬಹುದು. ಒಟ್ಟಿನಲ್ಲಿ ಯಾವ ದೃಷ್ಟಿಯಿಂದ ನೋಡಿದರೂ ಈ ಕಾವ್ಯ ಕನ್ನಡ ಸಂಸ್ಕೃತಿಯ ಕೀರ್ತಿಪತಾಕೆ.

ತೂಗುತ್ತಿದೆ ಲೋಲಕ

ದೊಡ್ಡರಂಗೇಗೌಡ

ಹಿಂಸೆಯಾಗುತ್ತಿದೆ ಈಗ...ಹಾದಿ ಪೂರಾ ಹೊರಳಿದ ಮೇಲೆ
ಇಂಥ ಗತಿ ಬಂದೀತೆಂದು ಕಹಿ ವೇಳೆ ಹೀಗೆ—
ಬೆನ್ನಿಗೆ ಅತುಕೊಂಡೀತೆಂದು ಅನ್ನಿಸಿಯೇ ಇರಲಿಲ್ಲ...

ಅನ್ನಿಸಿಯೇ ಇರಲಿಲ್ಲವೆಂದಮೇಲೆ ಲೆಕ್ಕಹಾಕಬಾರದು
ಇಷ್ಟಕ್ಕೂ 'ಚೊಕ್ಕ' ಯಾರಿದ್ದಾರೆ ಅಕ್ಕ-ಪಕ್ಕ?

ಲೆಕ್ಕಹಾಕುವ ಹಾಗಿಲ್ಲ...ಆದರೂ
ರಜತ ರೇಖೆಯ ನೆರಳು ಚಡಪಡಿಕೆ ಒರಳಲ್ಲಿ
ನನ್ನ ಜೀವ ಜಾಲಾಡಿಸುತ್ತಾ ಮತ್ತೆ ಮತ್ತೆ ತೊಳಲಿಸಿ
ಬಳಲಿಸಿ ಬದುಕಿದ್ದಾಗಲೇ ಹೆಣವಾದರೂ...
ಕನಸು ಸೆಳೆದಂತೆ ಒಳ ಗೀಳು
ಮೊರೆದಂತೆ ಆಸೆ ಪಥದಲ್ಲಿ ಒಂದೊಂದೆ ಬಯಕೆಯ ಪಕಳೆ
ಅರಳಿದಂತೆ ಎತ್ತರೆತ್ತರಕ್ಕೇರಿ ಒಮ್ಮೆಗೇ ಬಿದ್ದಂತೆ
ಚಿಗುರೊಡೆದ ನೀಯತ್ತು ಬಿರಿದಂತೆ
ಈ ತನಕ ಕೂಡಿಟ್ಟ ನಗೆ ಅರಳೆ ಗಾಳಿಗೆ ಹಾರಿದಂತೆ
ಉತ್ಪಾತ ಮಾತ್ರ ನನ್ನ ಪಾಲಿಗೆ

ಆಗ ಲಗ್ಗೆ ಕುಣಿದ ತಪ್ಪಿಗೆ ಈಗ ಎಣಿಸಬೇಕಾಗಿದೆ ಘಳಿಗೆ

ಇಲ್ಲ...ಹೀಗಾದೀತೆಂದು ಅನ್ನಿಸಿಯೇ ಇರಲಿಲ್ಲ...

ಅನ್ನಿಸಿಯೇ ಇರಲಿಲ್ಲವೆಂದಮೇಲೆ ಎಳೆತ
ಎಳೆತದ ಮೇಲೆ ಎಳೆತ ಒತ್ತಾಯಿಸುತ್ತಾ
ಬಲವೆಲ್ಲ ನಿಗುರಿಸಿದ ಡೌಲಿನ ಬಾಲ
ಡೊಂಕಾದರೂ,

ಕಾಮನಬಿಲ್ಲ ಹಿಡಿಯುವ ಆವೇಗ ಬಿರಿದು ಚಪಲ.

ಸದ್ದು ಮಾಡಿತ್ತೊಮ್ಮೆ
ಮೆದುಳ ನಾಟ್ಯಶಾಲೆಯಲ್ಲೊಂದು ಇಂಗಿತದ—
ತಬಲ ; ಕುಟ್ಟಿದ್ದೇ ತಾಳವಾಗಿ
ಹಾಡಿದ್ದೇ ಸಂಗೀತವಾಗಿ ಹಿಗ್ಗಾಮುಗ್ಗಾ ತಿಂದ ತಪ್ಪಿಗೆ
ಅಜೀರ್ಣವಾಗಿ ಅಪಥ್ಯವಾಗಿ
ಈಗ ಮಾತೆತ್ತಿದರೆ ವಾಕರಿಕೆ (ನನಗೆ ನಾನೇ ?)

ಇದೆಲ್ಲ ಕಥೆಯಲ್ಲ, ನಿಜ...
ನಾನು ನಿಜ ಗೀತೆ ಬರೆಯಲಿಲ್ಲ ಮಾನವೀಯ
ಸಂಗೀತ ಮಿಡಿಯಲಿಲ್ಲವೆಂದೇ ಇರುವೊಂದು ಹೃದಯಕ್ಕೆ
ಬೇರೆ ಬೇರೆ ಗಾಯ ;

ಹಿಂಸೆಯಾಗುತ್ತಿದೆ ಈಗ ನಡಿಗೆ ಜಾಡು ತಪ್ಪಿದ ಬಳಿಕ
ನೋವಿನ ತಳ್ಳಂಕ ಹರಿತವಾಗಿ
ಚಿತ್ತದಾಳದೊಳಗೆ ಮತ್ತೆ ಮತ್ತೆ ಆಕ್ರಾಂತವಾಗಿ
ಎಡೆಬಿಡದೆ ತೂಗುತ್ತಿದೆ ಪರಾಮರ್ಶೆಯ ಲೋಲಕ.

ಬೇಂದ್ರೆಯವರ 'ಜೋಗಿ' – ಒಂದು ವಿಶ್ಲೇಷಣೆ

ಎಂ. ವಿ. ಶ್ರೀನಿವಾಸಮೂರ್ತಿ

ಕನ್ನಡ ಕಾವ್ಯ ದಿಗಂತವನ್ನು ವಿಸ್ತರಿಸಿದ ಸಹಜಪ್ರತಿಭೆಯ ಕವಿಗಳಲ್ಲಿ ದ. ರಾ. ಬೇಂದ್ರೆಯವರ ಸ್ಥಾನ ಅನನ್ಯವಾದುದೆಂಬುದನ್ನು ಬಹುಮಟ್ಟಿಗೆ ನಿಷ್ಪಾಕ್ಷಿಕ ಮನೋಧರ್ಮದ ಸಹೃದಯ ವರ್ಗ, ವಿಮರ್ಶಕ ವರ್ಗ ಒಪ್ಪಿಕೊಂಡಿದೆ. ಹಾಗೆಂದ ಮಾತ್ರಕ್ಕೆ ಬೇಂದ್ರೆಯವರು ಮುಟ್ಟಿದ್ದೆಲ್ಲ ಚಿನ್ನ, ಎಲ್ಲವೂ ಸಹಜ ಕವನಗಳೆಂದೂ, ಅತ್ಯುತ್ತಮವೆಂದೂ ಭಾವಿಸಬೇಕಾಗಿಲ್ಲ. ಅದರಲ್ಲೂ ಅವರ ಅಧ್ಯಾತ್ಮಿಕ ಕವನಗಳ ಕೋಟೆಯನ್ನು ಭೇದಿಸಿ ಒಳ ಹೂರಣವನ್ನು ಸವಿಯುವ ಸಾಹಸ ಎಷ್ಟೋ ವೇಳೆ ಶ್ರಮಕ್ಕೆ ತಕ್ಕ ಫಲ ಕೊಡುವಂಥದಲ್ಲ. ಇದಕ್ಕೆ ಅಪವಾದ ವೆಂಬಂತಿರುವ ಕೆಲವೇ ಕವನಗಳಲ್ಲಿ 'ಜೋಗಿ' ಕೂಡ ಒಂದು. ಅನೇಕರ ಗಮನ ಸೆಳೆದು ವಾದ–ವಿವಾದಗಳಿಗೆ ಎಡೆ ಮಾಡಿಕೊಟ್ಟು ಸವಾಲು ಹಾಕಿ ಸಡ್ಡು ಹೊಡೆದು ನಿಂತಿರುವ ಕವನ ಇದು. ಬೇಂದ್ರೆಯವರ ಅನುಭಾವ ಪ್ರಜ್ಞೆಯ ಅಭಿವ್ಯಕ್ತಿ ಈ ಕವನವೆಂದು ಹೇಳಲು ಸಾಕ್ಷ್ಯಾಧಾರಗಳನ್ನು ಒದಗಿಸುವ ಪ್ರಯತ್ನವೇ ಈ ಲೇಖನ.

ಬೇಂದ್ರೆಯವರ 'ಗಂಗಾವತರಣ'ದ ಹಿನ್ನುಡಿಯಾಗಿ ಸಂ. ವಾ. ದ. ಅವರು ನೀಡಿರುವ ವಿವರಣೆಗೆ ಬೇಂದ್ರೆಯವರ ಸಮ್ಮತಿ ಇದೆ ಎಂದು ಯಾರಾದರೂ ಬಹು ಸುಲಭವಾಗಿ ಊಹಿಸಬಹುದು. ಇದು ವಾಸ್ತವವೂ ಹೌದು. "ನಾಮುಪದ ತಾದಾತ್ಮ್ಯದ ಒಂದು ಅನುಭವ 'ಜೋಗಿ' ಪದ್ಯದ ಸ್ಥಾಯಿ ಭಾವ. ಇಲ್ಲಿ ಭಕ್ತ ಒಂದು ಹೆಣ್ಣು ಜೀವ, ಭಗವಂತ ಜೋಗಿ ಎಂದು ಹೇಳಬಹುದು. ಭಗವಂತ–ಭಕ್ತ ಮಾರ್ಗ ಸುಲಭ ರಮಣೀಯವೂ ಹೌದು"[1] ಎಂಬ ವಿವರಣೆ ಇದೆ. ನಾನು ಈಗ್ಗೆ ಕೆಲವು ವರ್ಷಗಳ ಹಿಂದೆ ಬೇಂದ್ರೆಯವರನ್ನು ಭೇಟಿಯಾದಾಗ, ಈ ಕವನವನ್ನು ಆ ವರ್ಷದ ವಿದ್ಯಾರ್ಥಿಗಳಿಗೆ ಪಾಠ ಹೇಳಬೇಕಾಗಿ ಬಂದುದರಿಂದ,ಇದರ ಬಗ್ಗೆ ಸಹಜ ಕುತೂಹಲ ದಿಂದ ಪ್ರಶ್ನಿಸಿದಾಗ ಮೇಲೆ ಕೊಟ್ಟ ವಿವರಣೆಯ ಜಾಡು ಹಿಡಿದು ಅರ್ಥೈಸ ಬೇಕೆಂದೂ, ಶ್ರೀ ನಾಡಿಗರು ಈ ಕಾವ್ಯದಲ್ಲಿ 'ನಾಯಕ'ನೊಬ್ಬನನ್ನು ಹುಡುಕ ಹೋಗಿ ವ್ಯರ್ಥವಾಗಿ ಆಯಾಸಪಟ್ಟಿದ್ದಾರೆಂದೂ ಅವರಿಂದ ಉತ್ತರ ಬಂತು. ಇದುವರೆಗೆ ಈ

1 ಗಂಗಾವತರಣ – ಬೇಂದ್ರೆ. ಸಮಾಜ ಪುಸ್ತಕಾಲಯ, ಧಾರವಾಡ. ಐದನೆಯ ಮುದ್ರಣ, 1971, ಪುಟ 120.

ಕವನವನ್ನು ಕುರಿತು ಗಮನಾರ್ಹ ವಿಶ್ಲೇಷಣೆ ನಾನು ತಿಳಿದಂತೆ ಮೂರು ಇವೆ. (1) ಸುಮತೀಂದ್ರ ನಾಡಿಗರ 'ಬೇಂದ್ರೆಯವರ ಜೋಗಿ'–ಕರ್ನಾಟಕ ಸಂಘ ಉಡುಪಿಯವರು ಕವಿ ಗೋಪಾಲ ಕೃಷ್ಣ ಅಡಿಗರಿಗೆ ಸಮರ್ಪಿಸಿದ ಗ್ರಂಥ 'ಅಭಿವ್ಯಕ್ತಿ'ಯಲ್ಲಿನ ಲೇಖನ. ಇದೇ ಲೇಖನ ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆ 'ಪ್ರಾಯೋಗಿಕ ವಿಮರ್ಶೆ'ಯಲ್ಲಿ ಪುನರ್ಮುದ್ರಿತವಾಗಿದೆ. (2) ಕೀರ್ತಿ ನಾಥ ಕುರ್ತುಕೋಟಿಯವರ–ಭೃಂಗದ ಬೆನ್ನೇರಿ–ಗ್ರಂಥದಲ್ಲಿನ 'ಜೋಗಿ'. (3) 'ಕರ್ನಾಟಕ ಭಾರತಿ'ಯ ಸಂಪುಟ 8 ಸಂಚಿಕೆ 4 ರಲ್ಲಿ ಶ್ರೀ ವೇಣುಗೋಪಾಲ ಕಾಸರಗೋಡು ಅವರ ಲೇಖನ 'ಬೇಂದ್ರೆಯವರ ಎರಡು ಕವನಗಳು'.

ಶ್ರೀ ನಾಡಿಗರು ಆಗಲೇ ತಿಳಿಸಿದಂತೆ ಈ ಕವನದಲ್ಲಿ ನಾಯಕನ ಪರವಾಗಿ ವ್ಯಾಖ್ಯಾನ ಮಾಡಿದ್ದಾರಾಗಿ ವಿಶ್ಲೇಷಣೆ ಅಲ್ಲಲ್ಲಿ ಒಳ್ಳೆಯ 'ಹೊಳಹು'ಗಳನ್ನೊಳ ಗೊಂಡಿದ್ದರೂ ಕವನವನ್ನು ಅರ್ಥೈಸುವಲ್ಲಿ ವಿಫಲವಾಗಿದೆ. ಶ್ರೀ ಕುರ್ತುಕೋಟಿ ಯವರು ಬೇಂದ್ರೆಯವರಿಗೆ ತುಂಬಾ ಹತ್ತಿರದವರಾದುದರಿಂದ, ಸಂ. ವಾ. ದ. ಅವ ರಂತೆಯೇ ಬೇಂದ್ರೆಯವರೊಂದಿಗೆ 'ಸಂವಾದ' ನಡೆಸಬಲ್ಲವರಾದ್ದರಿಂದ ಹೆಚ್ಚು ಪ್ರಮಾಣಿತವಾದ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಈ ಕವನದ ವಿಶ್ಲೇಷಣೆ ಯಲ್ಲಿ. ಇಷ್ಟಾಗಿಯೂ ಈ ಕವನದ ಬಗೆಗೆ ಸ್ಪಷ್ಟವಾಗಿ ಏನನ್ನೂ ಹೇಳಲಾಗುವು ದಿಲ್ಲ ಎಂಬಂತೆ 'ಆದರೂ ಒಟ್ಟು ಕವಿತೆಯ ಅನುಭವ ಭಯಾನಕವಾಗಿಯೇ ಉಳಿ ಯುತ್ತದೆ...ಸ್ವರ, ಕೋಗಿಲೆ, ಮರ ಇವುಗಳ ಸಂಬಂಧವೇನು, ಕರೆಯ ಅರ್ಥವೇನು ಎನ್ನುವುದು ಗೊತ್ತಾಗಿಲ್ಲ...ಕೋಗಿಲೆ ಅದೃಷ್ಟ ಶಕ್ತಿಯ ಸಂಕೇತವಾಗುತ್ತದೆ. ...' ಎಂಬಂಥ ಮಾತುಗಳನ್ನಾಡಿದ್ದಾರೆ. ಇದೇ ಜಾಡಿನಲ್ಲಿ ಮುಂದುವರಿಯುವವ ರಿಗೆ ಇದೊಂದು ಹೊಸ ತಿರುವನ್ನು ಹಾಕಿಕೊಟ್ಟ ವಿಶ್ಲೇಷಣೆ ಎನ್ನಬಹುದು. ಶ್ರೀ ವೇಣುಗೋಪಾಲ ಅವರು ತಮ್ಮ ಲೇಖನದಲ್ಲಿ, ಕುರ್ತುಕೋಟಿಯವರನ್ನು ಗಮನಿಸಿಯೇ ಇಲ್ಲವೆಂಬಂತೆ, ನಾಡಿಗರಂತೆ, ಕಾವ್ಯದ ನಾಯಕನ ಪರವಾಗಿಯೇ ಅರ್ಥೈಸುವ ವ್ಯರ್ಥ ಪ್ರಯತ್ನ ಮಾಡಿದ್ದಾರೆ, ಬೇಂದ್ರೆಯವರು ತಮ್ಮ 'ವಿನಯ' ಕವನ ಸಂಗ್ರಹದ ಮುನ್ನುಡಿಯಲ್ಲಿ ಹೇಳಿದಂತೆ 'ಕವಿಯನ್ನು ಧಿಃಕರಿಸಿ ವಿಮರ್ಶೆ ಮಾಡುವವರ ಗತಿಯೆ ಹೀಗೆ' ಎಂಬಂತೆ. ಇಷ್ಟೆಲ್ಲ ಪ್ರಯತ್ನಗಳ ಹಿನ್ನೆಲೆಯಲ್ಲಿ ಈ ಕವನವನ್ನು ಅರ್ಥೈಸುವ ಮತ್ತೊಂದು ಪ್ರಯತ್ನ ಈ ಲೇಖನ.

ಬಹಿರಂಗಕ್ಕೆ ಧಾರವಾಡದ ನಿಸರ್ಗವನ್ನು ವರ್ಣಿಸಿರುವ ಚಿತ್ರವೆಂಬಂತೆ ತೋರಿದರೂ ಅಂತರಂಗಿಕವಾಗಿ ಈ ಕವನ ನಾಮಜಪವನ್ನು ಮಾಡಿ ಭಕ್ತಿಯ ಸಾಧನೆ ಯಲ್ಲಿ ನಿರತಳಾದ ಸಾಧಕಿಯೊಬ್ಬಳ ಅಂತರಂಗದ ಹೋರಾಟದ ಚಿತ್ರಣ. ಇದನ್ನು ಒಪ್ಪಿಕೊಂಡೇ ಹೊರಟಾಗ ಕವನ ತನ್ನ ಕ್ಲಿಷ್ಟತೆಯ ಗಂಟನ್ನು ಬಿಚ್ಚುತ್ತಾ ಸರಳ ವಾಗುತ್ತಾ ಹೋಗುತ್ತದೆ. ಮಹಾದೇವಿಯಕ್ಕನ ಭಕ್ತಿಯ ಉತ್ಕಟತೆ, ಶರಣಸತಿ-

ಲಿಂಗಪತಿಯೆಂಬ ದ್ವೈತ ಭಾವದ ಹಿನ್ನೆಲೆಯಾಗುಳ್ಳ, ಅಲ್ಲಮ ಪ್ರಭುವಿನ 'ಎತ್ತಣ ಮಾಮರ ಎತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ ಎಂಬ ವಚನದ ಮತಿತಾರ್ಥದ ಬೆಳಕಿನಲ್ಲಿ ಈ ಕವನವನ್ನು ಅರ್ಥೈಸುವುದು ಸಾರ್ಥಕವೆಂದು ನನ್ನ ಭಾವನೆ. ಇಲ್ಲಿಯ ಮಾಮರ ದೇಹಾತ್ಮ ಜೀವಾತ್ಮನಿಗೆ (ಕೋಗಿಲೆ) ಆಶ್ರಯ ಕೊಟ್ಟ ತಾಣ. ಈ 'ಜೀವಾತ್ಮ'ದ ಅರಿವಾಗಬೇಕಾದರೂ ಅನ್ನಮಯ ಪ್ರಾಣಿಗೆ 'ಜೋಗಿ'ಯಂಥ ಗುರುವಿನ ಆಶೀರ್ವಾದ, ಉಪದೇಶಗಳ ಅಗತ್ಯವಿದೆ. ಅದನ್ನೇ ನೆಮ್ಮಿ ಸಾಧನೆಯ ಹಾದಿಯಲ್ಲಿ ಮುಂದುವರಿಯುತ್ತಾ ಹೋಗಿ ಕೊನೆಗೊಮ್ಮೆ ಪಕ್ವವಾದ, ಹದವಾದ ಸ್ಥಿತಿಯನ್ನು ತಲುಪುವವರೆಗೆ ಈ ಕವನದ ಹರಹಿದೆ.

ಊರ ತುದಿಯ ಆ ಮೂರು ಬಟ್ಟೆ ಮುಗಿದಲ್ಲಿನ ಕೊಳ್ಳ ಈ ಕವನದ ನಾಯಕಿ ಸಾಂಸಾರಿಕ ಕ್ಲೇಶಗಳಿಂದ ಬಿಡುಗಡೆಹೊಂದಿ ತನ್ನ ಮನಸ್ಸನ್ನು ದೈವದತ್ತ ಹೊರಳಿ ಸುತ್ತಿರುವ ಸ್ಥಿತಿಯ ಸಂಕೇತವಾಗುತ್ತದೆ. ಬಾಲ್ಯ, ಯೌವನ, ಗಾರ್ಹಸ್ಥ್ಯಗಳ ನಂತರದ ವಾನಪ್ರಸ್ಥದ ಕಲ್ಪನೆಗೆ ಎಡೆಮಾಡಿಕೊಡುತ್ತದೆ. ಹಾಗೆಯೇ ಧರ್ಮ, ಅರ್ಥ, ಕಾಮಗಳನ್ನೂ ಸಾಕಷ್ಟು ಅನುಭವಿಸಿ 'ಮೂರಾಬಟ್ಟೆ'ಯಾದ ತನ್ನ ಜೀವನಕ್ಕೆ ಒಂದು ನಿಲುಗಡೆಯನ್ನು ತರಬೇಕೆನ್ನುವ ತೀರ್ಮಾನವನ್ನೂ, ಮೋಕ್ಷಕ್ಕಾಗಿ ಹಾತೊರೆಯುವಿಕೆಯನ್ನೂ ನಿರ್ದೇಶಿಸುತ್ತದೆ. ಹಳ್ಳ ಅಡಗಿ ಹರಿದು ಕೊಳ್ಳವಾಗಿದೆ. 'ಹಳ್ಳ ಅಡಗಿ ಹರಿ'ಯುವುದು ಬಯಕೆಗಳ ಗುಪ್ತಗಾಮಿತ್ವಕ್ಕೆ ಸಂಕೇತವಾಗುವಂತೆಯೇ ಭೋಗಾಕಾಂಕ್ಷೆಯ ವೈಪರೀತ್ಯಗಳಿಗೂ ಕನ್ನಡಿ ಹಿಡಿಯುತ್ತದೆ. ಅದು ಮಡುಗಟ್ಟಿ ನಿಲ್ಲುವುದೇ ಕೊಳ್ಳ. ಅಲ್ಲಿ ಲಂಗುಲಗಾಮಿಲ್ಲದ ತುಡುಗು ದನ ತೊಂಡು ಮೇಯುತ್ತದೆ. ಜೋಗಿ ಉಪದೇಶಿಸಿದ 'ನಾಮ ಜಪ'ವನ್ನು ತನ್ನ ಬದುಕಿನ 'ತಾರಕಮಂತ್ರ'ವಾಗಿ ಮಾಡಿಕೊಳ್ಳಲು ಹೆಣಗುವ ವಿಫಲ ಪ್ರಯತ್ನಕ್ಕೆ ಸಂಕೇತವಾಗುತ್ತವೆ ಈ ಸಾಲುಗಳು. ತುಡುಗುದನ ತೊಂಡು ಮೇಯಲು ಅವಕಾಶವಿರುವ ಸ್ಥಳ ಕಾಡು. ಇದು ಇಂದ್ರಿಯ ಚಾಪಲ್ಯದ ಸಂಕೇತವಾಗುವುದರೊಂದಿಗೆ ನಿಬಿಡತೆಯನ್ನೂ ಸೂಚಿಸುತ್ತದೆ. ಇಲ್ಲಿ ಹೊಕ್ಕವರು, ಈ ಸಾಂಸಾರಿಕ ಚಿಂತನೆಯ ಘೋರಾರಣ್ಯವನ್ನು ಹೊಕ್ಕವರು "ದಿಕ್ಕು ತಪ್ಪ ತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ" ಸಂಸಾರದಲ್ಲಿದ್ದೂ ಸಾಧನೆ ಮಾಡಬೇಕೆನ್ನುವವರ ಇಬ್ಬಂದಿತನವನ್ನು ಎತ್ತಿ ಹಿಡಿಯುವುದರ ಜೊತೆಗೆ ಸಾಧನೆಯ ಪರಿಚಯವಿಲ್ಲದ ಸಾಮಾನ್ಯ ಹೆಣ್ಣು ಜೀವಕ್ಕೆ ಈ ಭಕ್ತಿಯ ಹಾದಿ ಎಷ್ಟು ಕಠಿನವಾದುದು ಎಂಬುದನ್ನೂ ನಿರ್ದೇಶಿಸುತ್ತದೆ. (ವಚನಕಾರರ ಅದರಲ್ಲೂ ಭಕ್ತಿಭಂಡಾರಿ ಬಸವಣ್ಣನವರ ಭಕ್ತಿ ಸಾಧನೆಯ ತೊಳಲಾಟದ ವಚನಗಳನ್ನು ಉದಾಹರಣೆಗೆ ನೋಡಬಹುದು... 'ಅಂದಣವನೇರಿದ ಸೊಣಗನಂತೆ' ಇತ್ಯಾದಿ). 'ಇರುಳು ಅಂತನs ಹಗಲs ಗೂಕತಾವ ಅಲ್ಲಿ ಜೋಡ ಗೂಗಿ' – ಇದು ಬದುಕಿನ ಕೊನೆಯಂಚು ತಾನಿರುವುದು ಎಂದು ತಿಳಿದೂ, ಆ ತಿಳಿವ

ಳಿಕೆಯನ್ನು ಮೀರಿ ನಿಲ್ಲುವ ಭ್ರಾಮಕ ಪ್ರಪಂಚ, ಜೋಡುಗೂಗಿಯು ಗೂಕು ಬದುಕಿನಲ್ಲಿ ಏಳುವ ಅಪಸ್ವರಕ್ಕೆ ಸಂಕೇತವಾಗುತ್ತದೆ. 'ನಾಮಜಪ'ದ ನಡುವೆ ಅಪಸ್ವರವೆಂಬಂತೆ ಬರುವ ಸಾಂಸಾರಿಕ ಕ್ಲೇಶಗಳು (ಇಲ್ಲಿ ಹೆಣ್ಣು ಗಂಡಿಗಿಂತ ಒಂದು ಸಂಸಾರದ ರಚನೆಯಲ್ಲಿ ಕೇಂದ್ರ ಪಾತ್ರ ವಹಿಸುತ್ತಾಳೆ ಎಂಬುದನ್ನು ಮರೆಯಬಾರದು) ಕೆಲವೇಳೆ ತನ್ನ ಈ ಸಾಧನೆಯನ್ನು ಮೆಚ್ಚದ, ಸಹಿಸದ ಸಹಜೀವಿಗಳ ಅಪಸ್ವರದ 'ಕೂಗು, ಅವರ ತಾತ್ಸಾರ, ಕುಹಕ, ವ್ಯಂಗ್ಯ – ಇವೆಲ್ಲವನ್ನೂ ಕಟ್ಟಿಕೊಡಬಲ್ಲ ಸಾಮರ್ಥ್ಯ ಈ 'ಜೋಡಗೂಗಿ' ಪದಕ್ಕಿದೆ.

"ಅದನ ದಾಟಿ ಆ ಮಸಣವಾಟಿ' - ಸಾವು ಅನಿವಾರ್ಯ ಎಂಬ ಅರಿವಿನ ದ್ಯೋತಕವಾಗಿದೆ. ಅದರ ಪಕ್ಕದಲ್ಲೇ ಎಡ ಪಕ್ಕದಲ್ಲೇ 'ಕಾಮ ತನ್ನ ಪಚ್ಚಂಗಿ ಹಾಸಿಧಾಂಗೆ' ಇರುವ 'ನೀರಪಾಚಿ'–ಇಲ್ಲಿಯ ಹಸಿರು ಸಂಸಾರದ ವ್ಯಾಮೋಹ, ಇನ್ನೂ ಮುಗಿಯದ ಲೌಕಿಕ ಬಯಕೆಗಳ ಸಂಕೇತವಾಗುತ್ತದೆ. ಜೊತೆಗೆ ಈ 'ಜಾರು ಬಂಡೆಯಾಟ'ದಲ್ಲೇ ಮಗ್ನವಾದ ಜೀವಿಗಳ ದುರ್ದಮ್ಯ ಅಪೇಕ್ಷೆಗಳ ಸಂತೆಗೆ ಸಂಕೇತವಾಗುತ್ತದೆ. 'ಹೊಚ್ಚಿ ಹೊಂಡವನು ಮೆಚ್ಚಮಾಡತಾವೊ ಕಂಡ ಕಣ್ಣುಗಳಿಗೆ - ಹೊಂಡವನ್ನೂ ಹೊದಿಸಿ, ಮರೆಮಾಚಿ, ಅದರೊಳಗಿರುವ ಕಪ್ಪು ನೀರನ್ನು ಮರೆಸುವಂತೆ ಮಾಡಿ ಹಸಿರು ಕರೆಯುತ್ತದೆ : ಈ ಪಾಚಿಯ ಮೋಹಕತೆಗೆ ಮರುಳಾದ ವ್ಯಕ್ತಿ, ಒಳಗಿನ ಕರಿನೀರಿನ ಘಾಸಿ ಶಿಕ್ಷೆಯನ್ನು ಅನುಭವಿಸಲು ಗೊತ್ತಿಲ್ಲದೆಯೆ ಸಿದ್ಧವಾಗಬೇಕಾಗುತ್ತದೆ. 'ಕಪ್ಪು ನೀರು', 'ಕರಿತಾವ' ಈ ಪದಗಳು ಅರ್ಥ ಸಮೃದ್ಧವಾಗಿವೆ. ಶ್ಲೇಷೆಯಿಂದ ಕೂಡಿವೆ. 'ಕರಿತಾವ' ಕ್ರಿಯಾಪದವಾಗುವುದರ ಜೊತೆಗೆ (ಅಲ್ಲೂ ಎರಡರ್ಥ) ನಾಮಪದವೂ ಆಗುತ್ತದೆ. 'ಕರಿಯುತಾವು' (ಕಪ್ಪುಸ್ಥಳ) ಸಾವಿನ ಕರಾಳತೆಯ ವಾಸ್ತವಿಕ ಚಿತ್ರವಾಗುತ್ತದೆ. ಇಂಥ ಭಯಭೀತ ಜೀವ ಯಾವುದಾದರೂ ಆಸರೆಯನ್ನು ನಿರೀಕ್ಷಿಸುವುದು ಸಹಜ ತಾನೆ ?

ಅದರ ಮುಂದಿನ 'ಗವಿಗುಡ್ಡ' ತಾನು ಏರಲಿರುವ ಸಿದ್ಧಿಯ ಔನ್ನತ್ಯವನ್ನೂ, ಅದು ತನಗೆ ಬಹುದೂರವಾಗಿರುವ ಆದರ್ಶ ಎಂಬುದನ್ನೂ, ತಾನು ಅದನ್ನು ಏರಲಾರದ ಸಾಮಾನ್ಯ ವ್ಯಕ್ತಿ ಎಂಬುದನ್ನೂ ಸೂಚಿಸುತ್ತದೆ. ಕರಿನೀರಿನ ಹೊಂಡ ಎಡಕ್ಕಾದರೆ, ಗವಿಗುಡ್ಡ ಬಲಕ್ಕೆ ಬರುತ್ತದೆ. ಈ ಎರಡರ ನಡುವೆ ಇರುವ ಜೀವ ಯಾವುದನ್ನು ಆಯ್ದುಕೊಳ್ಳುವುದು ಎಂಬ ಗೊಂದಲಕ್ಕೆ ಬೀಳುತ್ತದೆ. ಇನ್ನೂ ಸಂಸಾರದಲ್ಲೇ ಮುಳುಗಿ ಮಕ್ಕಳು, ಮೊಮ್ಮಕ್ಕಳು, ಸೊಸೆಯರು ತುಂಬಿದ ಬಳಗ ಇದರಲ್ಲೇ ತೊಡಗಿರುವುದೇ ಅಥವಾ ತನ್ನ ಬಿಡುಗಡೆಗಾಗಿ ಪ್ರಯತ್ನಿಸುವುದೇ ಎಂಬ ದ್ವಂದ್ವದ ನಡುವೆ ಸಿಲುಕಿಸುವುದು ಈ ಎರಡು ಪದ್ಯಗಳ ನಡುವಣ ಅಂತರ. 'ಒಳಗೆ, ಬಳಿಗ' ಎಂಬ ಮಾತುಗಳಲ್ಲಿ ಸೆಳೆತದ ಆವೇಶವಿದ್ದರೆ 'ಅತ್ತತ್ತ ತಿರುಹಿ ಹತ್ತೊತ್ತಿ ಬಂದ' ಇವುಗಳು ಸಾಧಕ ಜೀವಿಯು ಕೈಗೊಂಡ ತೀರ್ಮಾನಕ್ಕೆ ಕನ್ನಡಿ

ಹಿಡಿಯುತ್ತವೆ. ಆ ಕಡೆಗೆ ಅದನ್ನು ಹರವಿ (ಕೊಡವಿಕೊಂಡು), ಹತ್ತಿ ಒತ್ತಿ ಬಂದ ಆ ಪ್ರಲೋಭನವನ್ನು ಮೀರಿ, ಅದನ್ನು ಒತ್ತಿ ಹಿಡಿದು ದಮನ ಮಾಡಿ ಬಂದ ನಿಶ್ಚಿತ ಮನಸ್ಸಿನ ದಾರ್ಢ್ಯದ ಸಂಕೇತವಾಗುತ್ತದೆ. 'ಕಾಳಮ್ಮನ ಹೊಲ' ತೆರಬೇಕಾದ ದಂಡಕ್ಕೆ ಸಂಕೇತ. ಬೇಂದ್ರೆಯವರು ಇಂಥ ಆಹ್ವಾನವನ್ನೂ ಅನೇಕ ಸಲ ಕೊಟ್ಟಿದ್ದಾರೆ. (ಚಂಡಿ ಚಾಮುಂಡಿ ಹೇಳ್ ನಿನಗೆ ಬೇಕಾದುದೇನು ?... ಗಂಡು ಸಾವರೆ ನಿನ್ನ ಬಲಿ ಕೊಡುವಿಯೇನು ? – ಇಲ್ಲಿ ಕವನದ ನಾಯಕಿ ಸ್ತ್ರೀಲಿಂಗವಾದ ಮಾತ್ರಕ್ಕೆ ಅವಳ ನಿರ್ಧಾರ ಹೆಣ್ಣಲ್ಲ. ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಎಂಬಂತೆ). ಆ ಹೊಲದ ನಟ್ಟನಡುವಿರುವ 'ಹುಣಸಿಮರ ಏರಿದರೆ' ಕಾಣುವುದು 'ಹತ್ತು ಗಿಡದ ಗುಂಪು'. ಅದೂ 'ಸಣ್ಣ ಏರಿಮ್ಯಾಗ'. 'ಹುಣಸಿ ಮರ' ಹುಳಿಯ ಎಂದರೆ ದೇಹ ಮುಪ್ಪಾದರೂ ಇನ್ನೂ ಉಳಿಸಿಕೊಂಡಿರುವ ಜೀವಂತಿಕೆಯ ಕಸುವಿಗೆ ಸಂಕೇತ. ಅದನ್ನು ಏರಿನೋಡಿದಾಗ ತನ್ನಂತೆ ಸಾಧನೆಯಲ್ಲಿ ತೊಡಗಿದ ಹತ್ತು ಜನರ ಗುಂಪು ಕಣ್ಣಿಗೆ ಬೀಳುತ್ತದೆ. ಅವರು ಏರಿರುವ ಎತ್ತರವಾದರೂ ಸಣ್ಣದು, ಇನ್ನೂ ಸಣ್ಣ ಏರಿಯಮೇಲಿದ್ದಾರೆ, ತಾನು ಈಗ ಹಿಂದೆ ಬಿದ್ದಿದ್ದರೂ, ಅವರನ್ನು ಹಿಡಿಯಬಲ್ಲೆ. ಆ ಎತ್ತರಕ್ಕೆ ತಾನೂ ಏರಬಲ್ಲೆ ಎಂಬ ಆತ್ಮ ವಿಶ್ವಾಸವನ್ನು ಸೂಚಿಸುವ ಸಾಲುಗಳು ಇವು.

ಇಲ್ಲಿಂದ ಮುಂದೆ ಆ ಮರದ ತೋಪಿಗೆ ಬಂದರೆ ಕಿವಿಗಡಚಿಕ್ಕುವ, ಭಯ ಹುಟ್ಟಿಸುವ ವಾತಾವರಣ ಸಾಧನೆಯಲ್ಲಿ ಒಂದೊಂದು ಹೆಜ್ಜೆ ಮುಂದಿಟ್ಟಾಗಲೂ ಆತಂಕ, ಭಯ, ಹಿಂದೆ ನೋಡುವಂತಿಲ್ಲ. ಬೆಟ್ಟವನ್ನೇರುವ ಅನುಭವ, ಅನುಭಾವದ ಹಾದಿಯೇ ಹೀಗೆ. ತಾನು ಹಿಂದೆ ಬಿಟ್ಟು ಬಂದ ಸಂಸಾರ 'ತೊಗಲ ಬಾವಲಿ'ಯಂತೆ ಸಂಸಾರ ವೃಕ್ಷಕ್ಕೆ ಅಂಟಿಕೊಂಡಿದ್ದದ್ದು. ಈಗಲೂ ಅನೇಕರು ಅದಕ್ಕೆ ಅಂಟಿಕೊಂಡಿದ್ದಾರೆ. ಅವು 'ಹಗಲಿನೊಳಗ ಭರತ ಜೀರತಾವ'. ಜಾಗೃತ ಪ್ರಜ್ಞೆಯಲ್ಲಿ ಅವಕ್ಕೆ ಬೇಸತ್ತು ಬಿಡುಗಡೆಯನ್ನು ಪಡೆಯಲು ಬಯಸಿ ಒದ್ದಾಡಿದರೂ, ಸುಪ್ತ ಮಾನಸ್ಸಿನಲ್ಲಿ ಎಲ್ಲರೂ ಸಾಂಸಾರಿಕ ಸುಖಗಳ ಆರಾಧಕರೇ. 'ಹಿಂಡು ಪಾರಿವಾಳ ಹೊಕ್ಕ ಹೊರಡತಾವ ಒಳಗ ಹೊರಗ'. ಪಾರಿವಾಳ ಆಕಾಶದ ಬಹು ಎತ್ತರದಲ್ಲಿ ಏರಿಯೂ ವಿಶ್ರಾಂತಿಸ್ಥಾನ ಅದಕ್ಕೆ ಗೂಡೇ. ಹಾಗೆಯೇ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದ ಜೀವ ಮಾನಸಿಕವಾಗಿ ಆ ಎತ್ತರಕ್ಕೇರಿದಾಗಲೂ ಒಂದು ಕಾಲು ಮಣ್ಣಿನಲ್ಲೇ ಹೂತು ಹೋಗಿರುತ್ತದೆ. ಇಲ್ಲಿಯ ಸಾಧಕಿ, ಭಕ್ತ ಜೀವಿ ಎಲ್ಲವನ್ನೂ ತೊರೆದು ಕಾಡಿಗೆ ಹೋಗಿ ತಪಸ್ವಿಯಾದ ಜೀವವೇನಲ್ಲ. ಸಂಸಾರದಲ್ಲಿದ್ದೂ ಸಾಧನೆಗೆ ತೊಡಗಿದ ಜೀವ. ಅಲ್ಲಿ ಹಬ್ಬಿ ಹರಡಿರುವುದಾದರೂ ಏನು ? 'ಬೇವಿಗೇ ಸುತ್ತು ಅಮೃತ ಬಳ್ಳಿ' ಬೇವಿಗೆ ಅಂಟಿಕೊಂಡೇ ಇದೆ, ಅಮೃತದ ಬಳ್ಳಿ. ಇದನ್ನು ಬೇರ್ಪಡಿಸಲಾಗುವುದಿಲ್ಲ. ಬೇವು ಬದುಕಿನ 'ಕಹಿ' ಯಾದರೆ ಅದಕ್ಕೆ ಹಬ್ಬಿಸಿಂತ

ಅಮೃತದ ಬಳ್ಳಿ ಬಿಡುಗಡೆಯ ಸಂಕೇತ, ಅಮರತ್ವದ ಮೋಕ್ಷದ ಸಂಕೇತ. ಜೀವಾತ್ಮ ಸ್ವತಂತ್ರವಾಗಿರಲಾರದು. ಅದು ದೇಹವೆಂಬ ಪುರವನ್ನು ಆಶ್ರಯಿಸಲೇಬೇಕಲ್ಲವೆ ? ದೇಹ ಬೇವು, ಆತ್ಮ ಅಮೃತದ ಬಳ್ಳಿ. ಈ ದೇಹದ ಅವಲಂಬನವಿಲ್ಲದೆ ಆತ್ಮದ ಅರಿವು ಸಾಧ್ಯವಿಲ್ಲ.

'ಆಲಸುರವತಾವ ಹಾಲ' ...... ಆಲದ ಮರ ಬಿಳಲು ಬಿಟ್ಟುಕೊಂಡು ಒಂದೇ ಮರ ದೊಡ್ಡದಾಗಿ ಬಹು ಜಾಗವನ್ನು ಆಕ್ರಮಿಸಿಕೊಳ್ಳುವಂತೆ, ಭಕ್ತಿಯ ಬೀಜ ಸ್ಥಾಪನೆಯಾದರೆ ಸಾಕು, ಅದು ನಮ್ಮನ್ನು ಉದ್ಧಾರ ಮಾರ್ಗದಲ್ಲಿ ಕೊಂಡೊಯ್ಯುತ್ತಾ ಹೋಗುತ್ತದೆ. ವಟವೃಕ್ಷವಂತೆ ಹಿರಿಯ ಸಂಸಾರಿಯಾದರೂ, ಆಳವಾಗಿ ಸಂಸಾರದಲ್ಲಿ ಬೇರು ಬಿಟ್ಟಾಗಲೂ ಅದರಿಂದ ಬಿಡುಗಡೆ ಸಾಧ್ಯವಾಗುತ್ತದೆ. 'ಅಲ್ಲಿ ಅಲ್ಲಾಡತಾವ ಅಳ್ಳಿ' – ಇಲ್ಲಿಯ ಅರಳಿ ಸಮಿತ್ತು ಹೋಮ ಕ್ರಿಯೆಯ ಸಾಧನ. ಇದು ಆತ್ಮ ಯಜ್ಞ. ಇಲ್ಲಿಯ ಹವಿಸ್ಸು ಈ ದೇಹ.

ಇಷ್ಟೆಲ್ಲ ವಿವೇಕ ಅರಳಿದರೂ ದಾರಿ ಸುಗಮವಾಗಿಲ್ಲ. 'ಅತ್ತಿಗಿಡಕ ಹತ್ಯಾವ ಹಲಸಿನ್ಹಂಗ ಬುಡಕು ಕೆಂಪು ಹಣ್ಣು'. ಅತ್ತಿಯ ಹಣ್ಣು ಕ್ರಿಮಿಗಳ ಆಗರ. ಮನಸ್ಸನ್ನು ಆಕ್ರಮಿಸಿರುವ ಸಹಸ್ರಾರು ಕ್ಷುದ್ರ ವಿಚಾರಗಳಿಗೆ ಅತ್ತಿ ಹಣ್ಣು ಸಂಕೇತ. ಮೇಲೆ ಮೋಹಕವಾದ ಕೆಂಪು ಬಣ್ಣ, ಒಳಗೆಲ್ಲ ಹುಳುಕು. ನೋಡದೇ ಬಾಯಿಹಾಕುವಂತಿಲ್ಲ. ಜೇನು ತೊಟಗುಟ್ಟುತ್ತಿದೆ. ಅದರ ವಾಸನೆಯನ್ನೇ, ರುಚಿಯನ್ನೇ ಹಿಡಿದು ಹೋಗಿ ಹುಟ್ಟಿಗೆ ಕೈಹಾಕಿದರೆ ಜೇನಿನ ಕಡಿತಕ್ಕೆ ತಯಾರಾಗಿರಬೇಕು. ಈ ಕಡಿತದ ನೋವಿನೊಂದಿಗೇ ಜೇನಿನ ಸಿಹಿಯ ಆಕರ್ಷಣೆಯೂ ಇದೆ.

ಆ ತೋಪಿನಲ್ಲಿ ಹ್ಯಾಂಗೊ - ತಪ್ಪಿ ಮೂಲ್ಯಾಗ ಬೆಳೆದ ಮಾವು. ಅತ್ತಿ, ಅರಳಿ, ಆಲ ಮೊದಲಾದ ಮರಗಳ ತೋಪಿನಲ್ಲಿ ಕೇವಲ ಒಂದು 'ಮಾವು' ಇದೆ. ಈ ಪ್ರಲೋಭನೆಗಳ ಪ್ರಪಂಚದ ನಡುವೆ ಒಂದು ಬಿಡುಗಡೆಯ ನಿಲ್ದಾಣ. ಈ ಮಾವು ಪ್ರಭು ಹೇಳಿದ 'ಮಾಮರ' - ದೇಹಾತ್ಮ ಪರಮಾತ್ಮದರ್ಶನಕ್ಕೆ ಮಾರ್ಗದರ್ಶಕ (Guide). ಗೆಲ್ಲುವುದು ಅಷ್ಟು ಸುಲಭವಲ್ಲ. ಈ ಮಾವಿನಮರ ಸುಲಭವಾಗಿ ಏರುವಂಥದಲ್ಲ. ಏಕೆಂದರೆ ಅದರ ಅಡಿ ಹುತ್ತ. ಅದರಲ್ಲಿ ಏಳೆಡೆ ಹಾವು. ಸಪ್ತವ್ಯಸನಗಳ ಕಾಟದಿಂದ ಮುಕ್ತಿ ದೊರೆತರೆ, ಸಪ್ತಭೂಮಿಯನ್ನು ದಾಟಿದರೆ[2] ಪರಮಾತ್ಮ ಸಾಕ್ಷಾತ್ಕಾರ. ಹಾಗಿಲ್ಲದಿದ್ದಲ್ಲಿ ಅನ್ನಮಯದಲ್ಲೇ ಪರ್ಯವಸಾನ (ಬೇಂದ್ರೆಯವರು ಅರವಿಂದರ ಪರಮಭಕ್ತರಾದ್ದರಿಂದಲೂ, ಅವರ ಕವಿತೆಗಳ ಮೇಲೆ ಅರವಿಂದರ ಪ್ರಭಾವ ನಿಚ್ಚಳವಾಗಿರುವುದರಿಂದಲೂ ಈ ಮಾತುಗಳನ್ನು ಸಮರ್ಥಿಸಬಹುದಾಗಿದೆ).

---

2 'ವಿನಯ' ಸಂಗ್ರಹದ 'ಆತ್ಮಪ್ರಜ್ಞೆ' ಕವನದ ಟಿಪ್ಪಣಿ ನೋಡಿ– ದೇಹ, ಪ್ರಾಣ, ಮನ, ವಿಜ್ಞಾನ, ಆನಂದ, ಚಿತ್, ಸತ್.

ಈ ಮಾವಿನೊಳಗೆ ಸುಗ್ಗಿಯೊಳಗೆ ಒಂದು ಕೋಗಿಲೆ ಬಂದಿದೆ. ಕುರ್ತಕೋಟಿಯವರು ಇಲ್ಲಿಯ ಕೋಗಿಲೆಯು ಬೇಂದ್ರೆಯವರ ಅನ್ಯತ್ರ ಕೋಗಿಲೆಯಂತೆ, ಕವಿ ಪ್ರತಿಭೆ, ಜೀವದ ಮನೋರಥದ ಸಂಕೇತವಾಗಿರದೆ ಗುಂಗು ಹಿಡಿಸುವ, ಪೀಡಿಸುವ, ಕೆರಳಿಸುವ ಶಕ್ತಿ ಇರುವ ಕೋಗಿಲೆ ಎಂದಿದ್ದಾರೆ. ಕೋಗಿಲೆಯಂತೂ ಸರಿ. ಅದು ಏನು ? ಎಂಬುದಕ್ಕೆ ಅರ್ಥ ನೀಡಿಲ್ಲ. ಇಲ್ಲಿ ಅವರ ಮಾತುಗಳನ್ನು ಒಪ್ಪಿಕೊಂಡು 'ಕೋಗಿಲೆ' ಎಂದರೆ ಪ್ರಭು ಹೇಳುವ ಜೀವಾತ್ಮ ಎಂದಿಟ್ಟುಕೊಂಡರೆ ಅರ್ಥವ್ಯಕ್ತಿ ಲಭಿಸುತ್ತದೆ.

ಇಲ್ಲಿಯ ಸುಗ್ಗಿ ವಿವೇಕದ ಸುಗ್ಗಿ, ವಿಚಾರದ ಸುಗ್ಗಿ. ಆಗ ಜೀವಾತ್ಮಕ್ಕೆ ಪರಮಾತ್ಮ ಸಾನ್ನಿಧ್ಯದ ಬಯಕೆ ಉಂಟಾಗುತ್ತದೆ. 'ತನ್ನ ಜೋಡಿ ಕರೆದ್ಹಾಂಗ ಕರಿತಽದ ನನ್ನ ಜಾಽರs ಆಂದು' ಎನ್ನುವಲ್ಲಿ ಶರಣಸತಿ - ಲಿಂಗಪತಿ ಭಾವವಿದೆ, ಎಂದರೆ ಇಲ್ಲಿ ಹೆಣ್ಣು ಸಾಂಸಾರಿಕ ಜೀವನದಲ್ಲಿ ಗಂಡಿನ ಕರೆಗೆ ಓಗೊಡುವಂತೆ, ಅಥವಾ ಗಂಡು ಹೆಣ್ಣನ್ನು ಜೋಡಿಯಾಗಲು ಕರೆದಂತೆ ಎಂದಾಗ ಎರಡು ಜೀವಿಗಳ ಬೆಸುಗೆ ಎಂಬರ್ಥ ಸರಿಹೊಂದುತ್ತದೆ. ಪರಮಾತ್ಮ ಜೀವಾತ್ಮಗಳ ಮಿಲನ, ದ್ವೈತ ಅಳಿದು ಅದ್ವೈತವಾಗುವುದರ ಸಂಕೇತವಾಗುತ್ತದೆ. ಒಮ್ಮೆ ಈ ಗುಂಗು ತಲೆಯೊಳಗೆ ಹೊಕ್ಕರೆ ಅದು ಬಿಡುವಂತಿಲ್ಲ. ಕೂಗೇ ಕೂಗತದ ಕೂಗೇ ಕೂಗಽದ ಗಿರಣಿ ಕರೆಯೊಹಾಂಗ. ಎಷ್ಟೇ ದೂರವಿದ್ದರೂ ಗಿರಣಿಯ, ಕರ್ಕಶವಾದರೂ ದೂರಗಮ್ಯತ್ವವುಳ್ಳ ದನಿಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಅದು ಗಿರಣಿಯ ದನಿಯಂತೆ ಕರ್ಕಶ, ಅಪ್ರಿಯವಿರಬಹುದು. ಆದರೂ ಅದು 'ಉದರಕ್ಕೆ ಕಹಿ. ಅಧರಕ್ಕೆ ಸಿಹಿ'. ಅದಕ್ಕೆ ತೆರಪೇ ಇಲ್ಲ. ಒಂದ್‌ಸತಿ ಕೂಗತದ ಬ್ಯಾಸರಿಲ್ಲದಾಂಗ. ಈ ಪ್ರಜ್ಞೆ ಜಾಗೃತವಾದ ಮೇಲೆ (ಇದು ಕುಂಡಲಿನೀಶಕ್ತಿಯೋ ಮತ್ತೊಂದೊ ಆಗಬಹುದು) ಮುಂದುವರೆಯದೆ ಗತ್ಯಂತರವಿಲ್ಲ, ಅದೇ ನಡೆಸಿಕೊಂಡು ಹೋಗುತ್ತದೆ.

'ತಿಳಿಯದ ಯಾವುದೋ ಕಂಪು ಎಳೀತದ' ಆಗ 'ತುಂಬಿ' (ಶ್ಲೇಷೆ) ಹುಚ್ಚು ಆಗಿ ಎಚ್ಚರಿಲ್ಲದ, ಎತ್ತೋ ತಿರಗತಾವ ದಿಕ್ಕೂ ತೋರದಾಗ. ತುಂಬಿಗೆ ಮತ್ತೇರಿಸುವ ಈ ಸುವಾಸನೆ, ಅದನ್ನು ತನ್ನತ್ತ ಸೆಳೆದು, ತಿರುಗಿಸಿ, ಗುಂಯ್‌ಗುಡುವಂತೆ ಮಾಡುವ ಈ ಪುಷ್ಪ ಕಣ್ಣಿಗೆ ಕಾಣಿಸದಿದ್ದರೂ, ಸುವಾಸನೆಯಿಂದಲೇ ಸೆಳೆಯುತ್ತದೆ (ತಾಯ ಮುಖ ಮಾತ್ರ ಕಾಣಿಸದು - ಜಿ. ಎಸ್. ಎಸ್). ಬಂತು ಸುಗ್ಗಿ, ಬಂದಾದ ಸುಗ್ಗಿ ಬರುತ್ತದ ಸುಗ್ಗಿ - ಇಲ್ಲಿ ಭೂತ, ವರ್ತಮಾನ, ಭವಿಷ್ಯತ್ ಮೂರು ಕಾಲಗಳ ಕ್ರಿಯಾಪದಗಳಿವೆ - ಕುರ್ತಕೋಟಿಯವರು ಗಮನಿಸಿದಂತೆ ಇದು ಸಾರ್ವಕಾಲಿಕತೆಯನ್ನು, ಸರ್ವಾಂತರ್ಯಾಮಿತ್ವವನ್ನೂ, ಸರ್ವಜ್ಞತ್ವವನ್ನೂ ಸೂಚಿಸಲೆಂದು ಪ್ರಯೋಗವಾದಂಥವು. ಮನಸ್ಸಿನಲ್ಲಿ ಉಂಟಾದ ಈ ಆಧ್ಯಾತ್ಮದ ಸೊಗಡು, ವಾಸನೆ, ಹಿಗ್ಗಿನ ಬುಗ್ಗೆ. ಸುಗ್ಗಿಯ ಸಂಭ್ರಮದ ಸಾರ್ಥಕ್ಯದ ಸಂಕೇತವಾಗುತ್ತದೆ.

ಅನಿರ್ವಚನೀಯ ಆನಂದ, ಶ್ರಮದ ಸಾರ್ಥಕತೆಯು 'ತೃಪ್ತ' ಭಾವಗಳನ್ನು 'ಸುಗ್ಗಿ' ಪದ ಕಟ್ಟಿಕೊಡುತ್ತದೆ. ಆಗ ಕೋಗಿಲೆ ಸ್ವತಂತ್ರವಾಗಿ ಹಾಡಲು ತೊಡಗುತ್ತದೆ. ಹಿಂದೆ ಜೋಡಿಯನ್ನು ಕರೆದಿದ್ದರೆ ಈಗ ತೃಪ್ತವಾದ ಅದು (fulfilment) ಹಾಡುತ್ತದೆ, ಕುಹೂ, ಕುಹೂ, ಕುಹೂಕ್ಕುಹೂ ಎಂದು. ಕುರ್ತಕೋಟಿಯವರು ಇದನ್ನು ಕೋಗಿಲೆಯ ಏಕತಾನ, ಹಟಮಾರಿತನ ಎಂದು ಅರ್ಥೈಸಿದ್ದಾರೆ. ಇಲ್ಲಿ ಕುಹೂ, ಕುಹೂಗಳ ಬಿಡಿ ಅನಂತರದ ಕುಹೂಕ್ಕುಹೂ ಎಂಬ ನಿರಂತರತೆ ಇವು ಶಬ್ದ, ನಾದ, ಧ್ವನಿಯಾಚೆಯದನ್ನು ಧ್ವನಿಸುತ್ತವೆ, ಅನುರಣಿತವಾಗುತ್ತದೆ, ಸಮಸ್ತವನ್ನೂ ಒಳಗೊಳ್ಳುತ್ತದೆ, ತಾನೇ ತಾನಾಗುತ್ತದೆ. ಇಲ್ಲಿ ಎಲ್ಲವೂ ಬೆಳಕು, ಎಲ್ಲವೂ ಸ್ಪಷ್ಟ.

ತಾರಪಂಚಮದಲ್ಲಿ ಅದು ಕೂಗುವ ಸಮಯಕ್ಕೆ 'ಜೋಗಿ'ಯ ಆಗಮನವಾಗುತ್ತದೆ. ತನ್ನಿಂದ ದೀಕ್ಷೆ ಪಡೆದ ಈ ಭಕ್ತೆಯ ಸಾಧನೆಯ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಲು ಬಂದ ಅಧ್ಯಾತ್ಮ ಗುರು 'ಜೋಗಿ'ಗೆ ಕೋಗಿಲೆಯ ಕೂಗನ್ನು ತಾರ ಪಂಚಮವೆಂದು ನಿರ್ದೇಶಿಸುವಷ್ಟರಮಟ್ಟಿಗಿನ ಸಾಧನೆ ಈಕೆಯದಾಗಿರುತ್ತದೆ. ಅಲ್ಲಿಂದ ಮುಂದಿನ ಮೆಟ್ಟಲನ್ನು ಏರಿನೋಡುವ ತನಕ ಸ್ವಾಭಾವಿಕವಾದುದೇ. ಯಾವ ಬಣ್ಣ, ಅದಕಾವ ಕಣ್ಣು, ನೋಡಲೇನು ಹೋಗಿ? ತನ್ನ ಭಕ್ತಿಯ ಸಾಧನೆಗೆ ನೆರವಾದ ಜೋಗಿಯ (ಮಧ್ಯವರ್ತಿ) ನೆರವನ್ನು ತಿರಸ್ಕರಿಸದೆಯೇ, ಅಪ್ಪಣೆಪಡೆದೇ ಅರಿವಿನ ಗರ್ಭವನ್ನು ಸೀಳುವ ಬಯಕೆ ಈ ಮಾತುಗಳಲ್ಲಡಗಿದೆ. ಈ ಆತ್ಮದ ದನಿ, ಅನನ್ಯತೆ, ಹಂಬಲ ಇಡೀ ವಾತಾವರಣವನ್ನು ಸಮೃದ್ಧಗೊಳಿಸುತ್ತದೆ. ಇದುವರೆಗೂ ತಾನು ಅನುಭವಿಸಿದ, ನೋಡಿದ ಜಗತ್ತೇ ಹೊಸ ನೋಟವೆಂಬಂತೆ ಕಾಣುತ್ತದೆ ಈಗ.

"ತೋಟವೆಲ್ಲ ಹೂವಾಗಿ ನಿಂತು, ತೊಂಗೆಲ್ಲ ಗೊಂಚಲಾಗಿ, ಪಾಡು ಆಗತಾವ, ಹಣ್ಣು ಆಗತಾವ ಅದರ ಲಯಕೆ ತೂಗಿ. ಹೂವು, ಗೊಂಚಲು, ಪಾಡು, ಹಣ್ಣು ಇವು ಸಾಧನೆಯಲ್ಲಿನ ಏರುವ ಮೆಟ್ಟಲುಗಳಿಗೆ ಸಂಕೇತವಾಗಿ ಹಣ್ಣು ಸಿದ್ಧಿಯ ಸ್ಥಿತಿಯನ್ನು ಸೂಚಿಸುತ್ತದೆ. ಹೂವು ಹಣ್ಣಾದ ಈ ಸೋಜಿಗ ಬೆರಗುಗೊಳಿಸುವಂತಿದೆ. 'ಪಾಡು' ಶಬ್ದ ಧ್ವನಿಪೂರ್ಣವಾಗಿದೆ. ಪಾಡುಪಡದೆ ಹಣ್ಣಿಲ್ಲ. ಪಾಡಾಗದೆ ಹಾಡಾಗುವುದಿಲ್ಲ. ಇಲ್ಲಿಯ 'ಬೆಸಲೆ'ಯ ಅನುಭವ ವಿಶಿಷ್ಟ ಆನಂದ.

ಮುಂಜಾವಿನಿಂದ ತೊಡಗಿದ ಈ ಕೂಗು ತಲೆಯ ಕಾವಿನಲ್ಲಿ, ಇಮ್ಮಾವಿನಲ್ಲಿ ಬಿಸಿಗಾಲನ್ನೂ ನೂಕುತ್ತದೆ. ಇಲ್ಲಿಯ ಕಾವು, ಬಿಸಿಗಾಲ, ಬೇಸಗೆಯ ಅನುಭವವನ್ನು ಕೊಡುವುದರೊಂದಿಗೇ ಇಮ್ಮಾವು ವಸಂತಾಗಮನವನ್ನು ಸೂಚಿಸುತ್ತದೆ. ಮಾಗಿ ಕಳೆದು, ಬಿಸಿಲೇರುವ ನಡುವಣ ಈ ಸ್ಥಿತಿ 'ವಸಂತ'. ಈ ಭಕ್ತೆಯ ಬದುಕಿನಲ್ಲಿ ಬಂದ ವಸಂತ, ಅಲ್ಲಿಯ ಕೋಗಿಲೆಯ ಕೂಗು, ಸುಗ್ಗಿಯನಂತರವೇ ಅದನ್ನು ಹೆಚ್ಚಿಸಲೆಂಬಂತೆ ಬಂದ ವಸಂತ ಇವು ಸಾಧನೆಯ ಮಾರ್ಗ ಕ್ರಮಣವನ್ನು ಸೂಚಿಸುತ್ತವೆ.

ಕೊಳಲನ್ನು ನುಡಿಸಿದಂತೆ ಕೋಗಿಲೆ ಉಲಿಯುತ್ತದಂತೆ. ಬೇರೆ ಕೆಲಸದಾಗ ಮನಸು ತೊಡಗುವುದೇ ಇಲ್ಲವಂತೆ ಈಚೆಗೆ. ಕೋಗಿಲೆಯ ದನಿಗೂ, ಕೊಳಲಿನ ದನಿಗೂ ತಾಳೆ ಏಕೆ ? ಹೋಲಿಕೆಯ ಅಗತ್ಯವೇನಿದೆ ? ಸಾಮ್ಯವಿದೆಯೇ ? ಭಕ್ತ ಜೀವಕ್ಕೆ ಈ ದನಿ 'ಕೃಷ್ಣನ ಕೊಳಲಿನ ಕರೆ'ಯಾಗುತ್ತದೆ. ದತ್ತ ನಾರಾಯಣನ ಕರೆಯಾಗುತ್ತದೆ ಅದು. (ಬೇಂದ್ರೆಯವರ 'ನಾನು' ಕವನ ನೋಡಿ).

ತನಗೆ ಅಧ್ಯಾತ್ಮಸಿದ್ಧಿಯಾದ, ಅನುಭಾವಸಿದ್ಧಿಯಾದ, ಸಮಯಕ್ಕೇ ತನಗೆ ಉಪದೇಶವಿತ್ತು ಮಾರ್ಗದರ್ಶನ ಮಾಡಿದ ಗುರು 'ಜೋಗಿ' ಬಂದದ್ದು ಈಕೆಗೆ ಬಹಳ ಸಂತೋಷ. ಶಿಷ್ಯಳಿಗೆ ತನ್ನ ಸಾಧನೆಯನ್ನು ಗುರು ಮೆಚ್ಚಲೆಂಬ ಆಪೇಕ್ಷೆ. ಆ ಹಿಗ್ಗು 'ಬಂದೆ ಜೋಗಿ, ಬಾರೋ ಜೋಗಿ, ಏನು ಹೊತ್ತು ಬಂದಿ' ಎಂಬ ಸಾಲುಗಳಲ್ಲಿವೆ. ಅವನು ಕೊಟ್ಟ ಮಂತ್ರ ಸಿದ್ಧಿಸಿದೆ ಎಂಬುದನ್ನು ಹೇಳಿಕೊಳ್ಳುವ ರೀತಿ 'ನೀನೆ ಹೇಳಿದಾ ನಾಮ ಜಪಿಸುವಾಗ ಬಂತೋ ಸುಗ್ಗಿ ಸಂಧಿ.' ಇಲ್ಲಿ ಸಂಧಿ ಎಂದರೆ ಸಂಕ್ರಮಣ (Transition), 'ಸುಗ್ಗಿ' ಪದ ಹಿಗ್ಗನ್ನೂ, ಸಿದ್ಧಿಯನ್ನೂ ಸೂಚಿಸುತ್ತದೆ. ಅದು ಬೆಳೆದು ಬಂದ ಬಗೆಯ ಚಿತ್ರಣವನ್ನೂ 'ಜೋಗಿ'ಯೆದುರು ತೆರೆದಿಡುವ ಮಾತುಗಳು ಮುಂದಿನವು ; 'ತಲೆಯ ಯಾವುದೋ ನಾಡಿಯೊಳಗ ಸುರ ವಾತು ಸುಗ್ಗಿ ಸೊಲ್ಲು.' ಮುಂದೆ ಕೇಳಿದರೆ ಅದs ತುಂಬಿತೋ ಮೂಲೆ ಮೂಲೆಯಲ್ಲ'. ಯಾವುದೋ ನಾಡಿಯಲ್ಲಿ ಸುರುವಾದ ಸುಗ್ಗಿಯ ಈ ಸೊಲ್ಲು ಜೀವದ ಮೂಲೆ ಮೂಲೆಯನ್ನು ತುಂಬುವುದರೊಂದಿಗೆ ಜೀವ ಜಗತ್ತಿನ ಮೂಲೆ ಮೂಲೆಯನ್ನೂ ತುಂಬಿಸುತ್ತದೆ.

ಮುಂದಿನ ಸಾಲುಗಳು ಸಾಕಾರ ನಿರಸನ ಮತ್ತು ನಿರಾಕಾರ ಸಾಕ್ಷಾತ್ಕಾರಗಳನ್ನು ಕುರಿತವು. 'ಗುಡೀಗೆ ನಾನು ಹೊರಟಾಗ ಕರೀತsದ ಕುಹೂಕ್ಕುಹೂ' ಎಂದು. ಈ ಅಧ್ಯಾತ್ಮ ಜ್ಞಾನ, ಅನುಭಾವ ಸಿದ್ಧಿಯಾದ ಮೇಲೂ ಸಾಕಾರದ ನೆರವಿನ ಅಗತ್ಯವೇನಿದೆ ಎಂಬುದನ್ನು ಎಚ್ಚರಿಸುವಂತೆ ಈ ಒಳದನಿ ಕೂಗುತ್ತದೆ. ಮನಸ್ಸಿನ ಜಪದ ನಡುವೆ ಓಂಕಾರದ, ಪ್ರಣವದ ನಾದ ತುಂಬಿದೆ. ಈ 'ಪ್ರಣವಾನುಭವ'ವಾದ ಮೇಲೆ ಬೇರೆ ಯಾವುದರ ಅಗತ್ಯವೂ ಇಲ್ಲ ಎಂಬುದರ ಅರಿವಾಗುತ್ತದೆ. 'ಕನಸಿನೊಳಗ ಸ್ವರಾ ಕೇಳಿ ನಾ ಮಾಮರಾ ಆಗತೇನೋ ಅಂತ ಭ್ರಮಾ ಆಗ್ಯಾದ ಮನಕ'. ಈ ಸಿದ್ಧಿ ಸಟೆಯೊ, ದಿಟವೋ, ತಾನು ಈ ಎಲ್ಲ ಅಗ್ನಿ ಪರೀಕ್ಷೆಗಳನ್ನು ಗೆದ್ದು ಈ ನಿಲ್ದಾಣಕ್ಕೆ ಬಂದಿದ್ದೇನೆಯೋ ಎಂಬ ಭ್ರಮೆಯಲ್ಲಿರುವಾಗ 'ನೀ ಬಂದೆ ಜೋಗಿ ಏನೋ'! ಇಲ್ಲಿಯ ಆಶ್ಚರ್ಯ ಚಿಹ್ನೆ ಸಾಧಕಿಗೆ ಆದ ಆಶ್ಚರ್ಯದಂತೆ ಬೋಧಿಸಿದವನಿಗೂ ಅನ್ವಯವಾಗುತ್ತದೆ. ಅವನು ಅದು ಭ್ರಮೆಯಲ್ಲ, ಸತ್ಯ ಎಂಬುದನ್ನು ಆಕೆಗೆ ತಿಳಿ ಹೇಳುವುದಕ್ಕಾಗಿಯೇ ಬಂದಂತೆ ಕಾಣುತ್ತದೆ.

'ಯಾವ ಸ್ವರಾ, ಇದು ಯಾವ ಕೋಗಿಲಾ ಯಾವ ಮರವೋ ಏನೋ' ಎಂಬ ಸಾಲುಗಳಲ್ಲಿ ಅಘಟಿತ ಘಟನೆಗಳ ಹಿಂದಿರುವ ಸೂತ್ರವನ್ನರಿಯುವ ಪ್ರಯತ್ನವಿದೆ. ಕಾಲ ಪರಿಪಕ್ವವಾದಾಗ ಹಾರೈಕೆ ಹೇಗೆ ಫಲಿಸುತ್ತದೆ ಎಂಬುದಕ್ಕೆ ನಿದರ್ಶನ ವಾಗುತ್ತದೆ. ಈ ದನಿ ಒಮ್ಮೊಮ್ಮೆ ತಲೆಚಿಟ್ಟು ಹಿಡಿಸುತ್ತದೆ. ಲೌಕಿಕದ ಮೆಟ್ಟಿಲಿನಲ್ಲಿ ನಿಂತು ಈ ಅಧ್ಯಾತ್ಮದ ವಿಚಾರವನ್ನು ಅರಿಯುವ ಯತ್ನ ಒಮ್ಮೊಮ್ಮೆ ತಲೆ ಚಿಟ್ಟು ಹಿಡಿಸುತ್ತದೆ. ಇದಕ್ಕೆ ಏನು ಬೇನೆ ಬಂದಿದೆ? ಎಂದು ಸಿಡಿಮಿಡಿಗೊಳ್ಳು ವಂತಾಗುತ್ತದೆ. ಈ ದನಿಯನ್ನು ಕೇಳಿ ಸುತ್ತಲಿನ ಗುಡ್ಡವೂ ನುಗ್ಗಾದುವಂತೆ. ಇಲ್ಲಿಯ ಗುಡ್ಡ, ಕಲ್ಲಿನಂಥ, ವಜ್ರ ಮನಸ್ಸಿನ ಜೀವರಾಶಿ, ಇಂಥ ಕೂಗುಗಳನ್ನು ಲೆಕ್ಕಿಸದ, ಗಿರಣಿಯಂಥ ದನಿಯೂ ಕಿವಿಗೆ ಕೇಳಿಸದ ಯಾಂತ್ರಿಕ ಜೀವನ ನಡೆಸುವ, ಪೂರ್ಣವಾಗಿ ಲೌಕಿಕದಲ್ಲೇ ಮುಳುಗಿ ಹೋದ ಅಲ್ಪ ತೃಪ್ತ ಮಾನವ ಜನಾಂಗ. ಅಂಥವರಿಗೂ, ಒಮ್ಮೆಯಾದರೂ ಈ ಅನುಭವ ಬಂದೀತು. ಅದಕ್ಕೆ ಕಾಲ ಪಕ್ವ ವಾಗಬೇಕು, ಮನಸ್ಸು ಮಾಗಬೇಕು, ಬಯಕೆ ಮೂಡಬೇಕು. 'ಬಿಸಿಲು ಕುಣಿದು ಬೆವತ್ಯದ ಈಗ ಬಂದ್ಯದ ಮಳಿಯು ಹದಕ.' ಈ ಸಾಂಸಾರಿಕ ಕ್ಲೇಶಗಳ ಬಿಸಿಲಿನಲ್ಲಿ ಕುಣಿದು, ಹಾರಾಡಿ (ಹ್ಯಾಂಗ್ಯಾಂಗೋ ಕುಣಿ ಕುಣಿದು ಮಂಗಾಟ ನಡೆದಾಗ) ಕೊನೆ ಗೊಮ್ಮೆ 'ಬೆದೆ'ಗೆ ಬಂದರೆ ಆಗ ಹನಿತ ಮಳೆ ಪಕ್ವ ಫಲವನ್ನು ನೀಡಲು ಸಮರ್ಥ ವಾದೀತು. ಹದವಾಗವ ಕ್ಷೇತ್ರದಲ್ಲಿ 'ಬೀಜ'ವನ್ನು ಬಿತ್ತುವುದರಿಂದ ಯಾವ ಫಲವೂ ಇಲ್ಲ, ಹೀಗೆ ಬೆದೆಯರಿತು ಹದಮಾಡು ಹೃದಯದೀ ಹೊಲವನ್ನು ಹದಬೆದೆ ಯನರಿತಂದ ಹೃದಯವಾಸಿ ('ಎದೆಯ ಒಕ್ಕಲಿಗ' : 'ಬೇಂದ್ರೆ') ಎಂದು ಹಾರೈಸುತ್ತಾ ಮುಂದಿನ ಬದುಕು ಮಂಗಳಮಯವಾಗಲಿದೆ ಎಂಬ ಆಶಾವಾದಿತ್ವದಿಂದ ಈ ಕವನ ನಿಲುಗಡೆಗೆ ಬರುತ್ತದೆ.

ಬೆಳಕಿಗೆ ಬರದ ಕೆಲವು ಕವಿಗಳು ಮತ್ತು ಕೃತಿಗಳು

ಎಂ. ಜಿ. ಬಿರಾದಾರ

ಕಲಬುರಗಿ ವಿಭಾಗದಲ್ಲಿ ಸಂಗ್ರಹಿಸಲಾದ ಹಸ್ತಪ್ರತಿಗಳಲ್ಲಿ, ಸಾಹಿತ್ಯ ಚರಿತ್ರೆಯಲ್ಲಿ ಅನುಕ್ತವೂ ಅಪ್ರಕಟಿತವೂ ಆದ ಕೆಲವು ಕೃತಿಗಳು ಕಂಡುಬಂದವು. ಅವುಗಳಲ್ಲಿಯ ಕೆಲವು–ಕವಿ–ಕೃತಿಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ಶ್ರೀಮಂತಗೊಳಿಸುವ–ಶ್ರೀರ ಹಳೆಯ–ಕೃತಿಗಳಿವಲ್ಲವಾದರೂ ಸಾಹಿತ್ಯ ಚರಿತ್ರೆಕಾರ ಇವುಗಳನ್ನು ನಿರ್ಲಕ್ಷಿಸಲಾಗದು.

ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಸಾಮಾನ್ಯ ಕೃತಿಗಳು ಬಹಳಷ್ಟು ಬರೆಯಲ್ಪಟ್ಟವಾದರೂ, ಅವುಗಳಲ್ಲಿ ಕೆಲವಾದರೂ ಸತ್ವಯುತವಾದವುಗಳಿಲ್ಲದಿಲ್ಲ. ಸಾಹಿತ್ಯ ಚರಿತ್ರೆ ಮಾತ್ರ ಯಾವ ಕೃತಿಯನ್ನೂ ಕವಿಯನ್ನೂ ತನ್ನೊಡಲಿಂದ ಹೊರಗಿಡಬಾರದು, ಇವುಗಳಲ್ಲಿ ಕೆಲವು ಕೃತಿಗಳು ಪ್ರಕಟನೆಗೆ ಯೋಗ್ಯವಾದವುಗಳು. ಆ ಕಡೆ ಜನತೆಯ ಗಮನ ಹರಿಯಲಿ ಮತ್ತು ಈ ಗ್ರಂಥಗಳ ಹಸ್ತಪ್ರತಿಗಳು ಯಾರಲ್ಲಾದರೂ ಇದ್ದರೆ ತಿಳಿಸುವರಾಗಿ ಆಸೆ.

1. ವೀರಸಂಗಯ್ಯನ ಚರಿತ್ರೆ

ವೀರಸಂಗಯ್ಯನನ್ನು ಕುರಿತಾದ ಹಾಡುಗಳು ಬೌಪದನ ಈ ಭಾಗದಲ್ಲಿ ಪ್ರಚಲಿತವಿದೆ. ಬೀದರದಲ್ಲಿ ವೀರಸಂಗಯ್ಯನ ಸಮಾಧಿಯೂ ಇದೆ. ಇವನನ್ನು ಕುರಿತಾದ ಸಾಂಗತ್ಯದಲ್ಲಿ ಬರೆದ ಕೃತಿ ಇದು :

> ವಸುಧಿಯೊಳು ಕಲ್ಯಾಣದಿ
> ಬಸವೇಶನ ಸಂತತ ಬಿಜ್ಜಳರಾಯಂ
> ಬೆಸಗೊಂಡನು ಶಿವಭಕ್ತರೊ
> ಳೆಸೆವ [ಗು] ರುಗಳುಂಟೆನಲು ॥ 3 ॥

ಅದಕ್ಕುತ್ತರವಾಗಿ :

> ಬಲ್ಲಿದ ಶಂಕರ ದಾಸಿಮಯ್ಯ
> ಬಲ್ಲಿದ ಮಡಿವಳನು ತೆಲುಗು ಸೋಮಯ್ಯ
> ಬಲ್ಲಿದ ಧರಣಿಯೊಳತಿ
> ಬಲ್ಲಿದ ವೀರಸಂಗಯ್ಯನೆಂಬ ಮಹಾತ್ಮನು ॥ 4 ॥

ವೀರಸಂಗಯ್ಯನು ಶ್ರೇಷ್ಠ ವೀರಶೈವ ಶರಣನೆನ್ನುವುದನ್ನು ಈ ಮಾತು ದೃಢಪಡಿಸುತ್ತದೆ.

ಕಂದ॥ ಇದು ಬಸವ ಕಲ್ಯಾಣದಿ
ಮುದದಿಂದ ಪೇಳ್ದ ಬಿಜ್ಜಳಗೊರೆದ ಕಥನ ವಿಧಾನಮಂ
ಇದು ಶರಣರ ಗಾನವೆಂದು
ಪದುಳದಿ ಪೇಳಿದನು ಚೆನ್ನಬಸವೇಶ್ವರನು

ಇದರ ಕರ್ತೃ ಚೆನ್ನಬಸವೇಶನೆಂಬುದು ಸುಸ್ಪಷ್ಟ. ಕವಿಯ ವಿಷಯದಲ್ಲಿ ಇದಕ್ಕೂ ಹೆಚ್ಚು ಏನೂ ತಿಳಿಯುವುದಿಲ್ಲ.

ಇದು ದಪ್ಪಾದ (ರಟ್ಟ) ಕೋರಿಕಾಗದದಲ್ಲಿದೆ. ಪ್ರತಿ ಬಹಳಷ್ಟು ಭಾಗ ತ್ರುಟಿತವಾಗಿದೆ. ಭಾಷೆ ಛಂದಸ್ಸು ಎರಡನ್ನು ನೋಡಿದರೂ ಪ್ರತಿ ತೀರ ಅಶುದ್ಧವಾಗಿದೆ. ಕಾವ್ಯಸತ್ವದ ದೃಷ್ಟಿಯಿಂದಲೂ ತೀರ ಬಡವಾಗಿದೆ. ಆದರೂ ಕೊನೆಯಲ್ಲಿ :

ಇದು ಸರ್ವಶಾಸ್ತ್ರದ ಹೃದಯದರ್ಶವು
ಇದು ಸಕಲಾಗಮದ ಸಾರ
ಇದು ವೀರಸಂಗನ ದೃಢನಿಷ್ಠೆಯ (ದಸಾರಾ)
[ಭ್ಯು] ದಯರು ನೀವು ಚಿತ್ತೈಸಿ ॥ 53 ॥

ಎಂದು ಹೇಳಿಕೊಂಡುದು ಅತಿಶಯೋಕ್ತಿಯೇ ಸರಿ.

ಕೃತಿಯ ಕೊನೆಯ ಗದ್ಯದಲ್ಲಿ ಗ್ರಂಥದ ಗಾತ್ರ ಮತ್ತು ಪ್ರತಿ ಮಾಡಿದ ಕಾಲ ಉಕ್ತವಾಗಿವೆ.

'ಅಂತು ಸಂಧಿ 5ಕ್ಕಂ ಪದನು 495ಕ್ಕಂ ವೀರಸಂಗಯ್ಯನ ಸಾಂಗತ್ಯ ಸಂಪೂರ್ಣ ಮಂಗಳ ಮಹಾಶ್ರೀಶ್ರೀ......'

'ಶ್ರೀಮತು ವರ್ತಮಾನ ಶಾಲಿವಾಹನ ಶಕವರುಷ 1593 ಪರಿಧಾವಿನಿ ಸಂವತ್ಸರದ ಶ್ರಾವಣ ಮಾಸದ ಬಹುಳ ಕೃಷ್ಣತದಿಗೆ ಶಣಿವರ ಮುಗಿದ ಪುಸ್ತಕವು ॥'

ಇದು ಕೃತಿ ರಚನೆಯ ಕಾಲವಲ್ಲದೆ, ಅದರ ಪ್ರತಿ ಮಾಡಿದ ಕಾಲವೆಂಬುದನ್ನೂ ನಿರ್ಣಯಿಸಲು ಆಧಾರವಿದೆ.

'ಈ ಸಾಂಗತ್ಯವನು ಬರೆದಾತ—ಕಾಳಬೆಳಗುಂದಿಯ ಮಠಪತಿ ಓದಿಸುವ ಹುತ್ತಿಶೈಯ್ಯನು ತಾನು ಓದು ನಿಮಿತ್ತವಾಗಿ ಬರೆದು ಇದ್ದೇವು. ತಿಳಿದವರು ತಪ್ಪು ತಿದ್ದಿ ಓದಿ ನಾನು ನಿಮ್ಮ ಬಾಲಕ ಬರೆದು ಇದ್ದೇನು' ಎಂದಿದೆ.

ಇದೇ ಹುತ್ತಿಶೈಯ್ಯನೆ ಪ್ರತಿಮಾಡಿದ ಇನ್ನೊಂದು ಗ್ರಂಥವು ಇದರ ಜೊತೆಗೇ ಸಿಕ್ಕುತ್ತದೆ.

ಕಾಳೆಬೆಳಗುಂದಿ ಗುಲಬರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ಒಂದು ಚಿಕ್ಕ ಹಳ್ಳಿ. ಅಲ್ಲಿ ಹುತ್ರಿಶೈಯ್ಯನ ಗದ್ದುಗೆ ಇದೆ. ಈ ವಿಷಯದಲ್ಲಿ ಇನ್ನೂ ಶೋಧನೆಗೆ ಅವಕಾಶವಿದೆ. ಈ ಹಸ್ತಪ್ರತಿ ಯಾದಗಿರಿಯ ಶ್ರೀ ಸಿದ್ದಣ್ಣ ಅವಂತಿ ಬಿ.ಡಿ.ಓ. ಅವರ ಮನೆಯಲ್ಲಿ ದೊರಕಿದೆ.

2. ಹರಿಶ್ಚಂದ್ರನನ್ನು ಕುರಿತಾದ ಕೃತಿ

ಶ್ರೀ ಅವಂತಿ ಅವರಲ್ಲಿ ದೊರೆತ ದಪ್ಪಕೋರಿಕಾಗದದ ಪ್ರತಿ ಇದು. ಮೊದಲಿನ ಎರಡು ಪುಟಗಳು ಹರಿದು ಹೋಗಿವೆ. ಸಾಂಗತ್ಯದಲ್ಲಿದ್ದ ಈ ಪ್ರತಿ ಸಾಕಷ್ಟು ಅಶುದ್ಧವಾಗಿದೆ.

ಪೇಳಲು ಲಾಲಿಸಿ ಕೇಳಲು ಕಷ್ಟಕ್ಕೆ
ಮೂಲವ ಹರಿಶ್ಚಂದ್ರ ಕೃತಿಯಾ
ಬಾಳುವ ಬಡವರು ಮೇಲಪ್ಪ ಸುಖದಿಂದ
ಬಾಳುವರಲೆ ಹರುಷದಲಿ ॥ 43 ॥

ಇದು ಹರಿಶ್ಚಂದ್ರನ ಕಥೆ ಎಂಬುದು ಸ್ಪಷ್ಟ. ಇದರ ಕಾಲನಿರ್ಣಯಿಸುವ ಎರಡು ಅಸ್ಪಷ್ಟ ಪದ್ಯಗಳು ಇಲ್ಲಿವೆ.

ಶಾಲಿವಾಹನ ಬಂದು ಬಾಳಿದ ಕಲಿಯೊಳ
ಗಾಳಿದ ಶಕಮೂರು ವರುಷಗಳ
ಏಳೇಳು ಜಲ್ಮಧಿ ತಾಳಿದ ಶತಕದ
ಮೇಲದ ಅರವತ್ತು ವರುಷ ॥ 44 ॥
ಶರಧಿಯ ಕಂದಂಗೆ ಶರಣೆಂಬ ದಿನದೊಳು
ಬೆರಸಿದ ಚೈತ್ರಮಾಸದಲ್ಲಿ
ನೆರೆವಿಳಂಬಿನಾಮ ಸಂವತ್ಸರದಲ್ಲಿ
ಪರಿಪೂರ್ಣವಾಯಿತು ಕೃತಿಯು ॥ 45 ॥

'ಅಂತು ಸಂಧಿ 13 ಕ್ಕಂ ಪದನು 618 ಕ್ಕಂ ಮಂಗಳ ಮಹಾ'

ಎಂಬ ಕೊನೆಯ ಗದ್ಯ ಗ್ರಂಥದ ಗಾತ್ರವನ್ನು ತಿಳಿಸುತ್ತದೆ.

'ಶ್ರೀಮತು ಪ್ರವರ್ತಸೆಯು ಶಾಲಿವಾಹನ ಶಕವರುಷವು ಪರಿದಾವಿನಿ ನಾಮ ಸಂವತ್ಸರದ ಶುದ್ಧ ಪುಷ್ಯಮಾಸ ಪಂಚಮಿ ಆದಿತ್ಯವಾರ ಮೂರು ತಾಸಿಗೆ ಮುಗಿಯಿತು. ಹರಿಶ್ಚಂದ್ರರಾಯನ ಪುಸ್ತಕವ ಬರೆದಾತ ಕಾಳಿಬೆಳಗುಂದಿಯ ಸೋಮಶೇಖರ ದೇವರ ಸುಪುತ್ರ ಹುತ್ತಿಶೈಯ್ಯ ದೇವರು ತಾವು ಓದು ನಿಮಿತ್ತವಾಗಿ ಬರೆದು ಇದ್ದೇನೆ'

ಈ ಗದ್ಯ ಪ್ರತಿಕಾರನದೆನ್ನುವುದರಲ್ಲಿ ಸಂಶಯವೇ ಇಲ್ಲ. ಈ ವಿಷಯದಲ್ಲಿ ಶೋಧನೆ ನಡೆದಿದೆ.

3. ಕುಮಾರ ವಿಜಯ ವಿಳಾಸ ಕಾವ್ಯಂ

ಇದೊಂದು ಬೃಹತ್ ಕಾವ್ಯ. ಇದನ್ನು ಹಲವಾರು ದೃಷ್ಟಿಯಿಂದ ಪರಿಶೀಲಿಸುವುದು ಅಗತ್ಯವಿದೆ. ಇದನ್ನು ಕುರಿತು ಸ್ವತಂತ್ರ ಲೇಖನ ಬರೆಯಲಾಗುವುದು.

ಈ ಹಸ್ತಪ್ರತಿಯ ಕೊನೆಯ ಗದ್ಯವನ್ನು ನೋಡಿದರೆ ಗ್ರಂಥದ ಸ್ಥೂಲ ಪರಿಚಯವಾಗುತ್ತದೆ.

'ಕುಮಾರ ವಿಜಯ ದಕ್ಷಿಣ ಪ್ರವರ್ತಮಾನೆ ನೃಪತಿ ಶಾಲಿವಾಹನಶಕೆ 1749 ಸರ್ವಜಿತುನಾಮ ಸಂವತ್ಸರ ಮಾರ್ಗಶಿರ ಶುದ್ಧ ತದಿಗಿ ಬುಧವಾರ ಮೂಲನಕ್ಷತ್ರ 9 ಗಳಿಗೆಯಲ್ಲಿ [ದೃಲನಾಮಯಾ ತೈತುಲ] ಕಾರಣ ಸಾಧನ ತಾರಾಚಂದ್ರ ತಾರಾಧೀಶ್ವರ ಧನುರ್ಲಗ್ನ ಬೃಹಸ್ಪತಿವಾರದಲ್ಲಿ ಈ ಪುರಾಣಂ ಲೇಖನ ಮಾಡುವುದು ಸಮಾಪ್ತವಾಯಿತು. ಅತ್ಯಧಿಕ ಮಂಗಳ ಮಹಾ ಶ್ರೀ ಶ್ರೀ'

'ಈ ಪುಸ್ತಕ ಎಪ್ಪ ಚಿಂಚೋಳಿ ಪುರಪ್ರದೇಶದೋಳ್ ಒಪ್ಪ ಐನಿಲಯ ಪುರನಿವಾಸ ವೀರ ಸಂಗಮ ದೇವನ ಅನುಜ ಶತಾನಂದಾಖ್ಯ ಭೂರುದ್ರನ ಪುತ್ರ ಕರಿಬಸವಯ್ಯನು ಈ ನೂತನ ಕಾವ್ಯ ವಿರಚಿಸಿ ಬರೆದನು. ಪ್ರಕರಣಂ 75 ಕ್ಕ ಪದಗಳಂ 3583 ಕ್ಕ ಸಂಪೂರ್ಣ ಮಹಾ ಶ್ರೀ ಶ್ರೀ'

ಸುಮಾರು 148 ವರ್ಷಗಳ ಹಿಂದೆ ಗುಲಬರ್ಗಾ ಜಿಲ್ಹೆಯ ಚಿಂಚೋಳಿ ತಾಲೂಕಿನ ಐನೂಲಿ ಗ್ರಾಮದಲ್ಲಿ ಬದುಕಿದ ಕರಿಬಸವಯ್ಯನು ಇದರ ಕರ್ತೃ. ಇವನು ಬರೆದ ಹಲವು ಹಾಡುಗಳೂ ಈಗ ಅಲ್ಲಿಯ ಜನ ನಾಲಿಗೆಯಲ್ಲಿವೆ. ತರ್ದವಾಡಿಸಾಸಿರ... ಅನ್ನುವಂತೆ ಚಿಂಚೋಳಿಗೆ ಎಪ್ಪತ್ತು ಚೊಂಚೋಳಿ ಎನ್ನುವ ರೂಢಿ ಇತ್ತು.

ಈ ಕೃತಿ ಷಟ್ಪದಿಯಲ್ಲಿದೆ. ಪ್ರಕಟಣೆಗೆ ಯೋಗ್ಯವಾದ ಈ ಕೃತಿಯ ಇನ್ನೊಂದೆರಡು ಪ್ರತಿಗಳ ಅವಶ್ಯಕತೆ ಇದೆ.

4. ರೇವಣಸಿದ್ಧೇಶ್ವರ ಕಾವ್ಯ

ಭಾಮಿನಿ ಷಟ್ಪದಿಯಲ್ಲಿ ಬರೆದ ಕಾವ್ಯವಿದು. ಇದರ ಕರ್ತೃ ಕವಿ ಮಲ್ಲಣ್ಣ ವಿಜಾಪೂರ ಜಿಲ್ಹೆಯ ಸಿಂಧಗಿ ತಾಲ್ಲೂಕಿನ ಜಾಲವಾದಿಯವ.

ನಿಟಿಲಲೋಚನ ಜಾಲವಾದಿಯ
ಕಠಿಣಪಟುತರ ಶಂಕರೇಶನ
ಘಟಿಸಿ ಶಿವಕವಿ 'ಮಲ್ಲು' ನುಡಿದನು ಪಟಿಸಿ ಈ ಕೃತಿಯೂ ॥ 3 ॥

ಸಕಲ ಲೋಕದ ದೈವವೆಲ್ಲವ
ವಿಕಳಗೊಳಿಸಿದ ಸಿದ್ಧರೇವಣ
ಮುಕುತಿಯುಂಟು ಕೇಳಿದವರಿಗೆ ಸುಕೃತಫಲವುಂಟು

ಸುಕವಿಜನಕೃಪೆ ಜಾಲವಾದಿಯ
ಪ್ರಕಟ ಶಂಕರ ಚರಣಕಮಲವ
ಸುಕೃತಿ ವ [ರ] ದಲಿ ಪೇಳಿದನು ಮಲ್ಲಣ್ಣನೀಕೃತಿಯ ॥4॥

ಶೈಲಿ ಸರಸವೂ ಬಿಗುವೂ ಆಗಿದೆ. ಕವಿತ್ವ ದೃಷ್ಟಿಯಿಂದ ಕೃತಿ ಮೆಚ್ಚುವಂಥದಿದೆ. ಆದರೆ ಕೃತಿಯು ಕೇವಲ ನಾಲ್ಕು ಸಂಧಿಗಳು ಮಾತ್ರ ದೊರೆತಿವೆ. ಅವರಲ್ಲಿ 157 ಪದ್ಯಗಳಿವೆ. ಇನ್ನೂ ಕೆಲವು ಪುಟಗಳು ಇದೇ ಕವಿಯುದಿವೆ. ಆದರೆ ಕೃತಿ ಇದೆಯೊ ? ಇನ್ನೊಂದೊ ? ನಿರ್ಣಯಿಸಬೇಕಿದೆ. ಇದೂ ಕೋರೀ ಕಾಗದದಲ್ಲಿದೆ.

5. ಬಸವ ಶಿಖಾಮಣಿ

ಇದು ಸಾಂಗತ್ಯದಲ್ಲಿ ರಚಿತವಾದ ಸಾಮಾನ್ಯಕೃತಿ. ಇದನ್ನು ಬರೆದ ಕವಿ 'ಕಾಡ' ರಾಜಾಪುರದವ. ರಾಜಾಪುರ ರಾಯಚೂರು ಜಿಲ್ಲೆಯಲ್ಲಿ ಒಂದಿದ್ದರೆ ಗುಲಬರ್ಗಾ ಜಿಲ್ಲೆಯಲ್ಲಿ ಎರಡಿವೆ. ಚಿತ್ತಾಪುರ ತಾಲೂಕಿನ ರಾಜಾಪುರವೇ ಇದಾಗಿರುವ ಸಂಭವ ಅಧಿಕವಿದೆ. ಕಾರಣ ಅಲ್ಲಿ ಕವಿಯು ಆರಾಧ್ಯದೇವನಾದ ಅಲ್ಲಮ ಪ್ರಭುವಿನ ಗುಡಿ ಇದೆ.

ಕಾಕು ಮನಸಿಲ್ಲದೆಲ್ಲರು ಕೇಳಲಿ ಕಾವ್ಯ
ಕಾವ್ಯ ಶಿಖಾಮಣಿಯು ರತ್ನದಂತೆ
ಯಾಕೆನಲು ದೈವದೊಳು ಬಸವ ಘನವೆಂದು
ಈ ಕೃತಿಯ ಪೇಳ್ದರಾರೆನಲು ॥ 1-16 ॥
ಧರೆಯೊಳು ರಾಜಪುರದ ಪ್ರಭುದೇವರ
ಕರಕಮಲದಲಿ ಜನಿಸಿದ
ಪರಿವಿಶೆಟ್ಟಯ್ಯ ಮಲ್ಲಣ್ಣನಾತ್ಮಜ ಕಾಡ
ಬರೆದ ನೀಕೃತಿಯನು ಮುದದಿ ॥ 1-18 ॥

ರೇವಣಸಿದ್ಧೇಶ್ವರ ಕಾವ್ಯ ಕರ್ತೃ ಮಲ್ಲಣ್ಣನಿಗೂ ಈ ಕಾಡನ ತಂದೆ ಮಲ್ಲಣ್ಣನಿಗೂ ಯಾವ ಸಂಬಂಧವಿದ್ದಂತಿಲ್ಲ.

ಪ್ರೊ. ಕೇಪಯ್ಯನ ಮಠ ಅವರಲ್ಲಿ ದೊರೆತ ಪ್ರತಿ ಅಪೂರ್ಣವಿದೆ. ಪ್ರೊ. ಧನಶ್ರೀ ಅವರಿಂದ ದೊರೆತ ಪ್ರತಿ ಪೂರ್ಣವಿದ್ದು ಕೊನೆಗೆ 'ಅಂತುಸಾರ್ಥಿಕ್ಕಂ ಪದನು 1391ಕ್ಕಂ ಮಂಗಳ ಮಹಾ' ಎಂದಿದೆ. ಪ್ರತಿ ಮಾಡಿದ ಕಾಲ ಶಾಲಿವಾಹನ ಶಕ 1785, ಫಸಲಿ 1273 ಎಂದೂ ಉಕ್ತವಾಗಿದೆ. ಕವಿಕಾಲ 18ನೇ ಶತಮಾನದಲ್ಲಿರಬೇಕು. ಎರಡೂ ಪ್ರತಿಗಳು ದಪ್ಪಾದ ಕೋರೀ ಕಾಗದದಲ್ಲಿವೆ.

6. ಅಪ್ಪಾವರಣತಿಲಕ ಕಾವ್ಯ

ಸಗರನಾಡಿನ ಸುರಪುರದ ಕವಿ ಮಹಮೂರ್ತಿ ವಿರಚಿಸಿದ ಕೃತಿ ಇದು. ವಾರ್ಧಕ ಷಟ್ಪದಿಯುಲ್ಲಿರುವ ಹೆಬ್ಬೊತ್ತಿಗೆ.

ವಾರಿಧಿಯ ಕರುಣ ಗಂಭೀರೆ ನಿಜಸತ್ಯಪರೆ
ಪೂರೆ ನೀಲಮ್ಮ ಕೇಳುವಳು ವಿಲಾಸದಲಿ
ಚಾರುತರ ಶರಣರುನ್ನತನ ಚೆನ್ನಬಸವೇಶ ಪೇಳುವನು ಮುದದಿ
ಭೂರಮಣದೇವರಾಜಂಗೆ ಮಧುಮಾಯೆಂ
ಬಾರಮಣಿ ನಲ್ಲನಿಗೆ ಲಿಂಗಧಾರಣೆಗೈದ
ಸಾರಮಂ ಪೇಳ್ದುದಾವಾರ್ಧಕಷಟ್ಪದಿಯ ದಿವ್ಯಮಣಿಪೋಣಿಪಂತೆ

ಈ ವೀರಶೈವ ಕವಿ ತನ್ನ ಕಾವ್ಯವಸ್ತುವನ್ನು ಸ್ಪಷ್ಟಪಡಿಸಿದ್ದಾನೆ. ಕೆಳಗಿನ ಪದ್ಯ ಕವಿಯ ವಂಶಾವಳಿಯನ್ನೂ ತಿಳಿಸುತ್ತದೆ.

ವಪ್ಪಪೊಡವಿಡಿಯ ಹುಚ್ಚಯ್ಯನಣುಗಗುರುಸಿದ್ಧ
ನೊಪ್ಪಿದಾತ್ಮಜನು ಕರವೀರಯ್ಯನಣುಗನೈ
ಯಪ್ಪನುದರಾಬ್ಧಿ ಶಶಿವರದ ಮಹಮೂರ್ತಿವಿರಚಿಸಿ ಕಾವ್ಯಗುರುಬಲದಲಿ
ತಪ್ಪದಿಳೆಯೊಳು ಶರಣಜನರು ಶಿವಕವಿಗಳಿಗೆ
ಒಪ್ಪದಿಂದೆರಗುವೆನು ತಪ್ಪುತಿದ್ದಿದವರಿಗೆ
ಅಪ್ಪವೆನು ಚರಣಕಿಂಕರರ ಕಿಂಕರರ ಕಿಂಕರರಲ್ಲಂತನಾನಪ್ಪೆನು ॥

ಇವನು ಪೊಡವಿಡಿಯಬಗಿಯವ
ಹುಚ್ಚಯ್ಯ
↓
ಗುರುಸಿದ್ಧ
↓
ಕರವೀರಯ್ಯ
↓
ಮಹಮೂರ್ತಿ

ಇದಲ್ಲದೆ ಇವನಿಗೆ ಗುರಯ್ಯ ಪರಯ್ಯ ಮತ್ತು ಕರವೀರಯ್ಯ ಎಂಬ ಮೂರು ಜನ ಸೋದರರಿದ್ದರೆಂದು ಹೇಳಿಕೊಂಡಿದ್ದಾನೆ.

ಹನ್ನೊಂದು ಸಂಧಿ,ಹದಿನೈದನೂರಾ ಮುವತ್ತೂರು ಪದಗಳು ಎಂದು ಒಂದು ಪದ್ಯದಲ್ಲಿ ಹೇಳಿಕೊಂಡಿದ್ದರೂ, ಗ್ರಂಥದ ಕೊನೆಗೆ 'ಸಂಧಿ ಹನ್ನೊಂದು ಪದನು 1532 ಇವೆ. ಇನ್ನೂ ಮೂರ್ನಾಲ್ಕು ಪದ್ಯಗಳಿರಬೇಕೆಂಬ ಸಂಶಯವೂ ಇದೆ.

ಈ ಗ್ರಂಥದ ಕಾಲವನ್ನು ಒಂದು ಪದ್ಯದಲ್ಲಿ ನಿರ್ದೇಶಿಸಿರುವನಲ್ಲದೆ ಸುರಪುರದ ಇತಿಹಾಸವೂ ಇದನ್ನು ಸಮರ್ಥಿಸುತ್ತದೆ.

ವಚನ :—

ವರನೃಪತಿ ಶಕೆಯು ಪದಿನಾರ್ನೂರು ರಂಧ್ರದಶ
ಶರಕೊಂದಕಂ ಪ್ರವರ್ತ್ಯಾನೆ ನಂದ್ನಾಮ ವ-
ತ್ಸರದ ದಕ್ಷಿಣಾಯ [ನೇಹಿ] ಹೇಮಂತಋತು ಮಾರ್ಗಶಿರ ಅಶಿತಪಕ್ಷೇಕಾದಶಿ
ಅರುಣದಿವಸದಿ ಸ್ವಾತೀನಕ್ಷತ್ರೆ [ಏವಣಜ]
ಶರಣಸುಶರ್ಮನಾಮ [ವೃಗ] ಧನುರ್ಲಗ್ನ
ಗುರು ಹೋಮದಿಯಪ್ಪ ವರ್ಣತಿಲಕವ ಮಹಾಮೂರ್ತಿ ವಿರಚಿಸಿ
ಮುಗಿಸಿದ ॥
ಸುರಪುರೆಯ ದೊರೆಯು ಪಾಮಿಂದ್ರನ ಪ್ರಧಾನ ಪ್ರಧಾನಿಗಳು
ವರನಿಷ್ಠಿಯ ವರಭಕ್ತಿಯಲಿರುವ ಮಹಮೂರ್ತಿ
ವಿರಚಿಸಿ ಪೇಳ್ದವಿಷ್ಟಂ [ಗೆ ದೊರೆವಿಂದೆ] ಸ್ವತಂತ್ರಮೆಳ್ಳಿನಿತಿಲ್ಲದೆ ॥

ಮೇಲೆ ಉಕ್ತವಾದ ಶಾಲಿವಾಹನಶಕ (ವರನೃಪತಿ) 1600. ರಂಧ್ರದಶ= ದಶಸ್ಥಾನದಲ್ಲಿ 9 (ನವರಂಧ್ರ).

ಶರ = 5 (ಪಂಚಶರ).

ಇವನ್ನು 1695 ಶಾಲಿವಾಹನಶಕೆ ಎಂದು ಹೇಳಬಹುದು. ಇದರಲ್ಲಿ 78 ಕೂಡಿಸಿದರೆ 1773 ಕ್ರಿ.ಶ. ವಾಯಿತು. ದೊರೆ ಪಾಮೀಂದ್ರನ ಕಾಲವನ್ನು ಸುರಪುರದ ಇತಿಹಾಸ 1774 ಎಂದು ತಿಳಿಸುತ್ತದೆ. ಕವಿಯು ಆಶ್ರಯದಾತರಾದ ಪ್ರಧಾನಿ ನಿಷ್ಠಿಯವರ ಮನೆತನ ಇನ್ನೂ ಪ್ರಸಿದ್ಧವಿದೆ. ಅವರು ಕೃಷ್ಣಾತೀರದಲ್ಲಿ ಮಠವನ್ನು ಕಟ್ಟಿಸಿಕೊಟ್ಟಿದ್ದರಂತೆ ಈ ಕವಿಗೆ.

ಪ್ರೌಢ ಕಾವ್ಯಾಂಶಗಳಿಂದ ಕೂಡಿದ ಈ ಗ್ರಂಥದಲ್ಲಿ ಕವಿಯೂ ಸಾಕಷ್ಟು ಪಂಡಿತನಾಗಿದ್ದನೆಂಬುದಕ್ಕೆ ನಿದರ್ಶನಗಳಿವೆ. ಪ್ರತಿ ದಪ್ಪಕೋರಿಕಾಗದದಲ್ಲಿದ್ದು, ಅಲ್ಲಲ್ಲಿ ಕೆಲವು ಅಸ್ಪಷ್ಟತೆಗಳಿವೆ.

7. ಹೇಮಗಲ್ಲ ಹಂಪ

ಇವನೊಬ್ಬ ವಚನಕಾರ. ಹೇಮಗಲ್ಲ ಹಂಪ ಎಂದು ಕರೆದುಕೊಂಡಿದ್ದನ್ನು ನೋಡಿದರೆ ಇವನ ಊರು ಹೇಮಗಲ್ಲು ಎಂದು ಹೇಳಬಹುದು. ಈ ಊರು ರಾಯಚೂರ ಜಿಲ್ಹೆಯಲ್ಲಿರಬೇಕೆಂದು ಸಾಕಷ್ಟು ಹುಡುಕಿದನೂ ಸಿಕ್ಕಲಿಲ್ಲ. ಯಾಕೆಂದರೆ 'ಕಲ್ಲು' ಶಬ್ದದಿಂದ ಕೊನೆಗೊಳ್ಳುವ ಹೆಸರಿನ ಹಲವಾರು ಊರುಗಳು ಈ ಜಿಲ್ಹೆಯಲ್ಲಿವೆ. ಉದಾಹರಣೆಗೆ:—ಮಸರಕಲ್ಲು, ಗೂಗಲ್ಲು, ಗಾಗಲ್ಲು, ನವಲಗಲ್ಲು,

ದೇವರಕಲ್ಲು ಮುಂತಾದವು (ಆದರೆ ಹೈದರಾಬಾದ ಜಿಲ್ಲೆಯಲ್ಲಿ ಈ ಊರು ಇರಬಹುದೇನೋ ? ಎಂಬ ಶಂಕೆಯೂ ಇದೆ. ಈ ಪ್ರತಿ ಅದೇ ಜಿಲ್ಲೆಯ ಧನಶ್ರೀಯಲ್ಲಿ ದೊರೆತಿದೆ). ಆದರೂ ರಾಯಚೂರ ಜಿಲ್ಲೆಯೇ ಇವನ ಸ್ಥಳವಾಗಿರಬೇಕೆನ್ನುವುದಕ್ಕೆ ಇವನ ಒಂದು ವಚನದಲ್ಲಿ ಬಂದಿರುವ ಊರುಗಳೂ ಸಾಕ್ಷಿಯಾಗಿವೆ.

ವಚನ :

ಅನಾದಿ ಪರಶಿವನ ಶಿಷ್ಯ ಆದಿಶಂಭುವೆಂಬ ಗಣೇಶ್ವರ
ಆದಿಗಣೇಶ್ವರನ ಶಿಷ್ಯರು ನಿರಂಜನನೆಂಬ ಗಣೇಶ್ವರ
ನಿರಂಜನನೆಂಬ ಗಣೇಶ್ವರನ ಶಿಷ್ಯರು ನಿತ್ಯತೃಪ್ತನೆಂಬ ಗಣೇಶ್ವರ
ನಿತ್ಯತೃಪ್ತನೆಂಬ ಗಣೇಶ್ವರನ ಶಿಷ್ಯರು ಆದಿಪಡುವಿಡಿ ಅನಾದಿ ಪಡುವಿಡಿ
ಶಿವಸಿದ್ಧಪಡುವಿಡಿಯ ಪ್ರಭುವೆಂಬ ಗಣೇಶ್ವರ
ಪ್ರಭುವೆಂಬ ಗಣೇಶ್ವರನ (ಶಿಷ್ಯರು) ಮಹಾಂತ ಮಲ್ಲಿಕಾರ್ಜುನ
ನೆಂಬ ಗಣೇಶ್ವರ
(ಮಹಾಂತ ಮಲ್ಲಿಕಾರ್ಜುನನ ಶಿಷ್ಯರು) ಜಾಲಹಳ್ಳಿಯ ಶಾಂತದೇವರು
ಜಾಲಹಳ್ಳಿಯ ಶಾಂತದೇವರ ಶಿಷ್ಯರು ಸಿದ್ಧ ಮಲ್ಲಿನಾಥೇಶ್ವರ
ಸಿದ್ಧಮಲ್ಲಿನಾಥೇಶ್ವರನ ಶಿಷ್ಯರು ಪೊದಡಿಯ ರಾಜೇಶ್ವರ
ಪೊದಡಿಯ ರಾಜೇಶ್ವರನ ಶಿಷ್ಯರ ಕರ ಕಮಲದಲ್ಲಿ ಉತ್ಪತ್ಯವಾದ
ಶಿಶು ಹೇಮಗಲ್ಲ ಹಂಪನಾನಯ್ಯ
ಹೀಗೆ ಆದಿ ಅನಾದಿ ಪಡಿವಿಡಿದು ಬಂದ ಗುರುಶಿಷ್ಯ ಸಂಬಂಧ
ಅನಾದಿವಿಡಿದು ಬಂದ ಲಿಂಗ ಜಂಗಮ
ಅನಾದಿವಿಡಿದು ಬಂದ ಭಕ್ತಿ ಜ್ಞಾನ ವೈರಾಗ್ಯ
ಇದು ಸತ್ಯ ಸತ್ಯ ಎನ್ನಾಳ್ದ ಪರಮಗುರು ಪಡಿವಿಡಿಸಿದ್ಧ
ಮಲ್ಲಿಕಾರ್ಜುನ ಪ್ರಭುವೆ ॥

ಮೇಲೆ ಉಕ್ತವಾದ ಜಾಲಹಳ್ಳಿ ಪೊದಡಿ (ಪೊದ್ದಡ್ಡಿ) ಎರಡೂ ಊರುಗಳು ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿವೆ. ಜಾಲಹಳ್ಳಿಯಲ್ಲಿ ಶಾಂತೇಶ್ವರ ಮಠವೂ ಗದ್ದುಗೆಯೂ ಇವೆ. ಪೊದ್ದಡ್ಡಿ ಅಲ್ಲೇ ಸಮೀಪದಲ್ಲಿದೆ. ಆದರೆ ಅಲ್ಲಿ ರಾಜೇಶ್ವರನ ಕುರುಹು ಸಿಗುತ್ತಿಲ್ಲ. ಇದರ ಹತ್ತಿರವೇ ಹೇಮನೂರು ಇದೆ. ಇದೆ ಹೇಮಗಲ್ಲಾಗಿರಬೇಕೆ ? ಎಂದು ವಿಚಾರಿಸಿದರೆ ಅದಕ್ಕೆ ಪುಷ್ಟಿದೊರೆತಿಲ್ಲ. ಈ ಊರಿಗೆ ಸ್ವಾಭಾವಿಕವಾಗಿಯೇ ಅಗಸಿಯಂತಿದ್ದ ಬೆಟ್ಟದ ಕಾಡು ಬಂಡೆಯಮೇಲೆ ಮಸ್ಕಿಯ ಶಾಸನದಲ್ಲಿಯಂಥ ಮಸಮಸಕಾದ ಲಿಪಿಗಳಿವೆ. ಅವುಗಳನ್ನು ಓದುವುದು ಕಷ್ಟ.

ಇವನು ಹದಿನೇಳನೆಯ ಶತಮಾನದವನಿರಬೇಕೆಂಬುದಕ್ಕೆ ವಚನಗಳ ಶೈಲಿಯೇ ಸಾಕ್ಷಿ. 'ಪೊಡವಿಡಿ ಸಿದ್ಧಮಲ್ಲಿನಾಥ ಪ್ರಭುವೆ' ಇವನ ಅಂಕಿತ. ಗ್ರಂಥಾ

ರಂಭದಲ್ಲಿ ಪೊಡವಿಡಿ ಸಿದ್ಧಮಲ್ಲಿನಾಥಾಯ ನಮಃ, ಹೇಮಗಲ್ಲಿನ ಪಟ್‌ಸ್ಥಲ ಬರೆವುದಕ್ಕೆ ಶುಭಮಸ್ತು ಎಂದಿದೆ.

8. ಅಂಬಲಗಿಯ ಚನ್ನಮಲ್ಲೇಶ

ಡಾ॥ ಸುಂಕಾಪುರ ಅವರು ಸಂಪಾದಿಸಿದ ಜೀವನ ಜೋಕಾಲಿ ಭಾಗ ಎರಡರಲ್ಲಿ 'ವೀರಸಂಗಯ್ಯನ' ಚೌಪದನವೊಂದಿದೆ. ಅದನ್ನು ಬರೆದ ಕವಿ ಇವನು. ಆ ಚೌಪದನದ 91ನೆಯ ಪದ್ಯದಲ್ಲಿ ತನ್ನ ಹೆಸರನ್ನು ಹೇಳಿದ್ದಾನೆ. ಅದರೆ ಈ ಕವಿಯ ಹೆಸರಿನಲ್ಲಿ ಇನ್ನೂ ಒಂದೆರಡು ಚಿಕ್ಕ ಕೃತಿಗಳು ಉಪಲಬ್ಧವಿವೆ.

ಸಿರಿಯಾಳಶೆಟ್ಟಿಯ ವಾರ್ಧಕವು ಕೇವಲ 33 ವಾರ್ಧಕ ಪದ್ಯಗಳ ಕೃತಿ. ಅದರಲ್ಲಿ—

ಶ್ರೇಷ್ಠ ಭೂಷಣನ ಸನ್ನಿಧಿಯೊಳೆಲ್ಲ ಮರಗಣ
ಏಸೊಂದು ಬಗಿಯಲೊಂದಿಸಲು ಶಂಕರನಿಗಂ
ವ್ಯಾಸವಶಿಷ್ಠ ದೂರ್ವಾಸಕಶ್ಯಪ ಬಸವೇಶ್ವರನ ಭಕ್ತರುಸುರೆ
ಶ್ರೇಷ್ಠತಾ ಶರಣ ಸಿರಿಯಾಳನವಾರ್ಧಕ ಪೇಳ್ದ
ಲೇಸಾದ ಅಂಬುಲಗಿ ಚನ್ನಮಲ್ಲೇಶ್ವರನು
ಈಶ್ವರನೆ ಮತಿಗೊಟ್ಟು ಸಲವೆನ್ನ ರಜತಾದ್ರಿವಾಸ ಗಂಗಾಧರೇಶಾ ॥ 37 ॥

ವೀರಸಂಗಯ್ಯನ ಚೌಪದನವನ್ನು ಜಾನಪದ ಶೈಲಿಯಲ್ಲಿ ರಸವತ್ತಾಗಿ ಬರೆದ ಕವಿ ಕೇವಲ ಜಾನಪದ ಕವಿ ಎನಿಸಿಕೊಳ್ಳದೆ ಈ ಚಿಕ್ಕ ಕೃತಿಯಲ್ಲಿ ತನ್ನ ಕವಿತ್ವದ ಪ್ರೌಢಿಮೆಯನ್ನು ಮೆರೆದಿದ್ದಾನೆ. ಸಂಪ್ರದಾಯಬದ್ಧವಾದ ಸಿರಿಯಾಳನ ಕಥೆ ಇಲ್ಲಿದೆ.

ಮಧ್ಯಮ ಗಾತ್ರದ ದೀಪದಕಲಿಯರ ಕಾವ್ಯ ಇವನ ಹೆಸರಿನಲ್ಲಿದೆ. ಇವನ ಕಾಲವನ್ನು ಕುರಿತು ಡಾ॥ ಸುಂಕಾಪುರ ಅವರು ಪ್ರಸ್ತಾಪವೆತ್ತಿಲ್ಲವಾದರೂ ಡೋಂಗರಗಾಂವದಲ್ಲಿ ದೊರೆತ ಒಂದು ಚಿಕ್ಕ ಕೋರೀಕಾಗದದ ಹಸ್ತಪ್ರತಿಯಲ್ಲಿ ಈ ಚೌಪದನ ಪ್ರತಿ ಮಾಡಿದ ಕಾಲವಿದೆ.

ಪುಸ್ತಕ ಮುಗಿದ ವೇಳೆ 'ಶಕೆ 1710 [X] ಲಕನಾಮ ಸಂವತ್ಸರ ಸನ್ 1198... ಭ... 11 ಗುರುವಾರ 11 ತಾ [ಸ] ಶುಕ್ರನ [ಹೊ]ಯ್ಯದಲ್ಲಿ ಮುಗಿಯಿತು' ಎಂದಿದೆ. ಇದು ಕ್ರಿ. ಶ. 1788 ಆಗುತ್ತದೆ. ಈ ಕವಿ ಹದಿನೆಂಟನೆಯ ಶತಮಾನದ ಆದಿಯಲ್ಲಿರಬಹುದೆಂದು ಹೇಳಬಹುದು.

ಮೇಲೆ ಹೇಳಿದ ಗ್ರಂಥಗಳನ್ನು ಕುರಿತು ಇನ್ನೂ ದೀರ್ಘವಾಗಿ ಬೆಳೆಯಬಹುದಿತ್ತಾದರೂ, ಸರ್ವರ ಅವಗಾಹನೆಗೆ ತರಲು ಇಷ್ಟು ಸಾಕೆನಿಸಿತು. ಪ್ರತಿಯೊಂದು ಗ್ರಂಥವು ಪ್ರಕಟನೆಗೆ ಯೋಗ್ಯವಾದುದಲ್ಲವಾದರೂ, ಅವುಗಳ ಪ್ರತಿಗಳು ಅಲ್ಲಲ್ಲಿ ಬಿದ್ದಿದ್ದರೆ ದೊರಬರಲಿ ಎಂಬ ಬಯಕೆ. ಇನ್ನೂ ಕೆಲವು ಕೃತಿಗಳ ಪ್ರಸ್ತಾಪ ಇಲ್ಲಿ ಮಾಡಲಾಗಲಿಲ್ಲ.

ಮಳೆ

ತೆಲುಗು ಮೂಲ : **ಶ್ರೀ ಗುಂಟೂರು ಶೇಷೇಂದ್ರ ಶರ್ಮ**
ಕನ್ನಡಕ್ಕೆ : **ಘಟ್ಟಮರಾಜು ಮತ್ತು ಗರಣಿರಾಜು**

ಮಳೆ
ಸಾವಿರ ಕೈಗಳಲಿ
ನನ್ನ ಬಾಗಿಲು ತಟ್ಟುತ್ತಾ ಇದೆ
ಬೀದಿಯ ರೌಡಿಗಾಳಿಯ ಹಿಡಿತದಲಿ
ಕೊಂಬೆಗಳು
ವಿಲವಿಲನೆ ಒದ್ದಾಡುತ್ತಿವೆ.
ಎಷ್ಟು ದೂರದಿಂದ ಬಂದಿದೆಯೋ
ಎಂಥ ಸಂದೇಶ ತಂದಿದೆಯೋ
ಈ ಮಳೆ !
ಕೆಸರಿನಲಿ ಕಪ್ಪೆಗಳ ದಂಡು
ತೊಡಗಿವೆ ಯುದ್ಧ ಗದ್ದಲದಲ್ಲಿ.
ಮೋಡಗಳ ತೇರನೇರಿ
ಮಳೆ ಹೊರಟು ಹೋಯಿತು.
ಹೆಗಲಲ್ಲಿ ನೇಗಿಲ ಹೊತ್ತು
ಪರ್ವತಗಳ ಕೋಡು ಹತ್ತಿ
ಸೂರ್ಯ ಬರುತ್ತಿದ್ದಾನೆ.
ಜಲದಾನ ಮಾಡಿದ ಮೋಡಗಳಿಗೆ
ಜಯಕಾರ ಮಾಡಿವೆ
ಚರಾಚರ.
ನೆಲದೊಳಡಗಿದ ಸಣ್ಣ ಬೀಜ
ಕತ್ತು ಹೊರಚಾಚಿ
ಮೂಡಿದೆರಡೆಲೆಗಳಿಂದ
ಕೈ ಮುಗಿದಿದೆ
ಕೃತಜ್ಞತೆಯಿಂದ.

ಕರ್ನಾಟಕದಲ್ಲಿ – ಶ್ರೀಕೃಷ್ಣಪಾರಿಜಾತ (ಬಯಲಾಟ) ಪರಂಪರೆ (ಒಂದು ವಿವೇಚನೆ)

ಭುಜೇಂದ್ರ, ಮಹೀಶವಾಡಿ

ಇಂದು ಉತ್ತರ ಕರ್ನಾಟಕದ ಜಾನಪದ ರಂಗಭೂಮಿಯ ಮೇಲೆ ಶ್ರೀಕೃಷ್ಣ ಪಾರಿಜಾತವೆಂಬ ಬಯಲಾಟ ಒಂದು ಪ್ರಮುಖ ಪಾತ್ರವಹಿಸುವಷ್ಟು ಪ್ರಭಾವಶಾಲಿಯಾಗಿದೆ. ಈಗ ಪ್ರಚಾರದಲ್ಲಿರುವ ಶ್ರೀಕೃಷ್ಣಪಾರಿಜಾತವು ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಕುಲಗೋಡ ತಮ್ಮಣ್ಣನಿಂದ ರೂಪಿತವಾದುದು. ಅವನಿಗೆ ಪ್ರೇರಣೆ ಸಿಕ್ಕಿದ್ದು ರಾಯಚೂರ ಜಿಲ್ಲೆಯ ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತ ಕೃತಿಯಿಂದ. ಅಲ್ಲಿ–ಇಲ್ಲಿ ಸ್ವಲ್ಪ ಬದಲಾವಣೆ ಮಾಡಿ, ನಡುವೆ ಕೆಲವು ಹೊಸ ಹಾಡುಗಳನ್ನು ಸೇರಿಸಿ, ಬಯಲಾಟದ ಅಭಿರುಚಿಗೆ ಒಗ್ಗುವಂತೆ ಪರಿವರ್ತಿಸಿದ್ದಾನೆ. ಮೈಸೂರು ವಿಶ್ವವಿದ್ಯಾನಿಲಯವು ಅಪರಾಳ ತಮ್ಮಣ್ಣನ ಕೃತಿಯನ್ನು ಪ್ರಕಟಿಸಿದೆ.[1] ಕರ್ನಾಟಕ ವಿಶ್ವವಿದ್ಯಾಲಯವು ಕುಲಗೋಡ ತಮ್ಮಣ್ಣನ ಕೃತಿಯನ್ನು ಪ್ರಕಟಿಸಿದೆ.[2] ತುಲನಾತ್ಮಕವಾಗಿ ಅಭ್ಯಾಸಮಾಡಿ ಹೊಸ ನಿರ್ಣಯ ಕೈಕೊಳ್ಳಲು ಅನುಕೂಲವಾಗಿದೆ.

ಕುಲಗೋಡ ತಮ್ಮಣ್ಣನ ಕೃತಿಗೆ ಅಪರಾಳ ತಮ್ಮಣ್ಣನ ಕೃತಿ ಆಕರವಾಗಿದೆ. ಅಪರಾಳ ತಮ್ಮಣ್ಣನ ಕೃತಿಗೆ ಭಾಗವತ–ಹರಿವಂಶ ಪುರಾಣಗಳು ಆಕರಗಳಾಗಿವೆ. ಆಂಧ್ರಪ್ರದೇಶದ ಭಾಮಾಕಲಾಪ–ಕುಚಿಪುಡಿ ನೃತ್ಯಗಳು ಅವನ ಮನಸ್ಸಿನ ಮೇಲೆ ಪ್ರಭಾವಬೀರಿವೆಯೆಂದೂ, ಯಕ್ಷಗಾನ–ದೊಡ್ಡಾಟಗಳು ಅವನಿಗೆ ಮೂಲ ಪ್ರೇರಣೆ ಒದಗಿಸಿವೆಯೆಂದೂ, ವಿದ್ವಾಂಸರು ಹೇಳಿದ್ದಾರೆ. ಶ್ರೀಕೃಷ್ಣಭಕ್ತಿಯ ಮೂಲವನ್ನು ಮಾಧ್ವಸಿದ್ಧಾಂತದಿಂದ ಎತ್ತಿಕೊಂಡಿರುವನು. ತಮಿಳುನಾಡಿನ ಆಳ್ವಾರರು ಮತ್ತು ಶ್ರೀರಾಮಾನುಜಾಚಾರ್ಯರು ಹರಡಿದ ವೈಷ್ಣವ ಭಕ್ತಿ ತಳಹದಿಯಾಗಿದೆ.

'ಕುಲಗೋಡ ತಮ್ಮಣ್ಣನ ಪಾರಿಜಾತದ ಪೂರ್ವರಂಗದಲ್ಲಿ ಕೃಷ್ಣ–ಗೊಲ್ಲತಿಯರ ಪ್ರವೇಶವೂ, ಕೃಷ್ಣನ ಮಧುರ ತುಂಟತನವೂ ರಾಸಲೀಲೆಯ ಹಾಗೂ ಚೈತನ್ಯರ ರಾಧಾ–ಕೃಷ್ಣ ಭಕ್ತಿಯ ಅಪ್ರತ್ಯಕ್ಷ ಪರಿಣಾಮವೇ ಆಗಿದೆ' ಎಂದು ಅರಕೇರಿಯವರು ಹೇಳಿದ್ದಾರೆ.[3] ಅಲ್ಲದೆ, 'ಈ ಎರಡೂ ಮಾರ್ಗಗಳ ಸುಂದರ ಸಮನ್ವಯವಾದ ಕಲಾವಿಧಾನವೇ ಶ್ರೀಕೃಷ್ಣ-ಪಾರಿಜಾತ ನಾಟಕವೆನ್ನಬೇಕು. ಕುಲಗೋಡ ತಮ್ಮಣ್ಣನು ಜನಜೀವನದಲ್ಲಿ ಹರಿಯುತ್ತಿದ್ದ ರಾಧಾ–ಕೃಷ್ಣ ಭಕ್ತಿ ರೂಪ

ವನ್ನು ಗ್ರಹಿಸಿದ್ದನು. ನಗರಜೀವನದಲ್ಲಿ ಬೆಳಗುತ್ತಿದ್ದ ಕೃಷ್ಣ–ರುಕ್ಮಿಣಿಯರ ಭಕ್ತಿರೂಪವನ್ನೂ ಗ್ರಹಿಸಿದ್ದನು. ಅವೆರಡನ್ನೂ ಪೂರ್ವರಂಗ–ಉತ್ತರರಂಗಗಳಾಗಿ ಹೊಂದಿಸಿ ತನ್ನ ಪ್ರದರ್ಶನಕ್ಕೆ ಯೋಗ್ಯವಾದ ನಾಟಕಕೃತಿಯನ್ನು ರೂಪಿಸಿ ಕೊಂಡನು. ಇಂದು ಲೋಕಪ್ರಿಯವಾದ ಪಾರಿಜಾತದಲ್ಲಿ ಇವೆರಡರ ಸಮನ್ವಯಾತ್ಮಕವಾದ ನಾಟ್ಯರೂಪವನ್ನು ಕಾಣುತ್ತೇವೆ. ಆದರೆ ಅಪರಾಳ ತಮ್ಮಣ್ಣನು ಬರೆದ ಪಾರಿಜಾತವು ಮೂಲರೂಪದಲ್ಲಿ ಶುದ್ಧ ದ್ವೈತಭಾವವನ್ನು ನಿರೂಪಿಸುವ, ಕೃಷ್ಣ–ರುಕ್ಮಿಣಿಯ ದಿವ್ಯ ಸಂಬಂಧವನ್ನು ನಿರೂಪಿಸುವ ಭಕ್ತಿಪ್ರಧಾನವಾದ ಜಾನಪದ ನಾಟಕವಾಗಿದೆ'[4] ಎಂದು ಅರಕೇರಿಯವರು ಎರಡೂ ಪಾರಿಜಾತ ಕೃತಿಗಳ ಸಾಮ್ಯ–ವೈಷಮ್ಯಗಳ ಸೂಕ್ಷ್ಮ ಗೆರೆಯನ್ನು ಎಳೆದಿದ್ದಾರೆ. ಎರಡೂ ಕೃತಿಗಳಿಗೆ ಆಕರವಾದ ಭಾಗವತ–ಹರಿವಂಶಗಳನ್ನು ಈಗ ತಿಳಿದುಕೊಳ್ಳಲು ಯತ್ನಿಸುವ.

ಭಾಗವತದ ಕಥೆ[5]

ಪ್ರಾಗ್‌ಜ್ಯೋತಿಷಪುರದ ರಾಜನಾದ ಭೌಮಾಸುರನು ಇಂದ್ರಲೋಕವನ್ನು ಗೆದ್ದು ವರುಣನ ಛತ್ರವನ್ನೂ, ಅದಿತಿಯ ಕುಂಡಲವನ್ನೂ, ಸಕಲ ದೇವತೆಗಳ ರಾಜ್ಯವನ್ನೂ, ವಶಪಡಿಸಿಕೊಂಡಿದ್ದನು. ಭೂಮಿಯ ಮೇಲಿನ ಎಲ್ಲ ರಾಜರನ್ನು ಸೋಲಿಸಿ ಅವರ ಮಕ್ಕಳಾದ ಹದಿನಾರುಸಾವಿರ ಸುಂದರಿಯರನ್ನು ಹಿಡಿದೊಯ್ದು ತನ್ನ ಅರಮನೆಯಲ್ಲಿ ಬಂಧಿಸಿದ್ದನು. ಇಂದ್ರನ ವಿನಂತಿಯಮೇರೆಗೆ ಕೃಷ್ಣನು ಸತ್ಯಭಾಮೆಯೊಂದಿಗೆ ಪ್ರಾಗ್‌ಜ್ಯೋತಿಷಪುರಕ್ಕೆ ಹೋಗಿ ಯುದ್ಧವನ್ನು ಕೈಕೊಂಡನು. ಕೋಟೆಯ ಕಾವಲಿದ್ದ ಮುರನನ್ನು ಕೊಂದು ಹಾಕಿದನು. ಭೌಮಾಸುರನನ್ನು ಸೋಲಿಸಿ ಕೊಂದುಹಾಕಿದನು. ಹದಿನಾರುಸಾವಿರ ಸುಂದರಿಯರನ್ನು ಸೆರೆಬಿಡಿಸಿ ದ್ವಾರಕೆಗೆ ಕಳಿಸಿದನು. ಛತ್ರ–ಕುಂಡಲಗಳನ್ನು ಮರಳಿ ಅವರವರಿಗೆ ಒಪ್ಪಿಸಿದನು. ಇಂದ್ರ–ಶಚಿಯರು ಕೃಷ್ಣ–ಸತ್ಯಭಾಮೆಯರನ್ನು ಸತ್ಕರಿಸಿದರು. ಆಮೇಲೆ, ಕೃಷ್ಣ–ಸತ್ಯಭಾಮೆಯರು ದ್ವಾರಕೆಗೆ ಹೋಗುವ ಮಾರ್ಗದಲ್ಲಿ ನಂದನವನದಲ್ಲಿ ಪಾರಿಜಾತ ವೃಕ್ಷವನ್ನು ಕಂಡರು. ಸತ್ಯಭಾಮೆ ಅದನ್ನು ಅಪೇಕ್ಷಿಸಿದಳು. ಕೃಷ್ಣನ ಆಜ್ಞೆಯಂತೆ ಗರುಡನು ಅದನ್ನು ಕಿತ್ತು ತಲೆಯಮೇಲೆ ಹೊತ್ತುಕೊಂಡನು. ಇಂದ್ರನಿಗೆ ಈ ವಿಷಯ ತಿಳಿದು ಯುದ್ಧಕ್ಕೆ ಬಂದನು. ಇಂದ್ರನನ್ನು ಸೋಲಿಸಿ ಕೃಷ್ಣನು ಪಾರಿಜಾತ ವೃಕ್ಷವನ್ನು ದ್ವಾರಕೆಗೆ ಒಯ್ದು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟನು. ಶುಭ ಮುಹೂರ್ತದಲ್ಲಿ ಹದಿನಾರು ಸಾವಿರ ಕನ್ನೆಯರನ್ನು ಲಗ್ನವಾದನು.

ಹರಿವಂಶಪುರಾಣದ ಕಥೆ[6]

ಇದರಲ್ಲಿ ಪಾರಿಜಾತಕ್ಕೆ ಸಂಬಂಧಿಸಿದ ಕೃಷ್ಣನ ಕಥೆ ಎರಡು ಭಾಗವಾಗಿ ಹೇಳಲ್ಪಟ್ಟಿದೆ: ಒಂದು ಭಾಗದಲ್ಲಿ ನರಕಾಸುರನ ಕಥೆ, ಇನ್ನೊಂದು ಭಾಗದಲ್ಲಿ

ಪಾರಿಜಾತಾಪಹರಣದ ಕಥೆ ಹೇಳಲಾಗಿದೆ. ಭಾಗವತದಲ್ಲಿ ಬರುವ ಭೌಮಾಸುರನೇ ಹರಿವಂಶ ಪುರಾಣದಲ್ಲಿ ನರಕಾಸುರನಾಗಿದ್ದಾನೆ. ಅವನ ಸಂಹಾರದವರೆಗಿನ ಕಥೆಯಲ್ಲಿ ವ್ಯತ್ಯಾಸವೇನೂ ಇಲ್ಲ. ಭಾಗವತದಲ್ಲಿಯಂತೆಯೆ ಹರಿವಂಶಪುರಾಣದಲ್ಲಿಯೂ ಇದೆ. ಆದರೆ, ವಿಸ್ತರಿಸಿ ಹೇಳಲಾಗಿದೆಯಷ್ಟೆ. ಎರಡನೆಯ ಭಾಗದಲ್ಲಿ ಬರುವ ಕಥೆ ಕೆಲವು ಅಂಶಗಳಲ್ಲಿ ಸ್ವತಂತ್ರವಾಗಿ ಬೆಳೆದು ಪಾರಿಜಾತಾಪಹರಣದ ಕಥೆಯಾಗಿ ನಿಂತಿದೆ. ಅದರ ಸಾರಾಂಶ ಹೀಗಿದೆ :

ರುಕ್ಮಿಣಿಯ ಉಪೋಷಣಾವ್ರತದ ಪಾರಣೆಯದಿನ ಕೃಷ್ಣನು ಸತಿಯೊಂದಿಗೆ ಆನಂದದಿಂದ ಇರುವಾಗ ನಾರದನು ಬಂದು ಪಾರಿಜಾತ ಪುಷ್ಪವನ್ನು ಕೃಷ್ಣನ ಕೈಗೆ ಕೊಡುವನು. ಅವನು ಅದನ್ನು ರುಕ್ಮಿಣಿಯ ಮುಡಿಯಲ್ಲಿ ಇರಿಸಿದನು. ದೂತೆಯ ಮುಖಾಂತರ ಈ ವಾರ್ತೆಯನ್ನು ಕೇಳಿದ ಸತ್ಯಭಾಮೆ ಸಿಟ್ಟಾದಳು. ಕೃಷ್ಣ ಅವಳನ್ನು ಸಂತೈಸುವದಕ್ಕಾಗಿ ಅವಳ ಬಳಿಗೆ ಹೋಗಿ ಪಾರಿಜಾತ ವೃಕ್ಷವನ್ನೇ ತಂದು ಅವಳ ಅಂಗಳದಲ್ಲಿ ನೆಡುವುದಾಗಿ ವಚನ ಕೊಟ್ಟನು. ಪಾರಿಜಾತ ವೃಕ್ಷ ಕಳಿಸಲು ನಾರದನ ಮುಖಾಂತರ ಇಂದ್ರನಿಗೆ ಹೇಳಿಕಳಿಸಿದನು. ಅದಕ್ಕೆ ಅವನು ನಿರಾಕರಿಸಿದನು. ಪ್ರದ್ಯುಮ್ನ ಮೊದಲಾದವರನ್ನು ಪಾರಿಜಾತ ವೃಕ್ಷ ತರಲು ಕಳಿಸಿದಾಗ ಇಂದ್ರನೊಂದಿಗೆ ಯುದ್ಧ ಸಂಭವಿಸಿತು. ಆಗ ಇಂದ್ರನು ಸೋತನು. ಕಶ್ಯಪ–ಅದಿತಿಯರ ಸಂಧಾನದಿಂದ ಸಂಗ್ರಾಮ ನಿಂತು ಒಪ್ಪಂದವಾಯಿತು. ಪಾರಿಜಾತ ವೃಕ್ಷ ದ್ವಾರಕೆಗೆ ತರಲ್ಪಟ್ಟಿತು. ಕೃಷ್ಣನು ಅದನ್ನು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟನು. ಸತ್ಯಭಾಮೆ ವೈಭವದಿಂದ ಪುಣ್ಯಕವ್ರತವನ್ನು ಕೈಕೊಂಡಳು.

ಅಪರಾಳ ತಮ್ಮಣ್ಣನ ಶ್ರೀಕೃಷ್ಣ ಪಾರಿಜಾತದ ಕಥೆ

ಧರಿಣೀದೇವಿ ದೈತ್ಯರ ಕಾಟ ತಾಳಲಾರದೆ ಶ್ರೀಹರಿಗೆ ರಕ್ಷಣೆಗಾಗಿ ಬೇಡಿಕೊಂಡಳು. ಆಗ ಅವನು ಅವಳಾಸೆಯನ್ನು ಪೂರೈಸಲು ಕೃಷ್ಣನಾಗಿ ಅವತರಿಸಿ ಕಂಸನನ್ನು ಕೊಂದು, ತಾಯಿ ತಂದೆಗಳ ಸೆರೆಬಿಡಿಸಿ, ದ್ವಾರಕಾ ಪಟ್ಟಣವನ್ನು ನಿರ್ಮಿಸಿ ಅಲ್ಲಿ ರುಕ್ಮಿಣಿ–ಸತ್ಯಭಾಮೆ ಮುಂತಾದ ಅಷ್ಟಸತಿಯರೊಂದಿಗೆ ಅಷ್ಟೈಶ್ವರ್ಯ ಭೋಗದಲ್ಲಿದ್ದನು. ಒಂದು ದಿನ ನಾರದರು ಬಂದು ಪಾರಿಜಾತ ಪುಷ್ಪವನ್ನು ಕೃಷ್ಣನ ಕೈಯಲ್ಲಿ ಕೊಟ್ಟರು. ಕೃಷ್ಣನು ಪಟ್ಟದರಸಿಯಾದ ರುಕ್ಮಿಣಿಯ ಮುಡಿಯಲ್ಲಿ ಅದನ್ನಿರಿಸಿದನು. ಆಮೇಲೆ ನಾರದರು ಸತ್ಯಭಾಮೆಯ ಮನೆಗೆ ಬಂದು ಈ ವಿವರವೆಲ್ಲವನ್ನೂ ತಿಳಿಸಿ, ಯಾರ ಬಳಿಯಲ್ಲಿ ಪಾರಿಜಾತ ಪುಷ್ಪವಿರುತ್ತದೆಯೋ ಅವರಿಗೆ ಕೃಷ್ಣ ಪೂರ್ಣ ಒಲಿಯುತ್ತಾನೆ ಎಂಬುದು ಅದರ ಮಹಿಮೆಯಾಗಿದೆ ಎಂದು ಹೇಳಿ ಸತ್ಯಭಾಮೆಯ ಮನಸ್ಸಿನಲ್ಲಿ ರುಕ್ಮಿಣಿಯ ಬಗ್ಗೆ ಮತ್ಸರ ಹುಟ್ಟುವಂತೆ ಮಾಡಿ ದೇವಲೋಕಕ್ಕೆ ಮರಳಿದರು. ಕೃಷ್ಣನ ಪಕ್ಷಪಾತ ಸಹಿಸದೆ ಸತ್ಯಭಾಮೆ ಕೃಷ್ಣನನ್ನು

ತನ್ನ ಮನೆಗೆ ಕರೆಸಲು ಅರಗಿಳಿಯ ಮುಖಾಂತರ ಪತ್ರವನ್ನೂ, ಅನೇಲೆ ದೂತೆಯ ಮುಖಾಂತರ ಆಮಂತ್ರಣವನ್ನೂ ಕಳಿಸಿ ನಿರಾಶೆ ಹೊಂದಿ, ಹೆಚ್ಚಿನ ಕೋಪದಿಂದ ಕುದಿಯುತ್ತ ತಾನೇ ಸ್ವತಃ ಕೃಷ್ಣನಿದ್ದಲ್ಲಿಗೆ ಹೋಗುತ್ತಾಳೆ. ರುಕ್ಮಿಣಿಯ ಮನೆಯಲ್ಲಿ ಅವನು ಪಗಡೆಯಾಟದಲ್ಲಿ ರುಕ್ಮಿಣಿಯೊಂದಿಗೆ ಸರಸ ಸಲ್ಲಾಪದಲ್ಲಿರುವಾಗ ಸತ್ಯಭಾಮೆ ಅಲ್ಲಿಗೆ ಬಂದುದನ್ನು ಕೃಷ್ಣನು ಉಪೇಕ್ಷೆ ಮಾಡುತ್ತಾನೆ. ಅದರಿಂದ ಅಪಮಾನಿತಳಾಗಿ ಸತ್ಯಭಾಮೆ ಮೂರ್ಛೆ ಹೋಗುತ್ತಾಳೆ. ಕೃಷ್ಣನು ಕೂಡಲೆ ಶೈತ್ಯೋಪಚಾರ ಮಾಡಿ ಎಚ್ಚರಿಸಿ ಅವಳನ್ನು ಸಂತೈಸಿದರೂ ಅವಳು ಸಮಾಧಾನ ಹೊಂದುವುದಿಲ್ಲ. ಶಕ್ತಿದೇವಿಯನ್ನು ತಪಸ್ಸಿನಿಂದ ಒಲಿಸಿ ವರಪಡೆದು ಕೃಷ್ಣನು ತನ್ನ ಮನೆಗೆ ಬರುವಂತೆ ಮಾಡದಿದ್ದರೆ ತಾನು ಸತ್ಯಭಾಮೆಯಲ್ಲ–ಎಂದು ಪ್ರತಿಜ್ಞೆ ಮಾಡಿ ಹೊರಟುಹೋದಳು. ಅದರಂತೆ ಪಾರ್ವತಿಯನ್ನು ಒಲಿಸಿಕೊಂಡು ಕೃಷ್ಣನು ಬರುವಂತೆ ವರಪಡೆದಳು. ಇತ್ತ ಕೃಷ್ಣನು ಸತ್ಯಭಾಮೆಯ ಮನವನ್ನು ತಿಳಿಯಲು ಕೊರವಂಜಿಯ ವೇಷದಲ್ಲಿ ಅವಳಲ್ಲಿಗೆ ಬರುವನು. ಅವಳು ಕೃಷ್ಣನ ಬರವಿನ ಬಗ್ಗೆ ಕಣಿ ಕೇಳಿ ಖಚಿತಪಡಿಸಿಕೊಂಡು ನಿಶ್ಚಿಂತೆಯಿಂದ ಇರುವಾಗ ರಾತ್ರಿ ಕೃಷ್ಣನು ಸತ್ಯಭಾಮೆಯ ಮನೆಗೆ ಬಂದು ಬಾಗಿಲು ತಟ್ಟಿ ದಶಾವತಾರದ ತನ್ನೆಲ್ಲ ಗುರುತುಗಳನ್ನು ಹೇಳಿಕೊಂಡರೂ ಅವಳು ಬಾಗಿಲ ತೆಗೆಯುವುದಿಲ್ಲ. ಕೊನೆಗೆ ಕೃಷ್ಣನು ಬೇಸತ್ತು 'ಅಲ್ಲೀಪುರಿ ಭೀಮನೊಡೆಯ ಕಾಣೆ ಭಾಮಿನೀ ಬಾಗಿಲು ತೆರೆಯೆ' ಎಂದಾಗ ಅವಳು ಧಾವಿಸಿಬಂದು ಬಾಗಿಲು ತೆರೆದು ಕಾಲಿಗೆ ಬಿದ್ದು ಕ್ಷಮಿಸಲು ಬೇಡಿಕೊಳ್ಳುತ್ತಾಳೆ. ಕೃಷ್ಣನು ಕ್ಷಮಿಸಿ, ಅವಳೊಡನೆ ಆ ದಿನ ರಮಿಸಿ ಸರಸ ಸಲ್ಲಾಪದಲ್ಲಿ ತೊಡಗಿ 'ಒಂದು ಹೂವಿಗಾಗಿ ಇಷ್ಟೊಂದು ಸಿಟ್ಟಾಗುವುದೆ? ಆ ಹೂವಿನ ಗಿಡವನ್ನೇ ತಂದು ನಿನ್ನ ಮನೆಯ ಅಂಗಳದಲ್ಲಿ ನೆಡುವೆನು'–ಎಂದು ವಚನ ಕೊಟ್ಟು ಒಲಿಸಿಕೊಂಡು, ಭಕ್ತರ ಚರಿತ್ರೆ–ನವಧಾ ಭಕ್ತಿಯ ರೀತಿಗಳನ್ನು ತಿಳಿಸಿ ಸತ್ಯಭಾಮೆಯನ್ನು ಸಂತೃಪ್ತಗೊಳಿಸಿದನು. ಅದೇ ಸಮಯದಲ್ಲಿ ದೇವೇಂದ್ರನು ಕೃಷ್ಣನ ಬಳಿಗೆ ಬಂದು ಮುರ ಮತ್ತು ನರಕಾಸುರರ ಉಪಟಳವನ್ನು ಹೋಗಲಾಡಿಸಿ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಂಡನು. ಕೃಷ್ಣನು ಇಂದ್ರನಿಗೆ ಅಭಯ ವಚನವಿತ್ತು ಸತ್ಯಭಾಮೆಯೊಂದಿಗೆ ನರಕಾಸುರನಲ್ಲಿಗೆ ಹೋಗಿ ಸಂಗ್ರಾಮ ಕೈಕೊಂಡನು. ಕೋಟೆಯನ್ನು ಕಾಯುತ್ತಿದ್ದ ಮುರನನ್ನು ಕೊಂದು, ನರಕಾಸುರನನ್ನು ಸೋಲಿಸಿ ಸಂಹರಿಸಿ, ಅವನು ಒಯ್ದಿದ್ದ ದೇವೇಂದ್ರನ ಸತ್ತಿಗೆ–ಅದಿತಿಯ ಕುಂಡಲಗಳನ್ನು ಮರಳಿ ಪಡೆದು, ಬಂಧನದಲ್ಲಿ ಇರಿಸಿದ್ದ ಹದಿನಾರು ಸಾವಿರ ಸತಿಯರನ್ನು ಮುಕ್ತಗೊಳಿಸಿದನು. ಆ ಸತಿಯರನ್ನು ದ್ವಾರಕೆಗೆ ಕಳಿಸಿ, ಸತ್ಯಭಾಮೆಯೊಂದಿಗೆ ದೇವೇಂದ್ರನ ಮನೆಗೆ ಬಂದು ವೃಂದಾರಕದಿಂದ ಪೂಜೆಗೊಂಡು ತಾಯಿಯಾದ ಅದಿತಿಯನ್ನು ವಂದಿಸಿದನು. ಆಕೆ ಮಗನನ್ನು ಮುದ್ದಾಡಿ ಸೊಸೆಯಾದ ಸತ್ಯಭಾಮೆಗೆ ವಸ್ತ್ರಾಭರಣವಿತ್ತು ಆಶೀರ್ವದಿಸಿದಳು. ಅಷ್ಟರಲ್ಲಿ ಇಂದ್ರನ ರಾಣಿ ಶಚಿದೇವಿ ಅಲ್ಲಿಗೆ ಬಂದಳು. ಅವಳ ಮುಂದೆ

ಅದಿತಿಯು ಸತ್ಯಭಾಮೆಯ ಗುಣಗಾನ ಮಾಡುವಳು. ಅದನ್ನು ಶಚೀದೇವಿ ಸಹಿಸದೆ ತನಗೆ ಅವಳು ಸರಿಯಿಲ್ಲವೆಂದು ಹೇಳಿ ಸತ್ಯಭಾಮೆಯನ್ನು ಮೂದಲಿಸಿದಳು. ಅದಿತಿಯು ಸಿಟ್ಟಾಗಿ ತನ್ನ ಹಿರಿಯ ಸೊಸೆಯಾದ ಶಚೀದೇವಿಗೆ ಬುದ್ಧಿ ಹೇಳಿ, ಕಿರಿಯ ಸೊಸೆಯಾದ ಸತ್ಯಭಾಮೆಯನ್ನು ಸಂತೈಸಿದಳು. ಅದಿತಿ-ಇಂದ್ರಾದಿಗಳಿಂದ ಬೀಳ್ಕೊಂಡು ಕೃಷ್ಣ-ಸತ್ಯಭಾಮೆಯರು ದ್ವಾರಕೆಗೆ ಮರಳುವಾಗ ಮಾರ್ಗದಲ್ಲಿ ನಂದನವನದಲ್ಲಿ ಕಲ್ಪವೃಕ್ಷವನ್ನು ಕಂಡರು. ಸತ್ಯಭಾಮೆ ಕಲ್ಪವೃಕ್ಷವನ್ನು ಬೇಡಿದಳು. ಶಚಿಯ ಮೂದಲಿಕೆಯನ್ನು ನೆನೆದಳು. ಹಿಂದೆ ಕೃಷ್ಣನು ತನಗೆ ಕೊಟ್ಟ ವಚನವನ್ನು ಅವನ ನೆನಪಿಗೆ ತಂದುಕೊಟ್ಟಳು. ಕೂಡಲೆ ಕೃಷ್ಣನ ಕಣ್ಣುಸನ್ನೆಯೊಂದಿಗೆ ಗರುಡನು ಕಲ್ಪವೃಕ್ಷವನ್ನು ಕಿತ್ತುಕೊಂಡು ಹೆಗಲಲ್ಲಿ ಹೊತ್ತುಕೊಂಡನು. ಈ ವಿಷಯ ಇಂದ್ರನಿಗೆ ತಿಳಿದು ಅವನು ಸಂಗ್ರಾಮಕ್ಕೆ ಬಂದನು. ಕೃಷ್ಣನು ಸತ್ಯಭಾಮೆಗೆ 'ಈ ಯುದ್ಧ ನಿನ್ನಿಂದಲೇ ಘಟಿಸಿತು, ನೀನೆ ನಿಸ್ತರಿಸು' ಎಂದನು. ಅವಳು ವೀರಾವೇಶದಿಂದ ಹೋರಾಡಿ ಎಲ್ಲರನ್ನು ಸೋಲಿಸಿದಳು. ಇಂದ್ರನು ಶರಣು ಬಂದನು. ಇಂದ್ರನಿಗೆ ಕರುಣೆದೋರಿ ಕೃಷ್ಣ-ಸತ್ಯಭಾಮೆಯರು ದ್ವಾರಕೆಗೆ ಬಂದರು. ಕೃಷ್ಣನು ಪಾರಿಜಾತ ವೃಕ್ಷವನ್ನು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟು ತನ್ನ ವಚನ ಪೂರೈಸಿದನು. ಮುಂದೆ ಆ ವೃಕ್ಷದಲ್ಲಿ ಪುಷ್ಪಗಳಾಗಿ ಅವೆಲ್ಲ ಗಾಳಿಗೆ ಹಾರಿಹೋಗಿ ರುಕ್ಮಿಣಿಯ ಮಂದಿರ ಸೇರತೊಡಗಿದವು. ಆಗ ಕೃಷ್ಣನು ಸತ್ಯಭಾಮೆಗೆ 'ಅಹಂಕಾರ ಬಿಟ್ಟು ರುಕ್ಮಿಣಿಯ ಮನೆಗೆ ನಡೆ' ಎಂದನು. ಅದರಂತೆ ತನ್ನ ಮನೆಗೆ ಬಂದ ಸತ್ಯಭಾಮೆಯನ್ನು ರುಕ್ಮಿಣಿ ತಬ್ಬಿ ಆದರದಿಂದ ಬರಮಾಡಿಕೊಂಡು ಒಳಗೆ ಕರೆದೊಯ್ದಳು. ಸವತಿ ಮತ್ಸರ ಮಾಯವಾಗಿ ಇಬ್ಬರೂ ಪ್ರೇಮದಿಂದ ಇರುವುದನ್ನು ಕೃಷ್ಣನು ಕಂಡು ಸಂತುಷ್ಟನಾಗಿ ಇಬ್ಬರಿಂದಲೂ ಕೈತುತ್ತು ಉಂಡು, ಒಂದು ಶುಭಮುಹೂರ್ತದಲ್ಲಿ ಹದಿನಾರು ಸಾವಿರ ಸತಿಯರನ್ನು ಲಗ್ನವಾದನು. ದ್ವಾರಕೆಯಲ್ಲಿ ಮಂಗಳಗೀತ ಮೊಳಗಿತು– ಇದೇ ಕತೆಯನ್ನು ಹೆಚ್ಚಿನ ಬದಲಾವಣೆ ಇಲ್ಲದೆ ಕುಲಗೋಡ ತಮ್ಮಣ್ಣನೂ ತನ್ನ ಪಾರಿಜಾತ ಬಯಲಾಟಕ್ಕೆ ಬಳಸಿದ್ದಾನೆ. ಆದರೆ, ಕೆಲವು ಸಂಗತಿಗಳನ್ನು ಹೆಚ್ಚಿಗೆ ಸೇರಿಸಿಕೊಂಡಿದ್ದಾನೆ. ಕೃಷ್ಣ-ಸತ್ಯಭಾಮೆಯರು ಒಂದಾದಮೇಲೆ ಬಯಲಾಟ ಮುಗಿಯುತ್ತದೆ. ಮುಂದಿನ ಭಾಗವನ್ನು ಈಗ ಆಡುವ ರೂಢಿ ನಿಂತುಹೋಗಿದೆ.

ಭಾಗವತದ ಕಥೆ, ಹರಿವಂಶಪುರಾಣದ ಕಥೆ, ಅಪರಾಳ ತಮ್ಮಣ್ಣನ ಪಾರಿಜಾತ ಕಥೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಮೂಲ ಕಥೆ ಒಂದೇ ಇದ್ದರೂ, ಒಂದರಿಂದ ಒಂದಕ್ಕೆ ಕಥೆ ಒಗ್ಗುತ್ತ ಹಲಕೆಲವು ಹೊಸ ಅಂಶಗಳನ್ನು ಸೇರಿಸಿಕೊಳ್ಳುತ್ತ ಮುಂದುವರಿದುದು ಕಂಡುಬರುತ್ತದೆ. ಹರಿವಂಶದಲ್ಲಿ ಪಾರಿಜಾತಾಪಹರಣದ ಕಥೆ ಚೆನ್ನಾಗಿ ಅರಳಿನಿಂತು ಸ್ವತಂತ್ರವಾದ ಅಸ್ತಿತ್ವವನ್ನೇ ಪಡೆದಿದೆ. ಅಪರಾಳ ತಮ್ಮಣ್ಣನು ಶ್ರೀಕೃಷ್ಣಪಾರಿಜಾತದಲ್ಲಿ ಮೊದಲು ಪಾರಿಜಾತದ ಪ್ರಸ್ತಾಪ, ಭಾಮಾಕಲಾಪ,

ನಂತರ ನರಕಾಸುರ ಸಂಹಾರ, ಪಾರಿಜಾತಾಪಹರಣ ಕಥೆಗಳನ್ನು ಜೋಡಿಸಿ ಹರಿವಂಶದ ಘಟನೆಗಳನ್ನು ಹಿಂದುಮುಂದಾಗಿ ಹೇಳಿಪುದಲ್ಲದೆ, ಮೂಲದಲ್ಲಿ ಇಲ್ಲದ ಶಕ್ತಿಉಪಾಸನೆಗೆ ಸಂಬಂಧಿಸಿದ ಭಾಮಾಕಲಾಪ ಮತ್ತು ಕೊರವಂಜಿ ಸನ್ನಿವೇಶಗಳನ್ನು ಹೆಚ್ಚಾಗಿ ಸೇರಿಸಿಕೊಂಡಿದ್ದಾನೆ. ಅವುಗಳಿಗೆ ಯಾವ ಕೃತಿಗಳಿಂದ ಆಕರಗಳನ್ನು ಪಡೆದಿದ್ದಾನೆಯೋ ತಿಳಿಯದು. ಆದರೆ ಆಂಧ್ರದಲ್ಲಿ ಸುಪ್ರಸಿದ್ಧವಾಗಿರುವ ಭಾಮಾ ಕಲಾಪ ಮತ್ತು ಕೊರವಂಜಿ ಕಥೆಗಳು ನಿಶ್ಚಯವಾಗಿಯೂ ಅಪರಾಳ ತಮ್ಮಣ್ಣನ ಮೇಲೆ ಪ್ರಭಾವ ಬೀರಿವೆಯೆಂಬುದನ್ನು ಒಪ್ಪಬೇಕಾಗುತ್ತದೆ. ಭಾಮಾಕಲಾಪ, ಕೂಚಿಪುಡಿ, ಕೊರವಂಜಿ ಮುಂತಾದವುಗಳು ವಿಜಯನಗರದ ಅರಸರ ಕಾಲಕ್ಕೆ ಆಂಧ್ರ –ಕರ್ನಾಟಕ ಸಂಬಂಧ ಅಧಿಕವಾಗಿ ಬೆಳೆದಾಗ ಕನ್ನಡನಾಡಿಗೆ ವಲಸೆಬಂದ ಸರಕುಗಳು, ಎಂಬುದು ಸ್ಪಷ್ಟ.

ಕುಲಗೋಡ ತಮ್ಮಣ್ಣನು 'ಭಾಮಾ–ಕೊರವಂಜಿ' ಸ್ವೀಕಾರದೊಂದಿಗೆ, 'ರಾಧಾಕೃಷ್ಣ-ರಾಸಲೀಲೆ'ಗಳ ಬಂಗಾಲಿ-ಗುಜರಾತಿ ಆಕರ್ಷಣೆಗಳನ್ನು ತನ್ನ ಕೃತಿಯಲ್ಲಿ ಸಮಾವೇಶಗೊಳಿಸಿದನು. ಅಂತೆಯೇ ಅವನ 'ಪಾರಿಜಾತ'ದ ಪೂರ್ವರಂಗದಲ್ಲಿ ಗಣಪತಿ, ಗೋಪಾಲ–ಗೊಲ್ಲತಿಯರ ಪ್ರಸಂಗಗಳು ಬಂದು ಉತ್ತರರಂಗದಲ್ಲಿ ಅಪ ರಾಳ ತಮ್ಮಣ್ಣನ ಸಂಗತಿಗಳು ಸೇರುತ್ತವೆ. 'ಗಣಪತಿ–ಗೊಲ್ಲತಿ'ಗಳು ಮರಾಠಿ ತಮಾಸ್‌ಗಳ 'ಗಣ–ಗೌಳಣ'ಗಳಾಗಿ ಜನಪ್ರಿಯತೆಯನ್ನು ಪಡೆದು ಇಂದಿಗೂ ಕೀರ್ತಿ ಧ್ವಜವನ್ನು ಹಾರಿಸುತ್ತಿವೆ. 'ಗಣಪತಿ–ಗೊಲ್ಲತಿ'ಯರ ಆವಿರ್ಭಾವಕ್ಕೆ ಕುಲಗೋಡ ತಮ್ಮಣ್ಣನು ಕಾರಣನಾದುದರಿಂದ 'ಗಣ–ಗೌಳಣ' ಸೃಷ್ಟಿಯ ಜನಕನೆಂದು ಮರಾಠಿ ಜಾನಪದ ರಂಗಭೂಮಿ ಅವನನ್ನು ಹೊಗಳಬೇಕಿದೆ. 'ಪಾರಿಜಾತ'ದ ಪ್ರಭಾವವನ್ನು ಅವರು ಒಪ್ಪಿದ್ದಾರೆ. ಕುಲಗೋಡ ತಮ್ಮಣ್ಣನ ಸೃಷ್ಟಿಯನ್ನು ಅವರು ಇನ್ನೂ ಗುರುತಿಸಿಲ್ಲ. ನಮ್ಮವರಿಗೇ ಇನ್ನೂ ಈ ವಿಷಯ ಸರಿಯಾಗಿ ತಿಳಿದಿಲ್ಲ. ಅಂತೂ ಕುಲಗೋಡ ತಮ್ಮಣ್ಣನ ಪಾರಿಜಾತ ಪೂರ್ವರಂಗ 'ಗಣಪತಿ–ಗೋಪ–ಗೊಲ್ಲತಿ' ನಿರ್ಮಾಣವಲ್ಲಿ ಒಂದು ಹೊಸ ಕಾಣಿಕೆಯನ್ನು ರಂಗಭೂಮಿಗೆ ನೀಡಿದೆ.

ಸುಮಾರು ನೂರುವರ್ಷ ಗತಿಸಿದರೂ ಉತ್ತರ ಕರ್ನಾಟಕದ ಜಾನಪದ ರಂಗ ಭೂಮಿಯಮೇಲೆ ಕುಲಗೋಡ ತಮ್ಮಣ್ಣನ ಪಾರಿಜಾತ ಇನ್ನೂ ಜನಾನುರಾಗವನ್ನು ಕಳೆದುಕೊಂಡಿಲ್ಲ. ಇಂದಿನ ಸಿನೇಮಾ ಯುಗದಲ್ಲಿಯೂ ಬದುಕಿ ಕೀರ್ತಿ ಹೊಂದಿದೆ. ಅದಕ್ಕೆ ಈ ಕೆಳಗಿನ ಕಾರಣಗಳುಂಟು :

(1) ಪಾರಿಜಾತದ ಸ್ವತಂತ್ರ ಸಂಗೀತ ಮಾಧುರ್ಯ, ಹಿತಮಿತ ನೃತ್ಯಾ ಭಿನಯ ;

(2) ರಾಧಾಕೃಷ್ಣ ಅಥವಾ ಗೋಪೀ–ಕೃಷ್ಣ ಭಕ್ತಿಯು ಅದ್ವೈತವನ್ನೂ, ಕೃಷ್ಣ–ರುಕ್ಮಿಣೀ ಭಕ್ತಿಯು ದ್ವೈತವನ್ನೂ, ಭಾಮಾಕೃಷ್ಣಭಕ್ತಿಯು ಶಕ್ತಿವಿಶಿಷ್ಟಾದ್ವೈತವನ್ನೂ ಸೇರಿಸಿದ ಸಮನ್ವಯ ;

(3) ಹಾಡು, ಅದರ ವಿವರಣೆಯೊಂದಿಗೆ ಸಂಭಾಷಣಾ ಚಾತುರ್ಯ, ಭಾಗವತ ಮರಿಭಾಗವತರ ಮಧ್ಯಸ್ಥಿಕೆ, ಹಾಗೂ ಹಾಸ್ಯದ ಹೊನಲು ;

(4) ಲೌಕಿಕದೊಂದಿಗೆ ಅಲೌಕಿಕತೆಯನ್ನು ಮೇಳಗೊಳಿಸಿದ ಮಧುರ ಕಿನ್ನರ ಕಲ್ಪನೆ, ವ್ಯವಹಾರ–ಪುರಾಣಗಳ ಸಮನ್ವಯ ಮತ್ತು ಸಮಾಜ ಶಿಕ್ಷಣ ದೃಷ್ಟಿ.

ಈ ವಿಶೇಷ ಗುಣಗಳಿಂದಾಗಿ ಪಂಡಿತ–ಪಾಮರರ ಅಚ್ಚುಮೆಚ್ಚಿನ ಬಯಲಾಟವಾಗಿ ನಾಟಕವಾಗಿ ಸಣ್ಣಾಟವಾಗಿ ಶ್ರೀಕೃಷ್ಣ ಪಾರಿಜಾತವು ಅಪೌಲ್ಯ ರಂಗಭೂಮಿ ಸೇವೆಗೆ ಪಾತ್ರವಾಗಿದೆ. ಅದು ಎಲ್ಲರಿಗೂ ಬೇಕಾಗಿದೆ.

ಇದೂ ಅಲ್ಲದೆ, ಕುಲಗೋಡ ತಮ್ಮಣ್ಣನು ನಿಂಗಾಸಾನಿಯಂತಹ ಸ್ತ್ರೀ ಕಲಾವಿದರನ್ನು ಪ್ರಥಮ ಸಲ ಕನ್ನಡ ಜಾನಪದ ರಂಗಭೂಮಿಯ ಮೇಲೆ ತಂದುದೂ. ಅಲ್ಲಲ್ಲಿ ನಾಟಕಗಳಲ್ಲಿ ಬರುವಂತಹ ಲಘು – ಸಂಗೀತವನ್ನು ಅಳವಡಿಸಿದುದೂ, ಬಣ್ಣ – ವೇಷಗಾರಿಕೆ – ಮಾತುಗಾರಿಕೆ – ಅಭಿನಯ – ಹಾಸ್ಯ ಮುಂತಾದವುಗಳಲ್ಲಿ ಹೊಸತನವನ್ನು ತಂದುದೂ, ತಬಲಾ – ಹಾರ್ಮೋನಿಯಮ್ ಮುಂತಾದ ಹೊಸ ತರದ ವಾದ್ಯಗಳನ್ನು ಬಳಸಿದುದೂ, ವೃಂದಗೀತೆಯ ಹಿಮ್ಮೇಳವನ್ನು ಹೊಸ ರೀತಿಯಲ್ಲಿ ಸಂಸ್ಕರಣಗೊಳಿಸಿದ್ದೂ, ಸುಲಭ ಸರಳ ಹಾಗೂ ಆಕರ್ಷಕ ಸಣ್ಣ ರಂಗಸ್ಥಳದ ಅಟ್ಟದ ಕಲ್ಪನೆಯನ್ನು ರಚಿಸಿ ಸ್ಥಿರಗೊಳಿಸಿದ್ದೂ ಮುಂತಾದವು ಸಹ ಶ್ರೀಕೃಷ್ಣ ಪಾರಿಜಾತದ ಜನಪ್ರಿಯತೆಗೆ ಕಾರಣಗಳಾದುವು ಎಂಬುದನ್ನು ಮರೆಯುವ ಹಾಗಿಲ್ಲ.[8] ಪೇಶ್ವೆ ಆಡಳಿತದ ಪ್ರಭಾವದಲ್ಲಿ ಬೆಳೆದ ಮಹಾರಾಷ್ಟ್ರ ಮತ್ತು ಕರ್ನಾಟಕ (ಆಗ ದಕ್ಷಿಣ ಮಹಾರಾಷ್ಟ್ರ)ದ ವೈಷ್ಣವ ಸಂಸ್ಕೃತಿಯ ಸೂತ್ರಧಾರರ ಕೈಯ್ಯಲ್ಲಿ ಪಾರಿಜಾತಕ್ಕೆ ಪೋಷಣೆ ದೊರೆತುದು ಮರೆಯಲಾಗದ ಒಂದು ಮಹತ್ವದ ವಿಷಯ. ಪೇಶ್ವೆಯವರ ಆಡಳಿತವನ್ನು ಬ್ರಿಟಿಷರು ವಹಿಸಿಕೊಂಡ (1818) ನಂತರವೂ ಉತ್ತರ ಕರ್ನಾಟಕದ ಆಡಳಿತ ಸೂತ್ರಗಳೆಲ್ಲ ಬ್ರಾಹ್ಮಣರ ಕೈಯ್ಯಲ್ಲಿಯೇ ಕೇಂದ್ರೀಕೃತವಾಗಿದ್ದುವು. ಅವರ ಸಂಸ್ಕೃತಿಯ ಧ್ವನಿಯಂತಿದ್ದ ಪಾರಿಜಾತಕ್ಕೆ ಅವರ ಪುರಸ್ಕಾರ ದೊರೆಯುವುದು ಸ್ವಾಭಾವಿಕ ತಾನೆ ?

ಚದುರ ನಿರ್ದೇಶಕನ ಕೈವಾಡದಿಂದ ಚಲಚಿತ್ರಕ್ಕೆ ಹೊಸ ಕಳೆ ಪ್ರಾಪ್ತವಾಗುವಂತೆ, ಕುಲಗೋಡ ತಮ್ಮಣ್ಣನ ಪ್ರತಿ ಸೃಷ್ಟಿಯ ನೈಪುಣ್ಯದಿಂದ ಪಾರಿಜಾತಕ್ಕೆ ಹೆಚ್ಚಿನ ಕಳೆ ಬಂದಿತು. ಸಣ್ಣಾಟಗಳ ಸಣ್ಣತನವನ್ನು ಹೋಗಲಾಡಿಸಿ, ದೊಡ್ಡಾಟಗಳ ಆಡಂಬರವನ್ನು ಕಡಿಮೆಮಾಡಿ ನಾಟಕಗಳ ಸಮೀಪವರ್ತಿಯಾದ ಸ್ಥಾನಮಾನಗಳನ್ನು

ಪಾರಿಜಾತಕ್ಕೆ ತಂದುಕೊಟ್ಟವನು ಅವನೇ. ಬಯಲಾಟಗಳಿಗೆ ಪೆಚ್ಚಿನ ಕೀರ್ತಿ ಬರುವಂತೆ ಮಾಡಿದವನು, ಜಾನಪದ ರಂಗಭೂಮಿಯ ಕಡೆಗೆ ವಿದ್ವಾಂಸರಾದ ರಸಿಕರನ್ನು ಆಕರ್ಷಿಸಿದವನು ಅವನೇ. ಇಂದು ಶಿವರಾಮ ಕಾರಂತ ಮೊದಲಾದವರು ಯಕ್ಷಗಾನಗಳನ್ನು ಸಂಸ್ಕರಿಸಿ ಪುನರುಜ್ಜೀವನಗೊಳಿಸಿ ಜನಪ್ರಿಯ ಕಲೆಯಾಗುವಂತೆ ಮಾಡಿದ ಕೆಲಸವನ್ನು ಅಂದು ಬಯಲಾಟದ ರಂಗಭೂಮಿಯಲ್ಲಿ ಕುಲಗೋಡ ತಮ್ಮಣ್ಣನು ಮಾಡಿದನೆಂದರೆ ಅದು ಅತಿಶಯೋಕ್ತಿಯ ಮಾತೇನೂ ಅಲ್ಲ.

ಶ್ರೀಕೃಷ್ಣ ಪಾರಿಜಾತದ ಸೊಗಸು ಇರುವುದು ಅದರ ಹಾಡುಗಾರಿಕೆಯಲ್ಲಿ. ಪಾರಿಜಾತದ ಜೀವಾಳವೇ ಅದರ ಸಂಗೀತದಲ್ಲಿದೆ ಎನ್ನುವುದು ಸತ್ಯ ಸಂಗತಿ. ಏಕಪತ್ನಿ ಕಾಯಿದೆ ಜಾರಿಯಲ್ಲಿ ಇರುವ ಈ ಕಾಲದಲ್ಲಿ ಪಾರಿಜಾತದಲ್ಲಿ ಬರುವ ರುಕ್ಮಿಣಿ–ಸತ್ಯಭಾಮೆಯರ ಸವತೀ ಮತ್ಸರಕ್ಕೆ ಪುರಸ್ಕಾರ ಸಿಕ್ಕದಿರಬಹುದು. ಬರೀ ಒಂದು ಹೂವಿಗಾಗಿ ಸಾಮಾನ್ಯರಂತೆ ಜಗಳವಾಡುವ ವಸ್ತು ಕೆಲವರಿಗೆ ರುಚಿಸ ದಿರಬಹುದು. ಆದರೆ ಪಾರಿಜಾತದ ಸಂಗೀತಕ್ಕೆ ತಲೆದೂಗದವರು ಯಾರೂ ಇಲ್ಲ. ಬರೀ ಸಂಗೀತಕ್ಕಾಗಿಯಾದರೂ ಅದು ಚಿರಂತನ ಮೌಲ್ಯವನ್ನು ಹೊಂದಿದೆ. ಚಿರಕಾಲ ಉಳಿಯುವ ಅವಶ್ಯಕತೆ ಇದೆ.

ಶ್ರೀಕೃಷ್ಣ ಪಾರಿಜಾತದ ಹಾಡುಗಾರಿಕೆಯ ಪ್ರಭಾವಮುದ್ರೆ ಅನೇಕ ಕಲಾವಿದರ ಮೇಲೆ, ವಿದ್ವಾಂಸರ ಮೇಲೆ ಬಿದ್ದಿದೆ. ಕನ್ನಡ ಶಾಕುಂತಲವನ್ನು ಬರೆದ ಚುರಮುರಿ ಶೇಷಗಿರಿರಾಯರು ತಮ್ಮ ಅನೇಕ ಪದ್ಯಗಳಿಗೆ ಪಾರಿಜಾತದ ಧಾಟಿಯನ್ನು ಅಳವಡಿಸಿ ದ್ದಾರೆ. ಶಾಂತಕವಿ (ಸಕ್ಕರಿ ಬಾಳಾಚಾರ್ಯ) ಗಳು ತಮ್ಮ ಅನೇಕ ಪದ್ಯಗಳಲ್ಲಿ ಪಾರಿಜಾತದ ಧಾಟಿಯನ್ನು ಸ್ವೀಕರಿಸಿದ್ದಾರೆ. ಕರೂರು ವಾಸುದೇವಾಚಾರ್ಯರ ಮೇಲೆ ಉಂಟಾದ ಪಾರಿಜಾತದ ಹಾಡಿನ ಪ್ರಭಾವವನ್ನು ಅವರ ಕಾದಂಬರಿಯಾದ 'ಇಂದಿರಾ'ದಲ್ಲಿ ಕಾಣಬಹುದಾಗಿದೆ. ಮರಾಠಿ ರಂಗಭೂಮಿಯ ಆದ್ಯ ನಾಟ್ಯಾ ಚಾರ್ಯರಾದ ಅಣ್ಣಾರಾವ್ ಕಿರ್ಲೋಸ್ಕರರ ನಾಟಕಗಳಲ್ಲಿ ಪಾರಿಜಾತದ ಪದ್ಯ ಗಳನ್ನು ಧಾಟಿಗಾಗಿ ಉಲ್ಲೇಖಿಸಿರುವುದುಂಟು.[9]

ಜಾನಪದ ಖ್ಯಾತ ಕವಿಗಳಾದ ಗೋಪಾಳ ಮುರಮುಂಡಿ, ತೇರದಾಳ ತುಕಾರಾಮ, ಬೆಳಗಾವಿ ದ್ವಾರಪಾಲ ಮುಂತಾದವರು ತಮ್ಮ ಹಾಡುಗಳನ್ನೂ ಲಾವಣಿಗಳನ್ನೂ ರಚಿಸುವಲ್ಲಿ ಪಾರಿಜಾತ ಸಂಗೀತದ ಪದ್ಧತಿಯನ್ನೂ, ಧಾಟಿಯ ಅನುಕರಣವನ್ನೂ ಮಾಡಿದ್ದಾರೆ. ತುಂಗಳ ಸತ್ಯಪ್ಪ, ಮುರನೂರ ಸಿದ್ದಪ್ಪ, ಪರಮಾನಂದವಾಡಿಯ ಮುಲ್ಲಾ, ಕುಡಚಿಯ ರಾಯಪ್ಪ ಮುಂತಾದವರು ಪ್ರಸಿದ್ಧ ಹಾಡುಗಾರರು. ಅವರು ಕೆಲವೊಮ್ಮೆ ಪಾರಿಜಾತದ ಧಾಟಿಯಿಂದ ಹಾಡಿ ಜನ ಮೆಚ್ಚುಗೆ ಹೊಂದಿದುದುಂಟು.

ಮರಾಠಿ ರಂಗಭೂಮಿಯ ಜಾನಪದ ರೂಪವಾದ 'ತಮಾಷೆ'ಯ ಹುಟ್ಟಿಗೆ ಕನ್ನಡ ಪಾರಿಜಾತವೇ ಕಾರಣವೆಂಬುದು ಅಭಿಮಾನಾಸ್ಪದವಾದ ಸಂಗತಿಯಾಗಿದೆ. ಪಾರಿಜಾತದ ಗಣಪತಿ, ಗೋಪಾಲ – ಗೊಲ್ಲತಿ ಪ್ರವೇಶಗಳು 'ಗಣ – ಗೌಳಣ'ವೆಂಬ ಹೆಸರಿನಿಂದ ಯಾವುದೇ 'ತಮಾಷೆ'ಯ ಪೂರ್ವರಂಗವಾಗಿ ಒಂದು ನಿರಂತರ ಸಂಪ್ರದಾಯವನ್ನು ಸ್ಥಾಪಿಸಿದುದು ಇಂದಿಗೂ ಒಂದು ಸಾಕ್ಷಿಯಾಗಿ ನಿಂತಿದೆ. ಕನ್ನಡದ ಜಾನಪದ ರಂಗಭೂಮಿಯ ಮೇಲೆ ಕುಲಗೋಡ ತಮ್ಮಣ್ಣ – ಕೌಜಲಗಿ ನಿಂಗಾಸಾನಿ ಜೋಡಿಯಂತೆ, ಮರಾಠಿ ಜಾನಪದ ರಂಗಭೂಮಿಯ ಮೇಲೆ ಪಟ್ಟೇ ಬಾಪುರಾವ್ – ನಾಮಚಂದಪವಳಾಬಾಯಿ ಜೋಡಿ ಜನಮನದಲ್ಲಿ ನೆಲೆಯೂರಿ ನಿಂತುದಲ್ಲದೆ. ಒಂದು ಭದ್ರವಾದ ತಳಹದಿಯನ್ನು ಹಾಕಿದವು.

ಕನ್ನಡ ಜಾನಪದ ರಂಗಭೂಮಿಯನ್ನೇರಿದ ಪ್ರಥಮ ಸ್ತ್ರೀ ಎಂಬ ಕೀರ್ತಿ ಕೌಜಲಗಿ ನಿಂಗಾಸಾನಿಗೆ ಸಲ್ಲುವಂತೆ, ಮರಾಠಿ ಜಾನಪದ ರಂಗಭೂಮಿಯನ್ನೇರಿದ ಪ್ರಥಮ ಸ್ತ್ರೀ ಎಂಬ ಗೌರವ ನಾಮಚಂದ ಪವಳಾಬಾಯಿಗೂ ಸಲ್ಲುತ್ತದೆ. ಪವಳಾಬಾಯಿಗಿಂತ ನಿಂಗಾಸಾನಿ ಹಿರಿಯವಳು. ಪಟ್ಟೇ ಬಾಪುರಾವ್‌ಗಿಂತ ಕುಲಗೋಡ ತಮ್ಮಣ್ಣ ಇನ್ನೂ ಹೆಚ್ಚು ಹಿರಿಯನು. ಕನ್ನಡ – ಮರಾಠಿಯ ಈ ಎರಡೂ ಜೋಡಿಗಳಲ್ಲಿ ಅನೇಕ ರೀತಿಯ ಹೋಲಿಕೆಗಳುಂಟು. ಎರಡೂ ಜೋಡಿಗಳಲ್ಲಿಯೂ ಬ್ರಾಹ್ಮಣ ಗಂಡು – ಶೂದ್ರ ಸ್ತ್ರೀ ಉಂಟು. ಎರಡೂ ಜೋಡಿಗಳಲ್ಲಿ ಕಲೆಗಾಗಿ ಜಾತಿಗಳನ್ನು ಮರೆತು ಬೆರೆತುದುಂಟು; ಕೋರ್ಟು ಕಚೇರಿಗಳನ್ನು ಏರಿ – ಇಳಿದುದುಂಟು. ಆದರೆ ಕನ್ನಡ ಜೋಡಿ ಮರಾಠಿಗೆ ಸ್ಫೂರ್ತಿಯನ್ನಿತ್ತ ಹಿರಿಯ ಸಮಕಾಲೀನತೆಯಿಂದಲೂ, ಮೂಲಪ್ರವರ್ತನೆಯಿಂದಲೂ ಹೆಚ್ಚಿನ ಗೌರವ ಹೊಂದಿದೆ. ಮರಾಠಿ ಜೋಡಿ ಮುಂಬಯಿ – ಪುಣೆ – ಸಾತಾರಾ – ಕೊಲ್ಹಾಪೂರ ಗಳಂತಹ ಹಿರಿಯ ಶಹರುಗಳಲ್ಲಿ ಪ್ರಯೋಗಗಳನ್ನು ಮಾಡಿ, ಕನ್ನಡಕ್ಕಿಂತಲೂ ಹೆಚ್ಚಿನ ಧನವನ್ನೂ ಕೀರ್ತಿಯನ್ನೂ ಸಂಪಾದಿಸಿದೆ. ಇಷ್ಟೇ ಅಲ್ಲ, ಪಟ್ಟೇ ಬಾಪುರಾವ್‌ನ ಜೀವನ ಚರಿತ್ರೆ ಚಿತ್ರಪಟವಾಗಿಯೂ ಅವತರಿಸಿದೆ.

ಅಪರಾಳ ತಮ್ಮಣ್ಣನು ಸು. 1800ರಲ್ಲಿ ಜನಿಸಿ ಸು. 1850ರಲ್ಲಿ ಕೃತಿ ರಚಿಸಿ, ಸು. 1870 – 80ರಲ್ಲಿ ಮರಣ ಹೊಂದಿರಬಹುದು. ಅವನ ಪಾರಿಜಾತದ ಅನೇಕ ಹಸ್ತಪ್ರತಿಗಳು ದೊರೆಯುವವಲ್ಲದೆ 1863, 1881, 1889ರಲ್ಲಿ ಅಚ್ಚಾದ ಮೂರು ಬೇರೆ ಬೇರೆ ಪ್ರತಿಗಳು ಭಿನ್ನ ಸ್ಥಳಗಳಲ್ಲಿ ಭಿನ್ನ ವ್ಯಕ್ತಿಗಳಿಂದ ಪ್ರಕಟವಾಗಿವೆ. ಕುಲಗೋಡ ತಮ್ಮಣ್ಣನು ಸು. 1850ರಲ್ಲಿ ಹುಟ್ಟಿ 1880 – 85ರಲ್ಲಿ ಶ್ರೀಕೃಷ್ಣ ಪಾರಿಜಾತವನ್ನು ಹೊಸ ರೀತಿಯಲ್ಲಿ ಪ್ರಯೋಗಕ್ಕೆ ಪ್ರಥಮ ಬಾರಿ ಅಳವಡಿಸಿ, ಕೌಜಲಗಿಯ ನಿಂಗಾಸಾನಿ, ಬಡಕುಂದ್ರಿ ಬಸಪ್ಪ ಮುಂತಾದ ನಟರನ್ನು ಸೇರಿಸಿಕೊಂಡಿರ ಬೇಕು. 20ನೆಯ ಶತಮಾನದ ಪ್ರಥಮ ದಶಕದಲ್ಲಿ ಊರ್ಜಿತಾವಸ್ಥೆಗೇರಿದ

ಸಮಯದಲ್ಲಿಯೇ ಸು. 1905ರಲ್ಲಿ ಕುಲಗೋಡ ತಮ್ಮಣ್ಣನು ತೀರಿಕೊಂಡಿರಬಹುದು. ಕೌಜಲಗಿ ನಿಂಗಾಸಾನಿ ಮತ್ತು ಬಡಕುಂದ್ರಿ ಬಸಪ್ಪ ತಮ್ಮ ತಮ್ಮ ಸ್ವತಂತ್ರ ಮೇಳಗಳನ್ನು ಕಟ್ಟಿಕೊಂಡು ಸ್ಪರ್ಧೆಯಿಂದ ಇನ್ನೂ ರಭಸದಲ್ಲಿ ಪಾರಿಜಾತದ ಪ್ರಚಾರ ಮಾಡಿರಬೇಕೆಂದು ತೋರುತ್ತದೆ. ಅವರ ಮೇಳಗಳು ಕರ್ನಾಟಕ_ಮಹಾರಾಷ್ಟ್ರಗಳ ಪ್ರಮುಖ ಪಟ್ಟಣಗಳನ್ನೆಲ್ಲ ಸುತ್ತಾಡಿ ಬಂದುದಾಗಿ ತಿಳಿಯುತ್ತದೆ. ಮತ್ತು ಹೆಚ್ಚಿನ ಪ್ರಭಾವವನ್ನೂ ಬೀರಿದಂತೆ ತೋರುತ್ತದೆ. ನಿಂಗಾಸಾನಿ ತಾನು ಸಾಯುವವರೆಗೂ ಕಲಾಸೇವೆಯನ್ನು ತ್ಯಜಿಸಲಿಲ್ಲ. ಸವದಿಯಲ್ಲಿ 1939ರಲ್ಲಿ ನಾನು ಅವಳ ಆಟವನ್ನು ನೋಡಿದ್ದೇನೆ. ಆಗ ನಾನು ಸು. 9 – 10 ವರ್ಷದ ಹುಡುಗನಾಗಿದ್ದೆ. ನಿಂಗಾಸಾನಿ ಜನರ ಒತ್ತಾಯಕ್ಕಾಗಿ ಆಗ ಪಾತ್ರ ಧರಿಸಿ ಆಡಿದ್ದೂ, ಆಗ ಅವಳು ತೀರ ಮುಪ್ಪಾಗಿದ್ದೂ, ತಲೆಯಿಲ್ಲ ಬೆಳ್ಳಗಾಗಿ ಸೊಂಟದ ಮೇಲೆ ಕೈ ಇಟ್ಟು ಕೊಂಡು ಸತ್ಯಭಾಮೆಯ ಪಾತ್ರವನ್ನು ಒಳ್ಳೆ ಸ್ಫೂರ್ತಿಯಿಂದ ನಟಿಸಿದ್ದೂ ಉಂಟು. ನಾನದನ್ನು ಎಂದಿಗೂ ಮರೆಯಲಾರೆ. ಮುಂದೆ 1944 ರಲ್ಲಿ ರಬಕವಿ ಸಾಹಿತ್ಯ ಸಮ್ಮೇಲನದಲ್ಲಿ ಪಾರಿಜಾತ ಆಟವನ್ನು ಆಡಿಸಿದಾಗ ನಿಂಗಾಸಾನಿ ಇರಲಿಲ್ಲ. ಅಷ್ಟರಲ್ಲಿ ತೀರಿಕೊಂಡಿದ್ದಳು. ಅವಳ ಮೊಮ್ಮಗಳ ಮೇಳದವರು ಆಟವನ್ನು ಆಡಿದ್ದರು. ಅಂದರೆ – ನಿಂಗಾಸಾನಿ 1939 – 44ರ ಮಧ್ಯದಲ್ಲಿ ಸು. 1942ರಲ್ಲಿ ತೀರಿಕೊಂಡಿರಬಹುದು.

ಪಟ್ಟೇ ಬಾಪುರಾವ್ 1945 ರಲ್ಲಿ ತೀರಿಕೊಂಡುದಾಗಿ ತಿಳಿಯುತ್ತದೆ. ಅದಕ್ಕಿಂತ ಹಿಂದೆಯೇ ನಾಮಚಂದ ಪವಳಾಬಾಯಿ 1939 ರಲ್ಲಿ ತೀರಿಕೊಂಡಿದ್ದಳು. 1939 ರಿಂದ 1945ರ ವರೆಗೆ ತಾಯಿಬಾಯಿ ಮೊದಲಾದವರೊಂದಿಗೆ ನಟಿಸುತ್ತ ಪಟ್ಟೇ ಬಾಪುರಾವ್ ಬಹಳ ಕಷ್ಟದಲ್ಲಿ ಕೊನೆಗಾಲವನ್ನು ಕಳೆಯಬೇಕಾಯಿತು.

ಹೀಗೆ ಕನ್ನಡ ಮತ್ತು ಮರಾಠಿ ಜಾನಪದ ರಂಗಭೂಮಿಯ ಆರ್ವಾಚೀನ ಕಾಲದ ಆದಿಪ್ರವರ್ತಕರಾದ ನಟನಟಿಯರ ಚರಿತ್ರೆಯನ್ನು ತಕ್ಕಮಟ್ಟಿಗೆ ವಿವರಿಸಿದ್ದೇನೆ. ಇನ್ನೂ ಹೆಚ್ಚಿನ ತುಲನಾತ್ಮಕ ಅಭ್ಯಾಸದ ಅವಶ್ಯಕತೆ ಇದೆ.

ಶ್ರೀಕೃಷ್ಣ ಪಾರಿಜಾತ ಪರಂಪರೆ ಅಪರಾಳ ತಮ್ಮಣ್ಣನಿಂದ ಪ್ರಾರಂಭವಾಯಿತೆನ್ನುವುದೂ ಸರಿಯಲ್ಲ. ಅವನಿಗಿಂತ ಪೂರ್ವದಲ್ಲಿ ಏನಿಲ್ಲವೆಂದರೂ ನೂರು ವರ್ಷಕ್ಕಿಂತ ಹೆಚ್ಚು ಹಿಂದಿನ ಪರಂಪರೆ ದೊರೆಯುತ್ತದೆ. ಅಪರಾಳ ತಮ್ಮಣ್ಣನಿಗೆ ಸ್ಫೂರ್ತಿ ನೀಡಿದೆಯೆಂದು ಹೇಳಲಾದ ಪ್ರಸನ್ನ ವೆಂಕಟದಾಸರ (1680-1752) ಶ್ರೀ ಕೃಷ್ಣ ಪಾರಿಜಾತ ಅಥವಾ ಸತ್ಯಭಾಮಾ ವಿಲಾಸ ಎಂಬ ಕೃತಿ ಒಂದು ಲಘು ಗೀತ ನಾಟಕವಾಗಿದೆ. ಪ್ರಸನ್ನ ವೆಂಕಟದಾಸರ ಇನ್ನೊಂದು ಕೃತಿ ನಾರದಕೊರವಂಜಿ ಎಂಬುದೂ ಇನ್ನೊಂದು ಗೀತನಾಟಕ.

ಹೆಳವನಕಟ್ಟೆ ಗಿರಿಯಮ್ಮನ ಬ್ರಹ್ಮಕೊರವಂಜಿ (ಸು. 1750), ಮುಮ್ಮಡಿ ಕೃಷ್ಣರಾಜರ (1794-1868) ಭಾಮಾಕಥೆ ಅಥವಾ ಪಾರಿಜಾತಾಪಹರಣದ ಕಥೆ ಮತ್ತು ಪ್ರಸನ್ನ ಕೃಷ್ಣಕೊರವಂಜಿ, ಚಂದ್ರಸಾಗರ ವರ್ಣಿಯ (1775-1860) ಮನ್ಮಥ ಕೊರವಂಜಿ–ವಸುದೇವ ಪಾರಿಜಾತಗಳು, ರಾಯಣ್ಣನ (ಸು. 1720) ಪದ್ಮಾವತಿ ಕೊರವಂಜಿ, ಸ್ವಾಮಿಕವಿ (ಸು. 1750) ಯ ಬಿಳಿಯಕಲ್ಲ ರಂಗಸ್ವಾಮಿಯ ಪಾರಿಜಾತ, ವೆಂಕನ (ಸು. 1800) ಪಾರ್ವತಿ ಕೊರವಂಜಿ, ಅನಂತನಾಥಕವಿಯ (ಸು. 1800) ಮನ್ಮಥ ಕೊರವಂಜಿ, ಮತ್ತು ಕವಿಗಳ ಹೆಸರು ಗೊತ್ತಿಲ್ಲದ ಸು. 1710 ರ ಕರ್ನಾಟಕ ಕೊರವಂಜಿ, ಸು. 1830 ರ ಪ್ರಸನ್ನಕೃಷ್ಣ ಕೊರವಂಜಿ ಅಥವಾ ನವಪಾರಿಜಾತ, ಸು. 1830 ರ ಅಮ್ಮಣ್ಣಿ ಪಾರಿಜಾತ, ಮುಂತಾದ ಕೃತಿಗಳೆಲ್ಲವೂ ಸು. 1850 ರಲ್ಲಿ ರಚಿತವಾದ ಅಪರಾಳ ತಮ್ಮಣ್ಣನ ಪಾರಿಜಾತ ಕೃತಿಗಿಂತಲೂ ಪೂರ್ವದಲ್ಲಿಯೇ ರಚಿತವಾದ ಯಕ್ಷಗಾನ ಅಥವಾ ಗೀತನಾಟಕಗಳಾಗಿವೆ.[10] ಅವುಗಳಲ್ಲಿ ಯಾವ ಯಾವ ಕೃತಿಗಳು ಅಪರಾಳ ತಮ್ಮಣ್ಣನ ಮೇಲೆ ಪ್ರಭಾವ ಬೀರಿವೆ ಮತ್ತು ಆಯಾ ಕೃತಿಗಳಿಗೆ ಆಕರ ಎಲ್ಲಿಂದ ದೊರೆತಿದೆ ಎಂಬುದು ಇನ್ನೂ ಅಭ್ಯಾಸಮಾಡಿ ನಿರ್ಧರಿಸಬೇಕಾದ ವಿಷಯ. ಅಪರಾಳ ತಮ್ಮಣ್ಣನಿಗಿಂತಲೂ (ಸು. 1850) ಸುಮಾರು ನೂರು ವರ್ಷಗಳ ಹಿಂದಿನ ಅವಧಿಯಲ್ಲಿ ಸು. (1750–1850) ಹತ್ತು ಹನ್ನೆರಡು ಕೃತಿಗಳು ದೊರೆಯುತ್ತವೆ ಎಂಬುದು ಅಲಕ್ಷಿಸತಕ್ಕ ವಿಷಯವಲ್ಲ.

ಅಪರಾಳ ತಮ್ಮಣ್ಣನ (ಸು. 1850) ತರುವಾಯ ಬಂದ ಕೃತಿಗಳಲ್ಲಿಯೂ ಅವನ ಅನುಸರಣೆಗೆ ಒಳಗಾಗದ ಕೃತಿಗಳ ಸಂಖ್ಯೆಯೇ ಹಿರಿದಾಗಿದೆ. ಅವನ ಅನುಕರಣೆ ಅಥವಾ ಅನುಸರಣೆಗೆ ಒಳಗಾದವುಗಳೆಂದು ಹೇಳಲಾದ ಕೃತಿಗಳು ಒಂದೆರಡು ಮಾತ್ರ ಉಂಟು. ಭೀಮೇಶ ಕೃಷ್ಣನೆಂಬ ಅಂಕಿತವುಳ್ಳ ಹರಪನಹಳ್ಳಿಯ ಭೀಮವ್ವನ ಪಾರಿಜಾತಾಪಹರಣವು ಒಂದು ಚಿಕ್ಕ ಗೀತನಾಟಕವಾಗಿದೆ. ಅನಂತಾದ್ರೀಶನೆಂಬ ಅಂಕಿತವುಳ್ಳ ಗೋಕಾವಿಯ ಅನಂತಾಚಾರ್ಯನ ವೆಂಕಟೇಶ ಮಹಾತ್ಮೆ ಅಥವಾ ವೆಂಕಟೇಶ ಪಾರಿಜಾತ (1886) ಮತ್ತು ಶಿವಪಾರಿಜಾತಗಳು ಗೀತನಾಟಕಗಳಾಗಿವೆ. ಭೀಮವ್ವನ ಮೇಲೆ ಅಪರಾಳ ತಮ್ಮಣ್ಣನ ಕೃತಿಯ ಪ್ರಭಾವ ಆಗಿದೆ; ಆದರೆ ಅನಂತಾದ್ರೀಶನ ಮೇಲೆ ಪ್ರಭಾವ ಆಗಿದೆಯೆಂದು ಹೇಳಲು ಬರುವಂತಿಲ್ಲ. ಕೇವಲ ಹೆಸರಿನ ಮೇಲೆ ಹಾಗೆ ಭಾವಿಸುವುದು ಸರಿಯಲ್ಲ.

ಐಹೊಳೆ ವೆಂಕಟೇಶನೆಂಬ ಮುದ್ರೆಯುಳ್ಳ ಭೀಮರಾವ್ ರಾಘವೇಂದ್ರರಾವ್ ಗುಮಾಸ್ತೆ (1835-1915) ಯವರ ಶ್ರೀಕೃಷ್ಣ ಪಾರಿಜಾತ ಮತ್ತು ಶ್ರೀರಾಮ ಪಾರಿಜಾತ ನಾಟಕಗಳು, ಏರೀ ಶೇಷಾಚಾರ್ಯರ (ಸು. 1810) ಶ್ರೀನಿವಾಸ ಕಲ್ಯಾಣ–ಗೀತನಾಟಕ, ಅಳಿಯ ಲಿಂಗರಾಜನ (1823–1874) ಪಾರಿಜಾತಾಪಹರಣ

(1867) ಯಕ್ಷಗಾನ, ಸಿ. ಆರ್. ಚೆಲ್ಲಮ್ಮನ (ಸು. 1875) ಪಾರಿಜಾತಾಪಹರಣ; ಯಕ್ಷಗಾನ, ವೆಂಕಟಲಕ್ಷ್ಮಮ್ಮನ (ಸು. 1875) ಶ್ರೀಕೃಷ್ಣ ಪಾರಿಜಾತ ಯಕ್ಷಗಾನ, ಅನಂತರಾಮಯ್ಯಂಗಾರನ (ಸು. 1875) ಕೃಷ್ಣಪಾರಿಜಾತ-ಯಕ್ಷಗಾನ, ಮುದ್ದುಕವಿ (1880) ಪಾರಿಜಾತ, ಕೆ. ರಾಮಸ್ವಾಮಿ ಅಯ್ಯಂಗಾರ (ಸು. 1880) ಸಂಗೀತ ಕಲ್ಯಾಣ ಪಾರಿಜಾತ ಮತ್ತು ಇದೇ ಕಾಲದ ಬಿ. ನರಹರಿಶಾಸ್ತ್ರಿಗಳ ಪಾರಿಜಾತ ಮತ್ತು ಕೃಷ್ಣಪಾರಿಜಾತಾಪರಿಣಯ ನಾಟಕಗಳು, ಶಿವಪ್ಪಶಾಸ್ತ್ರಿಯ ಕೃಷ್ಣಪಾರಿಜಾತ, ಲಕ್ಷ್ಮೀನರಸಿಂಹನ ಪಾರಿಜಾತಾಪಹರಣ ನಾಟಕಗಳು ಪ್ರಸಿದ್ಧವಾಗಿವೆ.[11] ಕವಿಗಳ ಹೆಸರೇ ಇಲ್ಲದ ವೀರಭದ್ರ ಪಾರಿಜಾತ, ಬಿಳಿಗಿರಿರಂಗನ ಪಾರಿಜಾತ ಮುಂತಾದವು ಸಹ ದೊರೆಯುತ್ತಿವೆ.[12] ಒಟ್ಟಿನ ಮೇಲೆ ಕನ್ನಡ ಸಾಹಿತ್ಯದಲ್ಲಿ ಪಾರಿಜಾತ, ಕೊರವಂಜಿ ಮತ್ತು ಸತ್ಯಭಾಮಾ ಸಂಬಂಧ ಹೊಂದಿದ ಕೃತಿಗಳ ಸಂಖ್ಯೆ ನಾಟಕ-ಯಕ್ಷಗಾನ ಸ್ವರೂಪದಲ್ಲಿಯೇ ಇಷ್ಟೊಂದು ಅಧಿಕವಾಗಿರುವುದು ರಂಗಭೂಮಿಯ ಮೇಲಿನ ಅದರ ಪ್ರಚಂಡ ಕೀರ್ತಿಯನ್ನು ಸಾರುತ್ತದೆ; ಮತ್ತು ಪಾರಿಜಾತ ಪರಂಪರೆಯ ಉಗಮ-ವಿಕಾಸ-ಪ್ರಸಾರಗಳ ಅಭ್ಯಾಸದ ಅವಶ್ಯಕತೆಯನ್ನು ಆಹ್ವಾನಿಸುತ್ತದೆ. ಅಲ್ಲದೆ ಇವರಾರಮೇಲೆಯೂ ಅಪರಾಳ ತಮ್ಮಣ್ಣನ ಪ್ರಭಾವವಾಗಿಲ್ಲವೆಂದು ತೋರುತ್ತದೆ.

'ಹಾಗೆ ನೋಡಿದರೆ ಪಾರಿಜಾತ-ಇದರದೇ ಒಂದು ಪ್ರಕಾರವಾಗುವಷ್ಟು ಆಟಗಳಿಲ್ಲ'ವೆಂದು ಹೇಳಿದ ಚಂದ್ರಶೇಖರ ಕಂಬಾರರ ಮಾತು[13] ಸರಿಯಾದುದಲ್ಲ. ಈ ಹಿಂದೆ ಹೇಳಿದ ಕೃತಿಗಳು ಪಾರಿಜಾತದ ಒಂದು ಪ್ರಕಾರವನ್ನೆ ನಿರ್ಮಿಸಿರುವುದಷ್ಟೇ ಅಲ್ಲ, ಆ ಪ್ರಕಾರದಲ್ಲಿ ಕಂಡುಬರುವ ವೈವಿಧ್ಯಗಳನ್ನೂ ಪ್ರದರ್ಶಿಸುತ್ತವೆ. ಪಾರಿಜಾತದ ಒಂದು ಹಿರಿಯ ಪರಂಪರೆಯನ್ನೇ ಸ್ಪಷ್ಟವಾಗಿ ಸಾರುತ್ತವೆ. ಸು. 1720 ರಿಂದ 1920 ರವರೆಗೆ ಇನ್ನೂರು ವರುಷಗಳ ಅವಧಿಯಲ್ಲಿ ಸು. 30 ಕೃತಿಗಳು ಹುಟ್ಟಿವೆ. ಇಷ್ಟೊಂದು ಅಧಿಕ ಮೊತ್ತದ ಸಾಹಿತ್ಯ ಪ್ರಕಾರವನ್ನು ಬೇರೆಡೆಯಲ್ಲಿ ಕಾಣುವುದು ಕೂಡ ಅಪರೂಪವಾದುದು. ಒಂದು ಚಮತ್ಕಾರದ ಸಂಗತಿಯೆಂದರೆ, ವೈಷ್ಣವ ಪಾರಿಜಾತದಂತೆ ಜೈನ, ಶೈವ ಪಾರಿಜಾತಗಳೂ ರಚಿಸಲ್ಪಟ್ಟಿವೆ. ಚಂದ್ರಸಾಗರವರ್ಣಿ ರಾಯಣ್ಣ, ಅನಂತನಾಥರು ಜೈನ ಕವಿಗಳಾಗಿ ಜೈನ ಪಾರಿಜಾತಗಳನ್ನೂ, ಮುದ್ದುಕವಿ, ಅಳಿಯಲಿಂಗರಾಜ, ಶಿವಪ್ಪ ಶಾಸ್ತ್ರಿಗಳು ವೀರಶೈವ ಕವಿಗಳಾಗಿ ವೀರಶೈವ ಪಾರಿಜಾತಗಳನ್ನೂ ಬರೆದು ಅಭ್ಯಾಸಿಗರ ಕುತೂಹಲವನ್ನು ಕೆರಳಿಸಿದ್ದಾರೆ. ಇವೆಲ್ಲ ಕೃತಿಗಳ ಅಭ್ಯಾಸ ಇಂದು ತುಲನಾತ್ಮಕವಾಗಿ ನಡೆಯಬೇಕಾಗಿದೆ. ಅವುಗಳ ನೆಲೆ-ಬೆಲೆಗಳನ್ನು ನಿರ್ಧರಿಸಬೇಕಾಗಿದೆ. ವಿದ್ವಾಂಸರು ಇತ್ತಕಡೆಗೆ ಗಮನಹರಿಸಬೇಕು.

ಅರಕೇರಿ (ಆರ್. ಜಿ. ಕುಲಕರ್ಣಿ) ಯವರು ಅಪರಾಳ ತಮ್ಮಣ್ಣನ ಕೃಷ್ಣ ಪಾರಿಜಾತವನ್ನು ಸಂಪಾದಿಸುವಾಗ ಎರಡು ಅಚ್ಚಾದ ಪ್ರತಿಗಳನ್ನೂ (1881 ; 1889) ಮೂರು ಹಸ್ತಪ್ರತಿಗಳನ್ನೂ ಉಪಯೋಗಿಸಿಕೊಂಡಿದ್ದಾರೆ. ಶ್ರೀನಿವಾಸ ಹಾವನೂರರು ಸವಣೂರಲ್ಲಿ ಅಚ್ಚಾದ 1863ರ ಒಂದು ಪಾರಿಜಾತವನ್ನು ಬೇರೆಡೆಯಲ್ಲಿ ಉಲ್ಲೇಖಿಸಿದ್ದಾರೆ.[14] ಕನ್ನಡದಲ್ಲಿ ಅಚ್ಚಾದ ತೀರ ಪ್ರಥಮ ಕೃತಿಗಳಲ್ಲಿ ಅದೂ ಒಂದು. ಅರಕೇರಿಯವರಿಗೆ ಅದನ್ನು ಉಪಯೋಗಿಸುವುದು ಸಾಧ್ಯವಾಗಿಲ್ಲವೆಂದು ಕಾಣುತ್ತದೆ. ಆದರೂ, ಪಾಠಾಂತರಗಳೊಂದಿಗೆ ಶ್ರೀಕೃಷ್ಣಪಾರಿಜಾತ ಅಚ್ಚಾದುದು ಜಾನಪದ ಸಾಹಿತ್ಯದಲ್ಲಿಯೇ ಪ್ರಥಮವೆಂದು ತೋರುತ್ತದೆ. ಆ ಶ್ರೇಯ ಅರಕೇರಿಯವರಿಗೆ ಸಲ್ಲಬೇಕು.

ಕುಲಗೋಡ ತಮ್ಮಣ್ಣನ ಕೃತಿಯ ಬಗ್ಗೆ ಈ ಅನುಕೂಲತೆ ಪ್ರಾಪ್ತವಾಗದ್ದರಿಂದ ಒಂದು ಪ್ರಚಲಿತ ಪಾರಿಜಾತ ಆಟದ ಟೇಪ ರೆಕಾರ್ಡ ಆಧಾರದ ಮೇಲೆ ಬಹಳ ಪರಿಶ್ರಮದಿಂದ ಡಾ॥ ಎಂ. ಎಸ್. ಸುಂಕಾಪೂರ ಅವರು ಅದನ್ನು ಪ್ರಕಟಿಸಿ ಉಪಕಾರ ಮಾಡಿದ್ದಾರೆ. ಪ್ರತಿಯೊಂದು ಮೇಳದವರೂ ತಮ್ಮತನವನ್ನು ಬೆರಸಿಯೇ ಆಡುವುದರಿಂದ ಹತ್ತಾರು ಪಾಠಾಂತರಗಳು ದೊರೆತಾಗ ಮಾತ್ರ ಮೂಲ ಕವಿಯ ಆಶಯವನ್ನು ಗುರುತಿಸಿ ಶಕ್ಯವಿದ್ದಷ್ಟು ಕಡಿಮೆ ದೋಷಗಳಿಂದ ಪ್ರಕಟಿಸುವುದು ಸಾಧ್ಯವಾಗಬಹುದು. ಸದ್ಯಕ್ಕೆ ಇಷ್ಟು ಪ್ರಕಟಿಸಿದುದೂ ಸಾಮಾನ್ಯವಲ್ಲ. ಅವರ ನುರಿತ ಅನುಭವ, ಆಳವಾದ ಜಾನಪದ ಪರಿಜ್ಞಾನ ಈ ಕೃತಿಯಲ್ಲಿ ಒಡಮೂಡಿನಿಂತಿವೆ. ವಿವರವಾದ ಪ್ರಸ್ತಾವನೆಯಿಂದ ತುಲನಾತ್ಮಕ ಅಭ್ಯಾಸಕ್ಕೆ ಬಹಳ ಸಹಾಯವಾಗಿದೆ.

ಅಪರಾಳ ತಮ್ಮಣ್ಣನು ಅದಾವ ಕಾರಣದಿಂದಲೋ ಜೇಲಿನಲ್ಲಿ ವಾಸಿಸಬೇಕಾಗಿತ್ತೆಂದೂ, ಆಗ ಕೃಷ್ಣಸ್ತುತಿರೂಪವಾದ ಪಾರಿಜಾತ ರಚನೆಯಾಗಿ ಅವನ ಬೇಡಿಗಳು ಕಳಚಿದವೆಂದೂ ಹೇಳುವ ಕಥೆ; ಅಪರಾಳ ತಮ್ಮಣ್ಣ ಮತ್ತು ಅವನ ಮಗ ಕೂಡಿಕೊಂಡು ಪಾರಿಜಾತ ಪ್ರಸಂಗಗಳನ್ನು ಆಡುತ್ತ ಆಡಿಸುತ್ತ ಪ್ರಚಾರ ಮಾಡುತ್ತಿರುವಾಗ ವೈಷ್ಣವ ಭಕ್ತಿಯನ್ನು ಅವರು ಹದಗೆಡಿಸುವರೆಂದು ಅಪರಾಧ ಬಂದು ಮಠದ ಸ್ವಾಮಿಗಳಿಂದ ಬಹಿಷ್ಕಾರ ಹಾಕಲ್ಪಟ್ಟಿತೆಂದೂ, ಸ್ವಾಮಿಗಳ ಮುಂದೆಯೇ ಆಟವನ್ನು ಆಡಿತೋರಿಸಿದಾಗ ಅವರಿಗೆ ಪುರಸ್ಕಾರ ದೊರೆಯಿತೆಂದೂ ಹೇಳುವ ಕಥೆ – ಎಷ್ಟರಮಟ್ಟಿಗೆ ಸತ್ಯ ಸಂಗತಿಗಳು ಎಂಬುದು ತಿಳಿಯದು. ಅದರಂತೆ, ಕುಲಗೋಡ ತಮ್ಮಣ್ಣನು ಆಟ ಆಡುತ್ತಿದ್ದಾಗ ಯಾವುದೋ ತಾಳ ತಪ್ಪಿದ್ದರಿಂದ ತನ್ನ ಪ್ರೇಯಸಿ (ಸಿಂಗಾಸಾನಿಗಿಂತ ಮುಂಚೆ ಮತ್ತೊಬ್ಬಳಿದ್ದಳೆ ?) ಯನ್ನು ತಾಳದಿಂದ ತಲೆಗೆ ಕುಟ್ಟಿಕೊಂದುಹಾಕಿದನೆಂದೂ, ಗೋಕಾವಿಯ ಜೇಲಿನಲ್ಲಿ ಅವನನ್ನು ಇಡಲಾಗಿತ್ತೆಂದೂ, ಆ ಸ್ಥಳವನ್ನು ಇಂದಿಗೂ ತೋರಿಸುವರೆಂದೂ, ವಿಚಾರಣೆ ನಡೆದು ಫಾಸೀ ಶಿಕ್ಷೆ

ಕೊಡಲ್ಪಟ್ಟಿತೆಂದೂ, ಕೊನೆಯ ಆಶೆಯನ್ನು ತೀರಿಸುವಾಗ ಆತನು ತನ್ನ ಆಟವನ್ನು ಅಧಿಕಾರಿಗಳು ನೋಡಬೇಕೆಂದು ಹೇಳಿ, ಆಟ ಆಡಿ ತಾಳತಪ್ಪಿದ ಪ್ರಸಂಗದಲ್ಲಿ ತೋರುವ ಅಸಹನೀಯ ಅಭಾಸವನ್ನು ಅಧಿಕಾರಿಗಳ ಗಮನಕ್ಕೆ ತಂದುಕೊಟ್ಟು ಅಧಿಕಾರಿಗಳಿಂದ ಕ್ಷಮಿಸಲ್ಪಟ್ಟು ಬಿಡುಗಡೆ ಹೊಂದಿದನೆಂದೂ ಒಂದು ಕಥೆ ಬೆಳೆದು ಬಂದಿದೆ. ಇದು ದಂತಕಥೆಯೇ ಆಗಿರಬಹುದು. ಬಡಕುಂದ್ರಿ ಬಸಪ್ಪನಿಗೂ ಈ ಕಥೆ ಜೋಡಿಸಲ್ಪಟ್ಟುದನ್ನು ನಾನು ಕೇಳಿ ತಿಳಿದುದುಂಟು. ಇದಕ್ಕೆ ಸರಿಯಾದ ಆಧಾರಗಳಿಲ್ಲ. ಆದರೂ ಈ ವಿಷಯದಲ್ಲಿ ಸಂಶೋಧನೆ ನಡೆಯಬೇಕು.

ಅಪರಾಳ ತಮ್ಮಣ ಮತ್ತು ಕುಲಗೋಡ ತಮ್ಮಣ್ಣ ಅವರ ಕಾಲ ನಿರ್ಣಯ ಆಗಬೇಕು. ನಾನು ಸ್ಥೂಲವಾಗಿ ಅವರಿಬ್ಬರ ಕಾಲ ನಿರ್ಣಯವನ್ನು ಈ ಹಿಂದೆ ಸೂಚಿಸಿದ್ದೇನೆ. ಅವರು ಬದುಕಿಹೋದ ಪ್ರಸಂಗಗಳು ಇನ್ನೂ ಹಸಿದಸಿಯಾಗಿ ನೆನಪಿನಲ್ಲಿರುವಾಗಲೇ ಅದು ನಡೆಯಬೇಕು. ಇಲ್ಲದಿದ್ದರೆ ದಿನಗಳೆದಂತೆ ಅದು ಕ್ಲಿಷ್ಟವಾಗಿ ಪರಿಣಮಿಸಬಹುದು. ಅವರ ಮೇಳಗಳಲ್ಲಿ ಪಾತ್ರವಹಿಸುತ್ತ ಬಂದವರ ಪರಂಪರೆ ಇನ್ನೂ ಜೀವಂತ ಇದೆ. ಅದರ ಸಹಾಯದಿಂದ ವಿವರಗಳನ್ನು ಸಂಗ್ರಹಿಸಿ ಚಾರಿತ್ರಿಕ ಘಟನೆಗಳನ್ನು ಗ್ರಂಥಸ್ಥಗೊಳಿಸಬೇಕು. ಕವಿಯ ಕಾಲ, ಕೃತಿಯ ಕಾಲ, ಕೃತಿಯ ಮೂಲ, ವಿಕಾಸ, ಪ್ರಭಾವ ಮತ್ತು ಪರಿಣಾಮಗಳನ್ನು ಸಶಾಸ್ತ್ರೀಯವಾಗಿ ಅಭ್ಯಾಸ ಮಾಡುವಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆಯಬೇಕು. ಸಿಂಗಾಸನಿಯ ಮೊಮ್ಮಗಳೋ ಅಥವಾ ಸಂಬಂಧಿಗಳೊ ಇನ್ನೂ ಮೇಳವನ್ನು ಜೀವಂತವಾಗಿ ಇಟ್ಟುಕೊಂಡಿದ್ದಾರೆ. ಬಗ್ಗಿ ಅಪ್ಪಾಲಾಲ, ಜಮಖಂಡಿ ಅಪ್ಪಾಲಾಲ, ಸಿಂಗನೂರ ಹೇಳಪ, ಗೊಂದಲಿಗ್ಯಾ, ಮೋಳೇದ ರಾಮು, ಮಾಟ ಕೊಪ್ಪರಾಮು ಸವದಿಯ ಚೂಡಪ್ಪ – ಅಲ್ಲಪ್ಪ, ಆಲಗೂರ ಕೃಷ್ಟಪ್ಪ, ಮರನೂರ ಅಚ್ಯುತ ಮುಂತಾದವರು ಖ್ಯಾತ ನಟರೆಂದು ಪಾರಿಜಾತದ ಸಂಪ್ರದಾಯದಲ್ಲಿ ಹಿರಿಯ ಹೆಸರನ್ನು ಪಡೆದಿದ್ದಾರೆ. ಮರನೂರ ಅಚ್ಯುತ ಮತ್ತು ಸವದಿಯ ಮಲ್ಲಯ್ಯಸ್ವಾಮಿ ಭಾಗವತರ ಕೆಲಸ ನಡೆಸುವುದರಲ್ಲಿ ಅಸಾಮಾನ್ಯ ಚಾಕಚಕ್ಯತೆ ಪಡೆದವರೆಂದು ಖ್ಯಾತಿಯಿದೆ. ಅವರಲ್ಲಿ ಇನ್ನೂ ಕೆಲವರು ಜೀವಂತ ಇದ್ದಾರೆ. ಪಾರಿಜಾತ ಮೇಳಗಳನ್ನು ಕಟ್ಟಿಕೊಂಡು ತರುಣರಿಂದ ಆಟ ಆಡಿಸುತ್ತಿದ್ದಾರೆ. ಕೃಷ್ಣಾ ತೀರ ಪಾರಿಜಾತದ ತವರುಮನೆ. ಇಂದಿಗೂ ಶ್ರೀಕೃಷ್ಣಪಾರಿಜಾತ ಅಲ್ಲಿ ಊರ್ಜಿತಾವಸ್ಥೆಯಲ್ಲಿ ಇದೆ. ಈಚೆಗೆ ಹೊಸ ಹೊಸ ಮೇಳಗಳು ಹುಟ್ಟಿಕೊಂಡು ಹೆಚ್ಚು ಜನ ಮೆಚ್ಚುಗುವಂತೆ ಹೊಸ ಹಾಡುಗಳನ್ನು ಪಾತ್ರಗಳ ಬಾಯಲ್ಲಿ ತುರುಕಿ, ನಾಟಕದಂತೆ ಚಿತ್ರಪಟದಂತೆ ಮಾಡಲು ಅನುಕರಣೆ ನಡೆಸಿ ಮೂಲ ಪಾರಿಜಾತವನ್ನು ಕೆಡಿಸುತ್ತಿರುವುದೂ ಉಂಟು.

ವಿಜಯನಗರದ ಕಡೆಕಡೆಯ ಅರಸರ ಕಾಲದಲ್ಲಿ (ಸು. 1500 ರಿಂದ) ತೆಲುಗು ಭಾಷೆಯೊಂದಿಗೆ ಬಳಕೆ ಬೆಳೆದಾಗ ಬಹುಶಃ ಆಂಧ್ರಪ್ರದೇಶದ 'ಭಾಮಾ' 'ಕೊರವಂಜಿ'

ಕನ್ನಡ ನೆಲದಲ್ಲಿ ಇಳಿದುಬಂದರು. ಅಲ್ಲದೆ, ಆ ಮೊದಲು (1111) ರಾಮಾನುಜಾಚಾರ್ಯರ ಪ್ರಭಾವದಿಂದಲೂ, ಅನಂತರ ಮೈಸೂರಿನ ಚಿಕ್ಕದೇವರಾಜರ ಕಾಲ (1672-1704) ದಲ್ಲಿಯೂ, ಶ್ರೀವೈಷ್ಣವ ಸಂಸ್ಕೃತಿ ತಮಿಳುನಾಡಿನಿಂದ ನುಗ್ಗಿ ಬಂದಾಗ ಈ ಪಾರಿಜಾತದ ಹೊಸ ಸರಕುಗಳು ನಮ್ಮಲ್ಲಿ ಬಂದು ನೆಲೆಯೂರಿದವು. ನಮ್ಮಿಂದ ಮರಾಠಿ ತಮಾಷೆಗಳ ಮೇಲಾದ ಪ್ರಭಾವದಲ್ಲಿ 'ಭಾಮಾ–ಪಾರಿಜಾತ–ಕೊರವಂಜಿ' ಸ್ವೀಕರಿಸಲ್ಪಡಲಿಲ್ಲ. ಬರಿ **'ಗಣ–ಗೌಳಣ'** ಮಾತ್ರ ಪ್ರಭಾವ ಪಡೆದವು. ಮರಾಠಿ ಜಾನಪದ ರಂಗಭೂಮಿಯಮೇಲೆ, ಹಾಗೂ ಅಭಿಜಾತ ನಾಟಕಗಳ ಮೇಲೆ ಕನ್ನಡ ಪಾರಿಜಾತ ಮತ್ತು ಯಕ್ಷಗಾನ–ಬಯಲಾಟಗಳ ಪ್ರಭಾವ ಆಗಿದೆ ಎಂಬುದನ್ನು ಮರಾಠಿ ರಂಗಭೂಮಿಯ ಇತಿಹಾಸವನ್ನು ಬರೆದ ಪ್ರೊ॥ ಶ್ರೀ. ನಾ. ಬನಹಟ್ಟಿಯವರೂ,[15] ಮರಾಠಿ ಆದ್ಯ ನಾಟಕಕಾರರಾದ ಅಣ್ಣಾರಾವ್ ಕಿರ್ಲೋಸ್ಕರ ಅವರೂ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ.[16] ಸಾಂಗಲಿಯ ಮಹಾರಾಜರು ಕನ್ನಡ ಬಯಲಾಟಗಳನ್ನು ನೋಡಿ ಪ್ರಭಾವಿತರಾಗಿ ಅಂಥ ಕೃತಿಗಳನ್ನು ಮರಾಠಿಯಲ್ಲಿ ಬರೆಯಲೂ, ಅಂಥ ನಾಟಕ ಅಥವಾ ಆಟಗಳ ಪ್ರಯೋಗ ಮರಾಠಿಯಲ್ಲಿ ನಡೆಸಲೂ ಪ್ರೋತ್ಸಾಹ ನೀಡಿದುದರ ಉಲ್ಲೇಖ ದೊರೆಯುತ್ತದೆ.[17] ಮರಾಠಿ ರಂಗಭೂಮಿ ಶೀಘ್ರ ಪ್ರಗತಿಯನ್ನು ಸಾಧಿಸಿ, ಮುಂದೆ ನಮಗೇ ಆದರ್ಶವಾಗಿ ನಿಂತುಬಿಟ್ಟಿತು. ಇಂದಿಗೂ ನಾಟಕ–ಬಯಲಾಟಗಳ ಕ್ಷೇತ್ರದಲ್ಲಿ ಮರಾಠಿಯ ಅನುಕರಣದಿಂದ ಪಾರಾಗುವುದು ಕನ್ನಡಿಗರಿಗೆ ದುಸ್ತರವಾಗಿದೆ. ಚಿತ್ರರಂಗದಲ್ಲಿಯೂ ನಮ್ಮದು ಇದೇ ಪಾಡಾಗಿತ್ತು. ಆದರೆ ಈಚೆಗೆ ಕನ್ನಡ ರಂಗಭೂಮಿ ಹಾಗೂ ಚಿತ್ರರಂಗಗಳು ಕೊಸರಿಕೊಂಡು ಹೊಚ್ಚ ಹೊಸಮಾರ್ಗದಲ್ಲಿ ಧಾವಿಸಿ ಪ್ರಗತಿಯನ್ನು ಸಾಧಿಸತೊಡಗಿವೆ ಎಂಬುದು ಸಂತೋಷ ಹಾಗೂ ಸಮಾಧಾನ ಸಂಗತಿಯಾಗಿವೆ.

ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಹಾಡು–ಒಗಟು–ಗಾದೆಗಳ ಸಂಗ್ರಹ ಸಂಶೋಧನೆಯ ಕೆಲಸ ಜಗದಾದ್ಯಂತವೂ ನಡೆದಿದೆ. ಕಥಾಕ್ಷೇತ್ರದಲ್ಲಿ ಅದ್ಭುತ ಕಾರ್ಯ ಸಾಧಿಸಲ್ಪಟ್ಟಿದೆ. **ಪುರಾಣಮೂಲ** ಸಿದ್ಧಾಂತ ಹಿಂದೆ ಬಿದ್ದು **ಹಲವು ಮೂಲ ಸಿದ್ಧಾಂತಕ್ಕೆ** ಹೆಚ್ಚಿನ ಚಾಲನೆ ದೊರೆತಿದೆ. **ಪ್ರಕೃತಿ ಸಂಕೇತ** ಸಿದ್ಧಾಂತಕ್ಕಿಂತ **ಐತಿಹಾಸಿಕ ಭೌಗೋಲಿಕ ಸಿದ್ಧಾಂತಕ್ಕೆ** ಹೆಚ್ಚಿನ ಪುರಸ್ಕಾರ ದೊರೆತಿದೆ. ಅಂಟಿ ಆರ್ನೆ ಹಾಗೂ ಸ್ಟಿತ್ ಥಾಮ್‌ಸನ್‌ರ ಅಶಯಸೂಚಿ–ಮಾದರಿಸೂಚಿಗಳು ಬೃಹತ್ ಸಂಪುಟಗಳಲ್ಲಿ ಸಿದ್ಧವಾಗಿವೆ. ಆದರೆ, ಜಾನಪದ ರಂಗಭೂಮಿಯ ಸಂಶೋಧನೆ ಅಷ್ಟೊಂದು ವ್ಯಾಪಕವಾಗಿ ನಡೆದಿಲ್ಲ. ಭಾರತದಲ್ಲಿ ಏಕರೂಪೀ ಪ್ರಯತ್ನ ಇನ್ನೂ ನಡೆಯಬೇಕಾಗಿದೆ. ಈ ವಿಷಯದಲ್ಲಿ ಮರಾಠಿಗಳು 'ತಮಾಷಾ' ರೂಪವನ್ನು ಚೆನ್ನಾಗಿ ಪೋಷಣೆ ಮಾಡಿ ಒಂದಿಷ್ಟು ಹೆಚ್ಚಿನ ಕೆಲಸವನ್ನು ಸಾಧಿಸಿ ಉಳಿದವರಿಗೆ ಆದರ್ಶವಾಗಿ ನಿಂತಿದ್ದಾರೆ. ನಮ್ಮಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಸ್ವಲ್ಪ ಸಾಧನೆ ನಡೆದಿದೆ.

ಜಾನಪದ ಸಂಶೋಧನೆ ಇತಿಹಾಸ–ಪುರಾಣಗಳ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ. ಧರ್ಮ-ದೇವರು-ಸಂಪ್ರದಾಯ-ನಂಬಿಗೆ-ನಡಾವಳಿಗಳ ಹೆಸರಿನ ಮೇಲೆ ನಡೆಯುವ ಶೋಷಣೆ–ಅನ್ಯಾಯಗಳನ್ನು ತೊಡೆದುಹಾಕಲು ಸಹಾಯಕವಾಗುತ್ತದೆ. ಸಾಂಸ್ಕೃತಿಕ ವಂಚನೆ–ಕಳ್ಳತನಗಳನ್ನೂ ಪತ್ತೆಹಚ್ಚುವಲ್ಲಿ ಜಾನಪದ ಸಂಶೋಧನೆ ಸಿ. ಆಯ್. ಡಿ. ಕೆಲಸ ಮಾಡುತ್ತದೆ. ಮೂಲ ಮಾನವಸಂಸ್ಕೃತಿಯ ನೆಲೆ ಹಾಗೂ ವಲಸೆಗಳನ್ನು, ಭಾಷೆ–ಉಪಭಾಷೆಗಳ ಸಂಚಾರವನ್ನು ನಂಬಿಗೆ ನಡಾವಳಿಗಳನ್ನು ಕಂಡುಹಿಡಿಯಲು ಸಂಶೋಧನೆಯು ಪಾಠಾಂತರ ನೆರವು ನೀಡುತ್ತದೆ. ಅಂತಿಮ ಸತ್ಯವನ್ನು ಕಂಡುಕೊಳ್ಳಲು ಸಹಾಯಮಾಡುತ್ತದೆ.

ಅಡಿ ಟಿಪ್ಪಣಿ

1. (ಸಂ) ಆರ್. ಜಿ. ಕುಲಕರ್ಣಿ (ಅರಕೇರಿ) : ಅಪರಾಳ ತಮ್ಮಣ್ಣ ಕೃತ ಶ್ರೀ ಕೃಷ್ಣ ಪಾರಿಜಾತ (1972)
2. (ಸಂ) ಎಂ. ಎಸ್. ಸುಂಕಾಪೂರ : ಕನ್ನಡ ಬಯಲಾಟ : ಶ್ರೀ ಕೃಷ್ಣಪಾರಿಜಾತ (1972)
3. (ಸಂ) ಆರ್. ಜಿ. ಕುಲಕರ್ಣಿ : ಶ್ರೀ ಕೃಷ್ಣಪಾರಿಜಾತ (1972) ಪು. 97
4. ಅದೇ, ಪು. 98
5. ಅದೇ, ಪು. 98–99 ರ ಸಾರಾಂಶ
6. ಅದೇ, ಪು. 100–102 ರ ಸಾರಾಂಶ
7. ಅದೇ, ಪು. 102–110 ರ ಸಾರಸಂಗ್ರಹ
8. H. K. Ranganath : The Karnatak Theatre, p. 70
9. (ಸಂ) ಆರ್. ಜಿ. ಕುಲಕರ್ಣಿ : ಶ್ರೀಕೃಷ್ಣಪಾರಿಜಾತ (1972) ಪು. 101
   ಅಡಿ ಟಿಪ್ಪಣಿ : 2-3-4
10. ಆರ್. ನರಸಿಂಹಾಚಾರ್ಯ : ಕರ್ನಾಟಕ ಕವಿಚರಿತೆ, ಸಂ. III ತಿದ್ದಿದ) ದ್ವಿ. ಮು. 1974)
11. ಅದೇ
12. ಅದೇ
13. ಚಂದ್ರಶೇಖರ ಕಂಬಾರ: ಉತ್ತರ ಕರ್ನಾಟಕದ ಜಾನಪದ ರಂಗಭೂಮಿ (1965) ಪು. 39
14. ಶ್ರೀನಿವಾಸ ಹಾವನೂರ : ಹೊಸಗನ್ನಡದ ಅರುಣೋದಯ (1974) ಪು. 219
15. ಪ್ರೊ॥ ಎಸ್. ಎನ್. ಬನಹಟ್ಟಿ : ಮರಾಠಿ ರಂಗಭೂಮಿಚಾ ಇತಿಹಾಸ (ಮರಾಠಿ) ಭಾಗ 1, (1957) ಪು. 23-26
16. ಅಣ್ಣಾಸಾಹೇಬ ಕಿರ್ಲೋಸ್ಕರ : ಸಂಗೀತ ಸೌಭದ್ರಾ (ಮರಾಠಿ ನಾಟಕ) ಹಾಡುಗಳಲ್ಲಿ ಪಾರಿಜಾತ ಧಾಟಿ ಇದೆ.
17. ಪ್ರೊ॥ ಎಸ್. ಎನ್. ಬನಹಟ್ಟಿ : ಮರಾಠಿ ರಂಗಭೂಮಿಚಾ ಇತಿಹಾಸ (ಮರಾಠಿ) ಭಾಗ 1, 1957, ಪು. 18

ಪಾಲುದಾರಿಕೆ

ಗೋಪಾಲ ಕೃಷ್ಣ

1942ರ ಭಾರತೀಯ ಪಾಲುದಾರಿಕೆ ಶಾಸನದ ಪ್ರಕಾರ ಪಾಲುದಾರಿಕೆ ಎಂದರೆ-ಅನೇಕ ಜನ ಪಾಲುದಾರರು ಸೇರಿ ಲಾಭಗಳಿಕೆಗಾಗಿ ವ್ಯವಹಾರ ಮಾಡವುದು. ಈ ವ್ಯವಹಾರವನ್ನು ಒಟ್ಟಾಗಿ ಇಲ್ಲವೆ, ಎಲ್ಲರ ಪರವಾಗಿ ಒಬ್ಬ ಪಾಲುದಾರ ನೋಡಿ ಕೊಳ್ಳಬೇಕು. ಪಾಲುದಾರರ ಈ ಪರಸ್ಪರ ಸಂಬಂಧವೇ ಪಾಲುದಾರಿಕೆ. ಈ ವಿವರಣೆಯನ್ನು ವಿಶ್ಲೇಷಿಸಿದಾಗ ಕೆಳಕಂಡ ಅಂಶಗಳು ಹೊರಬರುತ್ತವೆ :

1) ಪಾಲುದಾರಿಕೆ ವ್ಯವಹಾರಕ್ಕೆ ಎರಡು ಅಥವಾ ಅದಕ್ಕಿಂತ ಹೆಚ್ಚು ಜನ ಪಾಲುದಾರರಿರಬೇಕು.

2) ಅವರ ನಡುವೆ ಒಪ್ಪಂದವಿರಬೇಕು.

3) ಅವರೆಲ್ಲ ಒಟ್ಟಾಗಿ ಸೇರುವುದು ಒಂದು ನಿರ್ದಿಷ್ಟ ವ್ಯವಹಾರಕ್ಕಾಗಿರ ಬೇಕು.

4) ವ್ಯವಹಾರದಿಂದ ಬಂದ ಲಾಭವನ್ನು ಎಲ್ಲ ಪಾಲುದಾರರೂ ಹಂಚಿ ಕೊಳ್ಳುವಂತಿರಬೇಕು.

5) ವ್ಯವಹಾರವನ್ನು ಪಾಲುದಾರರೆಲ್ಲ ಅಥವಾ ಎಲ್ಲ ಪಾಲುದಾರರ ಪರ ವಾಗಿ ಯಾರಾದರೊಬ್ಬ ಪಾಲುದಾರ ನಿರ್ವಹಿಸಬೇಕು.

ಪಾಲುದಾರಿಕೆಯ ರಚನೆ

ಪಾಲುದಾರಿಕೆ ಒಂದು ವಿಶೇಷ ರೀತಿಯ ಒಪ್ಪಂದ. ಬೇರೆ ಒಪ್ಪಂದಗಳಂತೆಯೇ ಇದೂ ಎಲ್ಲರ ಸಮ್ಮತಿಯ ಮೇಲೆಗೆ ರಚಿತವಾಗಿರುತ್ತದೆ. ಒಂದು ಒಪ್ಪಂದ ಆಗ ಬೇಕಾದರೆ ಇರಬೇಕಾದ ಎಲ್ಲ ಅಂಶಗಳೂ ಪಾಲುದಾರಿಕೆಗೂ ಇರಬೇಕಾಗುತ್ತದೆ. ಪಾಲುದಾರರು ಸ್ವ – ಇಚ್ಛೆಯಿಂದ ಒಪ್ಪಿದವರಾಗಿರಬೇಕು. ಪಾಲುದಾರರು ಒಪ್ಪಂದಕ್ಕೆ ಸೇರಲು ಅರ್ಹತೆಯುಳ್ಳವರಾಗಿರಬೇಕು. ಅಂದರೆ, ಅವರಿಗೆ 18 ವರ್ಷಗಳು ತುಂಬಿರಬೇಕು. ಪಾಲುದಾರಿಕೆಯ ವ್ಯವಹಾರ ಕಾನೂನು ಬದ್ಧ ವ್ಯವಹಾರವಾಗಿರಬೇಕು.

ಬ್ಯಾಂಕಿಂಗ್ ವ್ಯವಹಾರಗಳನ್ನು ಮಾಡುವ ಸಲುವಾಗಿ ರಚಿತವಾಗುವ ಪಾಲುದಾರಿಕೆ ಸಂಸ್ಥೆಗಳ ಪಾಲುದಾರರ ಸಂಖ್ಯೆ 10ಕ್ಕಿಂತ ಹೆಚ್ಚಾಗಿರಬಾರದು.

ಇತರ ಇನ್ನಾವುದೇ ರೀತಿಯ ವ್ಯವಹಾರಗಳಿಗಾಗಿ ರಚಿತವಾಗುವ ಪಾಲುದಾರಿಕೆ ಸಂಸ್ಥೆಗಳ ಪಾಲುದಾರರ ಸಂಖ್ಯೆ ಗರಿಷ್ಠ ಎಂದರೆ 20. ಇದಕ್ಕಿಂತ ಹೆಚ್ಚಿನ ಸಂಖ್ಯೆಯುಳ್ಳ ಪಾಲುದಾರರಿದ್ದರೆ, ಆ ಸಂಸ್ಥೆ ಕಾನೂನು ಬಾಹಿರ ಸಂಸ್ಥೆಯಾಗುತ್ತದೆ.

ಪಾಲುದಾರಿಕೆ ಸಂಸ್ಥೆಗಳ ರಚನೆಯಲ್ಲಿ ಈ ಕೆಳಕಂಡ 2 ಅಂಶಗಳು ಗಮನಾರ್ಹ :

1) ಅಪ್ರಾಪ್ತ ವಯಸ್ಕರನ್ನು ಪಾಲುದಾರಿಕೆಗೆ ಸೇರಿಸಿಕೊಳ್ಳುವಂತಿಲ್ಲ. ಆದರೆ ಬೇರೆಲ್ಲ ಪಾಲುದಾರರ ಸಮ್ಮತಿಯ ಮೇರೆಗೆ ಅಪ್ರಾಪ್ತ ವಯಸ್ಕರನ್ನೂ ಪಾಲುದಾರರನ್ನಾಗಿ ಮಾಡಿಕೊಳ್ಳಬಹುದು.
2) ಪಾಲುದಾರಿಕೆಯ ರಚನೆಯಲ್ಲಿ ಪ್ರತಿಕ್ರಿಯ (consideration) ಬೇಕಾಗುವುದಿಲ್ಲ.

ಎಂಥವರು ಪಾಲುದಾರರಾಗಬಹುದು ?

ಭಾರತೀಯ ಒಪ್ಪಂದ ಶಾಸನದ ಸೆಕ್ಷನ್ 11ರ ಪ್ರಕಾರ ಪ್ರಾಪ್ತ ವಯಸ್ಸಿನ, ಒಪ್ಪಂದಕ್ಕೆ ಸೇರಲು ಅರ್ಹರಾದ ಮತ್ತು ಮನಃಸ್ವಾಸ್ಥ್ಯವುಳ್ಳ ಯಾರಾದರೂ ಪಾಲುದಾರರಾಗಬಹುದು.

ಅಪ್ರಾಪ್ತ ವಯಸ್ಸಿನವರು, ಮನಃಸ್ವಾಸ್ಥ್ಯವಿಲ್ಲದವರು ಹೊರದೇಶದ ಶತ್ರುಗಳು ಪಾಲುದಾರರಾಗಲು ಅನರ್ಹರು. ಆದರೆ ಹೊರದೇಶದ ಮಿತ್ರರು ಭಾರತದವರೊಡನೆ ಪಾಲುದಾರರಾಗಬಹುದು. ಹಿಂದೂ ಅಥವಾ ಬೇರಾವುದೇ ಧರ್ಮದ ವಿವಾಹಿತ ಮಹಿಳೆಯರು ಪಾಲುದಾರರಾಗಲು ಅವಕಾಶವಿದೆ. ಕಾರ್ಪೊರೇಷನ್ ತನ್ನ ನಿಬಂಧನೆಗಳಲ್ಲಿ ಅವಕಾಶವಿದ್ದುದಾದರೆ, ಕಾರ್ಪೊರೇಷನ್‌ಗಳೂ ಪಾಲುದಾರಿಕೆಯಲ್ಲಿ ಭಾಗವಹಿಸಬಹುದು. ಇಂಥ ಕಾರ್ಪೊರೇಷನ್‌ಗಳನ್ನು ಕಾನೂನಿನನ್ವಯ ರಚಿತವಾಗಿರುವ ಅದೃಶ್ಯ ಅಥವಾ ಕೃತಕ ವ್ಯಕ್ತಿ (artificial person) ಗಳು ಎಂದು ಕರೆಯಬಹುದು.

ಪಾಲುದಾರರ ಬಗೆಗಳು

ಈ ಕೆಳಕಂಡ ಹಲವು ಬಗೆಯ ಪಾಲುದಾರರಿರುತ್ತಾರೆ :

ಆಸಕ್ತ ಪಾಲುದಾರರು (Active partners) : ಇವರು ಪಾಲುದಾರರಲ್ಲೊಬ್ಬರಾಗಿದ್ದು, ಸಂಸ್ಥೆಯ ವ್ಯವಹಾರದಲ್ಲಿ ಸಕ್ರಿಯ ಪಾತ್ರವಹಿಸಿ, ಸಂಸ್ಥೆಯ ದೈನಂದಿನ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ.

ಸುಪ್ತ ಪಾಲುದಾರರು (Darmant partners) : ಇವರೂ ಇತರ ಪಾಲುದಾರರಂತೆ ಬಂಡವಾಳ ಹಾಕಿರುತ್ತಾರೆ ಮತ್ತು ಸಂಸ್ಥೆಯ ಲಾಭನಷ್ಟಗಳಿಗೆ

ಜವಾಬ್ದಾರರಾಗಿರುತ್ತಾರೆ. ಆದರೆ ಮೇಲೆ ಹೇಳಿದ ಅಸಕ್ತ ಪಾಲುದಾರರಂತೆ ಇವರು ಸಂಸ್ಥೆಯ ವ್ಯವಹಾರದಲ್ಲಿ ಭಾಗವಹಿಸಿರುವುದಿಲ್ಲ.

ನಾಮ ಮಾತ್ರದ ಪಾಲುದಾರರು (Nominal partners) : ಇಂತಹ ಪಾಲುದಾರರು ಬರಿಯ ಹೆಸರಿಗೆ ಪಾಲುದಾರರಾಗಿರುತ್ತಾರೆ. ಇವರು ಬಂಡವಾಳವನ್ನೂ ಹಾಕುವುದಿಲ್ಲ, ಅಲ್ಲದೆ ಸಂಸ್ಥೆಯ ಲಾಭಕ್ಕೆ ಬಾಧ್ಯರಲ್ಲ. ಸಂಸ್ಥೆಯ ವ್ಯವಹಾರದಲ್ಲೂ ಭಾಗಿಗಳಾಗಿರುವುದಿಲ್ಲ. ಆದರೆ ಸಂಸ್ಥೆ ಬೇರೆಯವರಿಗೆ ಕೊಡಬೇಕಾದ ಸಾಲದ ಬಗ್ಗೆ ಇವರು ಬಾಧ್ಯರಾಗುತ್ತಾರೆ.

ಉಪ-ಪಾಲುದಾರರು (Sub-partners) : ಒಬ್ಬ ಪಾಲುದಾರ ತಾನು ಪಾಲುದಾರನಾಗಿರುವ ಸಂಸ್ಥೆಯಿಂದ ತನಗೆ ಬರುವ ಲಾಭವನ್ನು ಮತ್ತೊಬ್ಬನೊಡನೆ ಹಂಚಿಕೊಳ್ಳುವ ಒಪ್ಪಂದ ಮಾಡಿಕೊಂಡಿದ್ದರೆ, ಆ ಮತ್ತೊಬ್ಬ ವ್ಯಕ್ತಿ (ಮೂರನೆಯ ವ್ಯಕ್ತಿ) ಉಪ-ಪಾಲುದಾರನೆನಿಸಿಕೊಳ್ಳುತ್ತಾನೆ. ಈ ಉಪ-ಪಾಲುದಾರನಿಗೂ, ಪಾಲುದಾರಿಕೆ ಸಂಸ್ಥೆಗೂ ಯಾವುದೂ ಸಂಬಂಧವಿರುವುದಿಲ್ಲ.

ಅಪ್ರಾಪ್ತ ವಯಸ್ಸಿನ ಪಾಲುದಾರರು (Minor partners) : ಅಪ್ರಾಪ್ತ ವಯಸ್ಸಿನವರು ಪಾಲುದಾರರಾಗಲು ಅನರ್ಹರು. ಆದರೂ ಉಳಿದ ಪಾಲುದಾರರು ಅನುಮೋದಿಸುವುದಾದರೆ ಅಪ್ರಾಪ್ತ ವಯಸ್ಸಿನವರನ್ನೂ ಪಾಲುದಾರರನ್ನಾಗಿ ಸೇರಿಸಿಕೊಳ್ಳಬಹುದು.

ಪಾಲುದಾರಿಕೆಯ ವಿಸರ್ಜನೆ

ಈ ಕೆಳಕಂಡ ಕಾರಣಗಳಿಂದ ಪಾಲುದಾರಿಕೆ ವಿಸರ್ಜಿತವಾಗಬಹುದು :

1) ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಮಾತ್ರ ರಚಿತವಾಗಿದ್ದು, ಆ ಅವಧಿ ಮುಗಿದಾಗ ಪಾಲುದಾರಿಕೆ ವಿಸರ್ಜಿತವಾಗುತ್ತದೆ :
2) ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಪಾಲುದಾರಿಕೆಯ ಒಪ್ಪಂದ ಉಂಟಾಗಿದ್ದು, ಆ ನಿರ್ದಿಷ್ಟ ಅವಧಿ ಮುಗಿದಾಗ ;
3) ಒಬ್ಬ ಪಾಲುದಾರ ನಿಧನ ಹೊಂದಿದಾಗ :
4) ಒಬ್ಬ ಪಾಲುದಾರ ದಿವಾಳಿಯಾದಾಗ :
5) ಒಬ್ಬ ಪಾಲುದಾರ ನಿವೃತ್ತನಾದಾಗ.

ಮೊದಲೇ ಒಪ್ಪಂದ ಮಾಡಿಕೊಂಡಿದ್ದು, ಉಳಿದ ಪಾಲುದಾರರು ವ್ಯವಹಾರವನ್ನು ಮುಂದುವರಿಸಿಕೊಂಡು ಹೋಗಬಹುದಾಗಿದೆ. ಮೊದಲೇ ಅಂತಹ ಒಪ್ಪಂದ ಆಗಿಲ್ಲದಿದ್ದರೆ ಮೇಲಿನ ಯಾವುದೇ ಕಾರಣಗಳಿಂದ ಪಾಲುದಾರಿಕೆ ವಿಸರ್ಜಿತವಾಗುತ್ತದೆ.

ಗುಣಾನುಸಾರ ಸ್ವೀಕಾರ ಪ್ರತಿಚಯನ

ಎಚ್. ಜಿ. ವಾಮನ*

ಮತ್ತು

ಟಿ. ಶ್ರೀವೆಂಕಟರಮಣ*

ಸಾರಾಂಶ : ವಸ್ತುವಿನಿಮಯ ನಡೆಯುವಾಗ ಅದರ ಗುಣಮಟ್ಟದ ಬಗ್ಗೆ ವ್ಯವಸ್ಥಿತ ಪರಿಶೋಧನೆ ಅಗತ್ಯ. ಸಂಬಂಧಿಸಿದ ವಸ್ತುಗಳ ಸಂಖ್ಯೆ ಹೆಚ್ಚಿರುವಾಗಲಂತೂ ಇದು ಅನಿವಾರ್ಯ. ಸಂಖ್ಯಾಕಲನ ವಿಜ್ಞಾನ ಪ್ರತಿಚಯ ತಳಹದಿಯ ಮೇಲಿರುವ ಇಂಥ ಕೆಲವು ಯೋಜನೆಗಳನ್ನು ನೀಡುತ್ತದೆ. ಅವುಗಳಲ್ಲಿ ಕೆಲವು ಯೋಜನೆಗಳ ಮತ್ತು ಅಲ್ಲಿರುವ ಪರಿಕಲ್ಪನೆಗಳ ಸೂಲಪರಿಚಯವನ್ನು ಪ್ರಸ್ತುತ ಲೇಖನದಲ್ಲಿ ಮಾಡಿ ಕೊಡಲಾಗಿದೆ. ಬೇರೆ ಬೇರೆ ಸಂದರ್ಭಗಳಿಗೆ ಸರಿಹೊಂದುವ ಅಂಥ ಯೋಜನೆಗಳನ್ನು ನೀಡುವ ಮುದ್ರಿತ ಕೋಷ್ಟಕಗಳನ್ನೂ ತಿಳಿಸಲಾಗಿದೆ.

ಮುಖ್ಯ ಪದಗಳು

1. ಉತ್ಪಾದಕನ ಅಪಾಯ ಸಂಭವತೆ.
2. ಏಕ ಪ್ರತಿಚಯನ ಯೋಜನೆ.
3. ಕ್ರಮಶಃ ಪ್ರತಿಚಯನ ಯೋಜನೆ.
4. ಗ್ರಾಹಕನ ಅಪಾಯಸಂಭವತೆ.
5. ಗುಣಾನುಸಾರ ಪರಿಶೋಧನೆ.
6. ದ್ವಿಪತಿಚಯನ ಯೋಜನೆ.
7. ಚರಾನುಸಾರ ಪರಿಶೋಧನೆ.
8. ನಿರ್ವಾಹಕ ಲಕ್ಷಣ ವಕ್ರರೇಖೆ.
9. ಸ್ವೀಕಾರ ಪ್ರತಿಚಯನ.
10. AQL, LTPD, AOQ, AOQL.

---

* ಉಪನ್ಯಾಸಕರು, ಸಂಖ್ಯಾಕಲನ ವಿಜ್ಞಾನ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು-560009

ಸಹೋದ್ಯೋಗಿ ಶ್ರೀ ಎಸ್. ಎಮ್. ಮಂಜುನಾಥ್ ಅವರು ಕೊಟ್ಟ ಕೆಲವು ಸೂಚನೆಗಳು ಈ ಲೇಖನವನ್ನು ಪರಿಷ್ಕರಿಸಲು ಸಹಾಯಕವಾದುದನ್ನು ಲೇಖಕರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

1. ಸ್ವೀಕಾರ ಪ್ರತಿಚಯನ

ಕೈಗಾರಿಕಾ ಚಟುವಟಿಕೆಯಲ್ಲಿ ವಸ್ತುಗಳ ಲೇವಾದೇವಿ, ಕೈಬದಲಾವಣೆ ದಿನ ನಿತ್ಯದ ಕಾರ್ಯಕ್ರಮ. ಇಂಥ ಸಂದರ್ಭದಲ್ಲಿ ವಸ್ತುಗಳ ಗುಣಮಟ್ಟದ ಬಗ್ಗೆ ಆಸಕ್ತಿ, ಎಚ್ಚರ ಇರುವುದು ಸಹಜ. ವಸ್ತುಗುಣಮಟ್ಟವನ್ನು ಖಾತ್ರಿಮಾಡಿ ಕೊಳ್ಳಲು ಕ್ರಮಬದ್ಧ ಪರಿಶೋಧನೆ ನಡೆಸುವ ಪದ್ಧತಿ ವ್ಯಾಪಕ ಬಳಕೆಯಲ್ಲಿದೆ. ಸ್ವೀಕಾರಕ್ಕೆ ಮೊದಲಿನ ಇಂಥ ಪರಿಶೋಧನೆ ಉತ್ಪಾದನೆಯ ಯಾವುದೇ ಹಂತದಲ್ಲಿ ಬೇಕಾದರೂ ನಡೆಯಬಹುದು. ಕಾರ್ಖಾನೆಗೆ ಬರುವ ಕಚ್ಚಾವಸ್ತು ಮತ್ತು ಬಿಡಿ ಭಾಗಗಳ ಪರಿಶೋಧನೆ. ಉತ್ಪಾದನೆಯ ವಿವಿಧ ಹಂತಗಳಲ್ಲಿ ರೂಪ ತಳೆಯುತ್ತಿರುವ ವಸ್ತುಗಳ ಪರಿಶೋಧನೆ, ಉತ್ಪಾದಕ ರವಾನೆಗೆ ಮುಂಚೆ ನಡೆಸುವ ಸಿದ್ಧವಸ್ತುಗಳ ಪರಿಶೋಧನೆ ಮತ್ತು ಕೊನೆಗೆ ಗ್ರಾಹಕ ನಡೆಸುವ ಪರಿಶೋಧನೆ ಇವು ಕೆಲವು ನಿದರ್ಶನಗಳು. ಯಾವುದೇ ಸಹಜ ತಳಹದಿಯ ಮೇಲೆ ವರ್ಗೀಕರಿಸಲ್ಪಟ್ಟ ಉತ್ಪನ್ನ ಸಮುದಾಯರೂಪದಲ್ಲಿ ಒಂದಾದ ಮೇಲೊಂದರಂತೆ ಪರಿಶೋಧನೆಗೆ ಬರುತ್ತಿದೆ ಎಂದು ಭಾವಿಸೋಣ. ಸಮುದಾಯಗಳನ್ನು ಒಂದೊಂದಾಗಿ ಪರಿಗಣಿಸಿ ಅವನ್ನು ಸ್ವೀಕಾರ ಪರಿಶೋಧನೆಗೆ ಒಳಪಡಿಸುವುದು ಸಾಮಾನ್ಯ ರೂಢಿ. ಈ ಪರಿಶೋಧನೆ ನಡೆಸಲು ಎರಡು ಮಾರ್ಗಗಳಿವೆ. (1) ಸಮುದಾಯದಲ್ಲಿರುವ ಪ್ರತಿಯೊಂದು ವಸ್ತುವನ್ನೂ ಪರೀಕ್ಷಿಸುವುದು (ನೂರಕ್ಕೆ ನೂರು ಪರಿಶೋಧನೆ). (2) ಸಮು ದಾಯದಿಂದ ಪ್ರತಿನಿಧಿಯಾಗಿ ಆಯ್ಕೆಗೊಂಡ ಕೆಲವು ವಸ್ತುಗಳನ್ನು ಮಾತ್ರ ಪರಿ ಶೋಧಿಸುವುದು (ಪ್ರತಿಚಯ ಪರೀಕ್ಷಣೆ). ವ್ಯವಹಾರದಲ್ಲಿ ಎರಡನೆಯ ಮಾರ್ಗದ ಉಪಯೋಗದ ಸಂದರ್ಭಗಳು ಹೆಚ್ಚು. ಇದಕ್ಕೆ ಕಾರಣಗಳು ಹಲವು. (i) ನೂರಕ್ಕೆ ನೂರು ಪರಿಶೋಧನೆಗೆ ತಗಲುವ ಸಮಯ ಹಾಗೂ ವೆಚ್ಚ ಅನೇಕ ವೇಳೆವಿಪರೀತ ಹೆಚ್ಚು. (ii) ಪ್ರತಿಚಯದ ಆಧಾರದ ಮೇಲೆ ಇಡೀ ಸಮುದಾಯವನ್ನೇ ತಿರಸ್ಕರಿಸುವ ಸಾಧ್ಯತೆ ಇರುವುದರಿಂದ ಸಂಬಂಧಪಟ್ಟವರು ಹೆಚ್ಚಿನ ಮುತುವರ್ಜಿ ಯಿಂದ ಕೆಲಸ ಮಾಡುವಂತಾಗುವುದು. (iii) ವಿನಾಶಕಾರಿ ಪರೀಕ್ಷಣೆಯ ಸನ್ನಿವೇಶ ದಲ್ಲಿ ಪ್ರತಿಚಯನ ಅನಿವಾರ್ಯ. ನಿದರ್ಶನ : ವಿದ್ಯುದ್ದೀಪಗಳ ಬಾಳಿಕೆಯನ್ನು ಖಾತ್ರಿ ಮಾಡಿಕೊಳ್ಳಲು ಅವನ್ನು ಸತತವಾಗಿ ಉರಿಸಿ, ಎಷ್ಟು ಕಾಲ ಬಾಳುವವು ಎಂಬುದನ್ನು ಗುರುತಿಸಿಕೊಳ್ಳಲಾಗುವುದು. ಪರೀಕ್ಷಣೆಯ ಬಳಿಕ ಆ ದೀಪಗಳು ಉಪಯೋಗಕ್ಕೆ ಅನರ್ಹವೆಂಬುದನ್ನು ಗಮನಿಸಿ. ಇಂಥವು ವಿನಾಶಕಾರಿ ಪರೀಕ್ಷಣೆ ಗಳು. ಸಮುದಾಯದಲ್ಲಿರುವ ಎಲ್ಲ ವಸ್ತುಗಳ ಪರೀಕ್ಷಣೆ ಇಲ್ಲಿ ಅವ್ಯಾವಹಾರಿಕ. (iv) ಸಮುದಾಯದಲ್ಲಿ ವಸ್ತುಗಳ ಸಂಖ್ಯೆ ಸಾಕಷ್ಟು ದೊಡ್ಡದಿದ್ದಲ್ಲಿ ಅವನ್ನೆಲ್ಲ ಪರಿಶೋಧಿಸುವುದು ನಿರಾಸಕ್ತಿಯ ಮತ್ತು ಆಯಾಸ ತರಿಸುವ ಕೆಲಸ. ಸಮುದಾಯ ದಲ್ಲಿರುವ ನ್ಯೂನತೆಯುತ್ತ ವಸ್ತುಗಳನ್ನೆಲ್ಲ ಉಳಿದವುಗಳಿಂದ ಪ್ರತ್ಯೇಕಿಸುವ ಉದ್ದೇಶ

ವಿದ್ದರೂ ಅದಕ್ಕೆ ನೂರಕ್ಕೆ ನೂರು ಪರಿಶೋಧನೆ ಸಂಪೂರ್ಣ ನಂಬಲರ್ಹ ಎನ್ನುವಂತಿಲ್ಲ; ಯಾಕೆಂದರೆ ಪರೀಕ್ಷಕನ ಆಯಾಸ ನೂರಕ್ಕೆ ನೂರು ಪರೀಕ್ಷಣೆಯ ನಂಬಲರ್ಹತೆಯನ್ನು ಕುಂಠಿತಗೊಳಿಸುತ್ತವೆ. ಅದೇ ರೀತಿ ಯಾವ ಪ್ರತಿಚಯನ ವಿಧಾನವೂ ಸಮುದಾಯದಲ್ಲಿರುವ ನ್ಯೂನತೆಯುಕ್ತ ವಸ್ತುಗಳೆಲ್ಲವನ್ನೂ ನಿವಾರಿಸಲಾರದು ಎಂಬುದೂ ಸ್ಪಷ್ಟ. ನಿಜವಾಗಿ, ಸ್ವೀಕರಿಸಲ್ಪಟ್ಟ ಎಲ್ಲ ವಸ್ತುಗಳೂ ನ್ಯೂನತೆಯುಕ್ತವಾಗಿರಬೇಕೆಂದಾದರೆ ಇರುವ ಏಕೈಕ ಮಾರ್ಗ ಅವೆಲ್ಲವನ್ನೂ ನ್ಯೂನತೆಮುಕ್ತವಾಗಿರುವಂತೆ ಉತ್ಪಾದಿಸುವುದು! ಯಾವುದೇ ಸಂದರ್ಭದಲ್ಲಿ ಉತ್ಪಾದನಾ ಪ್ರಕ್ರಮದ ಉದ್ದಕ್ಕೂ ನಡೆಯುವ ಪರಿಶೋಧನಾ ಕಾರ್ಯದ ಪರಿಮಾಣ ಉತ್ಪಾದಿಸಲ್ಪಡುವ ವಸ್ತುವಿನ ಅಪೇಕ್ಷಿತ ಗುಣಮೌಲ್ಯಕ್ಕೆ ಅನುಗುಣವಾಗಿರಬೇಕು.

ವಸ್ತುಗುಣದ ಪರೀಕ್ಷಣೆಯನ್ನು ಎರಡು ವಿಧಗಳಲ್ಲಿ ನಡೆಸಬಹುದು. (i) ವಸ್ತುವಿನ ಗುಣಲಕ್ಷಣವನ್ನು ಪ್ರತ್ಯಕ್ಷವಾಗಿ ತಿಳಿದು ಸಂಖ್ಯಾರೂಪದಲ್ಲಿ ತಿಳಿಸುವ ಚರಾನುಸಾರ ಪರಿಶೋಧನೆ. (ii) ವಸ್ತು ತೃಪ್ತಿತರ / ತೃಪ್ತಿಕರವಲ್ಲ ಎಂಬುದನ್ನು ಮಾತ್ರ ತಿಳಿಸುವ ಗುಣಾನುಸಾರ ಪರಿಶೋಧನೆ, ಸ್ವೀಕಾರ ಪ್ರತಿಚಯನ ಯೋಜನೆಗಳಲ್ಲಿ ಗುಣಾನುಸಾರ ಪರಿಶೋಧನೆ ಹೆಚ್ಚು ಸಾರ್ವತ್ರಿಕ. ಅಗ ಉಪಯೋಗವಾಗುವ ಕೆಲವು ಮುಖ್ಯ ಯೋಜನೆಗಳ ಪರಿಚಯವನ್ನು ಈ ಲೇಖನ ಮಾಡಿಕೊಡುತ್ತದೆ.

ಒಂದು ವಸ್ತು ನಿಗದಿಗಳಿಗೆ ಅನುಗುಣವಾಗಿದ್ದರೆ ಅದನ್ನು ನ್ಯೂನತೆ - ಮುಕ್ತ ಎನ್ನುತ್ತೇವೆ; ಅನುಗುಣವಾಗಿಲ್ಲದಿದ್ದರೆ ನ್ಯೂನತೆಯುತ್ತ ಎನ್ನುತ್ತೇವೆ. ಲೋಹದ ಚೌಕಪೊಂದರಲ್ಲಿ ಕೊರೆಯಬೇಕಾಗಿರುವ ರಂಧ್ರದ ವ್ಯಾಸದ ನಿಗದಿ: 2 ± 0.1 ಇಂಚು; ಈ ನಿಗದಿಗಳಿಂದ ಹೊರತಾದ ವ್ಯಾಸವುಳ್ಳ ಚೌಕ ನ್ಯೂನತೆಯುಕ್ತ, ಇದೇ ರೀತಿ ಅಥವಾ ಅದಕ್ಕಿಂತ ಅಧಿಕ ಬೆಸುಗೆ ದೋಷಗಳುಳ್ಳ ಟ್ರಾನ್ಸಿಸ್ಟರ್ ರೇಡಿಯೊ, ಅಸಮರ್ಪಕ ಮೆರುಗುಉಳ್ಳ ಲೋಹದಹಾಳೆ ಇವು ನ್ಯೂನತೆಯುಕ್ತ ವಸ್ತುಗಳಿಗೆ ಕೆಲವು ಉದಾಹರಣೆಗಳು. ಹೆಚ್ಚಾಗಿ ಉತ್ಪನ್ನ ಸಮುದಾಯರೂಪದಲ್ಲಿ ಪರೀಕ್ಷಣೆಗೆ ಬರುತ್ತದೆ. ಈ ಸಮುದಾಯಗಳನ್ನು ಒಂದೊಂದಾಗಿ ಪರಿಗಣಿಸಿ, ಅದರಿಂದ ತೆಗೆದುಕೊಂಡ ಪ್ರತಿಚಯಸಾಕ್ಷ್ಯದ ಆಧಾರದಮೇಲೆ ಸಮುದಾಯದ ಸ್ವೀಕಾರ ಅಥವಾ ತಿರಸ್ಕಾರದ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ.

2. ಪ್ರತಿಚಯನ ಯೋಜನೆಗಳು

2.1 ಏಕ ಪ್ರತಿಚಯನ ಯೋಜನೆ

ಪರಿಗಣಿಸಲ್ಪಡುವ ಸಮುದಾಯದಿಂದ ಯಾದೃಚ್ಛಿಕವಾಗಿ ಆರಿಸಲ್ಪಟ್ಟ ವಸ್ತುಗಳ ಒಂದೇ ಒಂದು ಪ್ರತಿಚಯದ ಸಾಕ್ಷ್ಯವನ್ನಾಧರಿಸಿ ಸಮುದಾಯವನ್ನು ಸ್ವೀಕರಿ

ಸುವ ಅಥವಾ ತಿರಸ್ಕರಿಸುವ ನಿರ್ಧಾರ ಕೈಗೊಳ್ಳುವುದು ಏಕಪ್ರತಿಚಯನ ಯೋಜನೆ. ಇಲ್ಲಿ ಮೂರು ಪ್ರಾಚಲಗಳಿವೆ :

(ಅ) ಪರಿಗಣಿಸಲ್ಪಡುವ ಸಮುದಾಯದಲ್ಲಿರುವ ವಸ್ತುಗಳ ಸಂಖ್ಯೆ N.

(ಆ) ಸಮುದಾಯದಿಂದ ಯದೃಚ್ಛಿಕವಾಗಿ ಆರಿಸಲ್ಪಡುವ ಪ್ರತಿಚಯದ ಗಾತ್ರ n.

(ಇ) ಸ್ವೀಕಾರಸಂಖ್ಯೆ c. ಇದು ಸಮುದಾಯ ಸ್ವೀಕೃತವಾಗಬೇಕಾದರೆ ಪ್ರತಿಚಯದಲ್ಲಿರಬಹುದಾದ ನ್ಯೂನತೆಯುಕ್ತ ವಸ್ತುಗಳ ಗರಿಷ್ಠ ಸಂಖ್ಯೆ. ಪ್ರತಿಚಯದಲ್ಲಿ c ಗಿಂತ ಅಧಿಕ ನ್ಯೂನತೆಯುಕ್ತ ವಸ್ತುಗಳಿದ್ದರೆ ಸಮುದಾಯವನ್ನು ತಿರಸ್ಕರಿಸಲಾಗುವುದು.

N, n ಮತ್ತು c ಈ ಮೂರು ಸಂಖ್ಯೆಗಳು ಏಕಪ್ರತಿಚಯನ ಯೋಜನೆಯನ್ನು ನಿಗದಿಪಡಿಸುವುವು.

ಒಂದು ಮಾದರಿ ಏಕಪ್ರತಿಚಯನ ಯೋಜನೆ ಕೆಳಗಿದೆ :

$$\begin{bmatrix} N = & 200 \\ n = & 10 \\ c = & 1 \end{bmatrix}$$

ಈ ಯೋಜನೆಯ ಅರ್ಥವಿವರಣೆ ಹೀಗಿದೆ :

200 ವಸ್ತುಗಳ ಸಮುದಾಯದಿಂದ 10 ವಸ್ತುಗಳ ಯಾದೃಚ್ಛಿಕ ಪ್ರತಿಚಯವನ್ನು ಪಡೆದು ಅದರಲ್ಲಿ ಒಂದಕ್ಕಿಂತ ಹೆಚ್ಚು ನ್ಯೂನತೆಯುಕ್ತ ವಸ್ತುಗಳಿದ್ದರೆ ಸಮುದಾಯವನ್ನು ತಿರಸ್ಕರಿಸಿ ; ಇಲ್ಲದಿದ್ದರೆ ಸಮುದಾಯವನ್ನು ಸ್ವೀಕರಿಸಿ.


2.2 ದ್ವಿಪ್ರತಿಚಯನ ಯೋಜನೆ

ಏಕ ಪ್ರತಿಚಯನದಲ್ಲಿ ಸಮುದಾಯದ ಸ್ವೀಕಾರ/ತಿರಸ್ಕಾರದ ಬಗ್ಗೆ ನಿರ್ಧಾರವನ್ನು ಅದರಿಂದ ಪಡೆದ ಒಂದೇ ಒಂದು ಪ್ರತಿಚಯದ ಆಧಾರದ ಮೇಲೆ ಕೈಗೊಳ್ಳಲಾಗುವುದು. ದ್ವಿಪ್ರತಿಚಯನದಲ್ಲಿ ಸಮುದಾಯದ ಬಗ್ಗೆ ಇಂಥ ನಿರ್ಧಾರವನ್ನು ಎರಡನೆಯ ಪ್ರತಿಚಯವನ್ನು ಪಡೆಯುವ ತನಕ ಮುಂದೂಡುವ ಸಾಧ್ಯತೆ ಇದೆ ; ಅಂದರೆ, ಮೊದಲನೆಯ ಪ್ರತಿಚಯದಲ್ಲಿ ನ್ಯೂನತೆಯುಕ್ತ ವಸ್ತುಗಳ ಸಂಖ್ಯೆ "ಸಾಕಷ್ಟು" ಚಿಕ್ಕದಿದ್ದರೆ ಸಮುದಾಯವನ್ನು ತಕ್ಷಣ ಸ್ವೀಕರಿಸುವುದು ; ಆ ಸಂಖ್ಯೆ "ಸಾಕಷ್ಟು" ದೊಡ್ಡದಿದ್ದರೆ ಸಮುದಾಯವನ್ನು ತಕ್ಷಣ ತಿರಸ್ಕರಿಸುವುದು. ಇವಕ್ಕೂ ವ್ಯತಿರಿಕ್ತವಾಗಿ ಆ ಸಂಖ್ಯೆ ಸಾಕಷ್ಟು ಚಿಕ್ಕದು ಅಥವಾ ದೊಡ್ಡದಾಗಿರದೆ ಮಧ್ಯ


ವರ್ತಿಯಾಗಿದ್ದರೆ, ಆಗ ಸಮುದಾಯದಿಂದ ಇನ್ನೊಂದು ಪ್ರತಿಚಯವನ್ನು ಪಡೆದು, ಎರಡೂ ಪ್ರತಿಚಯಗಳ ಸಮ್ಮಿಲಿತ ಸಾಕ್ಷ್ಯವನ್ನಾಧರಿಸಿ ಸಮುದಾಯದ ಸ್ವೀಕಾರ ಅಥವಾ ತಿರಸ್ಕಾರದ ಬಗ್ಗೆ ನಿರ್ಧಾರ ಕೈಗೊಳ್ಳುವುದು. ದ್ವಿಪ್ರತಿಚಯನ ಯೋಜನೆಯನ್ನು ಪ್ರತೀಕಗಳಲ್ಲಿ ಹೀಗೆ ನಿರೂಪಿಸಬಹುದು : N ವಸ್ತುಗಳ ಸಮುದಾಯದಿಂದ n_1 ವಸ್ತುಗಳ ಮೊದಲನೆಯ ಯಾದೃಚ್ಛಿಕ ಪ್ರತಿಚಯವನ್ನು ಪಡೆದು ಪರಿಶೋಧಿಸಬೇಕು. ಅದರಲ್ಲಿ C_1 ಅಥವಾ ಅದಕ್ಕಿಂತ ಕಡಿಮೆ ನ್ಯೂನತೆಯುಕ್ತ ವಸ್ತುಗಳು ದೊರೆತರೆ, ಸಮುದಾಯವನ್ನು ಸ್ವೀಕರಿಸಬೇಕು ; C_2 ಗಿಂತ ಹೆಚ್ಚು ನ್ಯೂನತೆಯುಕ್ತ ವಸ್ತುಗಳು ದೊರೆತಾಗ ಸಮುದಾಯವನ್ನು ತಿರಸ್ಕರಿಸಬೇಕು. ಮೊದಲನೆಯ ಪ್ರತಿಚಯದಲ್ಲಿ C_1 ಗಿಂತ ಹೆಚ್ಚು ಆದರೆ C_2 ಗಿಂತ ಹೆಚ್ಚಿಲ್ಲದಷ್ಟು ನ್ಯೂನತೆಯುಕ್ತ ವಸ್ತುಗಳು ದೊರೆತರೆ ಆಗ n_2 ವಸ್ತುಗಳ ಎರಡನೆಯ ಯಾದೃಚ್ಛಿಕ ಪ್ರತಿಚಯವನ್ನು ಪಡೆದು ಪರಿಶೋಧಿಸಬೇಕು. ಎರಡೂ ಪ್ರತಿಚಯಗಳಲ್ಲಿ ದೊರೆತ ನ್ಯೂನತೆಯುಕ್ತ ವಸ್ತುಗಳ ಒಟ್ಟು ಸಂಖ್ಯೆಯನ್ನು C_2ಗೆ ಹೋಲಿಸಿ ಆ ಸಂಖ್ಯೆ C_2ಗೆ ಸಮವಾಗಿದ್ದರೆ ಅಥವಾ ಅದಕ್ಕಿಂತ ಕಡಿಮೆ ಇದ್ದರೆ ಆಗ ಸಮುದಾಯವನ್ನು ಸ್ವೀಕರಿಸಬೇಕು, ಇಲ್ಲದಿದ್ದರೆ ಸಮುದಾಯವನ್ನು ತಿರಸ್ಕರಿಸಬೇಕು. ಮಾದರಿ ದ್ವಿಪ್ರತಿಚಯನ ಯೋಜನೆ: $N = 3000, \quad n_1 = 100, \quad C_1 = 2$

$$n_2 = 200, \quad C_2 = 5$$

ಏಕ ಮತ್ತು ದ್ವಿಪ್ರತಿಚಯನ ಯೋಜನೆಗಳನ್ನು ನಕ್ಷೆಗಳಲ್ಲಿ ಈ ರೀತಿ ಪ್ರದರ್ಶಿಸಬಹುದು :



(i) ಏಕ ಪ್ರತಿಚಯನ ಯೋಜನೆ



(ii) ದ್ವಿಪ್ರತಿಚಯನ ಯೋಜನೆ


2.3 ಕ್ರಮಶಃ ಪ್ರತಿಚಯನ ಯೋಜನೆಗಳು

ದ್ವಿಪ್ರತಿಚಯನ ಯೋಜನೆಯಲ್ಲಿ ಮಧ್ಯವರ್ತಿ ಗುಣಮಟ್ಟದ ಸಮುದಾಯಗಳಿಗೆ, ಅವುಗಳಿಂದ ಎರಡನೆಯ ಪ್ರತಿಚಯವನ್ನು ಪಡೆಯುವ ಮೂಲಕ, ಸ್ವೀಕರಿಸಲ್ಪಡುವ ಇನ್ನೊಂದು ಅವಕಾಶನೀಡುವ ವಿಚಾರವಿದೆ. ಇದರ ಸಹಜ, ತಾರ್ಕಿಕ, ವಿಸ್ತೃತರೂಪವಾಗಿ ಕ್ರಮಶಃ ಪ್ರತಿಚಯನ ಯೋಜನೆಗಳನ್ನು ರಚಿಸಬಹುದು. ಈ ಯೋಜನೆಗಳ ಸ್ಥೂಲರೂಪ ಹೀಗಿದೆ : N ವಸ್ತುಗಳ ಸಮುದಾಯದಿಂದ n_1 ವಸ್ತುಗಳ, ಯಾದೃಚ್ಛಿಕವಾಗಿ ಪಡೆದ, ಪ್ರತಿಚಯದ ಪರಿಶೋಧನೆ, ದೊರೆತ ನ್ಯೂನತೆಯುಕ್ತ ವಸ್ತುಗಳ ಸಂಖ್ಯೆ m_1. $m_1 \leqslant c_1$ ಆಗಿರುವಾಗ ಸಮುದಾಯ ಸ್ವೀಕೃತ. $m_1 > c_2$ ಆಗಿರುವಾಗ ಅದು ತಿರಸ್ಕೃತ. $c_1 < m_1 \leqslant c_2$ ಆಗಿರುವಾಗ n_2 ವಸ್ತುಗಳ ಯಾದೃಚ್ಛಿಕವಾಗಿ ಪಡೆದ ಎರಡನೆ ಪ್ರತಿಚಯದ ಪರಿಶೋಧನೆ ; ಮೊದಲನೆ ಹಾಗೂ ಎರಡನೆ ಪ್ರತಿಚಯಗಳಲ್ಲಿ ದೊರೆತ ನ್ಯೂನತೆಯುಕ್ತ ವಸ್ತುಗಳ ಒಟ್ಟು ಸಂಖ್ಯೆ $m_1 + m_2$; $m_1 + m_2 \leqslant c_2$ ಆಗಿರುವಾಗ ಸಮುದಾಯ ಸ್ವೀಕೃತ ; $m_1 + m_2 > c_3$ ಆಗಿರುವಾಗ ಅದು ತಿರಸ್ಕೃತ. $c_2 < m_1 + n_2 \leqslant c_3$ ಆಗಿರುವಾಗ n_3 ವಸ್ತುಗಳ ಮೂರನೆ ಯಾದೃಚ್ಛಿತ ಪ್ರತಿಚಯವನ್ನು ಪಡೆದು ಅದರ ಪರಿಶೋಧನೆ, ಇತ್ಯಾದಿ.

ಈ ಪರಿಶೋಧನಾವಿಧಾನದಲ್ಲಿ ಹಲವು (k) ಪ್ರತಿಚಯುಗಳಿರಬಹುದು. k ಪ್ರತಿಚಯುಗಳಲ್ಲಿ ವಿಧಾನ ಖಚಿತವಾಗಿ ಕೊನೆಗೊಳ್ಳುವಂತೆ ಮಾಡಲು ; $C_{k+1} = C_k + 1$ ಎಂದಿರಿಸಿಕೊಂಡರಾಯಿತು. ಅಂದರೆ k ಪ್ರತಿಚಯುಗಳಾದ ಬಳಿಕ ಸಮುದಾಯದ ಸ್ವೀಕಾರ ಅಥವಾ ತಿರಸ್ಕಾರ ಖಚಿತ ; C_{k+1} ಮತ್ತು C_k ಗಳ ವ್ಯತ್ಯಾಸ ಕೇವಲ ಒಂದು ಇರುವುದರಿಂದ ಪ್ರತಿಚಯುನವನ್ನು ಮುಂದುವರಿಸಬೇಕಾದ ಪ್ರಸಂಗವಿಲ್ಲ. ವ್ಯವಹಾರದಲ್ಲಿ $n_1 = n_2 = \cdots = n_k$ ಆಗಿರುವ ಸಂದರ್ಭಗಳೇ ಹೆಚ್ಚು. ಇಂಥ ಒಂದು ನಿದರ್ಶನ ಕೆಳಗಿದೆ :

ಪ್ರತಿಚಯು	ಪ್ರತಿಚಯು ಗಾತ್ರ	ಸ್ವೀಕಾರ ಸಂಖ್ಯೆ
1	500	1
2	500	3
3	500	5
4	500	6

ಅಂದರೆ 500 ವಸ್ತುಗಳ ಮೊದಲ ಪ್ರತಿಚಯುದಲ್ಲಿ ದೊರೆತ ನ್ಯೂನತೆಯುಕ್ತ ವಸ್ತುಗಳ ಸಂಖ್ಯೆ 0 ಅಥವಾ 1 ಆಗಿದ್ದಲ್ಲಿ ಸಮುದಾಯ ಸ್ವೀಕೃತ, 67 ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಅದು ತಿರಸ್ಕೃತ, ಉಳಿದ ಸನ್ನಿವೇಶಗಳಲ್ಲಿ ಎರಡನೆ ಪ್ರತಿಚಯುದ ಆಯ್ಕೆ. ಮೊದಲ ಹಾಗೂ ಎರಡನೆ ಪ್ರತಿಚಯುಗಳಿಂದ ದೊರೆತ ನ್ಯೂನತೆಯುಕ್ತ ವಸ್ತುಗಳ ಒಟ್ಟುಸಂಖ್ಯೆ $\leqslant 3$ ಆಗಿದ್ದಲ್ಲಿ ಸಮುದಾಯವನ್ನು ಸ್ವೀಕರಿಸಬೇಕು, $\geqslant 7$ ಆಗಿದ್ದಲ್ಲಿ ಅದನ್ನು ತಿರಸ್ಕರಿಸಬೇಕು. ಆ ಸಂಖ್ಯೆ 4, 5 ಅಥವಾ 6 ಆಗಿದ್ದಲ್ಲಿ 500 ವಸ್ತುಗಳ ಮೂರನೆ ಪ್ರತಿಚಯುವನ್ನು ತೆಗೆದುಕೊಳ್ಳಬೇಕು. ಹೀಗೆಯೆ, ಅಗತ್ಯಬಿದ್ದಲ್ಲಿ, ಮುಂದುವರಿದು ಐದೂ ಪ್ರತಿಚಯುಗಳ



ಚಿತ್ರ 1.

ಒಟ್ಟುಸಾಕ್ಷ್ಯದಲ್ಲಿ ನ್ಯೂನತೆಯುಕ್ತ ವಸ್ತುಗಳ ಒಟ್ಟುಸಂಖ್ಯೆ $\leqslant 6$ ಆಗಿದ್ದಾಗ ಸಮುದಾಯದ ಸ್ವೀಕಾರ; ಹೀಗಲ್ಲದಿದ್ದಾಗ ಸಮುದಾಯದ ತಿರಸ್ಕಾರ.


ಕೆಲವು ಸಂದರ್ಭಗಳಲ್ಲಿ $n_1 = n_2 = \cdots = 1$ ಆಗಿರುವುದಿದೆ. ಅಂದರೆ ಒಂದೊಂದೇ ವಸ್ತುವನ್ನು ಆರಿಸಿ ಪರಿಕ್ಷಿಸುತ್ತ ಹೋಗಿ ಪ್ರತಿ ಪರೀಕ್ಷೆಯ ಬಳಿಕ ಸಮುದಾಯದ ಸ್ವೀಕಾರ, ತಿರಸ್ಕಾರ ಅಥವಾ ಪರಿಶೋಧನೆಯ ಮುಂದುವರಿಕೆಯ ಬಗ್ಗೆ ನಿರ್ಧಾರ ಕೈಗೊಳ್ಳಬೇಕು. $r\ (= 1, 2, \cdots)$ ವಸ್ತುಗಳ ಪರಿಶೋಧನೆಯಾಗಿರುವಾಗ ಯೋಜನೆಯ ನಿಯಮಗಳನ್ನು ಚಿತ್ರ 1 ನಿರೂಪಿಸುತ್ತದೆ.

3. ಯೋಜನೆಯ ರಚನೆ ಹಾಗೂ ಆಯ್ಕೆಯಲ್ಲಿ ಪರಿಗಣಿಸಬೇಕಾಗಿರುವ ಕೆಲವು ಪರಿಕಲ್ಪನೆಗಳು.

3.1 AQL ಹಾಗೂ α: ಸ್ವೀಕಾರ ಪ್ರತಿಚಯನ ಯೋಜನೆಯನ್ನು ರೂಪಿಸುವಾಗ ಅಥವಾ ಸಿದ್ಧ ಕೋಷ್ಟಕಗಳಿಂದ ಆಯ್ಕೆಮಾಡುವಾಗ ಉತ್ಪಾದಕ, ಪರಿಶೋಧಕ ಮತ್ತು ಬಳಕೆದಾರ ಈ ಮೂವರ ಆಸಕ್ತಿಗಳನ್ನೂ ಗಮನಿಸಬೇಕಾದುದು ಅವಶ್ಯ. ಬಳಕೆದಾರ ತಾನು ಅಪೇಕ್ಷಿಸುವ ಗುಣಮಟ್ಟವನ್ನು ಸಮುದಾಯದ ನ್ಯೂನತೆಯುಕ್ತ ವಸ್ತುಗಳ ಪ್ರಮಾಣದ ಮೂಲಕ ನಿಗದಿಪಡಿಸುತ್ತಾನೆ. ಇದು ಬಳಕೆದಾರನ ಸ್ವೀಕಾರಾರ್ಹ ಗುಣಮಟ್ಟ ಅಥವಾ AQL (= Acceptable Quality Level). ಈ ನಿಬಂಧನೆಯನ್ನು ತೃಪ್ತಿಪಡಿಸುವ ಸಮುದಾಯದ ಸ್ವೀಕಾರ ಸಂಭವತೆ ಆದಷ್ಟು ಹೆಚ್ಚಾಗಿರಬೇಕೆಂದು ಉತ್ಪಾದಕ ಬಯಸುವವನು. ಅಂದರೆ ಅವನು ತೃಪ್ತಿಕರ ಸಮುದಾಯದ ತಿರಸ್ಕಾರ ಸಾಧ್ಯತೆಯನ್ನು ಸ್ವಲ್ಪಮಟ್ಟಿಗೆ ಮಾತ್ರ ಎದುರಿಸುವಂತಿರಬೇಕು. ಗುಣಮಟ್ಟ AQLಗೆ ಸಮವಿರುವ ಸಮುದಾಯದ ತಿರಸ್ಕಾರ ಸಂಭವತೆಯನ್ನು α ಎಂದು ಸೂಚಿಸುತ್ತಾರೆ. ಇದಕ್ಕೆ ಉತ್ಪಾದಕನೆದುರಿಸುವ ಅಪಾಯಸಂಭವತೆ ಎಂದು ಹೆಸರು.


3.2 LTPD **ಹಾಗೂ** β: ರಾಶಿಗಳ ಗುಣಮಟ್ಟ AQL ಗಿಂತ ಕೆಳಗಿದ್ದರೂ ಅವು ಸ್ವೀಕರಿಸಲ್ಪಡುವುದನ್ನು ಗ್ರಾಹಕ ಹಲವು ಸಲ ಸಹಿಸಬಹುದು. ಅವನು ಈ ಸಹನ ಮಿತಿಯನ್ನು ಸಮುದಾಯದ ನ್ಯೂನತೆಯುಕ್ತವಸ್ತುಗಳ ಪ್ರಮಾಣ, LTPD (Lot Tolerance Proportion Defective)ಯ ಮೂಲಕ ನಿಗದಿಪಡಿಸುತ್ತಾನೆ. ಅಂಥ ರಾಶಿಗಳ ಸ್ವೀಕಾರ ಸಂಭವತೆ β ಅವನೆದುರಿಸುವ ಅಪಾಯ ಸಂಭವತೆ. AQL ಗ್ರಾಹಕನ ಬೇಡಿಕೆಯನ್ನು ತಿಳಿಸುವುದಾದರೆ LTPD ಅವನ ದೃಷ್ಟಿಯಲ್ಲಿ ತೃಪ್ತಿಕರವಲ್ಲದ ಸಮುದಾಯಗಳನ್ನು ತೃಪ್ತಿಕರ ಸಮುದಾಯಗಳಿಂದ ಬೇರ್ಪಡಿಸುತ್ತದೆ.

3.3 ನಿರ್ವಾಹಕ ಲಕ್ಷಣ (OC) ವಕ್ರ : ಸಮುದಾಯದ ಗುಣಮಟ್ಟ ವನ್ನು ಆವರಲ್ಲಿರುವ ನ್ಯೂನತೆಯುಕ್ತ ವಸ್ತುಗಳ ಪ್ರಮಾಣ (p) ಸೂಚಿಸುತ್ತದೆ. ಆದ್ದರಿಂದ $P=O$ ಆಗಿರುವಾಗಿ ಸಮುದಾಯದಲ್ಲಿ ನ್ಯೂನತೆಯುಕ್ತವಸ್ತುಗಳೇ ಇಲ್ಲದಿರುವುದರಿಂದ ಅದು ಪರಿಪೂರ್ಣ. ಇದಕ್ಕೆ ವ್ಯಾಸೀಯವಿರುದ್ಧವಾಗಿ $p=1$ ಆಗಿರುವಾಗ ಸಮುದಾಯದಲ್ಲಿರುವ ವಸ್ತುಗಳೆಲ್ಲ ನ್ಯೂನತೆಯುಕ್ತ. ಹೀಗಾಗಿ, p ಯ ಮೌಲ್ಯ ಸೊನ್ನೆಯಿಂದ ಒಂದರ ಕಡೆಗೆ ಸರಿದಂತೆ ಗುಣಮಟ್ಟ ಇಳಿಮುಖವಾಗುವುದೆಂಬದನ್ನು ಗಮನಿಸಿ. ಗುಣಮಟ್ಟದ ಏರಿಳಿತಕ್ಕೆ ಅನುರೂಪವಾಗಿ ಸಮುದಾಯಗಳ ಮೇಲೆ ಪ್ರತಿಚಯನ ಯೋಜನೆಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ನಾಲ್ಕು ವಿಶಿಷ್ಟ ವಕ್ರ ರೇಖೆಗಳು ತೋರಿಸುತ್ತವೆ. ಅವುಗಳ ಪೈಕಿ ಪ್ರಮುಖವಾದುದು ನಿರ್ವಾಹಕ ಲಕ್ಷಣ ರೇಖೆ. ಇದನ್ನು ಸಂಕ್ಷೇಪವಾಗಿ ನಿಲ ವಕ್ರರೇಖೆ ಎಂದು ಕರೆಯೋಣ. ಸಮುದಾಯದ ಗುಣಮಟ್ಟ pಗೆ ಅನುರೂಪವಾಗಿ ದತ್ತಯೋಜನೆ ಸಮುದಾಯವನ್ನು ಸ್ವೀಕರಿಸುವ ಸಂಭವತೆ (p_a) ಯನ್ನು ನಿಲವಕ್ರರೇಖೆ ಚಿತ್ರಿಸುತ್ತದೆ. pಯ ಮೌಲ್ಯ ಹೆಚ್ಚಾದಂತೆ ಗುಣಮಟ್ಟ ಇಳಿಯುತ್ತಿರುವುದರಿಂದ ಸಮುದಾಯದ ಸ್ವೀಕಾರ ಸಂಭವತೆ ಕೂಡ ಇಳಿಯುತ್ತಿರಬೇಕಾದ್ದು ಸ್ವಾಭಾವಿಕ ಪರಿಸ್ಥಿತಿ. ಚಿತ್ರ 2 ಒಂದು ಮಾದರಿ ನಿಲವಕ್ರರೇಖೆಯನ್ನು ತೋರಿಸುತ್ತದೆ.



ಚಿತ್ರ 2 ನಿಲವಕ್ರರೇಖೆ

ತೃಪ್ತಿಕರ ಮತ್ತು ಅತೃಪ್ತಿಕರ ಸಮುದಾಯುಗಳ ನಡುವೆ ವಿವೇಚಿಸುವಯೋಜನೆಯ ಸಾಮರ್ಥ್ಯವನ್ನು ನಿಲವಕ್ರರೇಖೆ ತೋರಿಸುತ್ತದೆ. ಈ ವಕ್ರ ಕಡಿದಾದಂತೆ ಅಂಥ ಸಾಮರ್ಥ್ಯ ಹೆಚ್ಚು. ನಿಜವಾಗಿ, ಒಂದು ಆದರ್ಶಯೋಜನೆ AQL ಗುಣಮಟ್ಟದ ಅಥವಾ ಅದಕ್ಕಿಂತ ಉತ್ತಮ ಸಮುದಾಯುಗಳನ್ನೆಲ್ಲ ಸ್ವೀಕರಿಸಬೇಕು; ಉಳಿದವನ್ನೆಲ್ಲ ತಿರಸ್ಕರಿಸಬೇಕು. ನಿದರ್ಶನ: 2% ಅಥವಾ ಅದಕ್ಕಿಂತ ಕಡಿಮೆ ನ್ಯೂನತೆಯುಕ್ತವಸ್ತುಗಳುಳ್ಳ ಸಮುದಾಯುಗಳು ತೃಪ್ತಿಕರ, ಉಳಿದವು ಅತೃಪ್ತಿಕರ ಎಂದು ಭಾವಿಸುವುದಾದರೆ. 2% ಅಥವಾ ಅದಕ್ಕಿಂತ ಕಡಿಮೆ ನ್ಯೂನತೆಯುಕ್ತವಸ್ತುಗಳುಳ್ಳ ಸಮುದಾಯುಗಳನ್ನೆಲ್ಲ ಖಚಿತವಾಗಿ ಸ್ವೀಕರಿಸುವಂತಿರಬೇಕು. (ಅಂದರೆ ಅಂಥ ಸಮುದಾಯುಗಳ ಸ್ವೀಕಾರಸಂಭವತೆ 1.) ಉಳಿದವನ್ನು ಖಚಿತವಾಗಿ ತಿರಸ್ಕರಿಸುವಂತಿರಬೇಕು. (ಅಂದರೆ ಅಂಥ ಸಮುದಾಯುಗಳ ಸ್ವೀಕಾರ ಸಂಭವತೆ 0.) ಹೀಗಾಗಿ ಈ ಆದರ್ಶ ಪ್ರತಿಚಯನ ಯೋಜನೆಯ ನಿಲವಕ್ರ $p=0.02$ನಲ್ಲಿ ಕ್ಷಿತಿಜ ರೇಖೆಗೆ ಲಂಬ.



ಚಿತ್ರ 3 ಆದರ್ಶ ಯೋಜನೆಯ ನಿಲವಕ್ರ

ATI, AOQ ಹಾಗೂ AOQL

ತಿರಸ್ಕೃತ ಸಮುದಾಯುದಲ್ಲಿ ಪರಿಶೋಧಿಸದ ವಸ್ತುಗಳೆಲ್ಲವನ್ನೂ ಪರಿಶೋಧಿಸಿ ಅಲ್ಲಿರುವ ನ್ಯೂನತೆಯುಕ್ತ ವಸ್ತುಗಳೆಲ್ಲವನ್ನೂ ಸರಿಪಡಿಸಿ ಇಲ್ಲವೆ ತೃಪ್ತಿಕರ ವಸ್ತು

ಗಳಿಗೆ ಬದಲಿಸುವ ಕಾರ್ಯನೀತಿಯನ್ನು ಕೆಲವೊಮ್ಮೆ ಪಾಲಿಸುವುದಿದೆ. ಹೀಗೆ ಮಾಡುವುದರಿಂದ ಅಂಥ ಸಮುದಾಯದ ಎಲ್ಲ ವಸ್ತುಗಳನ್ನೂ ಪರಿಶೋಧಿಸಿ ದಂತಾಯಿತು. ಅಂದರೆ ಸ್ವೀಕೃತ ಸಮುದಾಯಗಳಿಗೆ ಪ್ರತಿಚಯ ಪರಿಶೋಧನೆ ಮತ್ತು ತಿರಸ್ಕೃತ ಸಮುದಾಯಗಳಿಗೆ 100 % ಪರಿಶೋಧನೆ ಅನ್ವಯಿಸಿದಂತಾಯಿತು. ಹೀಗಾಗಿ ಈ ವಿಧಾನ ತಿರಸ್ಕೃತ ಸಮುದಾಯಗಳಿಗೆ ಗತಿ ಕಾಣಿಸಲು ಒಂದು ಏರ್ಪಾಡನ್ನು ಕಲ್ಪಿಸಿಕೊಡುತ್ತದೆ. ಇಲ್ಲಿ ಗಮನಿಸಬೇಕಾದುದು ಒಟ್ಟು ಸರಾಸರಿ ಪರಿಶೋಧನೆ, ATI (= Average Total Inspection), ಈ ಸರಾಸರಿ ಮೌಲ್ಯ ಸಮುದಾಯದ ಸ್ವೀಕಾರ ಸಂಭವತೆ P_a ಯ ಉತ್ಪನ್ನ. ಪರಿಶೋಧನೆಯನ್ನು ಸಂಪೂರ್ಣವಾಗಿ ಮುಗಿಸಿ ಹೊರಬೀಳುವ ಸಮುದಾಯಗಳ ಬೇರೆ ಬೇರೆ ಗುಣಮಟ್ಟಗಳಿಗೆ ಅನುಗುಣವಾಗಿ AOQ ನ ಮೌಲ್ಯ ಬದಲಾಗುತ್ತದೆ. ಅದರ ಗರಿಷ್ಠ ಮೌಲ್ಯ ಹೊರಬೀಳುವ ಸಮುದಾಯಗಳ ಸರಾಸರಿ ಗುಣಮಟ್ಟದ ಮಿತಿ, AOQL (= Average Outgoing Quality Limit).

4. ಪ್ರತಿಚಯ ಯೋಜನೆಗಳನ್ನು ನೀಡುವ ಕೆಲವು ಕೋಷ್ಟಕಗಳು

ಏಕ ಪ್ರತಿಚಯನದ ಯೋಜನೆ ಬಳಕೆಗೆ ಅತ್ಯಂತ ಸುಲಭ. ಆದರೆ ದ್ವಿ ಹಾಗೂ ಕ್ರಮಶಃ ಪ್ರತಿಚಯನ ಯೋಜನೆಗಳು ಒಟ್ಟು ಸರಾಸರಿ ಪರಿಶೋಧನೆಯನ್ನು ಸಾಕಷ್ಟು ಕಡಿಮೆಮಾಡುತ್ತವೆ. ಏಕ, ದ್ವಿ ಅಥವಾ ಕ್ರಮಶಃ ಪ್ರತಿಚಯನ ಇವುಗಳ ಪೈಕಿ ಯಾವುದನ್ನು ಉಳಿಸಬೇಕು ಎನ್ನುವುದನ್ನು ನಿರ್ಧರಿಸುವಾಗ ಪರಿಶೋಧಕ ಹೊರಬಹುದಾದ ಕಾರ್ಯಭಾರ, ಅವನಿಗಿರುವ ಅನುಕೂಲತೆ ಮತ್ತು ಇತರ ಭೌತಿಕ ಸ್ಥಿತಿಗತಿಗಳನ್ನು ಗಮನಿಸಬೇಕು.

ಗ್ರಾಹಕ ತಾನು ಅಪೇಕ್ಷಿಸುವ ಗುಣಮಟ್ಟ ಹಾಗೂ ಎದುರಿಸಲು ಸಿದ್ಧವಿರುವ ಅಪಾಯ ಸಂಭವತೆ—ಇವನ್ನು ನಿಗದಿಪಡಿಸುತ್ತಾನೆ. ಉತ್ಪಾದಕ ತನ್ನ ಪ್ರಕ್ರಮದಲ್ಲಿ ಸೂಕ್ತವಾದ ಹೊಂದಾಣಿಕೆಗಳನ್ನು ಮಾಡಿ ಗುಣಮಟ್ಟಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಪೂರೈಸುವ ಪರಿಶೋಧನಾ ಯೋಜನೆಯೊಂದನ್ನು ಕೈಗೊಳ್ಳಬೇಕು. ಮೇಲೆ ವಿವರಿಸಿದ ಪರಿಕಲ್ಪನೆಗಳು ಸೂಕ್ತ ಯೋಜನೆಯ ರಚನೆ ಅಥವಾ ಆಯ್ಕೆಯಲ್ಲಿ ಸಹಾಯಕವಾಗುತ್ತದೆ. ಪರಿಶೋಧನೆಯ ಉದ್ದೇಶ, ಅದನ್ನು ಕೈಗೊಳ್ಳುತ್ತಿರುವ ಹಂತ ಹಾಗೂ ವಸ್ತು ಪಡೆದಿರಬೇಕಾದ ಗುಣಮೌಲ್ಯ ಇವನ್ನು ಗಮನಿಸಿ ಪ್ರತಿಚಯನ ಯೋಜನೆಯ ರಚನೆಯಲ್ಲಿ ಕೆಲವು ತತ್ವಗಳನ್ನು ಬಳಸಲಾಗುತ್ತದೆ. ಈ ತತ್ವಗಳು ಆಗಲೇ ವಿವರಿಸಿದ ಪರಿಕಲ್ಪನೆಗಳ ಮೂಲಕ ನಿರೂಪಿಸಲ್ಪಡುತ್ತವೆ. ಉದಾಹರಣೆಗೆ, ATI ಕನಿಷ್ಠವಾಗಿರುವಂಥ ದ್ವಿಪ್ರತಿಚಯನ ಯೋಜನೆ, ನಿರ್ದಿಷ್ಟ AQL ನ್ನು ಖಾತ್ರಿಪಡಿಸುವ ಯೋಜನೆ-ಇತ್ಯಾದಿ.

ವಿಶಿಷ್ಟ ತತ್ವಗಳನ್ನು ಆಧರಿಸಿ ತಯಾರಿಸಲಾದ ಯೋಜನೆಗಳ ಕೋಷ್ಟಕಗಳಲ್ಲಿ ಮುಖ್ಯವಾದವು ಎರಡು :

1. Sampling Inspection Plans. Single and Double Sampling (2nd ed. by Dodge H. F. and Romig H. G. (John Wiley and Sons).

—ಡಾಟ್ ರೋಮಿಗ್ ಕೋಷ್ಟಕಗಳು

2. Military Standard Sampling Procedures and Tables for Inspection by Attributes (MIL STD 105 D) (U.S. Department of Defence).

—ABC ಸ್ಟ್ಯಾಂಡರ್ಡ್

ಗೊತ್ತುಪಡಿಸಿದ LTPD ಅಥವಾ AOQL ಮತ್ತು p^1 ನ ವಿವಿಧ ಮೌಲ್ಯಗಳಿಗನು ಗುಣವಾಗಿ ಏಕ ಹಾಗೂ ದ್ವಿಪ್ರತಿಚಯನ ಯೋಜನೆಗಳನ್ನು ಡಾಜ್–ರೋಮಿಂಗ್ ಕೋಷ್ಟಕ ನೀಡುತ್ತದೆ. ATI ಕನಿಷ್ಠವಾಗಿರುವಂತೆ ಇಲ್ಲಿರುವ ಯೋಜನೆಗಳನ್ನು ರೂಪಿಸಲಾಗಿದೆ. CR = 0·10 ಎಂದು ತೆಗೆದುಕೊಂಡಿರುವ ಈ ಯೋಜನೆಗಳ ನಿಲವತ್ತ ರೇಖೆಗಳನ್ನೂ ಚಿತ್ರಿಸಲಾಗಿದೆ.

ಆದರೆ ABC ಸ್ಟ್ಯಾಂಡರ್ಡ್‌ನಲ್ಲಿ ವಿವಿಧ AQL ಮೌಲ್ಯಗಳಿಗೆ ದೊರೆಯುವ ಏಕ, ದ್ವಿ ಹಾಗೂ ಕ್ರಮಶಃ ಪ್ರತಿಚಯನ ಯೋಜನೆಗಳ ಮುಖ್ಯ ಉದ್ದೇಶ ಮೊದಲೇ ನಿರ್ಧರಿಸಲ್ಪಟ್ಟ ಗುಣಮಟ್ಟವನ್ನು ಉತ್ಪಾದಕ ಕಾಪಾಡಿಕೊಂಡು ಬರುವಂತೆ ನೋಡಿಕೊಳ್ಳುವುದು. ಒಬ್ಬ ಉತ್ಪಾದಕ ಪೂರೈಸುವ ವಸ್ತುಗುಣವನ್ನು ಸ್ವಲ್ಪಕಾಲ ಅಭ್ಯಸಿಸಿ ಬಳಿಕ ಪರಿಶೋಧನೆಯನ್ನು ಸಡಿಲು ಇಲ್ಲವೆ ಬಿಗಿಗೊಳಿಸಲು ಸ್ಪಷ್ಟ ಅವಕಾಶವಿರುವುದು ABC ಸ್ಟ್ಯಾಂಡರ್ಡ್‌ನ ವೈಶಿಷ್ಟ್ಯ. ಪ್ರತಿಚಯ ಗಾತ್ರಗಳ ಬದಲಾವಣೆಯ ಮೂಲಕ ಇದು ಸಾಧ್ಯವಾಗಿದೆ. ಈ ಕೋಷ್ಟಕ ಅದರಲ್ಲಿರುವ ಯೋಜನೆಗಳ ನಿಲವಕ್ರ ರೇಖೆಗಳನ್ನೂ ತೋರಿಸುತ್ತದೆ.

5. ಹೆಚ್ಚಿನ ಓದಿಗಾಗಿ

(i) Grant, E. L. : Statistical Quality Control (4th ed.) (McGrow Hill-Kogakusha)

(ii) Duncan, A. J. : Quality Control and Industrial Statistics (Taraporevala-Irwin)

ವಿದ್ಯಾಪತಿಯ ಪ್ರೇಮಗೀತೆಗಳು

ಅನು : ಎಂ. ಎಸ್. ಜೈಪ್ರಕಾಶ್

ನದಿಯ ತೀವ್ರ ಸೆಳೆತಕ್ಕೆ ಸಿಕ್ಕಿ
ದೋಣಿ ಹೊಯ್ದಾಡ ತೊಡಗಿತು.
ಆದರೆ ಕೃಷ್ಣ ಚಿಕ್ಕವ ;
ದೋಣಿ ನಡೆಸಲಾರನವನು, ಅದಕ್ಕೇ
ನಾನು ನದಿಯ ಉದ್ದ ಈಜುಬಿದ್ದೆ :

ನನ್ನ ಕೈಯ ಬಳೆ ಒಡೆದುಹೋಯ್ತು,
ತುಂಡಾಯಿತು ಬಂಗಾರದ ಕೊರಳ ಸರ.
ಗೆಳತಿ, ಓ, ಗೆಳತಿ,
ಗದರಿಸಬೇಡ ನನ್ನ ಬಿರುಸು ಮಾತುಗಳಲ್ಲಿ.
ಕಿವಿಯೋಲೆಗಳು ಕಳಚಿಹೋದವು ನೀರಿನಲ್ಲಿ ;
ಮುಸ್ಸಂಜೆತನಕ ಹುಡುಕಾಡಿದೆ ಅವುಗಳಿಗಾಗಿ.
ಮುಖ–ಪ್ರಸಾಧನವೆಲ್ಲ ತೊಳೆದುಹೋಗಿ
ಶುಭ್ರವಾಗಿ ಕಾಣುತಿದೆ ಚಂದ್ರನಂತೆ
ಈಗ ನನ್ನ ಮುಖ.
ನದಿಯ ದಡಗಳಲ್ಲಿ ಅಲೆಯುತ್ತಿರುವಾಗ
ಪೊದೆ ಮುಳ್ಳುಗಳು ಗೀರಿ
ತರಿದುಹೋದವು ನನ್ನ ಸ್ತನಗಳೆಲ್ಲ.

ವಿದ್ಯಾಪತಿ ಹೇಳುತ್ತಾನೆ :
ಎಷ್ಟು ಹೌದೆಂಬಂತೆ ಮಾತಾಡುತ್ತಿರುವೆ—
ಜನರು ನಿನ್ನ ನಂಬಿದರೂ ನಂಬಬಹುದು !

ಚಿತ್ರಕವಿತ್ವ

ಪಿ. ಬಸವಣ್ಣ

ಚಿತ್ರಕವಿತ್ವವೆಂದಾಕ್ಷಣ ಬಹುಶಃ ಚಲನಚಿತ್ರಗೀತೆಗಳ ರಚನೆ ಎಂದು ಕೆಲವರು ಭಾವಿಸಬಹುದು. ಛಂದೋಬದ್ಧ ಕವಿತೆಯನ್ನೇ ಇಂದಿನ ಪೀಳಿಗೆಯ ಕೆಲವರು ಹಾಗೆ ಭಾವಿಸಿದರೆ ಆಶ್ಚರ್ಯವೇನಿಲ್ಲ. ಆದರೆ ಚಿತ್ರಕವಿತ್ವಕ್ಕೂ ಚಲನಚಿತ್ರಗೀತೆಗಳಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಅಂತಿದ್ದರೂ ಹಾಗೆ ಭಾವಿಸಲು ಆ ಹೆಸರು ಕಾರಣವಾಗಬಹುದು.

ಅಕ್ಷರಗಳನ್ನೂ ಪದಗಳನ್ನೂ ಚಾಕಚಕ್ಯತೆಯಿಂದ ಛಂದೋಬದ್ಧವಾಗಿ ಜೋಡಿಸಿ ಶಬ್ದವೈಚಿತ್ರ್ಯ, ಅರ್ಥವೈಚಿತ್ರ್ಯ, ಬಂಧವೈಚಿತ್ರ್ಯವನ್ನೆಸಗಿ ಓದುಗನ ಮನಸ್ಸಿನಲ್ಲಿ ಆಶ್ಚರ್ಯದೊಡವೆರತ ಆನಂದವನ್ನುಂಟುಮಾಡುವ ಕವಿತ್ವಕ್ಕೆ ಚಿತ್ರಕವಿತ್ವವೆನ್ನುತ್ತಾರೆ. ಇದನ್ನು ಚಿತ್ರಬಂಧ ಅಥವಾ ಬಂಧಕವಿತ್ವವೆಂದೂ ಕರೆಯುತ್ತಾರೆ. ಈ ಕವಿತ್ವರಚನೆಯು ಎಷ್ಟೊಂದು ಚಾಕಚಕ್ಯತೆಯಿಂದ ಕೂಡಿದೆಯೆಂದರೆ ಕೆಲವೊಮ್ಮೆ ಆ ಪದ್ಯಗಳನ್ನು ಹಾರವಾಗಿ ಕಟ್ಟಿರುವಂತೆಯೂ, ಮದ್ದಳೆಯನ್ನು ಬಿಗಿದಿರುವಂತೆಯೂ, ಹಾವು ತೆಕ್ಕೆಹಾಕಿ ಮಲಗಿರುವಂತೆಯೂ, ತಾವರೆಯು ಅರಳಿರುವಂತೆಯೂ, ಖಡ್ಗ, ತ್ರಿಶೂಲ, ಪತಾಕವೇ ಮೊದಲಾದ ಆಕಾರಗಳಂತೆಯೂ ಚಿತ್ರಿಸಬಹುದು. ಹಾಗೆ ಚಿತ್ರಿಸಿದಾಗ ಅವಕ್ಕೆ ಕ್ರಮವಾಗಿ ಹಾರಬಂಧ, ಮುರಜಬಂಧ, ನಾಗಬಂಧ, ಪದ್ಮಬಂಧ, ಖಡ್ಗಬಂಧ, ತ್ರಿಶೂಲಬಂಧ, ಪತಾಕಬಂಧ ಎಂದೂ ಆಯಾ ಆಕಾರದಂತೆ ಆಯಾ ಆಕಾರಬಂಧವೆಂದು ಕರೆಯುತ್ತಾರೆ. ಹೀಗೆ ಹಲವಾರು ರೀತಿಯ ಬಂಧಗಳಿವೆ. ಇವುಗಳ ರಚನೆಗೆ ಭಾಷಾಪ್ರಭುತ್ವ, ಶಬ್ದಸಂಪತ್ತು, ಸತತಾಭ್ಯಾಸ, ಬುದ್ಧಿಸಾಮರ್ಥ್ಯ ಹಾಗೂ ಎಲ್ಲಕ್ಕೂ ಮಿಗಿಲಾಗಿ ಅಪಾರವಾದ ತಾಳ್ಮೆ ಬೇಕು. ಇವುಗಳನ್ನು ರಚಿಸಲು ಸ್ವಲ್ಪ ಕಷ್ಟವಾದರೂ ರಚಿಸಿದ ಮೇಲೆ ದೊರೆಯುವ ಆಶ್ಚರ್ಯದೊಡವೆರತ ಆನಂದ ಅಷ್ಟಿಷ್ಟಲ್ಲ.

ಇವುಗಳಲ್ಲಿ ಏಕಾಕ್ಷರಿ, ದ್ವ್ಯಕ್ಷರಿ, ಗುಣಿತಾಕ್ಷರಿ, ಕ್ರಿಯಾಗೋಪ್ಯ, ಅಕಾರಾಂತ, ನಿರೋಷ್ಠ್ಯ, ಅತಾಲವ್ಯ, ಗೋಮೂತ್ರಿಕೆ, ಗತಪ್ರತ್ಯಾನುಗತ, ಅರ್ಧಭ್ರಮಣ, ಸರ್ವತೋಭದ್ರ, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯಾಪೂರಣ, ಮಾತ್ರಾಚ್ಯುತಕ, ಬಿಂದುಚ್ಯುತಕ, ಪ್ರಶ್ನೋತ್ತರೆ, ಪ್ರಹೇಳಿಕೆ ಮೊದಲಾದ ದುಷ್ಕರಶಬ್ದಾಲಂಕಾರಗಳೂ, ಮೇಲೆ ಹೇಳಿದ ಬಂಧಗಳೂ, ಆವಳಿ, ಸಮುದ್ಗವೇ ಮೊದಲಾದ ಯಮಕಗಳೂ ;

ಬಹಳ ಮುಖ್ಯವಾದುವು. ಇಂತಹ ರಚನೆಗಳನ್ನು ಹೆಚ್ಚಾಗಿ ಸಂಸ್ಕೃತಭಾಷೆಯಲ್ಲಿ ಕಾಣಬಹುದು. ವಿಪುಲಪದಸಂಪತ್ತುಳ್ಳ ಆ ಭಾಷೆಯಲ್ಲಿ ಅದು ಸುಲಭಸಾಧ್ಯ. ಮಾಘನು ತನ್ನ ಹೆಸರಾಂತ 'ಶಿಶುಪಾಲವಧಂ' ಕಾವ್ಯದಲ್ಲಿ ಒಂದು ಅಧ್ಯಾಯವನ್ನೇ ಈ ಕವಿತ್ವಕ್ಕೆ ಮೀಸಲಾಗಿಟ್ಟಿದ್ದಾನೆ. ಕೃಷ್ಣ ಶಿಶುಪಾಲರ ಯುದ್ಧ ವರ್ಣನೆ ಇದರಲ್ಲಿ ಬಹಳ ಚೆನ್ನಾಗಿ ಚಿತ್ರಿತವಾಗಿದೆ. ಆದರೆ ಕನ್ನಡದಲ್ಲಿ ಇದು ಕಷ್ಟಸಾಧ್ಯ. ಆದರೂ ಕನ್ನಡ ಕಾವ್ಯಗಳಲ್ಲಿಯೂ ಸಹ ನಾವು ಅಲ್ಲಲ್ಲಿ ಕಾಣಬಹುದು.

ಆಚಣ್ಣನ ವರ್ಧಮಾನಪುರಾಣದಲ್ಲಿಯೂ, ಪದ್ಮಣಾಂಕನ ಪದ್ಮರಾಜ ಪುರಾಣದಲ್ಲಿಯೂ, ಚಂದ್ರರಾಜನ ಮದನ ತಿಲಕದಲ್ಲಿಯೂ ನಾವು ವಿಶೇಷವಾಗಿ ನೋಡಬಹುದು. "ಕಂತಿಹಂಪನ ಸಮಸ್ಯೆ" ಅಥವಾ "ಕಂತಿಯಪದ" ಗಳಲ್ಲಿಯೂ ಸಹ ಇವು ಸೇರಿವೆ. ಲಕ್ಷ್ಮೀಶ, ಷಡಕ್ಷರಿ ಮತ್ತು 20ನೇ ಶತಮಾನದ ಸರಸಕವಿ ಮುದ್ದಣ ಮುಂತಾದವರು ತಮ್ಮತಮ್ಮ ಕಾವ್ಯಗಳಲ್ಲಿ ಅಲ್ಲಲ್ಲಿ ಇವುಗಳನ್ನು ಜೋಡಿಸಿದ್ದಾರೆ. ಶ್ರೀವಿಜಯನು ತನ್ನ ಕವಿರಾಜ ಮಾರ್ಗದಲ್ಲಿಯೂ ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿಯೂ ಇವುಗಳ ಲಕ್ಷಣಗಳನ್ನೂ ಕೆಲವು ಲಕ್ಷ್ಯಗಳನ್ನೂ ಕೊಟ್ಟಿದ್ದಾರೆ.

ಈ ಕವಿತ್ವವು ಹಿಂದೆ ರಾಜಾಶ್ರಯದಲ್ಲಿ ಬೆಳೆದು ಹೆಮ್ಮರವಾಯಿತು. ರಾಜನನ್ನು ಹೊಗಳಿ, ಆತನನ್ನು ಮೆಚ್ಚಿಸಿ ಬಹುಮಾನ ಪಡೆಯಲಿಕ್ಕೋ ಅಥವಾ ಕವಿತಾ ಸ್ಪರ್ಧೆಯಲ್ಲಿ ಗೆದ್ದು ಕೀರ್ತಿ ಗೌರವವನ್ನು ಪಡೆಯಲಿಕ್ಕೋ ಅಂದಿನ ಕವಿಗಳು ತಮ್ಮ ಬುದ್ಧಿ ವ್ಯಾಯಾಮದಿಂದ ಈ ಕವಿತ್ವಕ್ಕೆ ಕಾರಣರಾದರು. ಇಂತಹ ಕವಿತ್ವದಿಂದ ಕಾವ್ಯಗಳು ಸಹಜಪ್ರತಿಭೆಯ ವಿಕಾಸವಾಗುವ ಬದಲು ಬೌದ್ಧಿಕವ್ಯಾಯಾಮಗಳಾಗಿ ವಿನೋದಗಳಾಗಿ ಮಾರ್ಪಡುವುದರಿಂದ ಇವುಗಳಿಂದ ಕೂಡಿರುವ ಕಾವ್ಯಗಳನ್ನು ಕೆಲವರು ಅಧಮಕಾವ್ಯಗಳೆಂದು ಕರೆದರು. ಇದು ಪೂರ್ಣ ಸತ್ಯವಲ್ಲವೆಂದು ನನ್ನ ಅಭಿಪ್ರಾಯ. ಒಂದು ವೇಳೆ ಇಡೀ ಕಾವ್ಯದಲ್ಲಿ ಇದನ್ನೇ ಬರೆದಾಗ ಬಹುಶಃ ಹಾಗೆ ಕರೆಯಬಹುದು. ಆದರೆ ಒಳ್ಳೆಯ ಮೃಷ್ಟಾನ್ನಭೋಜನದಲ್ಲಿ ಉಪ್ಪಿನಕಾಯಿಯಿದ್ದರೆ ಭೋಜನವು ಹೇಗೆ ಸೊಗಸುವುದೋ ಹಾಗೆ ಕಾವ್ಯಗಳ ನಡುನಡುವೆ ಹಿತಮಿತವಾಗಿ ಇಂತಹ ಚಿತ್ರಕವಿತ್ವವಿದ್ದಲ್ಲಿ ಅವು ಶೋಭಿಸುತ್ತವೆ. ಇವುಗಳಲ್ಲಿ ಕೆಲವೆಡೆ ರಸವಿಲ್ಲದಿರಬಹುದು, ನಿಜ; ಆದರೆ ರಂಜನೆಯಿದೆ. ಆದುದರಿಂದ ಇದರ ಬೆಳವಣಿಗೆಗೆ ಭಾಷಾಪ್ರೇಮಿಗಳು ಅಲ್ಪಸ್ವಲ್ಪ ಪ್ರಯತ್ನಿಸಿದರೆ ಅನುಚಿತವೇನಿಲ್ಲ. ಆದರೆ ಛಂದಸ್ಸೇ ಅನವಶ್ಯಕವೆಂದು ಹೇಳುತ್ತಿರುವ ಈ ಕಾಲದಲ್ಲಿ ಯಾರು ತಾನೇ ಈ ಕಡೆ ಗಮನ ಕೊಡುತ್ತಾರೆ. ಇಂತಹ ಅಪೂರ್ವವಾದ ಕವಿತಾರಚನೆಯು ಅಳಿದುಹೋಗುವಂತೆ ನಿರ್ಲಕ್ಷಿಸುವುದು ಸೂಕ್ತವಲ್ಲವೆಂದು ತಿಳಿದು ಇಂತಹ ಚಿತ್ರಕವಿತ್ವವನ್ನು ರಚಿಸುವುದು ಸಾಧ್ಯವೇ ಎಂದು ಪ್ರಯತ್ನಿಸಿದುದರ ಫಲವೇ ಈ ನನ್ನ ಕೆಲವು ಪದ್ಯಗಳು.

ಏಕಾಕ್ಷರಿ : ಇದರಲ್ಲಿ ಎಲ್ಲಾ ಅಕ್ಷರಗಳೂ ಒಂದೇ ಅಕ್ಷರದ ಗುಣಿತಾಕ್ಷರಗಳು ಅಥವಾ ಅವುಗಳ ಒತ್ತಕ್ಷರಗಳಾಗಿರಬೇಕು. ಉದಾಹರಣೆಗೆ :

ನನ್ನನೇನಾನುಂ ನೀನೆನೆ ನಿನ್ನನಾ ನಿನ್ನೇನನೆನೆ
ನಿನ್ನಿನನಂ ನೀನಾನನ್ನಂ ನಿನ್ನಾನನಂ ನನೆ ನೂನಂ ॥

ಈ ದ್ವಿಪದಿಯಲ್ಲಿ ಎಲ್ಲಾ ಅಕ್ಷರಗಳೂ "ನ"ಕಾರಗಳೇ. ಪುರಂದರದಾಸರ "ಕಲಕಂಠ ಸತಿಯು ಕರ್ಕಶಿಯಾದರೆ ಹಲವು ಪರಿಯಿಂದ ಹೊರಗಾಗಬೇಕು" ಎಂಬ ಭಾವ ಈ ಪದ್ಯದಲ್ಲಿದೆ. ಕೈಹಿಡಿದಾಕೆಯು ಮೃದುಮಧುರವಾಗಿ ಸಂಭಾಷಿಸುವುದರ ಬದಲಾಗಿ ಗಂಡನನ್ನು ಕರ್ಕಶವಾಗಿ ಏನಾದರೂ ಅನ್ನುವುದಾದರೆ ಅವನು ಆಕೆಯಿಂದ ಕೆಲಕಾಲ ಹಲವು ಪರಿಯಿಂದ ಹೊರಗಾಗಬೇಕು. ಅವನು ಹಾಗೆ ಹೊರಗಾದರೆ ಮತ್ತೆ ಅತನನ್ನು ಹೊಂದುವತನಕ ಆಕೆಯ ಮುಖವು ಖಿನ್ನವಾಗಿರುವುದು ಸಹಜ. ಈ ಭಾವವು ಈ ಚಿತ್ರದಲ್ಲಿ ಚಿತ್ರಿತವಾಗಿದೆ. ಇದನ್ನು ಪದವಿಭಾಗ ಮಾಡಿದರೆ ನನ್ನನು, ಏನಾನುಂ, ನೀನು, ಎನೆ, ನಿನ್ನನು, ಆನ್, ಇನ್ನು, ಏನನ್, ಎನೆ, ನಿನ್ನ, ಇವನಂ, ನೀನು, ಆನ್, ಅನ್ನಂ, ನಿನ್ನ, ಆನನಂ, ನನೆ, ನೂನಂ ಎಂದಾಗುತ್ತದೆ. ಅಂದರೆ ನನ್ನನ್ನು ನೀನು ಏನಾದರೂ ಅನ್ನುವುದಾದರೆ ನಿನ್ನನ್ನು ನಾನು ಇನ್ನೇನು ತಾನೇ ಹೇಳಲಿ. (ಏನೊಂದೂ ಹೇಳದೆ ಹೊರಗೆ ಹೋಗಬೇಕಾಗುತ್ತದೆ. ಹಾಗೆ ಹೋದರೆ) ನಿನ್ನ ಗಂಡನನ್ನು ನೀನು ಹೊಂದುವತನಕ ನಿನ್ನ ಮುಖವಾದದ್ದು ಯಾವಾಗಲೂ ಮೊಗ್ಗೇ (ಆಗಿರುತ್ತದೆ) ಎಂದು ಅರ್ಥವಾಗುತ್ತದೆ. ಆದರೆ ಇದರಲ್ಲಿ ಆವರಣದಲ್ಲಿರುವುದು ಅಧ್ಯಾಹಾರ. ಅಂತೆಯೇ (ಆಗಿರುತ್ತದೆ) ಎಂಬ ಕ್ರಿಯಾ ಪದವು ಗೋಪ್ಯವಾಗಿರುವುದರಿಂದ ಇದನ್ನು "ಕ್ರಿಯಾಗೋಪ್ಯ"ವೆಂದೂ ಸಹ ಕರೆಯಬಹುದು.

ದ್ವ್ಯಕ್ಷರಿ : ಈ ಪದ್ಯದಲ್ಲಿ ಯಾವುದೇ ಎರಡಕ್ಷರಗಳ ಗುಣಿತಾಕ್ಷರಗಳು ಅಥವಾ ಅವುಗಳ ಒತ್ತಕ್ಷರಗಳು ಮಾತ್ರವಿರಬೇಕು. ಉದಾಹರಣೆಗೆ :

ನಿನ್ನೆ ನೀನೇ ನಾನು ನನ್ನ ನೀನೆಂದ ನೀಂ
ನಿನ್ನನೇನೆಂದೆ ನಾನೆಂದು ದೀನನಾ
ದೆನ್ನನಿಂದೊದೆದೆ ನಂದನಾ ॥

ಈ ತ್ರಿಪದಿಯಲ್ಲಿ ಎಲ್ಲವೂ 'ನ' ಮತ್ತು 'ದ' ಕಾರಗಳೇ ಪದವಿಭಾಗಮಾಡಿದರೆ ನಿನ್ನೆ, ನೀನೇ, ನಾನು, ನನ್ನ, ನೀನು, ಎಂದ, ನೀಂ, ನಿನ್ನನು, ಏನು, ಎಂದೆ, ನಾನು, ಎಂದು, ದೀನನು, ಆದ, ಎನ್ನನು, ಇಂದು, ಒದೆದೆ, ನಂದನಾ ಎಂದಾಗುತ್ತದೆ. ಬಹಳ ಬಡವನೊಬ್ಬನಿಗೆ ನಂದನನೆಂಬ ಒಬ್ಬ ಶ್ರೀಮಂತ ಸ್ನೇಹಿತನಿರುತ್ತಾನೆ. ಇಬ್ಬರೂ ಬಹಳ ಅನ್ಯೋನ್ಯದಿಂದಿದ್ದ ಪ್ರಾಣಸ್ನೇಹಿತರು. ಶ್ರೀಮಂತನಾದ ನಂದನನು ನಿನ್ನೆ ದಿನ ತಾನೇ "ನೀನೇ ನಾನು ನಾನೇ ನೀನು, ನಮ್ಮಿಬ್ಬರಲ್ಲಿ ಏನೊಂದೂ ಭಿನ್ನಭೇದ

ವಿಲ್ಲ''ವೆಂದು ಹೇಳಿರುತ್ತಾನೆ. ಆದರೆ ಇಂದು ಯಾವುದೋ ಒಂದು ಸಣ್ಣ ಮಾತಿಗೆ ಆ ದೀನ ಸ್ನೇಹಿತನ ಮೇಲೆ ಕೋಪಿಸಿಕೊಂಡು ಅವನನ್ನು ಒದೆಯುತ್ತಾನೆ. ಒದೆಸಿಕೊಂಡು ಅಸಹಾಯಕನಾದ ಆ ಬಡವನು ಶ್ರೀಮಂತ ಸ್ನೇಹಿತನಿಗೆ "ನಿನ್ನೆ ದಿನ ನೀನೇ ನಾನು ನನ್ನನ್ನೇ ನೀನು" ಎಂದು ನೀನು ನಿನ್ನನ್ನು ನಾನು ಎನೆಂದೆನೆಂದು ದೀನನಾದ ನನ್ನನ್ನು ಇಂದು ಒದೆದೆ ಹೇ ನಂದನಾ, ಎಂದು ದೈನ್ಯದಿಂದ ಕೇಳುತ್ತಾನೆ ಎಂಬ ಭಾವ ಇದರಲ್ಲಿ ಚಿತ್ರಿತವಾಗಿದೆ.

ಗುಣಿತಾಕ್ಷರಿ : ಈ ಪದ್ಯದ ಪದಗಳೊಂದೊಂದೂ ಯಾವುದಾದರೊಂದೇ ಅಕ್ಷರದ ಗುಣಿತಾಕ್ಷರದಿಂದಲೇ ಪ್ರಾರಂಭವಾಗಬೇಕು. ಸ, ಸಾ, ಸಿ, ಸೀ, ಸು, ಸೂ, ಸೃ, ಸೄ, ಸೆ, ಸೇ, ಸೈ, ಸೊ, ಸೋ, ಸೌ, ಸಂ, ಸಃ, ಇವು "ಸ" ಕಾರದ ಗುಣಿತಾಕ್ಷರಗಳು. ಅಂದರೆ "ಸ" ಕಾರದ ಗುಣಿತಾಕ್ಷರಿಯೊಂದನ್ನು ಬರೆಯಬೇಕಾದರೆ ಪ್ರತಿಯೊಂದು ಪದವೂ ಮೇಲ್ಕಂಡ ಗುಣಿತಾಕ್ಷರಗಳಿಂದಲೇ ಕ್ರಮವಾಗಿ ಪ್ರಾರಂಭವಾಗಬೇಕು. ಉದಾಹರಣೆಗೆ :

ಸರಸಗೌರೀಪ್ರೀತ ಸಾರಸದ್ಗುಣಭರಿತ
ಸಿರಿದೇವಿರಮಣಹಿತ ಸೀತಾಧಿಪತಿನಮಿತ
ಸುರನರಾಸುರವಿನುತ ಸೂರ್ಯೇಂದುನಯನಯುತ
ಸೃಕ್ರುಂಡವರಶೋಭಿತ
ಸೆರೆಯಿಂದತೀತ ಸೇನಾನಿಪಿತ
ಸೈಗರೆವಮರನದೀಭೂಷಿತ ಸೊಗಯಿಪತನುಜಿತ
ಸೋಮಧರಮಹಿತ ಸೌಭಾಗ್ಯದಾತ
ಸಂಪ್ರೋಕ್ತಸಚ್ಚರಿತ ಸಃವರ್ಜಿತ ಪೊರೆ

ಸದಾ ಸರಿಸಿಯಾದ ಗೌರಿದೇವಿಯಲ್ಲಿ ಪ್ರೀತಿಯುಳ್ಳವನೂ ಸೌರಸದ್ಗುಣಭರಿತನೂ, ಲಕ್ಷ್ಮೀರಮಣನ ಹಿತೈಷಿಯೂ, ರಾಮನಿಂದ ನಮಸ್ಕರಿಸಲ್ಪಟ್ಟವನೂ, ದೇವ ದಾನವ ಮಾನವರಿಂದ ಸ್ತುತಿಸಲ್ಪಟ್ಟವನೂ, ಸೂರ್ಯಚಂದ್ರರನ್ನೇ ಕಣ್ಣಾಗುಳ್ಳವನೂ, ರುಂಡಮಾಲೆಯಿಂದ ಚೆನ್ನಾಗಿ ಶೋಭಿಸುವವನೂ, ಭವಬಂಧನದಿಂದ ಅತೀತನಾದವನೂ, ಷಣ್ಮುಖನ ತಂದೆಯೂ, ಎಡೆಬಿಡದೆ ಸುರಿವ ಗಂಗೆಯಿಂದಲಂಕೃತನೂ, ಸೊಗಯಿಸುವ ಕಾಮನನ್ನು ಗೆದ್ದವನೂ, ಚಂದ್ರನನ್ನು ಧರಿಸಿದ ಮಹಾಮಹಿಮನೂ, ಸೌಭಾಗ್ಯದಾತನೂ, ಸರ್ವರಿಂದಲೂ ಹೊಗಳಿಸಿಕೊಳ್ಳುವಂತಹ ಸಚ್ಚಾರಿತ್ರವುಳ್ಳವನೂ, ಕೋಪವರ್ಜಿತನೂ ಆದ ಶ್ರೀ ಶಂಭುಲಿಂಗನೇ ಕಾಪಾಡು ಎಂದಿದೆ. ಈ ಗುಣಿತಾಕ್ಷರಿಯಲ್ಲಿ ಒಂದು ನ್ಯೂನತೆಯೇನೆಂದರೆ "ಸೄ" ಎಂಬ ಅಕ್ಷರದಿಂದ ಪ್ರಾರಂಭವಾಗುವ ಪದವಿಲ್ಲ. ಆರೀತಿಯ ಪದವೇ ಇಲ್ಲ. ಅಲ್ಲದೆ ಪ್ರತಿಯೊಂದು ಪದವೂ "ತ" ದಿಂದ ಕೊನೆಯಾಗುವುದರಿಂದ "ತ" ವೃತ್ತ್ಯನುಪ್ರಾಸವನ್ನು ಸಹ ನಾವು ಇಲ್ಲಿ ನೋಡಬಹುದು.

ಅಂತರ್ಲಾಪಿ: ಇವರಲ್ಲಿ ಪ್ರಶ್ನೆಗಳು ಕೇಳಲ್ಪಟ್ಟಿರುತ್ತವೆ. ಉತ್ತರಗಳೂ ಕೂಡ ಅದರಲ್ಲಿಯೇ ಅಡಗಿರುತ್ತವೆ. ಅವುಗಳನ್ನು ಪತ್ತೆಹಚ್ಚಿ ಹೇಳ ಬೇಕು. ಇದೇ ಇದರ ವೈಶಿಷ್ಟ್ಯ. ಪದ್ಯದಲ್ಲಿಯೇ ಉತ್ತರಗಳು ಅಡಕವಾಗಿರುವುದರಿಂದ ಇದಕ್ಕೆ ಅಂತರ್ಲಾಪಿಯೆಂದು ಹೆಸರು.

ಉದಾಹರಣೆಗೆ :

(a) ಕಲಿರಾವಣಸತಿಯ ಪಿತನ
ವಿಲೋಮನಾರ್ ತನ್ನ ಕಾಯ್ವರಂ ಕಾಯ್ವುದರ್ದೇ ।
ಕುಲಮಂ ಬೆಳಗಿಪನಾವಂ
ಸಲೆಧರ್ಮಕಳಿದನ ತಿಳುಪು ಯಮಧರ್ಮಸುತಂ ॥

ಈ ಪದ್ಯದಲ್ಲಿ 1) ಕಲಿರಾವಣಸತಿಯ ಪಿತನ ವಿಲೋಮನಾರ್ 2) ತನ್ನ ಕಾಯ್ವರಂ ಕಾಯ್ವುದರ್ದೇ 3) ಕುಲಮಂ ಬೆಳಗಿಪನಾವಂ 4) ಸಲೆ ಧರ್ಮಕಳಿದನ ತಿಳುಪು, ಎಂಬ ನಾಲ್ಕು ಪ್ರಶ್ನೆಗಳಿವೆ. ಮೊದಲನೆಯ ಪ್ರಶ್ನೆ : ಕಲಿರಾವಣಸತಿ— ಮಡೋದರಿ, ಆಕೆಯ ಪಿತ—ಮಯ ; ಇದರ ವಿಲೋಮ ಯಮ. ಆದುದರಿಂದ ಮೊದಲ ಪ್ರಶ್ನೆಗೆ ಉತ್ತರ 'ಯಮ'. ಇದು ಪ್ರಶ್ನೆಗಳಲ್ಲದೆ ಉಳಿದಿರುವುದರ ಮೊದಲಭಾಗದಲ್ಲಿದೆ. ಎರಡನೆಯ ಪ್ರಶ್ನೆಗೆ 'ಧರ್ಮೋ ರಕ್ಷತಿ ರಕ್ಷತಃ' ಎಂಬ ಪ್ರಸಿದ್ಧೋಕ್ತಿಯಂತೆ ಧರ್ಮವೇ ಉತ್ತರ. ಇದು ಮಧ್ಯಭಾಗದಲ್ಲಿದೆ. ಮೂರ ನೆಯ ಪ್ರಶ್ನೆಗೆ ಕೊನೆಯ ಭಾಗವಾದ 'ಸುತಂ' ಎಂಬುದೇ ಉತ್ತರ. ನಾಲ್ಕನೆಯ ಪ್ರಶ್ನೆಗೆ ಯಮಧರ್ಮನ ಮಗನಾದ 'ಧರ್ಮರಾಯ'ನೇ ಅಂದರೆ 'ಯಮಧರ್ಮ ಸುತಂ' ಎಂಬುದೇ ಉತ್ತರ. ಹೀಗೆ ಎಲ್ಲಾ ಉತ್ತರಗಳೂ ಇದರಲ್ಲಿಯೇ ಅಡಕ ವಾಗಿವೆ.

(b) ಸೀಮಂತಿನಿಯರೊಳಾರತಿಶಾಂತೆ
ರಾಜನ್ಯರುಗಳೊಳಾರ್ಕಲಿಭೀಮ
ವಿದ್ವಜ್ಜನಗಳಿಗಾವುದು ವಂದ್ಯ
ಆದ್ಯಂತಗಳನು ಕೂಡಿಸಿ ನೋಡು.

ತ್ರಿಷ್ಟುಪ್ಪ ಛಂದಸ್ಸಿನ ಒಂದು ಪ್ರಭೇದವಾದ ಈ ವೃತ್ತದಲ್ಲಿ ಪ್ರಶ್ನೋತ್ತರ ಗಳೆರಡೂ ಇವೆ. ಮೊದಲ ಮೂರು ಸಾಲುಗಳು ಪ್ರಶ್ನೆಗಳ ರೂಪದಲ್ಲಿವೆ. ಪ್ರತಿ ಯೊಂದು ಸಾಲಿನ ಮೊದಲ ಮತ್ತು ಕೊನೆಯ ಸಾಲುಗಳನ್ನು ಕೂಡಿಸಿ ಓದಿದರೆ ಆಯಾ ಸಾಲಿನ ಉತ್ತರವಾಗುತ್ತದೆಂದು ನಾಲ್ಕನೆಯ ಸಾಲು ಸೂಚಿಸುತ್ತದೆ. ಸ್ತ್ರೀಯರಲ್ಲಿ ಅತಿ ಶಾಂತಸ್ವಭಾವದವಳಾರು ಎಂಬ ಪ್ರಶ್ನೆಗೆ ಆ ಸಾಲಿನ ಮೊದಲಕ್ಷರ ವಾದ "ಸೀ" ಜೊತೆಗೆ ಕೊನೆಯಕ್ಷರವಾದ 'ತೆ' ಯನ್ನು ಜೋಡಿಸಿ ಓದಿದರೆ ಆ ಪ್ರಶ್ನೆಗೆ ಉತ್ತರವಾದ "ಸೀತೆ" ದೊರೆಯುತ್ತದೆ. ಅಂತೆಯೇ 'ರಾಮ' ಮತ್ತು 'ವಿದ್ಯ' ಎಂಬವು 2ನೇ ಮತ್ತು 3ನೇ ಪ್ರಶ್ನೆಗಳಿಗೆ ಉತ್ತರಗಳು.

(c) ಆವ ಪದದಾದ್ಯಕ್ಷರಂಗಳೆರಡಂ ಪಠಿಸೆ
ಸೇವೆಗೊಳ್ಳುವ ಗ್ರಹಂಗಳ ಸಂಖ್ಯೆಯಹುದು ಮೇ
ಣಾವುದರ ಕೊನೆಯಕ್ಕರಂಗಳೆರಡನ್ನೋದೆ ಮೃಗಗಳಾವಾಸವಹುದು ।
ಯಾವ ಪದ ತೀವಿ ಬೆಳೆದಿರುವ ಷೋಡಶಿಯ ತರು
ಣಾವಸ್ಥೆಯಂ ಸೌರಿ ಪೇಳ್ವುದೌ ಜಗಕೆ ಮ
ತ್ತಾವ ಪದಮಂ ವಿಲೋಮವೆಸಗಿದೊಡಂ ತಾನೆಯಹುದು ನವಯೌವನವತೀ ॥

ಈ ಷಟ್ಪದಿಯಲ್ಲಿ ಯಾವುದೋ ಒಂದು ಪದವನ್ನು ಕೇಳಿದೆ. ಆ ಪದವನ್ನು ಪತ್ತೆಹಚ್ಚಲು ಕೆಲವು ಪ್ರಶ್ನೆಗಳನ್ನು ಕೇಳಿದೆ. ಮೊದಲನೆಯ ಪ್ರಶ್ನೆ : ಯಾವ ಪದದ ಮೊದಲೆರಡು ಅಕ್ಷರಗಳನ್ನು ಓದಿದರೆ ಪೂಜೆಯನ್ನು ಕೈಕೊಳ್ಳುವ ಗ್ರಹಗಳ ಸಂಖ್ಯೆಯಹುದು ? ಸೂರ್ಯ, ಚಂದ್ರ ಮೊದಲಾದ ನವಗ್ರಹಗಳು ಮಾತ್ರ ಪೂಜಿಸಲ್ಪಡುತ್ತವೆ. ಆದುದರಿಂದ ಆ ಸಂಖ್ಯೆ 'ನವ'. ಇದು ಆ ಪದದ ಮೊದಲೆರಡು ಅಕ್ಷರಗಳು. ಎರಡನೆಯ ಪ್ರಶ್ನೆ : ಯಾವ ಪದದ ಕೊನೆಯ ಎರಡು ಅಕ್ಷರಗಳನ್ನು ಓದಿದರೆ ಮೃಗಗಳ ಆವಾಸವಹುದು ? ಇದಕ್ಕೆ ಉತ್ತರ 'ವನ'. ಮೂರನೆಯ ಪ್ರಶ್ನೆ : ಯಾವ ಪದವು ಚೆನ್ನಾಗಿ ಬೆಳೆದಿರುವ ಹದಿನಾರು ವರ್ಷದ ಹೆಣ್ಣಿನ ತಾರುಣ್ಯಾವಸ್ಥೆಯನ್ನು ಜಗತ್ತಿಗೆ ಸಾರಿ ಹೇಳುತ್ತದೆ ? ಎಂದರೆ 'ನವಯೌವನ', ಎಂಬುದೇ ಉತ್ತರ. ನಾಲ್ಕನೆಯ ಪ್ರಶ್ನೆ : ಯಾವ ಪದವು ಹಿಂದು ಮುಂದು ಮಾಡಿದರೂ ಆ ಪದವೇ ಆಗುತ್ತದೆ ಅಂದರೆ 'ನವಯೌವನ'. ನವಯೌವನ ಎಂಬ ಪದವು ನವಯೌವನವತೀ ಎಂಬುದರಲ್ಲಿಯೇ ಅಡಕವಾಗಿದೆ.

ಮೇಲಿನ ಮೂರನೂ ಒಂದು ರೀತಿಯಲ್ಲಿ ಪ್ರಶ್ನೋತ್ತರಗಳೆಂದೂ ಕರೆಯಬಹುದು.

ಬಹಿರ್ಲಾಪಿ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಬೇರೆಯವರಿಂದ ಉತ್ತರವನ್ನು ನಿರೀಕ್ಷಿಸುವುದು. ಉದಾಹರಣೆಗೆ :

ಕಡೆದೊಡೆಯಲ್ಬುವಿಯಾಗುಂ
ನಡುದೊಡೆಯಲ್ಸನ್ನಯುಂದಹುದ ಮೊದಲಿನದಂ ।
ತೊಡೆಯಲ್ಕೆ ಮಂಜೆನಿಕ್ಕುಂ
ಕಡೆಯಿಂದೋದಲ್ಕೆ ತಾನೆಯಹುದ್ವೈ ಮಿತ್ರಾ ॥

ಕೊನೆಯಕ್ಷರವನ್ನು ತೊಡೆದು ಹಾಕಿದರೆ ಭೂಮಿ (ಮಹಿ) ಎಂದಾಗುವುದು. ಮಧ್ಯದ ಅಕ್ಷರವನ್ನು ತೊಡೆದು ಹಾಕಿದರೆ ಸಣ್ಣ (ಮಮು) ಎಂದಾಗುವುದು. ಮೊದಲಕ್ಷರವನ್ನು ತೊಡೆದು ಹಾಕಿದರೆ ಮಂಜು (ಹಿಮು) ಎಂದಾಗುವುದು. ಕಡೆಯಿಂದ ಓದಿದರೆ ಬದಲಾಗದೆ ಅದೇ ಆಗುವುದು. ಆ ಪದವಾವುದು ಎಂಬುದಕ್ಕೆ "ಮಹಿಮು" ಎಂಬುದೇ ಉತ್ತರ.

ಪ್ರಶ್ನೋತ್ತರ : ಒಬ್ಬರು ಕೇಳಿದ ಪ್ರಶ್ನೆಗೆ ಇನ್ನೊಬ್ಬರು ಉತ್ತರ ಕೊಟ್ಟಹಾಗೆ ಪದ್ಯರಚಿಸುವುದು. ಉದಾಹರಣೆಗೆ ;

(a) ಮರಣದೇವತೆಯಾರು ಜೀವಕಾಧಾರ ಮೇಣ್
ಸುರರೊಡೆಯನಾರ್ ರೋಹಿಣೀಪತಿಯ ಪೆಸರೇನು
ಪರನ ಬಲಗಣ್ಣೇನು ವೈಕುಂಠಪತಿಯಾರು ಗಜಕೆ ನಿಜಶತ್ರುವಾರು ।
ಕರೆದು ನಿಜಶಿಷ್ಯನಂ ಬಳಿಯಲ್ಲಿ ಕುಳ್ಳಿರಿಸಿ
ಗುರುವೊಮ್ಮೆ ಮೇಲೊರೆದ ಪ್ರಶ್ನೆಗಳಿಗೆಲ್ಲಕುಂ
ಸರಿಯೊಂದೆ ಮಾತಿನೊಳಗುತ್ತರವ ನೀಡೆನಲು ಹರಿಯೋರ್ವ ಪೇಳ್ವನೆಂದಂ ॥

ಈ ಷಟ್ಪದಿಯಲ್ಲಿ ಮರಣದೇವತೆ ಯಾರು ? ಜೀವಕ್ಕೆ ಆಧಾರವೇನು ? ದೇವತೆಗಳ ಒಡೆಯನಾರು ? ರೋಹಿಣಿಯ ಪತಿ ಯಾರು ? ಶಿವನ ಬಲ ಗಣ್ಣೇನು ? ವೈಕುಂಠದೊಡೆಯನಾರು ? ಆನೆಗೆ ತನ್ನ ಶತ್ರುವಾರು ? ಎಂಬ ಏಳು ಪ್ರಶ್ನೆಗಳಿವೆ. ಒಬ್ಬಾನೊಬ್ಬ ಗುರುವು ತನ್ನೊಬ್ಬ ಶಿಷ್ಯನನ್ನು ಕರೆದು ಬಳಿಗೆ ಕುಳ್ಳಿರಿಸಿಕೊಂಡು ಮೇಲೆ ಹೇಳಿದ ಪ್ರಶ್ನೆಗಳಿಗೆಲ್ಲಾ ಒಂದೇ ಮಾತಿನಲ್ಲಿ ಉತ್ತರ ಕೊಡುವಂತೆ ಕೇಳಿದಂತೆಯೂ ಅದಕ್ಕೆ ಆ ಶಿಷ್ಯನು ತನಗೆ ಗೊತ್ತಿಲ್ಲದೆ ಆ ಪರಮಾತ್ಮನಿಗೇ ಗೊತ್ತು ಎಂಬರ್ಥದಲ್ಲಿ ''ಹರಿಯೋರ್ವ ಪೇಳ್ವನೆಂದಂ'' ಎಂದು ಹೇಳಿದ ಹಾಗೂ ಮತ್ತು ''ಹರಿ'' ಎಂಬ ಒಂದೇ ಮಾತು ಉತ್ತರಿಸುತ್ತದೆ ಎಂದು ಹೇಳಿದ ಹಾಗೂ ಪದ್ಯ ರಚಿತವಾಗಿದೆ. ಹರಿಯೆಂದರೆ ಯಮ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು, ಸಿಂಹ ಎಂಬರ್ಥಗಳೂ ಉಂಟು.

(b) ಶರವ ತಾ ಶಂಕರಿಯೆ ಬಾಣಮೆನ್ನೊಳಿಹುದೇಂ
ಹರಿತದಂಬಲ್ಲಿ ಕಂಬುಗ್ರೀವೆ ವನಮನಾ
ಪರಿ ಕೇಳ್ದೆ ವಿಪಿನವನ್ನೆಂತೀವೆ ಕಾಡಲ್ಲವಾ ಕಾಂತೆ ಜೀವನಕ್ಕೆ ।
ಪರಿತಪಿಪೆ ನಾಂ ಜಾಯೆ ವಿಪುಲಧನಮಿರಲೇನು
ಕೊರತೆ ಸಿರಿಗಲ್ಲವಾ ಸಿಂಗಾರಿ ಬಾಯಾರಿ
ಸೊರಗಿ ನೀರಂ ಕೇಳ್ದೆನೆನಲತಿಜವದೊಳುದಕವನ್ನೀಯೆ ತೋಷವಾಂತೇಂ ॥

ಶರ, ವನ, ಜೀವನ ಎಂಬ ಪರ್ಯಾಯ ಪದಗಳು ನೀರು ಎಂದು ಅರ್ಥ ಕೊಡುವುದನ್ನು ಪಯೋಗಿಸಿ ಈ ಷಟ್ಪದಿ ರಚಿತವಾಗಿದೆ. ಆದರೆ ಶರವೆಂದರೆ ಬಾಣ, ವನವೆಂದರೆ ಕಾಡು, ಜೀವನವೆಂದರೆ ಬದುಕು ಎಂದೂ ಅರ್ಥವಾಗುವುದರಿಂದ ಬೇರೊಂದರ್ಥವುಂಟಾಗಿ ವಿನೋದಕ್ಕೆಡೆಗೊಟ್ಟಿದೆ.

ಬಾಯಾರಿ ಬಂದು ನನ್ನ ಪತ್ನಿ ಶಂಕರಿಯನ್ನು ಕರೆದು 'ಶರವ ತಾ ಶಂಕರಿಯೆ' ಎಂದು ನೀರನ್ನು ತರುವಂತೆ ಕೇಳಿದರೆ ಅವಳು ಬಾಣವೆಂದು ಅರ್ಥೈಸಿ 'ಬಾಣಮೆನ್ನೊಳಿ ಹುದೇಂ' ಅಂದರೆ ಬಾಣವನ್ನು ಕೊಡಲಿಕ್ಕೆ ನನ್ನಲ್ಲುಂಟೇ ಎಂದು ಉತ್ತರಿಸುತ್ತಾಳೆ. ಅದಕ್ಕೆ ಶಂಖದೋಪಾದಿ ಕತ್ತುಳ್ಳ ಶಂಕರೀ ಹರಿತವಾಗಿರುವಂತಹ ಬಾಣವನ್ನಲ್ಲ

ನಾನು ಕೇಳಿದ್ದು 'ವನಮುನಾಪರಿ ಕೇಳ್ದೆ' ಎಂದು ತಿಳಿಸಿದಾಗ ಅವಳು 'ವನ'ವೆಂದರೆ ನೀರು ಎಂಬ ಅರ್ಥವನ್ನು ಬಿಟ್ಟು ಕಾಡು ಎಂದು ಅರ್ಥೈಸಿ 'ವಿಪಿನವನ್ನೆಂತೀವೆ' ಅಂದರೆ ಕಾಡನ್ನು ಹೇಗೆ ನಾನು ಕೊಡಲಿ ಎಂದು ನನಗೆ ಬದಲೀಯುತ್ತಾಳೆ. ಆಗ ಅಯ್ಯೋ ಕಾಡನ್ನಲ್ಲವೇ ನಾನು ಕೇಳಿದ್ದು: 'ಜೀವನಕ್ಕೆ ಪರಿತಪಿಪೆನಾಂ ಜಾಯೆ' ಅಂದರೆ ನೀರಿಗಾಗಿ ಬಹಳವಾಗಿ ಪರಿತಪಿಸುತ್ತಿದ್ದೇನೆ ಎಂದು ಮತ್ತೆ ನೀರನ್ನು ಕೇಳಿದಾಗ ಜೀವನಕ್ಕೆ ಹಣದ ಕೊರತೆಯುಂಟಾಗಿದೆ ಎಂದು ಅರ್ಥೈಸಿ 'ವಿಪುಲಧನಮಿರಲೇನು ಕೊರತೆ' ಅಂದರೆ ಭಗವಂತ ನಮಗೆ ಸಾಕಷ್ಟು ಕೊಟ್ಟಿರುವಾಗ ಜೀವನಕ್ಕೆ ತೊಂದರೆ ಯೇನು ಎಂದು ಆಕೆ ತಿಳಿಸುತ್ತಾಳೆ. ಅಯ್ಯೋ ಸಿಂಗಾರಿ! ಹಣಕ್ಕಾಗಿಯಲ್ಲ ನಾನು ಹಾತೊರೆಯುವುದು, ನೀರಿಗಾಗಿ ಎಂದು ನೇರವಾಗಿ ಹೇಳಿದಾಗ ಒಡನೆಯೇ ಆಕೆ ಹೋಗಿ ಬೇಗ ನೀರು ತಂದುಕೊಡಲು ಕುಡಿದು ಸಂತೋಷಹೊಂದಿದೆ ಎಂದು ಈ ಪದ್ಯ ರಚಿತವಾಗಿದೆ.

ಅಕಾರಾಂತ : ಈ ಪದ್ಯದಲ್ಲಿ ಎಲ್ಲಾ ಅಕ್ಷರಗಳೂ 'ಅ' ಕಾರಾಂತಗಳೇ ಇರಬೇಕು. ಬೇರೆ ಯಾವ ಸ್ವರವೂ ಬರಬಾರದು. ಇದೇ ಇದರ ವೈಶಿಷ್ಟ್ಯ. ಉದಾಹರಣೆಗೆ :

ಅಮಲರಜತನಗಸದನಂ
ಕಮಲಸಖಶಶಧರವರಧನಂಜಯನಯನಂ ।
ಯಮಪಂಚ ಶರಗಜಹರಂ
ಕಮಲಜವಂದ್ಯ ತವಚರಣಕಂ ಮಮ ನಮನಂ॥

ಪರಿಶುದ್ಧವಾದ ಬೆಳ್ಳಿಯ ಬೆಟ್ಟವನ್ನೇ ಮನೆಯಾಗುಳ್ಳವನೂ ; ಸೂರ್ಯ, ಚಂದ್ರ ಮತ್ತು ಅಗ್ನಿನೇತ್ರವುಳ್ಳವನೂ ; ಯಮನನ್ನೂ, ಮನ್ಮಥನನ್ನೂ, ಗಜಾಸುರನನ್ನೂ ಸಂಹರಿಸಿದವನೂ; ಬ್ರಹ್ಮನಿಂದ ನಮಸ್ಕರಿಸಲ್ಪಟ್ಟವನೂ ಆದ ಶಂಭುವೇ ನಿನ್ನ ಪಾದಪದ್ಮಂಗಳಿಗೆ ನನ್ನ ನಮಸ್ಕಾರಗಳು ಎಂದು ಶಿವಸ್ತೋತ್ರಮಾಡಿದೆ.

ನಿರೋಷ್ಠ್ಯ : ಉಚ್ಚರಿಸುವಾಗ ತುಟಿಗಳು ಬಡಿದುಕೊಳ್ಳುವ ಅಕ್ಷರಗಳಿಗೆ ಅಂದರೆ ಉ, ಊ, ಪ, ಫ, ಬ, ಭ, ಮ ಗಳಿಗೆ ಓಷ್ಠ್ಯಾಕ್ಷರಗಳೆಂದು ಹೆಸರು. ಈ ಪದ್ಯದಲ್ಲಿ ಆ ಅಕ್ಷರಗಳು ಬರಬಾರದು. ಅವು ಬಾರದೇ ಇರುವುದರಿಂದಲೇ ಇದಕ್ಕೆ ನಿರೋಷ್ಠ್ಯವೆಂದು ಹೆಸರು. ಉದಾಹರಣೆಗೆ :

ಅಂಗಜಕಾಲಾಂಧಕಹರ
ಗಂಗಾಚಂದ್ರಧರ ಗಾನಲೋಲ ನಟೇಶಾ ।
ಕೆಂಗಣ್ಣ ಚೆಲ್ವ ವರಗೌ
ರಾಂಗ ದಿವಾರಾತ್ರಿ ರಕ್ಷಿಸೈ ಧರೆಯ ಗಿರಿಜೇಶಾ ॥

ಕಾಮ, ಕಾಲ, ಅಂಧಕಾಸುರರನ್ನು ಸಂಹರಿಸಿದ ; ಗಂಗೆ ಮತ್ತು ಚಂದ್ರನನ್ನು ಧರಿಸಿದ ; ಗಾನಲೋಲನಾದ ; ನಟರಧಿಪತಿಯಾದ ; ಕೆಂಗಣ್ಣ ಚೆಲ್ವನಾದ, ಶ್ರೇಷ್ಠವಾದ ಹೊಂಬಣ್ಣದೊಡಲಾಂತ ಗಿರಿಜೇಶನೇ ಈ ಧರೆಯನ್ನು ಹಗಲಿರುಳು ರಕ್ಷಿಸು ಎಂದು ಶಿವಸ್ತೋತ್ರಮಾಡಿದೆ.

ಪ್ರಹೇಳಿಕೆ : ಇದು ಒಂದು ಬಗೆಯ ಒಗಟು. ಒಗಟಾದುದರಿಂದ ಜನ ಸಾಮಾನ್ಯರಿಗೆ ಅರ್ಥವಾಗುವುದು ಸ್ವಲ್ಪಕಷ್ಟಸಾಧ್ಯ. ಉದಾಹರಣೆಗೆ :

ವನಮಂ ರಚಿಪರ್ನುತಿಪರ್ಶಿವನಂ
ದನಮಂ ಜಯಿಪರ್ಪಡೆವರ್ಪೆ ಸರಂ
ಪನಿಯಂ ಧರಿಪರ್ತಪಸಾಚರಿಪರ್
ಕನಿಯೋಜನದಿಂದತಿ ಚಿತ್ರವಪಾರ್ ॥

ಈ ತೋಟಕ ವೃತ್ತದಲ್ಲಿ ವನವನ್ನು ರಚಿಸುವವರು ಶಿವನನ್ನು ಸ್ತೋತ್ರಮಾಡುತ್ತಾರೆ. ಧನವನ್ನು ಜಯಿಸುವವರು ಹೆಸರನ್ನು ಗಳಿಸುತ್ತಾರೆ. ತಪಸ್ಸನ್ನಾಚರಿಸುವವರು ಮಂಜನ್ನು ಧರಿಸುತ್ತಾರೆ ಎಂದು ಅರ್ಥಕೊಡುವ ಮೊದಲ ಮೂರು ಸಾಲುಗಳಿವೆ. ಆದರೆ ಅವಾವುವೂ ಯಾವ ವಿಧವಾದ ಸಮಂಜಸವಾದ ಅರ್ಥವನ್ನೂ ಕೊಡುವುದಿಲ್ಲ. ಆದರೆ ಅವು ಸಮಂಜಸವಾದ ಅರ್ಥವನ್ನು ಯಾವಾಗ ಕೊಡುತ್ತವೆ ಎಂಬುದಕ್ಕೆ ನಾಲ್ಕನೆಯ ಸಾಲು ಸೂಚನೆ ಕೊಡುತ್ತದೆ. ಅಂದರೆ ಪ್ರತಿಯೊಂದು ಸಾಲಿಗೂ 'ಕ' ನಿಯೋಜಿಸಿದರೆ ಅಂದರೆ ಕೂಡಿಸಿ ಓದಿದರೆ ಸಮಂಜಸವಾದ ಉತ್ತರ ದೊರೆಯುತ್ತದೆ ಎಂದು ಸೂಚಿಸುತ್ತದೆ. ಹಾಗೆ ಸೇರಿಸಿದಾಗ ವೃತ್ತವು :

ಕವನಮಂ ರಚಿಪರ್ ನುತಿಪರ್ ಶಿವನಂ
ಕದನಮಂ ಜಯಿಪರ್ ಪಡೆವರ್ ಪೆಸರಂ
ಕಪನಿಯಂ ಧರಿಪರ್ ತಪಸಾಚರಿಪರ್

ಎಂದು ಮಾರ್ಪಾಡಾಗುತ್ತದೆ. ಆವಾಗ ಮೊದಲಿದ್ದ ಅರ್ಥಕ್ಕೂ ಈವಾಗಿನ ಅರ್ಥಕ್ಕೂ ವಿಚಿತ್ರವಾಗಿರುತ್ತದೆ. ಆದುದರಿಂದಲೇ 'ಕ' ಸೇರಿಸುವಿಕೆಯಿಂದ ಆಗುವ ಅತಿಚಿತ್ರವ ನೋಡೆಂದು ಹೇಳಲಾಗಿದೆ.

ಸಮಸ್ಯಾಪೂರಣಂ : ಕೇಳಿದಾಕ್ಷಣ ಅಪಾರ್ಥಕೊಡುವಂತಹ ನಾಲ್ಕನೇ ಪಾದವನ್ನು ಹೇಳಿ ಮೊದಲ ಮೂರುಪಾದಗಳನ್ನು ರಚಿಸುವಂತೆ ಕೇಳುವುದು. ಉದಾಹರಣೆಗೆ

ಪತಿಯಂ ಸುಟ್ಟು ಸತಿಯುಂ ವರಿಸಿದಂ ಜವದೊಳ್ ॥ ಎಂದು ನಾಲ್ಕನೇ ಪಾದವನ್ನು ಹೇಳಿದರೆ ಈ ಕೆಳಕಂಡಂತೆ ರಚಿಸುವುದು.

ಅತಿಘೋರ ತಪಸಿಗೆ ಕುಳಿತ
ಶಿತಿಕಂಠಂ ತನಗೆ ಕುಸುಮಶರಮಂ ಹೂಡಲ್ ।
ಖತಿಗೊಂಡು ಕಣ್ತೆರೆದು ರತಿ
ಪತಿಯಂ ಸುಟ್ಟು ಸತಿಯಂ ವರಿಸಿದಂ ಜವದೊಳ್ ॥

ದಾಕ್ಷಾಯಣಿಯನ್ನು ಕಳೆದುಕೊಂಡು ಕಠಿಣತಪಸ್ಸಿಗೆ ಕುಳಿತಿದ್ದ ಶಿವನು ತನ್ನ ಮೇಲೆ ಹೂವಿನ ಬಾಣವನ್ನು ಹೂಡಿದ ಮನ್ಮಥನನ್ನು ಹಣೆಗಣ್ಣನ್ನು ತೆರೆದು ಸುಟ್ಟು ಪಾರ್ವತಿಯನ್ನು ವಿವಾಹವಾದನು ಎಂದಾಗುತ್ತದೆ.

ಅತಾಲವ್ಯ : ಇ, ಈ, ಚ, ಛ, ಜ, ಝ, ಞ, ಯ, ಶ, ಇವು ತಾಲವ್ಯಾಕ್ಷರಗಳು. ಈ ಅಕ್ಷರಗಳು ಈ ಪದ್ಯದಲ್ಲಿ ಬರಬಾರದು. ಅವು ಬಾರದೇ ಇರುವುದರಿಂದಲೇ ಈ ಪದ್ಯಕ್ಕೆ ಅತಾಲವ್ಯವೆಂದು ಹೆಸರು. ಉದಾಹರಣೆಗೆ :–

ಪುರಕಾಲಮನ್ಮಥಹರಂ
ವರಗಂಗೇಂದು ಮೃಗ ಪನ್ನಗಡಮರುಕಧರಂ ।
ಕರುಣಾಕರಂ ಭವಹರಂ
ಪರಮಪರಂ ಪೊರೆಗೆ ಭುವನವನ್ನನವರತಂ ॥

ತ್ರಿಪುರವನ್ನೂ, ಯಮನನ್ನೂ, ಮನ್ಮಥನನ್ನೂ ಸಂಹರಿಸಿದ ; ಶ್ರೇಷ್ಠವಾದ ಗಂಗೆ, ಚಂದ್ರ, ಜಿಂಕೆ, ಸರ್ಪ, ಡಮರುಕಗಳನ್ನು ಧರಿಸಿದ ; ಭವನಾಶಗೈವ ಕರುಣಾಕರನಾದ ಪರಮಪರದೈವವಾದ ಶಂಭುವು ಅನವರತವೂ ಈ ಭುವನವನ್ನು ರಕ್ಷಿಸಲಿ ಎಂದು ಶಿವಸ್ತೋತ್ರಮಾಡಿದೆ.

ಕನ್ನಡ ಸಾಹಿತ್ಯದ ಮೇಲೆ ಜಾನಪದದ ಪ್ರಭಾವ ?*

ಕೆ. ಎಚ್. ರಾಮಯ್ಯ

1

ಕನ್ನಡ ನವೋದಯದ ಲೇಖಕರು ಜನಪದ ಸಾಹಿತ್ಯವನ್ನು ಕಂಡಂತೆ ನಾನದನ್ನು ಕಾಣಲಾರೆ. ಅವರು ಯಾವ ಅರ್ಥದಲ್ಲಿ ಅದನ್ನು ಸಾಹಿತ್ಯವೆಂದು ಗುರುತಿಸಿದ್ದಾರೆ ಆ ಅರ್ಥದಲ್ಲಿ ನಾನದನ್ನು ಸ್ವೀಕರಿಸಲಾರೆ. ಅವರು ಶಿಷ್ಟಸಾಹಿತ್ಯದ ಸಕಲ ಲಕ್ಷಣಗಳನ್ನೂ ಜನಪದ ಸಾಹಿತ್ಯಕ್ಕೆ ಆರೋಪಿಸಿ ಅದನ್ನು ಶಿಷ್ಟಸಾಹಿತ್ಯದ ಮಟ್ಟಕ್ಕೇರಿಸುವ ಪ್ರಯತ್ನವನ್ನೂ ಮಾಡಿದ್ದಾರೆ.

ಹಾಗಾದರೆ ಜನಪದ ಸಾಹಿತ್ಯ ಎಂದರೇನು – ಎಂಬ ಪ್ರಶ್ನೆ ಉಂಟಾಗುತ್ತದೆ. ಜಾನಪದದ ಸಂಪೂರ್ಣ ಹಿನ್ನೆಲೆಯಲ್ಲಿಟ್ಟು ಜನಪದ ಸಾಹಿತ್ಯವನ್ನು ನೋಡಬೇಕು ಆಗ ಅದಕ್ಕೇ ವಿಶಿಷ್ಟವಾದ ಮುಖ್ಯ ಲಕ್ಷಣಗಳು ಕಾಣುತ್ತವೆ. ಜಾನಪದದ ಹಿನ್ನೆಲೆ ಯಾವುದು ? ಈ ಪ್ರಶ್ನೆಗೆ ಉತ್ತರ, ಜಾನಪದ ಎಂದರೇನು ? ಎಂಬ ಪ್ರಶ್ನೆಯ ಉತ್ತರದಲ್ಲಿದೆ. ಜಾನಪದವು ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ ; ಹಾಗೂ ಅದನ್ನು ಕುರಿತ ವಿಜ್ಞಾನ.[1] ಜನಪದಕ್ಕೆ ಸಂಬಂಧಿಸಿದ್ದೆಲ್ಲವೂ 'ಜಾನಪದ'. 'ಜನಪದ' ಎಂದರೆ ಒಂದು ಜನಾಂಗ, ಸಮಾಜದ ಕೆಳಗಿನ ಸ್ತರ. ಸಂಕೀರ್ಣ ಸ್ವಭಾವದ ನಾಗರಿಕ ಸಮಾಜದಲ್ಲಿ ಹಳೆಯ ಗುಂಪು ಇತ್ಯಾದಿ ಅರ್ಥಗಳಿವೆ, ಜನಪದಕ್ಕೆ ಸಂಬಂಧಿಸಿದಂತೆ ಕಲೆ, ಕೈಗಾರಿಕೆ, ಉಡಿಗೆ ತೊಡಿಗೆ, ವೈದ್ಯ, ವಾಸ್ತು-ಶಿಲ್ಪ, ನಾಟಕ, ಕಥೆ, ಗಾದೆ, ಒಗಟು ಮತ್ತು ಗೀತೆಗಳು ಹೀಗೆ ಅನೇಕ ವಿಷಯ ಗಳಿವೆ. ಇವೆಲ್ಲವುಗಳ ಒಟ್ಟು ಮೊತ್ತವೇ ಜಾನಪದ.

ಸಾಹಿತ್ಯವೆಂದರೆ ಗ್ರಂಥಸ್ಥವಾದುದು ಎಂಬ ಸ್ಥೂಲ ಅರ್ಥವಿದೆ. ಈ ಅರ್ಥ ದಲ್ಲಿ ಜನಪದ ಸಾಹಿತ್ಯ ಎಂಬುದಿಲ್ಲ. ಯಾಕೆಂದರೆ ಜಾನಪದ, ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯಕ ಮೊತ್ತ ; ಹಾಗೂ ಅದನ್ನು ಕುರಿತ ವಿಜ್ಞಾನ. ಮತ್ತೆ ನಾವೇಕೆ ಜನಪದ ಸಾಹಿತ್ಯ ಅಂತ ಮಾತಾಡುತ್ತೇವೆ ? ನವೋದಯ, ಕನ್ನಡ ಸಾಹಿತ್ಯವು ಹುಟ್ಟಿಕೊಂಡ ಹಿನ್ನೆಲೆಯನ್ನು ನೋಡಿದಾಗ, ಹೊಸ

---

* ಇದು ನಾನು, 1973-74ರಲ್ಲಿ ದ್ವಿತೀಯ ಎಂ.ಎ. ತರಗತಿಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

1 Standard Dictionary of Folklore, Mythology & Legend.

ಅಭಿವ್ಯಕ್ತಿಗೆ ಹೊಸ ರೂಪದ ಹುಡುಕಾಟದ ಜೊತೆಗೆ ಹೊಸ ಭಾಷೆಯ ಹುಡುಕಾಟವೂ ಮೊದಲಾಗಿತ್ತು. ಕಾವ್ಯದ ಭಾಷೆ ಆಡುಮಾತಿಗೆ ಹತ್ತಿರವಾಗಬೇಕೆಂಬ ನವೋದಯದ ಧೋರಣೆ ಬಲವಾದಾಗ ಕನ್ನಡ ಕವಿಗಳು ಜನನುಡಿಯ ಕಡೆ ಆಶಾಭಾವದಿಂದ ನೋಡತೊಡಗಿದರು. ಅಲ್ಲಿ ಆ ನುಡಿಯ ಸೊಗಡು ಅವರನ್ನು ಆಕರ್ಷಿಸಿತು. ಹೆಚ್ಚಾಗಿ ಆಕರ್ಷಿಸಿದ್ದು ಜನರ ಗೀತೆಗಳು. ಹೀಗೆ ಪ್ರಯೋಜನಾಕಾಂಕ್ಷಿಗಳಾಗಿ ಇವರು ಜನಪದ ಗೀತೆಗಳನ್ನು ಸಂಗ್ರಹಿಸಿದರು. ಅವುಗಳನ್ನು ಅಭ್ಯಸಿಸಿದರು. ಕೆಲವರು ಆ ಭಾಷೆಯಲ್ಲಿ, ಆ ಧಾಟಿಯಲ್ಲಿ ಕಾವ್ಯ ರಚನೆಗೆ ತೊಡಗಿದರು. ಬೇಂದ್ರೆಯವರಂತೂ ಜನಪದ ಗೀತೆಗಳೇ ಇವು ಎಂಬ ಭ್ರಮೆ ಮೂಡಿಸುವಂಥ ಕವನಗಳನ್ನು ಬರೆದರು. ಹೀಗೆ ಕನ್ನಡದಲ್ಲಿ ಜನಪದ ಗೀತೆಗಳ ಸಂಗ್ರಹ ಮೊದಲಾಯ್ತು.

ನವೋದಯದ ಲೇಖಕರು ಜನಪದ ಗೀತೆಗಳನ್ನೇ ಜನಪದ ಸಾಹಿತ್ಯವೆಂದು ಕೊಂಡಂತೆ ಕಾಣುತ್ತದೆ. ಅವರು ಜನಪದ ಗೀತೆಗಳನ್ನೇ ಜನಪದ ಸಾಹಿತ್ಯವೆಂದು ಕರೆದರು. ಇದು ಶಿಷ್ಟ ಸಾಹಿತ್ಯಕ್ಕೇನೂ ಕಡಿಮೆ ಅಲ್ಲವೆಂದು ಕೂಡ ಹೇಳತೊಡಗಿದರು. ನಂತರ ಜಾನಪದ ಎಂಬುದು ಒಂದು ರೀತಿಯ ಷೋಕಿಯ ವಿಷಯವಾಗಿ ಬಿಟ್ಟಿತು. ಸರಿ ಎಲ್ಲರೂ ಜಾನಪದ ಸಂಗ್ರಾಹಕರಾದರು. ಜಾನಪದ ವಿದ್ವಾಂಸರೆನಿಸಿಕೊಂಡರು. ಇದರ ಪರಿಣಾಮವಾಗಿ ಅಪಾರ ಸಂಖ್ಯೆಯ ಸಂಗ್ರಹಗಳು ಬಂದುವು. ಜನಪದ ಗೀತೆಗಳ ಸಂಗ್ರಹ ಮೊದಲಾದರೂ ಕ್ರಮೇಣ ಕಥೆ, ಗಾದೆ, ಒಗಟು ಇತ್ಯಾದಿಗಳ ಸಂಗ್ರಹವೂ ಆಗತೊಡಗಿತು. ಹೀಗೆ ಜಾನಪದದಲ್ಲಿ ಗೀತೆ, ಕಥೆ, ಗಾದೆ, ಒಗಟುಗಳು ಗ್ರಂಥಸ್ಥವಾಗತೊಡಗಿದುವು. ಸರಿ ಈಗ ಇವುಗಳನ್ನು ಏನೆಂದು ಕರೆಯುವುದು ? ಎಂಬ ಪ್ರಶ್ನೆ ಬಂತು. ಇವುಗಳನ್ನು ಅಭ್ಯಾಸದ ಅನುಕೂಲಕ್ಕಾಗಿ ಮಾತ್ರ ಜನಪದ ಸಾಹಿತ್ಯವೆಂದು ಕರೆಯಬಹುದು ಎಂಬ ಒಪ್ಪಂದಕ್ಕೆ ಬರಲಾಯಿತು. ಆದರೆ ಗ್ರಂಥಸ್ಥ (ಲಿಪಿಯ ಬಂಧದಲ್ಲಿ ಹಿಡಿದಿಟ್ಟದ್ದು) ವಾದುದನ್ನೆಲ್ಲ ಸಾಹಿತ್ಯ ಎನ್ನುವ ಸ್ಥೂಲಾರ್ಥದಲ್ಲಿ ಮಾತ್ರ, ಪುಸ್ತಕ ರೂಪದಲ್ಲಿ ಹೊರಬಂದ ಜಾನಪದ ಸಂಗ್ರಹಗಳನ್ನು ಹೀಗೆ ಕರೆದುಕೊಳ್ಳಬಹುದು, ಅಷ್ಟೆ.

ಇಲ್ಲಿನತನಕ ಹೇಳಿದ್ದು ಇಷ್ಟು : ಜಾನಪದವು ಒಂದು ಜನತೆಯ ಗ್ರಂಥಸ್ಥವಲ್ಲದ ಸಂಪ್ರದಾಯದ ಮೊತ್ತ ಹಾಗೂ ಅದನ್ನು ಕುರಿತ ವಿಜ್ಞಾನ. ಜನಪದಕ್ಕೆ ಸಂಬಂಧಿಸಿದ್ದು ಜಾನಪದ. ಜನಪದ ಗೀತೆ, ಕಥೆ, ಗಾದೆ, ಒಗಟುಗಳನ್ನು ಅಭ್ಯಾಸದ ಸೌಕರ್ಯಕ್ಕಾಗಿ ಮಾತ್ರ ಜನಪದ ಸಾಹಿತ್ಯವೆಂದು ಒಪ್ಪಿಕೊಳ್ಳಬಹುದು. ಶಿಷ್ಟ ಸಾಹಿತ್ಯದಿಂದ ಈ ಜನಪದ ಸಾಹಿತ್ಯ ತೀರಾ ಭಿನ್ನವಾದ್ದು. ಇವಕ್ಕೆ ಶಿಷ್ಟ ಸಾಹಿತ್ಯದ ಲಕ್ಷಣಗಳನ್ನು ಆರೋಪಿಸಿ ಮೌಲ್ಯಮಾಪನ ಮಾಡುವುದು ತಪ್ಪು.

2

ಇನ್ನು ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯಗಳ ಬಗ್ಗೆ ಸ್ಪಷ್ಟಪಡಿಸಿಕೊಳ್ಳುವುದು ಮುಖ್ಯ.

ಜಾನಪದ ಮುಖ್ಯವಾಗಿ ಒಂದು ಸಾಂಸ್ಕೃತಿಕ ಚಟುವಟಿಕೆ. ಇದಕ್ಕೆ ಬದುಕೆಲ್ಲವೂ ಆಚರಣೆ. ಜಾನಪದ ಬದುಕಿನಲ್ಲಿ ತುಂಬು ಶ್ರದ್ಧೆಯುಳ್ಳದ್ದು. ಇದು ಬದುಕಿನ ಸ್ವಚ್ಛಂದತೆಯನ್ನು ಒಪ್ಪಿಕೊಂಡದ್ದು. ಇದು ಸಮೂಹ ಪ್ರಜ್ಞೆಯಿಂದ ತುಂಬಿದ್ದು. ತೋಂಡಿ (oral tradition), ಇದರ ಬಹು ಮುಖ್ಯ ಗುಣ. ಜಾನಪದದ ಪ್ರಮುಖ ಲಕ್ಷಣಗಳಾದ ಇವುಗಳ ಹಿನ್ನೆಲೆಯಲ್ಲಿಟ್ಟು ಜನಪದ ಸಾಹಿತ್ಯವನ್ನ ನೋಡಬೇಕು. ಜಾನಪದದ ಒಟ್ಟಾರೆ ಲಕ್ಷಣಗಳು ಅದರ ಎಲ್ಲ ಅಭಿವ್ಯಕ್ತಿಗಳಲ್ಲೂ ಸಹಜ.

ಜನಪದ ಸಾಹಿತ್ಯ, ಜೀವನದಲ್ಲಿ ಶ್ರದ್ಧೆ, ಬದುಕಿನ ಸ್ವಚ್ಛಂದತೆಯನ್ನ ಒಪ್ಪಿಕೊಂಡದ್ದರಿಂದ ವಸ್ತುವಿನ ಆಯ್ಕೆಯಲ್ಲಿ ಸಂಕೋಚ ಪ್ರವೃತ್ತಿ ಕಾಣುವುದಿಲ್ಲ. ವಸ್ತು ಮತ್ತು ಅಭಿವ್ಯಕ್ತಿಯಲ್ಲಿ ಸಮೃದ್ಧಿ ಇಲ್ಲಿರುತ್ತದೆ. ಜಾನಪದಕ್ಕೆ ಬದುಕೇ ಒಂದು ಆಚರಣೆಯಾದ್ದರಿಂದ, ಹಾಡು ಆಚರಣೆಯ ಒಂದು ಪ್ರಮುಖ ಅಂಗ. ಅಂದರೆ ಜನಪದ ಕಾವ್ಯದ ಸಂದರ್ಭ ಆಚರಣೆಯಾಯ್ತು. ಆದ್ದರಿಂದ ಇಲ್ಲಿ ಕಲೆಗಾರಿಕೆಯ ಅಂಶ ಕಡಿಮೆ. ಯಾಕೆಂದರೆ, ಆಚರಣೆ ಮುಖ್ಯವಾದಾಗ ಕಲೆ ಗೌಣವಾಗುತ್ತದೆ. ಜನಪದ ಕವಿ ಸಮೂಹಪ್ರಜ್ಞೆಯುಳ್ಳವನಾದ್ದರಿಂದ, ಜನಪದ ಕಾವ್ಯ ಸಮೂಹಪ್ರಜ್ಞೆಯಿಂದ ಆಗುವುದರಿಂದ ಕವನಮಾಡುವ ಕೆಲಸ ಇಲ್ಲಿ ಸಮೂಹ ಚಟುವಟಿಕೆಯ ಅಂಗವಾಗುತ್ತದೆ. ಹೀಗಾಗಿ ಒಬ್ಬ ಜನಪದ ಕವಿಯನ್ನ, ಅವನ ನಿರ್ದಿಷ್ಟ ನಿಲುವು ಧೋರಣೆಗಳನ್ನ ಇಲ್ಲಿ ಗುರುತಿಸುವುದು ಕಷ್ಟ.

ಜನಪದ ಕಾವ್ಯ ಮುಖ್ಯವಾಗಿ ಸಾಂಸ್ಕೃತಿಕ ಚಟುವಟಿಕೆಯ ಒಂದಂಗವಾದ್ದರಿಂದ ಅಲ್ಲಿ ಸಾಹಿತ್ಯವೇನಿದ್ದರೂ ಗೌಣ. ಜನಪದ ಗೀತೆಗಳಿಗೆ ಸಮಾಜ ಜೀವನದಲ್ಲಿ ನಿರ್ದಿಷ್ಟ ಉದ್ದೇಶಗಳಿವೆ. ಇವೆಲ್ಲ ಧಾರ್ಮಿಕ ಆಚರಣೆಗೆ ಸಂಬಂಧಿಸಿರುತ್ತವೆ. ಆದ್ದರಿಂದ ಹಾಡುಗಾರಿಕೆಯಲ್ಲಿ ವಸ್ತುವೈಭವ, ಅಲಂಕರಣ ಕ್ರಿಯೆ, ವಿವರಗಳ ಬಣ್ಣಗಾರಿಕೆ, ಹೊಗಳುವಿಕೆ, ಹಾಡಿ ಹಾರೈಸುವುದು ಇವುಗಳು ತುಂಬಿರುತ್ತವೆ. ಒಳ್ಳೆಯದು ಬಾಳಬೇಕು, ಕೆಟ್ಟದ್ದು ಹಾಳಾಗಬೇಕು ಇಷ್ಟು ಸರಳವಾದ ಪೂರ್ವನಿರ್ಧಾರಿತ ಮೌಲ್ಯ ವಿವೇಚನೆಯಿಂದಾಗಿ ಜನಪದ ಸಾಹಿತ್ಯದಲ್ಲಿ ದ್ವಂದ್ವ ಇರುವುದಿಲ್ಲ. ಇಲ್ಲಿ ವಿವರಗಳು ವಸ್ತುವಿಗೆ ಭಾರವಾಗುವಷ್ಟು ತುಂಬಿರುತ್ತವೆ. ವಸ್ತುವಿನಲ್ಲಿ ಮುಖ್ಯವಾದ್ದನ್ನ ಎತ್ತಿತೋರುವುದು ಮತ್ತು ವಾತಾವರಣ ಸೃಷ್ಟಿ ಇವು ವಿವರಗಳ ಉದ್ದೇಶ.

ಹೇಳಬೇಕಾದ್ದನ್ನು ಮುಚ್ಚಿಡುವುದರಿಂದ, ವಕ್ರರೀತಿಯಲ್ಲಿ ಹೇಳುವುದರಿಂದ ಕಾವ್ಯವಾಗುತ್ತದೆ. ಧ್ವನಿ, ಅಲಂಕಾರ, ರೂಪಕ ಇವು ಮುಚ್ಚಿ ಹೇಳಲು ಇರುವ ಉಪಾಯುಗಳು. ಅನುಭವ ಸಂಕೀರ್ಣವಾದಂತೆಲ್ಲಾ ರೂಪಕಗಳು ಬರುತ್ತವೆ. ಇವೆಲ್ಲವೂ ಕಾವ್ಯದಲ್ಲಿ ಒಂದು ರೀತಿಯ ಸಂಕೇತಗಳಾಗುತ್ತವೆ. ವಸ್ತುವನ್ನು ಈ ಉಪಾಯುಗಳಿಂದ ಕಾವ್ಯದಲ್ಲಿ ಸಂಕೇತೀಕರಿಸಿದಂತಾಗುತ್ತದೆ. ಗೂಢ ಹೆಚ್ಚಿದಂತೆಲ್ಲಾ ಕಾವ್ಯ ಕೊಬ್ಬುತ್ತಾ ಹೋಗುತ್ತದೆ. ಕಾವ್ಯದ ಕಾವು ತೀವ್ರವಾಗುತ್ತದೆ. ಹೀಗಾಗಿ ಭಾವಗಳು ಅಸ್ಪಷ್ಟವಾಗುತ್ತವೆ. ಇದರಿಂದಾಗಿ ಕಾವ್ಯ ರುಚಿಸುತ್ತದೆ. ಕಾವ್ಯದ ಈ ಗುಣ ಜಾನಪದದಲ್ಲಿ ಬಹಳ ಕಡಿಮೆ ಅಥವಾ ಇಲ್ಲ. ಒಗಟುಗಳಲ್ಲಿ ಮಾತ್ರ ಸ್ವಲ್ಪ ಈ ಕಾವ್ಯಗುಣವನ್ನು ಗುರುತಿಸಬಹುದು. ಒಗಟುಗಳ ಹುಟ್ಟಿನ ಗುಟ್ಟೇ ಈ ಮುಚ್ಚಿಡುವಿಕೆ. ಹೀಗಾಗಿ ಕಾವ್ಯದ ತೀರಾ ಪ್ರಾಥಮಿಕ ಅವಸ್ಥೆಯನ್ನು ಮಾತ್ರ ಒಗಟುಗಳಲ್ಲಿ ಕಾಣಬಹುದು ಅಷ್ಟೆ. ಆದರೆ ಕಾವ್ಯದ ತೀವ್ರತೆಯನ್ನು ಗಮನ ದಲ್ಲಿಟ್ಟು ನೋಡಿದರೆ ಒಗಟುಗಳಲ್ಲಿನ ಕಾವ್ಯಗುಣ ಬಹಳ ಗೌಣ ಮತ್ತು ಪ್ರಾಥಮಿಕ.

ನುಡಿದೊಡನೆ ವಸ್ತುವಿನ ಸಾಕ್ಷಾತ್ಕಾರವಾಗುವಂಥ ತೀವ್ರತೆ, ಪದಕ್ಕೊಂದೇ ಅರ್ಥ, ಸಂಕೇತ ರಹಿತತೆ, ಪುನರುಕ್ತಿ, ಏಕತಾನತೆ ಇವು ಜನಪದ ಸಾಹಿತ್ಯದ ಬಹು ಮುಖ್ಯ ಲಕ್ಷಣಗಳು. ಶಿಷ್ಟಸಾಹಿತ್ಯಕ್ಕಿಲ್ಲದ ತೀವ್ರತೆ ಜನಪದ ನುಡಿಯ ಒಂದು ಹೆಚ್ಚುಗಾರಿಕೆ. ಶಿಷ್ಟಸಾಹಿತ್ಯದಲ್ಲಿ ಯಾವುದೇ ಬರಬೇಕಾದರೂ ಸಂಕೇತವಾಗಿ ಬರುತ್ತದೆ. ಒಂದು ಪದಕ್ಕೆ ಇಲ್ಲಿ ವಿವಿಧಾರ್ಥವುಂಟು. ಧ್ವನಿ, ಶಿಷ್ಟಸಾಹಿತ್ಯದ ಬಹು ಮುಖ್ಯ ಲಕ್ಷಣ.

ಶಿಷ್ಟಸಾಹಿತ್ಯದಲ್ಲಿ ನಿರ್ದಿಷ್ಟ ಉದ್ದೇಶ, ವೈಯಕ್ತಿಕ ಮನೋಧರ್ಮಗಳನ್ನು ಬೆಟ್ಟುಮಾಡಿ ತೋರಿಸಬಹುದು. ಉದ್ದೇಶ ಸಾಧನೆಗೆ ಇಲ್ಲಿ ಕಾವ್ಯದ ಪರಿಕರಗಳ ಬಳಕೆಯಾಗಿರುತ್ತದೆ. ಆದರೆ ಜಾನಪದಕ್ಕೆ ಉದ್ದೇಶ ನಿರುದ್ದೇಶ. ಯಾಕೆಂದರೆ ಇಲ್ಲಿನ ಎಲ್ಲದೂ ಆಚರಣೆಯಿಂದಲೇ ಹುಟ್ಟುತ್ತದೆ.

ಮೇಲಿನ ಲಕ್ಷಣಗಳಿಂದ ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯದಿಂದ ತೀರ ಭಿನ್ನವೆಂಬುದು ಸ್ಪಷ್ಟ. ಮೊದಲೇ ಹೇಳಿದಂತೆ ಜನಪದ ಸಾಹಿತ್ಯವೆಂಬುದನ್ನು ಶಿಷ್ಟ ಸಾಹಿತ್ಯದ ಅರ್ಥದಲ್ಲಿ ಬಳಸುವುದು ತಪ್ಪು. ಅದರ ಲಕ್ಷಣಗಳನ್ನು ಇದಕ್ಕೆ ಆರೋಪಿಸುವುದೂ ತಪ್ಪು. ಅಭ್ಯಾಸ ಸೌಕರ್ಯಕ್ಕಾಗಿ ಕೂಡ ಹಾಗೆ ಬಳಸಿದಲ್ಲಿ, ಬಹಳ ಎಚ್ಚರದಿಂದ ಬಳಸಬೇಕಾಗುತ್ತದೆ. ಅಲ್ಲದೆ ಶಿಷ್ಟ ಸಾಹಿತ್ಯದೊಂದಿಗೆ ಯಾವುದೇ ರೀತಿಯ ಹೋಲಿಕೆ ತಪ್ಪಾದೀತು.

ಜನಪದ ಸಾಹಿತ್ಯವು ವಿದ್ವಾಂಸರಿಗೆ ಖುಷಿಕೊಟ್ಟು ಮೂಗಿನ ಮೇಲೆ ಬೆರಳಿಟ್ಟು ಮುಕುಟವ ತೂಗುವಂತೆ ಮಾಡಿ ಅವರು, ಇದು ಶಿಷ್ಟ ಸಾಹಿತ್ಯಕ್ಕೇನೂ ಕಡಿಮೆಯಿಲ್ಲ

ವೆಂದರೆ ಅದು ಅವರು ಜನಪದ ಸಾಹಿತ್ಯಕ್ಕೆ ಕೊಡಬಹುದಾದ ಗೌರವ ಅಷ್ಟೆ. ಆಗ ಅದನ್ನು ನಾವು ಶಿಷ್ಟಸಾಹಿತ್ಯದ ಅರ್ಥದಲ್ಲಿ ಸಾಹಿತ್ಯವೆಂದು ಒಪ್ಪಿದರೆ ಅದು, ನಾವು ಅವಕ್ಕೆ ತೋರುವ ದೊಡ್ಡ ರಿಯಾಯಿತಿಯೆಂದೇ ತಿಳಿಯಬೇಕಾಗುತ್ತದೆ.

ಜಾನಪದವು ಶಿಷ್ಟ (sophisticated) ಸಾಹಿತ್ಯ, ಕಲೆ, ಕೈಗಾರಿಕೆಗಳ ಮೂಲ ವೆಂಬ ವಾದವೊಂದಿದೆ. ಅದರ ಪ್ರಕಾರ ಯಾವುದೇ ಸಾಹಿತ್ಯದ ಅಭ್ಯಾಸಮಾಡುವಾಗ ಅದರ ಜನಪದ ಸಾಹಿತ್ಯದ ಬಗ್ಗೆ ಅಭ್ಯಸಿಸದೆ ಮುಂದೆ ಹೋಗುವುದು ತಪ್ಪು. ಕನ್ನಡ ಜನಪದ ಸಾಹಿತ್ಯದ ಅಭ್ಯಾಸ ಮಾಡದೆ ಕನ್ನಡ ಸಾಹಿತ್ಯದ ಅಭ್ಯಾಸ ಪೂರ್ಣವಾಗುವುದಿಲ್ಲ.

ಇಲ್ಲಿ ಜನಪದ ಸಾಹಿತ್ಯ ಎಂಬುದು ನಾವು ಅಭ್ಯಾಸದ ಅನುಕೂಲಕ್ಕಾಗಿ ಮಾಡಿ ಕೊಂಡದ್ದು ; ಇದು ತನ್ನ ವಿಶಿಷ್ಟ ಗುಣಲಕ್ಷಣಗಳಿಂದ ಶಿಷ್ಟ ಸಾಹಿತ್ಯಕ್ಕಿಂತ ಭಿನ್ನವಾದ್ದು ; ಇದರಲ್ಲಿ ಸಾಹಿತ್ಯದ ತೀರಾ ಪ್ರಾಥಮಿಕ ಅವಸ್ಥೆಯನ್ನು ಮಾತ್ರ ಕಾಣಬಹುದು, ಯಾವುದೇ ಭಾಷಾ ಸಾಹಿತ್ಯದಲ್ಲಿ ಜನಪದ ಮತ್ತು ಶಿಷ್ಟ ಸಾಹಿತ್ಯ ಗಳಿರಹುಂಟು ; ಆಯಾ ಭಾಷಾ ಸಾಹಿತ್ಯದ ಅಭ್ಯಾಸ ಮಾಡುವಾಗ ಆಯಾ ಭಾಷೆಯ ಜನಪದ ಸಾಹಿತ್ಯದ ಅಭ್ಯಾಸವನ್ನು ಮಾಡಲೇಬೇಕು ಎಂಬುದನ್ನು ಹೇಳಿದ್ದಾಯಿತು

3

ಭಾಗ 3ರಲ್ಲಿ ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ ಇವೆರಡೂ ಭಿನ್ನ ಗುಣಲಕ್ಷಣಗಳನ್ನು ಹೊಂದಿವೆ ಎಂಬುದನ್ನು ಸ್ಪಷ್ಟಪಡಿಸಿದೆ ಅಂದುಕೊಂಡಿದ್ದೇನೆ. ಇನ್ನು ಕನ್ನಡ ಸಾಹಿತ್ಯದ ಮೇಲೆ ಜಾನಪದದ ಪ್ರಭಾವ(?)ದ ಬಗ್ಗೆ ನೋಡೋಣ. ಇಲ್ಲಿ ಕನ್ನಡ ಸಾಹಿತ್ಯ ಎಂದಾಗ ಶಿಷ್ಟ ಸಾಹಿತ್ಯವೆಂದು, ಜಾನಪದ ಎಂದಾಗ ಜಾನಪದದ ಹಿನ್ನೆಲೆಯುಳ್ಳನ್ನೊಳಗೊಂಡ ಜನಪದ ಸಾಹಿತ್ಯವೆಂದು ತಿಳಿಯಬೇಕು.

ತೀರ ವಿರುದ್ಧ ಲಕ್ಷಣವುಳ್ಳ ಜಾನಪದವನ್ನು ಉನ್ನತಮಟ್ಟದ ಶಿಷ್ಟ ಸಾಹಿತ್ಯ, ಮೊಡನೆ ಹೋಲಿಸುವುದು ತಪ್ಪು ಎಂದು ಆಗಲೇ ಹೇಳಿದ್ದಾಗಿದೆ. 'ಕಿಂಗ್ ಲಿಯರ್' ದಂತ ಕಥೆ ಜಾನಪದದಲ್ಲೂ ಸಿಗುತ್ತದೆ. ಆದರೆ ಇವೆರಡರ ನಡುವೆ ಹೋಲಿಕೆ ಸಾಧ್ಯವಿಲ್ಲ. ಕಾರಣ ತನ್ನೆಲ್ಲ ಸಾಹಿತ್ಯಕ ಲಕ್ಷಣಗಳಿಂದ 'ಕಿಂಗ್ ಲಿಯರ್' ಕಥೆ ಕಲಾತ್ಮಕವಾಗಿಬಿಟ್ಟಿದೆ. ಜಾನಪದದಲ್ಲಿ ಸಾಹಿತ್ಯಕಾಂಶಗಳು ಬಹಳ ಕಮ್ಮಿ ಅಥವಾ ಇಲ್ಲವೇ ಇಲ್ಲ. ಶಿಷ್ಟ ಸಾಹಿತ್ಯದಲ್ಲಿನಂತೆ ಅವುಗಳ ಅನಿವಾರ್ಯತೆ ಜಾನಪದಕ್ಕಿರುವುದಿಲ್ಲ. ಹೆಚ್ಚೆಂದರೆ ನಾಲ್ಕು ಅಥವಾ ಐದು ಅಲಂಕಾರಗಳು ಜಾನಪದದಲ್ಲಿ ಸಿಗಬಹುದು ಅಷ್ಟೆ. ಆದರೆ ಇಲ್ಲಿ ಉಪಮೆಗಳು ಹೆಚ್ಚು. ಮಾತಾಡುವಾಗಲೇ ಜನನುಡಿಯಲ್ಲಿ ಉಪಮೆಗಳ ಬಳಕೆ ಬಹಳ ಸಹಜ.

ಹೋಲಿಕೆಯೇ ಸಾಧ್ಯವಾಗದ ಜಾನಪದ ಮತ್ತು ಶಿಷ್ಟ ಸಾಹಿತ್ಯ ಇವುಗಳ ನಡುವೆ ಪ್ರಭಾವವನ್ನು ಗುರುತಿಸುವುದೂ ಸಂದೇಹಾಸ್ಪದದ ವಿಷಯ.

ಪ್ರೇರಣೆ, ಪ್ರಭಾವ, ಸತ್ವ ಈ ಪಾರಿಭಾಷಿಕಗಳನ್ನು ಒಂದೇ ಅರ್ಥದಲ್ಲಿ ನಮ್ಮ ಲೇಖಕರು ಹೆಚ್ಚಾಗಿ ಬಳಸುತ್ತಾ ಬಂದಿದ್ದಾರೆ. 'Influence' ಎಂಬ ಇಂಗ್ಲಿಷ್ ಪದಕ್ಕೆ 'ಪ್ರಭಾವ' ಎಂಬುದು ಸಮಾನಾರ್ಥಕ. 'ಸತ್ವ' ಎಂಬುದನ್ನು 'essence' ಎಂಬರ್ಥದಲ್ಲಿ ಬಳಸಬೇಕಾಗುತ್ತದೆ. 'ಪ್ರೇರಣೆ' ಎಂದರೆ 'ಕಾರಣ' ಎಂಬರ್ಥ ಬರುತ್ತದೆ. 'ಪ್ರಭಾವ' ಎಂದರೆ ಅದ್ಭುತ ಬೌದ್ಧಿಕ ಶಕ್ತಿ ಎಂಬರ್ಥವಿದೆ. ಈ ಶಕ್ತಿ ಒಂದು ಮನೋಧರ್ಮ (attitude) ವನ್ನೇ ಬದಲಾಯಿಸಬಲ್ಲುದು. ಒಂದರ ಪ್ರಭಾವ ಇನ್ನೊಂದರ ಮೇಲೆ ಕಲಿಕೆಯಿಂದ ಆಗುವಂಥಾದ್ದು. ಸಂಸ್ಕೃತ, ಇಂಗ್ಲಿಷ್ ಮತ್ತು ಇತರೆ ಸಾಹಿತ್ಯಗಳ ಪ್ರಭಾವ ಕನ್ನಡದಮೇಲೆ ಆದದ್ದು ಕಲಿಕೆಯಿಂದ. ಹೀಗಾಗಿ ಪ್ರಭಾವ, ಮನೋಧರ್ಮಕ್ಕೆ ಸಂಬಂಧಿಸಿದ್ದು. ಒಂದು ಇನ್ನೊಂದರ ಪ್ರಭಾವಕ್ಕೆ ಒಳಗಾಗಬೇಕಾದರೆ, ಒಂದರ ಮನೋಧರ್ಮ ಇನ್ನೊಂದರಿಂದ ಬದಲಾಗಬೇಕಿದ್ದರೆ, ಪ್ರಭಾವಕ್ಕೆ ಒಳಗಾಗುವುದು ಪ್ರಭಾವ ಬೀರಬಲ್ಲುದರ ಅಭ್ಯಾಸ ಮಾಡಬೇಕಾಗುತ್ತದೆ. ಅದರ ಮನೋಧರ್ಮದ ಅರಿವು ತೀರಾ ಅಗತ್ಯವಾಗುತ್ತದೆ. ಅದನ್ನು ಅರಿತು ಅನಂತರ ತನಗೆ ಸರಿಕಂಡರೆ ಅದನ್ನು ಸ್ವೀಕರಿಸಿ ತನ್ನ ಮನೋಧರ್ಮವನ್ನದು ಬದಲಾಯಿಸಿಕೊಳ್ಳಬೇಕಾಗುತ್ತದೆ. ಹೀಗೆ ಇದರ ಪ್ರಭಾವ ಅದರಮೇಲೆ ಆಗಿದೆ ಎಂದಾಗ, ಅದರ ಮನೋಧರ್ಮ (attitude)ವೇ ಬದಲಾಗಿರಬೇಕು.

ಅಲ್ಲದೆ ಸಾಮಾನ್ಯವಾಗಿ ಬಲಿಷ್ಠವಾದದ್ದು ಕನಿಷ್ಠದ್ದರ ಮೇಲೆ ಪ್ರಭಾವ ಬೀರುವುದು ಸಹಜ. ಇಲ್ಲಿ ಅಭಿಜಾತ (ಶಿಷ್ಟ) ಸಾಹಿತ್ಯ ಬಲಿಷ್ಠವಾದದ್ದು. ಜಾನಪದವು ಸಾಹಿತ್ಯಕವಾಗಿ ಬಹಳ ಸೀಮಿತ ಶಕ್ತಿಯುಳ್ಳದ್ದು; ಅಂದರೆ ಅಭಿಜಾತವಾದದ್ದರ ಮೇಲೆ ಪ್ರಭಾವ ಬೀರಲಾರದಷ್ಟು ದುರ್ಬಲ. ಆದ್ದರಿಂದ ಶಿಷ್ಟ ಸಾಹಿತ್ಯದಮೇಲೆ ಜಾನಪದದ ಪ್ರಭಾವ ಹೇಗೆ ಸಾಧ್ಯ?

ಡಾ॥ ಜಿ. ವರದರಾಜರಾವ್ 'ಸುವರ್ಣ ಸಂಚಯ'ದಲ್ಲಿನ ತಮ್ಮ 'ಕನ್ನಡ ಕವಿಗಳ ಮೇಲೆ ಜನಪದ ಸಾಹಿತ್ಯದ ಪ್ರಭಾವ' ಎಂಬ ಲೇಖನದಲ್ಲಿ "ಜನಜೀವನದಿಂದ ಸ್ಫೂರ್ತಿಗೊಂಡು, ಜನತೆಯಿಂದಲೇ ಪೋಷಣೆ ಪಡೆದು, ಜನ ಜೀವನಕ್ಕೆ ಪುಷ್ಟಿ ನೀಡುವುದು ಸಾಹಿತ್ಯದ ಮುಖ್ಯ ಧರ್ಮವಾಗಿರುವುದರಿಂದ, ಯಾವ ಲೇಖಕನೇ ಆಗಲಿ, ಜನ ಜೀವನದ ಪ್ರಭಾವದಿಂದ ಹೊರತಾಗಿರಲು ಸಾಧ್ಯವಿಲ್ಲ. ಆತನು ಬಳಸುವ ಭಾಷೆ, ಆಯ್ದುಕೊಳ್ಳುವ ವಸ್ತು, ವಿಚಾರ ಮಾಡುವ ರೀತಿ ನೀತಿಗಳು ಅಷ್ಟೋ ಇಷ್ಟೋ ತನ್ನ ಸುತ್ತಮುತ್ತಲಿನ ಸಾಮಾಜಿಕ ಜೀವನವನ್ನು ಅವಲಂಬಿಸಿರುತ್ತದೆ. ಈ ಸೂತ್ರವನ್ನು ಒಪ್ಪಿ, ನಮ್ಮ ಕನ್ನಡ ಸಾಹಿತ್ಯವನ್ನು ಪರಿಶೀಲಿಸಿದ್ದೇ

ಆದರೆ, ನಮ್ಮ ಪ್ರಾಚೀನ ಮತ್ತು ನವೀನ ಕಾವ್ಯ ಸಮುದಾಯದಲ್ಲಿ, ಜನಪದ ಸಾಹಿತ್ಯದ ಹಲವಾರು ತಂತುಗಳು, ಅರಿತೋ ಅರಿಯದೆಯೋ, ನುಸುಳಿ ಬಂದು ಹೆಣೆದುಕೊಂಡಿರುವುದನ್ನು ಕಾಣಲು ಸಾಧ್ಯವಾದೀತು", ಎಂದು ಈ ಸೂತ್ರವನ್ನು ಅವಲಂಬಿಸಿ ಶಿಷ್ಟ ಸಾಹಿತ್ಯದಲ್ಲಿನ ಜಾನಪದ ಅಂಶಗಳು ಜಾನಪದ ಪ್ರಭಾವ ದಿಂದಲೇ ಬಂದದ್ದು ಎಂಬ ನಿರ್ಧಾರಕ್ಕೆ ಬಂದಿರುವುದು ಕಂಡುಬರುತ್ತದೆ.

ಇಲ್ಲಿ ಪ್ರಭಾವ ಆಗುವುದು ತೀರಾ ಭಿನ್ನವಾದ ಎರಡರ ನಡುವೆ. ಅವುಗಳಲ್ಲಿ ಪ್ರಬಲವಾದ್ದೊಂದು (ಇದು ವಿವಿಧ ಕಾರಣಗಳಿಂದ ಪ್ರಬಲ ಎನಿಸಿಕೊಂಡಿರುತ್ತದೆ. ಇಂಗ್ಲಿಷ್ ಆಳುವವರ ಭಾಷೆಯಾಗಿತ್ತು, ಹಾಗೆಯೇ ಸಂಸ್ಕೃತ ಕೂಡ–ಈ ರೀತಿ), ಇನ್ನೊಂದರ ಮೇಲೆ ಪ್ರಭಾವ ಬೀರುವುದು ಸಾಧ್ಯ. ಒಂದು ಸಮಾಜ ಇನ್ನೊಂದು ಸಮಾಜದ ಮೇಲೆ ಪ್ರಭಾವ ಬೀರುವುದು ಸಾಧ್ಯ. ಇಂಗ್ಲಿಷ್ ಜನಾಂಗದ ಅಥವಾ ಸಮಾಜ ನಮ್ಮ ಮೇಲೆ ಪ್ರಭಾವ ಬೀರಿದೆ, ಇದು ಒಪ್ಪತಕ್ಕದ್ದು. ಆದರೆ ನಮ್ಮದೇ ಸಮಾಜ ಅದರ ಅಂಗವೇ ಆದ ಒಬ್ಬ ವ್ಯಕ್ತಿಯಮೇಲೆ ಪ್ರಭಾವ ಬೀರಿದೆ ಎಂದಾಗ ಒಪ್ಪುವುದಾದರೂ ಹೇಗೆ ? ಡಾ॥ ವರದರಾಜರಾವ್‌ರ ಅಭಿಪ್ರಾಯ ಈ ರೀತಿ ಯೆದೆಂದು ಕಾಣುತ್ತದೆ. ಯಾಕೆಂದರೆ ಜಾನಪದವೇ ಕ್ರಮೇಣ ಅಭಿಜಾತವಾಗು ತ್ತದೆ. ಒಂದೇ ಇನ್ನೊಂದಾಗಿ ಬದಲಾಗುವಲ್ಲಿ ತನ್ನ ಮೊದಲಿನ ಅವಸ್ಥೆ ಹೇಗ ತನ್ನ ಬದಲಾಣೆಯ ದಾರಿಯಲ್ಲಿ ಪ್ರಭಾವ ಬೀರುವುದು ಸಾಧ್ಯ ? ಆದರೆ ತನ್ನ ಬದಲಾವಣೆಯಲ್ಲೂ ಶಾಶ್ವತವಾಗಿ ನಿಲ್ಲಬಲ್ಲ ಶಕ್ತಿಯುಳ್ಳ ಅಂಶಗಳು ಉಳಿದು ಬರಬಹುದು ಅಷ್ಟೆ.

ಜಾನಪದವು ಕ್ರಮೇಣ ಅಭಿಜಾತವಾಗುತ್ತದೆ ಎಂಬುದು ಒಂದು ವಾದ. ಅಭಿಜಾತವೆಂದರೆ ಜಾನಪದದ ಘನೀಭೂತರೂಪ. ಅಭಿಜಾತತೆಯೆಂದರೆ 'ಮಾರ್ಗ' ವೆಂಬರ್ಥ. ''ಸಾಹಿತ್ಯದ ಚರಿತ್ರೆಯನ್ನು ಗಮನಿಸಿದರೆ ಅದು ತಾಳುವ ಸ್ವರೂಪ: ದೇಸಿ[1]ಯಿಂದ ಮಾರ್ಗ ಅಥವಾ ಅಭಿಜಾತತೆಗೆ; ಮತ್ತೆ ಮಾರ್ಗದಿಂದ ದೇಸಿಗೆ. ಇದೊಂದು ಚಕ್ರೀಯ ಪ್ರಕ್ರಿಯೆ''.[2] ಹೀಗೆ ಜನಪದ ಸಾಹಿತ್ಯವೇ ಅಭಿಜಾತವಾಗು ವುದರಿಂದ ಅಭಿಜಾತದಮೇಲೆ ಪ್ರಭಾವ ಇನ್ನೆಲ್ಲಿಂದ ಸಾಧ್ಯ.

ಹೀಗೆ ಎರಡೂ ಅರ್ಥದಲ್ಲಿ ಜಾನಪದದ ಪ್ರಭಾವ ಸಾಹಿತ್ಯದಮೇಲೆ ಸಾಧ್ಯ ವಿಲ್ಲವೆಂಬುದು ನನ್ನ ವಾದ.

---

1 ದೇಸಿ–ಎಂದರೆ ಪತದ್ದೇಶಿ. ಅದು ಭಾಷೆಗೆ ಸಂಬಂಧಿಸಿದ್ದು.
'ದೇಸಿ ವೇಱಿವೇಱಪ್ಪುದಱಿಂ ವಾಸುಗಿಯುಮಱಿಯಲಾರದೆ
ಬೇಸಱುಗುಂ'–ಕವಿರಾಜ ಮಾರ್ಗ.

2. ಕೆ. ವಿ. ನಾರಾಯಣ ಅವರ 'ಪಂಪನ ದೇಸಿ' ಎಂಬ ಲೇಖನದಿಂದ
('ಪಂಪ : ಒಂದು ಅಧ್ಯಯನ)

ಇನ್ನು, ಸಾಹಿತ್ಯದಲ್ಲಿ ಪಂಪನಿಂದ ಇಲ್ಲಿಯ ತನಕ ಕಂಡುಬರುವ ಜಾನಪದ ಅಂಶಗಳನ್ನು ಏನೆಂದು ಕರೆಯುವುದು? ಕನ್ನಡ ಸಾಹಿತ್ಯದಲ್ಲಿ ಪಂಪ, ರನ್ನ, ಶಿವಕೋಟಿ, ದುರ್ಗಸಿಂಹ, ನಯಸೇನ, ವಚನಕಾರರು, ಹರಿಹರ, ರಾಘವಾಂಕ, ರತ್ನಾಕರವರ್ಣಿ, ಹರಿದಾಸರು, ಸರ್ವಜ್ಞ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ, ಬೇಂದ್ರೆ, ಮಧುರ ಚೆನ್ನ, ಚನ್ನವೀರ ಕಣವಿ, ಚಂದ್ರಶೇಖರ ಕಂಬಾರ ಮುಂತಾದ ವರ ಕೃತಿಗಳಲ್ಲಿ ಕಾಣುವ ಜಾನಪದ ಅಂಶಗಳನ್ನು ನಾನೂ ಪಟ್ಟಿಮಾಡುವುದಿಲ್ಲ. ಇದನ್ನು ಪ್ರಭಾವವೆಂದು ಗುರುತಿಸುವುದು ಸರಿಯಲ್ಲವೆಂದು ಹೇಳುತ್ತೇನೆ.

ಇವರೆಲ್ಲ ಬಳಸಿರುವ ಜಾನಪದಾಂಶಗಳನ್ನು ಗಮನಿಸಿದರೆ ಕೇವಲ ಪ್ರಯೋಜನದ ದೃಷ್ಟಿಯಿಂದ ಮಾತ್ರ ಜನಪದ ಸಾಹಿತ್ಯವನ್ನು ಇವರು ಕಂಡಿದ್ದಾರೆ ಎನ್ನಿಸುತ್ತದೆ. ಕೆಲವರು ಜನಪದ ಭಾಷೆಯನ್ನು, ಕೆಲವರು ಆಡುಮಾತಿನ ಲಯವನ್ನು, ಕೆಲವರು ಜನನುಡಿಯ ಸೊಗಡನ್ನು, ಕೆಲವರು ಗಾದೆಗಳನ್ನು ಬಳಸಿಕೊಂಡರೆ ಮತ್ತೆ ಕೆಲವರು ಜಾನಪದ ಕಥನ ಕ್ರಮ, ಕೆಲವೊಮ್ಮೆ ಕಥೆಗಳನ್ನೇ ಬಳಸಿದ್ದಾರೆ. ಪಂಚತಂತ್ರ ಮತ್ತು ಧರ್ಮಾಮೃತ ಸಂಗ್ರಹಗಳಲ್ಲಿ ಇದನ್ನು ನೋಡಬಹುದು. ತಮ್ಮ ತಮ್ಮ ಉದ್ದೇಶ ಸಾಧನೆಗೆ ಉಪಾಯಗಳಾಗಿ ಜಾನಪದ ತಂತ್ರವನ್ನು ಬಳಸಿಕೊಂಡಿರುವುದನ್ನು ಇಲ್ಲಿ ಕಾಣುತ್ತೇವೆ. ವಡ್ಡಾರಾಧನೆಯಲ್ಲಿ ಕಥಾ ಸಂವಿಧಾನವೇ ಜಾನಪದದ್ದಾಗಿದೆ. ಇಲ್ಲಿನ ಕೆಲವು ಕಥೆಗಳು ಜನಪದ ಕಥೆಗಳೇ ಆಗಿವೆ. ಆದರೂ ಜೈನ ಧರ್ಮ ಬೋಧೆಯ ಉದ್ದೇಶ ಇಲ್ಲಿ ಮುಖ್ಯವಾಗಿರುವುದರಿಂದ ಇವೆಲ್ಲವೂ ಸಂಕೇತಗಳಾಗಿ ಬಿಡುತ್ತವೆ. ಪಂಚತಂತ್ರ ಮತ್ತು ಧರ್ಮಾಮೃತ ಸಂಗ್ರಹಗಳಲ್ಲಿ ಗಾದೆ-ಮಾತು, ನುಡಿಗಟ್ಟುಗಳು, ಆಡುಮಾತಿನ ಲಯ, ನಾದ, ಇತ್ಯಾದಿಗಳು ಸಮೃದ್ಧವಾಗಿದ್ದರೂ ಅವು ನಿರ್ದಿಷ್ಟ ಉದ್ದೇಶಕ್ಕೆ ಸಹಾಯಕ ಸಾಮಗ್ರಿಗಳಾಗಿ ಬಂದಿರುವುದರಿಂದ ರಂಜಕ ಚಂಪೂಕೃತಿಗಳಾಗಿ ಬಿಟ್ಟಿವೆ.

ವಚನಗಳಲ್ಲಿ ಮೊತ್ತಮೊದಲಿಗೆ ಸಾಮಾನ್ಯಮಟ್ಟದವರಿಗೂ ಸಾಹಿತ್ಯವನ್ನು ಕಾಣುತ್ತೇವೆ. ವಚನಗಳ ಗದ್ಯದ ಬಳಕೆ ಆಡುನುಡಿಯಾಗಿದ್ದು ಉಪಮೆ ರೂಪಕಗಳು ಜಾನಪದದಿಂದಲೇ ಬಂದಿರುವುದಾದರೂ, ಆತ್ಮ, ಪರಮಾತ್ಮ, ಮೋಕ್ಷ, ಧರ್ಮ ಇತ್ಯಾದಿಗಳ ಕಲ್ಪನೆ ಅಲ್ಲಿರುವುದರಿಂದ ಜಾನಪದಕ್ಕೆ ಇವು ದೂರ. ರತ್ನಾಕರವರ್ಣಿಯ ಇಡೀ ಕಾವ್ಯ ಜಾನಪದವೆಂದು ಹೇಳಬಹುದಾದರೂ ಅವನ ಮನೋಧರ್ಮ ಮಾರ್ಗದ್ದಾಗಿದೆ. ರತ್ನಾಕರನ ಜೀವನಾಡಿಯೇ ಜಾನಪದದ್ದು. ಭರತೇಶನ ವೈಭವೀಕರಣವೂ ಜಾನಪದದ್ದೇ, ಛಂದಸ್ಸಿನ ಅಂಶೀಲಯ ಕೂಡ ಪೂರ್ತಿಯಾಗಿ ಜಾನಪದದ್ದು. ಹೀಗೆ ಹರಿಹರ, ರಾಘವಾಂಕ, ಕುಮಾರವ್ಯಾಸ ಇವರುಗಳಲ್ಲಿ ಜಾನಪದದ ಅನೇಕ ಅಂಶಗಳಿದ್ದರೂ ಮನೋಧರ್ಮದಲ್ಲಿ ಯಾರದೂ ಜಾನಪದವಲ್ಲ. ಸರ್ವಜ್ಞನಲ್ಲಿ ಜಾನಪದ ಛಂದಸ್ಸು ತ್ರಿಪದಿಗೆ ಆದ್ಯತೆ ಹೆಚ್ಚಿದ್ದು, ಎಷ್ಟೋ ತ್ರಿಪದಿಗಳು ಜಾನಪದವೇ

ಆಗಿದ್ದರೂ ಕೆಲವಂತೂ ಸಾಹಿತ್ಯಕವಾಗಿ ಕಲಾತ್ಮಕವಾಗಿ ಬಿಟ್ಟಿವೆ. ಹೀಗೆ ಕೆಲವರು ಛಂದಸ್ಸನ್ನು ಜಾನಪದದಿಂದ ಸ್ವೀಕರಿಸಿದ್ದಾರೆ.

ಹೀಗೆ ಕಾಣುವ ಈ ಎಲ್ಲ ಅಂಶಗಳು ಒಂದಲ್ಲ ಒಂದು ಉದ್ದೇಶ ಸಾಧನೆಗೆ ಸಹಾಯಕವಾಗಿ ಬಂದಿವೆ. ರಂಜನೆಗಾಗಿ, ಜನಪ್ರಿಯತೆ ಗಳಿಸಲು ಈ ರೀತಿಯ ಬಳಕೆಯಾಗಿರುವುದು ಸಹಜ. ಇಂತಲ್ಲಿ ಈ ತಂತ್ರದ ಬಳಕೆ ಚೆನ್ನಾಗಿ ಕಾಣುತ್ತದೆ ಅಷ್ಟೆ. ಜನರಿಗೆ ಪ್ರಿಯವಾಗಬೇಕಾದರೆ, ಉದ್ದೇಶಿತವಾದ್ದು ಜನರನ್ನು ಮುಟ್ಟ ಬೇಕಾದರೆ ಅವರಂತೇ, ಅವರು ಬಳಸುವ ತಂತ್ರವನ್ನು ಬಳಸಿಯೇ ಹೇಳಬೇಕು. ಜಾನಪದವಲ್ಲಿ ಕಥೆಗಳ ಮೂಲಕ, ಹಾಡುಗಳ ಮೂಲಕ ಸಾಮಾಜಿಕ ಮೌಲ್ಯಗಳು ಹಿಂದಿನಿಂದ ಪ್ರಚಾರವಾಗುತ್ತ ಬಂದಿರುವುದನ್ನು ಕಂಡುಕೊಂಡು ಆ ತಂತ್ರವನ್ನು ಬಳಸಿದರೆ ಹೆಚ್ಚು ಜನಪ್ರಿಯವಾಗಬಹುದು, ಅಷ್ಟರಮಟ್ಟಿಗೆ ಜನರನ್ನು ಮುಟ್ಟ ಬಹುದು, ಉದ್ದೇಶಿತ ಪರಿಣಾಮವನ್ನು ಪಡೆಯಬಹುದೆಂಬ ಉದ್ದೇಶದಿಂದ ವಡ್ಡಾರಾಧನೆ, ಪಂಚತಂತ್ರ, ಧರ್ಮಾಮೃತ ಸಂಗ್ರಹಗಳಲ್ಲಿ ಜಾನಪದದ ತಂತ್ರಗಳಿಗೆ ಸೋತಿರುವುದನ್ನು ನಾವು ಕಾಣಬಹುದು.

ಆದರೆ ಒಬ್ಬೊಬ್ಬರು ಒಂದೊಂದು ಅಂಶವನ್ನು ಬಳಸಿಕೊಂಡರೇ ಹೊರತು ಯಾರೂ ಇಡಿಯಾಗಿ ಜಾನಪದವೇ ಆಗಲಿಲ್ಲ. ಇಲ್ಲಿ ಜಾನಪದದಿಂದ ಇವರೆಲ್ಲರೂ ಪ್ರಯೋಜನ ಪಡೆದರೇ ವಿನಹ ಪ್ರಭಾವವನ್ನಲ್ಲ. ಜಾನಪದದಿಂದ ಸ್ವೀಕರಿಸಿದ್ದೆಲ್ಲವೂ ಇಲ್ಲಿ ಅಭಿಜಾತವಾಗಿ ಬಿಡುವುದು ಗಮನಾರ್ಹ ಅಂಶ. ಈ ಕಾರಣದಿಂದ ಪ್ರಭಾವ ಹೇಗಾದೀತು ?

ಮುಂದೆ ನವೋದಯದ ಕವಿಗಳಲ್ಲಿ ಜಾನಪದ ಅಂಶಗಳನ್ನು ಗಮನಿಸಬಹುದು. ಬೇಂದ್ರೆಯವರು ಬರೆಯಲು ಪ್ರಾರಂಭಿಸಿದ್ದೇ ಜಾನಪದದಲ್ಲಿ ಎನ್ನುವ ಭ್ರಮೆ ಸಮುಗುಂಟಾಗುತ್ತದೆ. ಜೀವನವನ್ನು ಜಾನಪದದಲ್ಲಿನಂತೆ ಒಪ್ಪಿಕೊಳ್ಳುವುದರಲ್ಲಿ, ಅದನ್ನು ವೈಭವಿಸುವುದರಲ್ಲಿ, ಛಂದಸ್ಸಿನ ಬಳಕೆಯಲ್ಲಿ, ಭಾಷೆಯಲ್ಲಿ ಬೇಂದ್ರೆಯವರದ್ದು ಸಿದ್ಧಹಸ್ತ. ಉದಾಹರಣೆಗೆ ಇವರ 'ಮುಬ್ಬಳ್ಳಿಯಾವ' ಕವನ. ಇದು ಅಷ್ಟು ಜನಪ್ರಿಯವಾಯಿತು. ಜಾನಪದ ಗೀತೆಗಳಲ್ಲಿ ಒಂದಾಗಿ ಸೇರಿ ಹೋಯಿತು. ಇವರ ಜಾನಪದದ ಬಳಕೆ ಅಷ್ಟು ಸಹಜವಾಗಿ ಕಂಡರೂ ಮನೋಧರ್ಮ ಮಾತ್ರ ಬೇಂದ್ರೆಯವರದ್ದೇ ಆಯಿತು. ಇವರೂ ಜಾನಪದದಿಂದ ಭಿನ್ನವಾದರು. ಆದರೆ ಬೇಂದ್ರೆ ಜಾನಪದ ಸತ್ವದ ಶ್ರೇಷ್ಠ ಕವಿ ಎಂದು ಹೇಳ ಬಹುದು. ಒಟ್ಟಾರೆ ಉದ್ದೇಶವನ್ನು ಹೊರತುಮಾಡಿ ಉಳಿದೆಲ್ಲ ಆಚರಣೆಯ ಅಂಶಗಳು, ತೀವ್ರತೆ, ತನ್ಮಯತೆ, ವಸ್ತುವನ್ನು ವೈಭವಿಸುವುದು, ಹಾದಿ ಹರಸುವಿಕೆ, ಅಲಂಕರಣ ಕ್ರಿಯೆ—ಇವೆಲ್ಲವೂ ಇವರ ಕಾವ್ಯದಲ್ಲೂ ಇವೆ, ಜಾನಪದದಂತೆ.

ಇತ್ತೀಚೆಗೆ ಬರೆಯುತ್ತಿರುವವರಲ್ಲಿ ಜಾನಪದ ಸತ್ವವನ್ನು ಹೆಚ್ಚು ಹೊಂದಿರುವವರೆಂದರೆ, ಬೇಂದ್ರೆಯವರನ್ನು ಬಿಟ್ಟರೆ ಚಂದ್ರಶೇಖರ ಕಂಬಾರರೇ. ಜಾನಪದಕ್ಕೆ

ಆಧುನಿಕತೆಯನ್ನು ತುಂಬುವ ಪ್ರಯತ್ನ ಮಾಡಿದವರು ಇವರು, ಇವರ 'ಹೇಳತೇನೆ ಕೇಳ' ತನ್ನ ಸಂಪೂರ್ಣ ಲಕ್ಷಣಗಳಿಂದ ಒಂದು ಜನಪದ ಲಾವಣಿ ಎನ್ನಿಸಿದರೂ ಅದರಲ್ಲಿ ಅವರು ಹೇಳ ಹೊರಟ ಆಧುನಿಕ ವಿಚಾರಗಳು ಸ್ಪಷ್ಟವಾಗಿ ಗೋಚರವಾಗದೆ ಹಾಡಿನ ಗುಂಗೇ ಕಿವಿಯಲ್ಲಿ ಬಹಳ ಕಾಲ ನಿಂತು ಬಿಡುತ್ತದೆ. ಅಂತೆಯೇ ಬೇಂದ್ರೆಯವರ 'ಸಖೀಗೀತ' ಕೂಡ. ಇಲ್ಲಿ ಬೇಂದ್ರೆಯವರು ಸ್ವಂತ ಅನುಭವವನ್ನು ಹೇಳ ಹೊರಟಿದ್ದಾರೆ. ದಾಂಪತ್ಯದಲ್ಲಿ ಸಖ್ಯಯೋಗ ಬರಬೇಕೆಂಬುದು ಇಲ್ಲಿನ ಇವರ ಕಾವ್ಯದರ್ಶನ. ಆದರೆ ಇದು ಸಾಮಾನ್ಯ ಸಂಸ್ಕೃತಿಗೆ ಯಾವ ರೀತಿಯಿಂದಲೂ ಭಿನ್ನವಾಗಿ ಉಳಿಯದೇ ಇರುವುದರಿಂದ ಮಾತ್ರ ಯಶಸ್ವೀ ಗೀತೆಯಾಗಿದೆ. ಅಷ್ಟರ ಮಟ್ಟಿಗೆ ಸಂಪೂರ್ಣ ಜಾನಪದವಾಗಿ ಕಾಣುತ್ತದೆ.

"ಬೇಂದ್ರೆಯವರ ಮತ್ತು ಕಂಬಾರರ ಕಾವ್ಯ ಧೋರಣೆಗಳನ್ನು ರೂಪಿಸುವಲ್ಲಿ ಜನಪದ ಪರಿಸರದ ಪ್ರೇರಣೆಯನ್ನು ನವೋದಯ ಮತ್ತು ನವ್ಯಕಾವ್ಯಗಳ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿಯೇ ವಿವೇಚಿಸಬೇಕಾಗುತ್ತದೆ. ಏಕೆಂದರೆ ನವೋದಯ ಕಾವ್ಯದ ಸಂವೇದನೆಗಳು ಜನಪದ ಕಾವ್ಯದೊಂದಿಗೆ ಪಡೆಯಬಹುದಾದಷ್ಟು ಸಾಮಿಪ್ಯ ಸಂಬಂಧವನ್ನು ನವ್ಯಕಾವ್ಯ ಪಡೆಯೊಲ್ಲ. ಆದ್ದರಿಂದ ಕಂಬಾರರ ಕಾವ್ಯದಲ್ಲಿ ಜನಪದ ಪ್ರಜ್ಞೆ ಮತ್ತು ಆಧುನಿಕ ಪ್ರಜ್ಞೆಗಳ ದ್ವಂದ್ವ ಅನಿವಾರ್ಯ. ಬಿ. ಟಿ. ದೇಸಾಯಿಯವರು ಹೇಳುವಂತೆ 'ಒಂದು ಥರದ ಗುಂಗಾಗಿ ಉಳಿದ ತಮ್ಮ ಜನಪದ ಪ್ರಜ್ಞೆಯಿಂದ ಬಿಡುಗಡೆಗೊಳ್ಳಲು ನಡೆಸಿದ ಹೋರಾಟದಲ್ಲಿಯೇ ಕಂಬಾರರ ಕಾವ್ಯದ ಬೆಳವಣಿಗೆಯನ್ನು ಗುರುತಿಸಬಹುದು. ಬೇಂದ್ರೆಯವರಲ್ಲಿ ಈ ರೀತಿಯ ಹೋರಾಟವನ್ನು ನಾವು ಸರ್ವಥಾ ಕಾಣಲಾರೆವು. ತಮ್ಮ ಉತ್ತಮ ಕವನಗಳಲ್ಲೆಲ್ಲಾ ಅವರು ತಮ್ಮ ಜನಪದ ಪ್ರಜ್ಞೆಯನ್ನು ಇನ್ನೂ ಅಷ್ಟು ತೀವ್ರವಾಗಿಸಿಕೊಳ್ಳುತ್ತಿದ್ದಾರೆ ಎನ್ನಿಸುತ್ತದೆ.' ಈ ಮಾತಿನ ಹಿನ್ನೆಲೆಯಲ್ಲಿಯೇ ಹೇಳತೇನೆ ಕೇಳ, ಹೋರಿ, ನಮ್ಮಜ್ಜ, ಗಂಗಾಮಾಯಿ, ಮಾವ್ಪೋತ್ಸೆ ತುಂಗನಿಗೆ ಈ ಮುಂತಾದ ಅವರ ಉತ್ತಮ ಕವಿತೆಗಳನ್ನು ಪರಿಶೀಲಿಸಬೇಕಾಗುತ್ತದೆ."[3] ಎಂದು ಹೇಳಿರುವ ಕೆ. ಎಂ. ಮರುಳಸಿದ್ದಪ್ಪನವರ ಮಾತುಗಳನ್ನು ಇಲ್ಲಿ ನೆನಸಿಕೊಳ್ಳಬಹುದು.

ಜಾನಪದ ಮತ್ತು ಹೊಸ ವಿಚಾರಗಳು ಇವೆರಡರ ಸಮನ್ವಯದಲ್ಲಿ ಕಂಬಾರರು ಯಶಸ್ವಿಯಾದಂತೆ ಕಾಣುವುದಿಲ್ಲ. ಇವರ ನಾಟಕಗಳಾದ 'ಋಷ್ಯಶೃಂಗ' ಮತ್ತು 'ಜೋಕುಮಾರ ಸ್ವಾಮಿ', ಬಯಲಾಟದ ತಂತ್ರದ ಉಪಯೋಗ ಮಾತ್ರ ಹೊಂದಿಸಿಕೊಂಡಿವೆ. ಆದರೆ ಇವು ದ್ವಂದ್ವಗಳನ್ನು ಹೇಳುವುದರಿಂದಾಗಿ ಬಯಲಾಟವಾಗದೇ ಹೋಗಿವೆ. ಗಿರೀಶ್ ಕಾರ್ನಾಡರ 'ಹಯವದನ' ಕೂಡ ಇದೇ ರೀತಿಯದ್ದಾಗಿದೆ.

---

3 'ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು'. ಇದರಲ್ಲಿ 'ಜನಪದ ಸತ್ವ : ನವ್ಯ ಕಾವ್ಯದಲ್ಲಿ' ಎಂಬ ಲೇಖನದಿಂದ.

ಅಲ್ಲದೆ "ಬಯಲಾಟದ ರಂಗ ಪದ್ಧತಿಗಳನ್ನು ಕೇವಲ ಸಿದ್ಧ ಸಂಕೇತಗಳೆಂದು ಬಳಸದೆ ಅರ್ಥಪೂರ್ಣವಾದ ವ್ಯಂಜಕತೆಯಿಂದ ನಾಟಕದ ಒಟ್ಟು ಕ್ರಿಯೆಗೆ ದುಡಿಸಿಕೊಳ್ಳುವುದು. ಅವುಗಳ ಪುರಾಣ (Mythology) ಸ್ಪರ್ಶದಿಂದ ಇಂದಿನ ತಂತ್ರಕ್ಕಿಂತ ಹೆಚ್ಚು ಆಳವಾದ, ಗಂಭೀರವಾದ ಪರಿಣಾಮವನ್ನುಂಟುಮಾಡುವುದು ಮತ್ತು ನನಗೆ ಟೋಟಲ್ ಥಿಯೇಟರ್ ಹೆಚ್ಚು ಇಷ್ಟವಾದುದರಿಂದ"[4] ಬಯಲಾಟದ ತಂತ್ರಗಳನ್ನು ನಾನು ಉಪಯೋಗಿಸಿಕೊಂಡಿದ್ದೇನೆಂದು ಕಂಬಾರರು ಹೇಳಿರುವುದನ್ನು ಗಮನಿಸಿದರೆ ಇವರೆಲ್ಲರೂ ಜಾನಪದವನ್ನು ಕೇವಲ ಉಪಯೋಗದ ದೃಷ್ಟಿಯಿಂದ ಮಾತ್ರ ನೋಡಿದ್ದಾರೆ ಅಲ್ಲದೆ ಜಾನಪದದ ಕೆಲವು ಲಕ್ಷಣ, ತಂತ್ರಗಳನ್ನು ಮಾತ್ರ ಸ್ವೀಕರಿಸಿಕೊಂಡು ಮನೋಧರ್ಮದಲ್ಲಿ ಭಿನ್ನವಾಗಿದ್ದಾರೆ ಎಂಬುದನ್ನು ಗಮನಿಸಬಹುದು. ಅಲ್ಲದೆ ಬಳಸಿಕೊಂಡ ಇವುಗಳು ಇಲ್ಲಿ ಸಂಕೇತಗಳಾಗಿ ಬಿಡುವುದು ಗಮನಿಸಬೇಕಾದ ಸಂಗತಿ.

ಹೀಗೆ ಕನ್ನಡ ಸಾಹಿತ್ಯದಲ್ಲಿ ಕೆಲವರು ಸಂವೇದನೆಗಳಲ್ಲಿ ಜಾನಪದವಾಗಿದ್ದು ಧೋರಣೆಯಲ್ಲಿ ಭಿನ್ನವಾಗಿದ್ದಾರೆ. ಪ್ರಭಾವ ಏನಿದ್ದರೂ ಧೋರಣೆಯಲ್ಲಿಯೇ ಆಗುವಂಥಾದ್ದೆಂಬುದನ್ನು ನೋಡಿದ್ದೇವೆ. ಧೋರಣೆಯಲ್ಲಿ ಪ್ರಭಾವ ಬೀರುವಷ್ಟು ಜಾನಪದ ಪ್ರಭಾವಶಾಲಿಯಲ್ಲ, ಅದು ಸಾಧ್ಯವಿಲ್ಲ. ಕೇವಲ ಸಂವೇದನೆ, ರೀತಿ, ಭಾಷೆ, ತಂತ್ರ ಇತ್ಯಾದಿಗಳಲ್ಲಿ ಜಾನಪದ ಬಂದರೆ ಅದು ಕೇವಲ ಜಾನಪದದ ಅಂಶ ಮಾತ್ರವಾಗಿ ಕಾಣುತ್ತದೆ. ಕೆಲ ಅಂಶಗಳನ್ನು ಗುರುತಿಸಿ ಅವರನ್ನೆಲ್ಲ ಜಾನಪದ ಕವಿಗಳೆನ್ನುವುದಾದರೆ ಕನ್ನಡದ ಕವಿಗಳೆಲ್ಲರೂ ಜಾನಪದ ಕವಿಗಳಾಗುತ್ತಾರೆ. ಈ ಅಂಶಗಳನ್ನು ಪ್ರಭಾವವೆನ್ನಲಾಗುವುದಿಲ್ಲ. ಕೇವಲ ಉಪಯೋಗವನ್ನು ನಮ್ಮ ಕವಿಗಳು ಜಾನಪದದಿಂದ ಪಡೆದಿದ್ದಾರೆಂದು ಹೇಳಬಹುದು.

ಸಹಾಯಕ ಗ್ರಂಥಗಳು

1. ಜಾನಪದ ಸ್ವರೂಪ : ಡಾ॥ ಹಾ. ಮಾ. ನಾಯಕ
2. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು : ಸಂ ; ಡಾ॥ ಜಿ. ಎಸ್. ಶಿವರುದ್ರಪ್ಪ ಇದರಲ್ಲಿ ಚಂದ್ರಶೇಖರ ಕಂಬಾರ ಮತ್ತು ಕೆ. ಮರುಳುಸಿದ್ದಪ್ಪ ಇವರ ಲೇಖನಗಳು.
3. ಸಂಶೋಧನ ತರಂಗ : 2 ಡಾ॥ ಎಂ. ಚಿದಾನಂದ ಮೂರ್ತಿ
4. ಸುವರ್ಣ ಸಂಚಯ
5. ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ- ಸಂ : ಡಾ॥ ಜಿ. ಎಸ್. ಶಿವರುದ್ರಪ್ಪ
6. ಕನ್ನಡ ನಾಡೂ ದೇಸೀ ಸಾಹಿತ್ಯವೂ : ದಿ॥ ಮುಳಿಯ ತಿಮ್ಮಪ್ಪಯ್ಯ
7. ಪದ್ಮಾರಾಧನೆ, ಪಂಚತಂತ್ರ, ಧರ್ಮಾಮೃತ ಸಂಗ್ರಹ, ಸಖೀಗೀತ, ಹೇಳತೇನೆ ಕೇಳ, ಗರತಿಯ ಹಾಡು.

---

4 'ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ' ಇದರಲ್ಲಿ ಚಂದ್ರಶೇಖರ ಕಂಬಾರರ ಲೇಖನದಿಂದ.

ಧೂಳಿನಿಂದೇಳುವ ರೋಗಗಳು

ಜಿ. ಆರ್. ವಿಜಯಕುಮಾರ್

ರಸ್ತೆಯಲ್ಲಿ ಹೋಗುತ್ತಿದ್ದಾಗ ವಾಹನವೊಂದು ಧೂಳು ಹಾರಿಸಿಕೊಂಡು ನಮ್ಮ ಮುಂದೆ ಹೋದಾಗ, 'ಅಬ್ಬಾ ಎಷ್ಟು ಧೂಳು' ಎಂದು ಮೂಗು ಮುಚ್ಚಿಕೊಳ್ಳುತ್ತೇವೆ. ಆದರೆ ಸದಾ ಧೂಳಿನ ವಾತಾವರಣದಲ್ಲಿರುವ ಗಣಿ, ಕುಲುಮೆ ಮತ್ತಿತರ ಕಾರ್ಮಿಕರಲ್ಲಿ ಧೂಳಿನಿಂದೇಳುವ ಭಯಂಕರ ಪರಿಣಾಮಗಳನ್ನು ಅನೇಕರು ತಿಳಿದಿರಲಾರರು.

ವೃತ್ತಿಯಿಂದಾದ ಈ ಪುಪ್ಪುಸ ಧೂಳು (Pneumoconiosis) ರೋಗಗಳನ್ನು ಅವುಗಳ ರೋಗಜನಕ ಮತ್ತು ಕಸುಬಿನ ಮೇಲೆ ಹೆಸರಿಸಲಾಗುತ್ತದೆ. ಚಿನ್ನದ ಗಣಿ ಕಾರ್ಮಿಕರ ಸಿಲಿಕ ಬೇನೆ, ಕಲ್ನಾರು ಬೇನೆ, ಕಲ್ಮಕಿಟಕನ ಗೂರಲು ಇತ್ಯಾದಿ. ಈ ರೋಗಗಳನ್ನು ತಡೆಗಟ್ಟುವುದಕ್ಕೋಸ್ಕರ ಉದ್ಯಮದ ಮಾಲೀಕರು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

ಧೂಳುಂಟು ಮಾಡುವ ಉದ್ಯಮಗಳು

ಗಣಿ ಉದ್ಯಮಗಳು

ಚಿನ್ನ, ಕಲ್ಲಿದ್ದಲು, ಕಬ್ಬಿಣ, ತವರ, ಸುರಮಾ

ಬಂಡೆ ನೆಲ ಉದ್ಯಮಗಳು

ಕಲ್ನಾರು, ಸಾಟೆಕಲ್ಲು, ಕಗ್ಗಲ್ಲು. ಉಸುಕುಕಲ್ಲು
ಕುಲುಮೆಗಳು,
ಅಚ್ಚೊತ್ತುವ-ಎರಕ ಹೊಯ್ಯುವ ಯಂತ್ರಾಗಾರಗಳು
ಬೂದಿ ಮಾಡುವ-ಅರೆಯುವ ಯಂತ್ರಾಗಾರಗಳು
ಹತ್ತಿಗಿರಣಿಗಳು
ಕುಂಬಾರಿಕೆ
ನೇಯ್ಗೆ
ಮರಗೆಲಸ,
ಆಣಬೆ. ಸೆಣಬು, ಕಬ್ಬಿಪ್ಪೆ ಉದ್ಯಮಗಳು.

ಧೂಳಿನಿಂದೇಳುವ ರೋಗಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು :

1) ಸೌಮ್ಯ ಪುಪ್ಪುಸ ಧೂಳುತುಂಬಿಕೆ ರೋಗಗಳು.
2) ಶ್ವಾಸಕೋಶವನ್ನು ತಂತುಗೂಡನ್ನಾಗಿಸುವ ಧೂಳುತುಂಬಿಕೆ ರೋಗಗಳು.
3) ಉರಿತವಾಗಿಸುವ ಪುಪ್ಪುಸ ಧೂಳುತುಂಬಿಕೆ ರೋಗಗಳು.
4) ದೇಹಕ್ಕೆ ಒಗ್ಗದೆ (Allergic) ಏಳುವ ಪುಪ್ಪುಸ ಧೂಳು ರೋಗಗಳು.

1. ಸೌಮ್ಯ ಪುಪ್ಪುಸ ಧೂಳುತುಂಬಿಕೆ ರೋಗಗಳು

ಈ ರೋಗಗಳು ಕಬ್ಬಿಣ, ತವರ, ಬೇರಿಯಂ ಮತ್ತು ಸುರಮ ಖನಿಜಗಳನ್ನು ತೆಗೆಯುವ ಗಣಿ ಕಾರ್ಮಿಕರಲ್ಲಿ ಕಂಡುಬರುತ್ತದೆ. ರೋಗಿಯ ಮೇಲೆ ಯಾವ ಹಾನಿಯಾಗದಿದ್ದರೂ, ಎದೆಗೂಡಿನ ಕಿರಣ (X-Ray) ಚಿತ್ರದಲ್ಲಿ 'ಪೆನ್ಸಿಲ್ ನಿಂದ ಚುಕ್ಕಿ' ಇಟ್ಟಿರುವಂತಹ ಮುಸುಕುಗಳಿರಬಹುದು.

2. ತಂತುಗೂಡುವಿಕೆಯಿಂದೇಳುವ ಪುಪ್ಪುಸಧೂಳು ತುಂಬಿಕೆ ರೋಗಗಳು

ಚಿನ್ನ, ಕಲ್ಲಿದ್ದಲು, ಕಲ್ನಾರು ಗಣಿ ಕಾರ್ಮಿಕರಲ್ಲಿ ಶ್ವಾಸಕೋಶವನ್ನು ತಂತು ಗೂಡನ್ನಾಗಿ ಪರಿವರ್ತಿಸುವ 'ಧೂಳು ತುಂಬಿಕೆ' ರೋಗಗಳು ಕಂಡು ಬರುತ್ತವೆ. ಇವುಗಳಲ್ಲಿ ಮುಖ್ಯವಾದದ್ದು — ಸಿಲಿಕಬೇನೆ (silicosis) ಮತ್ತು ಕಲ್ನಾರುಬೇನೆ (asbestosis).

ಸಿಲಿಕ ಬೇನೆ

ಇದು ಸಾಮಾನ್ಯವಾಗಿ ಚಿನ್ನ, ಕಲ್ಲಿದ್ದಲು ಗಣಿಗಳ ಹಾಗೂ ಕುಲುಮೆ ಕೆಲಸ ಗಾರರಲ್ಲಿ ಕಂಡುಬರುತ್ತದೆ. ಅಲ್ಲದೆ ಭೂಗರ್ಭದಿಂದ ಯಾವುದೇ ಅದುರನ್ನು ತೆಗೆದರೂ, ಅದರಲ್ಲಿ ಸಿಲಿಕದ ಅಂಶವಿರುವುದರಿಂದ ಎಲ್ಲಾ ರೀತಿಯ ಗಣಿ ಕಾರ್ಮಿಕ ರಲ್ಲೂ ಕಂಡುಬರಬಹುದು. 'ಸಿಲಿಕ' ಧೂಳು ಕಣಗಳು ಎಲ್ಲೆಡೆಯಲ್ಲಿಯೂ ಇರು ವುದರಿಂದ ಮೇಲಿನ ವಾತಾವರಣದಲ್ಲಿರುವ ನಗರವಾಸಿಗಳಲ್ಲಿ ಇದನ್ನು ಕಾಣಬಹುದು.

ಬೆಣಚುಕಲ್ಲು (quartz), ಕಗ್ಗಲ್ಲು (granite), ಬಂಗಾರ (talc), ಕಾಗೆ ಬಂಗಾರ, ಪಿಂಗಾಣಿ ಮಣ್ಣು (kaolin) ಮುಂತಾದುವು ಸಿಲಿಕದ ಬಹುರೂಪಗಳು. ಐದು ಮೈಕ್ರಾನ್‌ಗಳಿಗಿಂತಲೂ ಹೆಚ್ಚಿನ ಗಾತ್ರದ ಕಣಗಳು ಕೆಮ್ಮಿನ ಮೂಲಕ ಹೊರ ಬೀಳುತ್ತವೆ. ಶ್ವಾಸಕೋಶದೊಳಗೆ ನೆಲಸಿದ ಸಿಲಿಕ ಕಣಗಳು ಗಾಳಿಗೂಡಿನ ಪರೆಯು (alveolar membrane) ಒಳಕ್ಕೆ ಹೇಗೆ ಹೊಗುತ್ತವೆಂದು ಇನ್ನೂ ಸರಿಯಾಗಿ ತಿಳಿದಿಲ್ಲ. ಕೆಲವರು ಲೋಳ್ಪರೆಯ ಒತ್ತಡ ಸೊನ್ನೆಯಾಗಿರುವುದರಿಂದ ಧೂಳಿನ

ಕಣ ಒಳಹೊಗುತ್ತದೆ ಎಂದಿದ್ದಾರೆ. ಕಣದ ಮೇಲ್ಮೈಯಲ್ಲಿ ರಸಾಯನಿಕ ಕ್ರಿಯೆಯಿಂದ 'ಸಿಲಿಸಿಕ್ ಆಮ್ಲ' ಉತ್ಪನ್ನವಾಗಿ ಆ ಜೀವಕೋಶ ಸುರಟಿಹೋಗುತ್ತದೆ. ಈ ರೀತಿ ಸುರಟಿ ಹೋದ ಕಣ ಜಾಲಗಳ ಸ್ಥಾನದಲ್ಲಿ ಕೊಲ್ಲಾಜನ್ ತಂತುಗಳು ಬೆಳೆದು ಗಾಳಿಗೂಡಾದ ಶ್ವಾಸಕೋಶ ತಂತುಗೂಡಾಗುತ್ತದೆ.

ತಂತುಗೂಡುವಿಕೆಯನ್ನು ಸಿಲಿಕ ಕಣಗಳು ಯಾವ ರೀತಿ ಕೆರಳಿಸುತ್ತವೆಂದು ಇಂದಿಗೂ ಸರಿಯಾಗಿ ತಿಳಿದಿಲ್ಲ. ಬಹುಶಃ ಇದು ಒಂದು ರೀತಿಯ 'ರೋಧ ಜನಕ-ರೋಧ ವಸ್ತು ಕ್ರಿಯೆ' (antigen-antibody reaction) ಎಂದು ಹಲವರ ಅಭಿಪ್ರಾಯ. ರಕ್ತದಲ್ಲಿನ ಬೀಟಾ ಮತ್ತು ಗ್ಯಾಮಾ ಪ್ರೋಟೀನುಗಳು ಸಿಲಿಕ ಕಣದೊಂದಿಗೆ ಸೇರಿ ಕ್ರಿಯಾಂಶ(active principle)ಒಂದನ್ನು ಬಿಡುಗಡೆ ಮಾಡುತ್ತವೆ. ಈ ಅಂಶ ರೋಧ ವಸ್ತುವಿನಂತೆ ಕೊಲ್ಲಾಜನ್ ತಂತುಗಳು ಬೆಳೆಯುವಂತೆ ಮಾಡುತ್ತದೆ. ಇಲ್ಲಿ ಸಿಲಿಕವೇ ರೋಧಜನಕವೋ ಅಥವಾ ಸಿಲಿಕದೊಂದಿಗೆ ಬೆಸೆದ ಪ್ರೋಟೀನೇ ರೋಧಜನಕವೋ ಸರಿಯಾಗಿ ತಿಳಿದಿಲ್ಲ. ಆದರೆ, ಸಿಲಿಕ ರೋಗಿಗಳ ರಕ್ತದಿಂದ ಇದಕ್ಕೆ ಸರಿಹೊಂದುವ 'ರೋಧ ವಸ್ತು'ವನ್ನು ಬೇರ್ಪಡಿಸಿದ್ದಾರೆ.

ತಂತುಗೂಡುವಿಕೆಯಿಂದ ಕಾರ್ಮಿಕನ ಶ್ವಾಸಕೋಶದಲ್ಲಿ ಅನೇಕ ಸಿಲಿಕ ಗಂಟುಗಳಾಗಿರುವುದನ್ನು ಹೆಣ ಪರೀಕ್ಷೆಯಲ್ಲಿ ಕಾಣಬಹುದು. ಗಂಟಿನ ಮಧ್ಯೆ ಸಿಲಿಕ ಕಣಗಳಿದ್ದು, ಕೊಲ್ಲಾಜನ್ ತಂತುಗಳು ಅವನ್ನು ಸುತ್ತುವರೆದಿರುತ್ತವೆ. ಸಿಲಿಕಗಂಟು ಪೂರ್ಣವಾದ ಮೇಲೆ ಆ ಭಾಗಕ್ಕೆ ಒದಗಿಸುವ ರಕ್ತನಾಳ ಸಂಕುಚಿತಗೊಂಡು, ತಂತುಗೂಡುವಿಕೆ ಅದರ ಸುತ್ತಮುತ್ತ ಹರಡುತ್ತದೆ. ಶ್ವಾಸಕೋಶದಲ್ಲೆಲ್ಲಾ ಪಸರಿಸಿದ ಮೇಲೆ ಅದು ನಿಷ್ಕ್ರಿಯವಾದಂತೆಯೇ.

15 ವರ್ಷಗಳಿಗಿಂತ ಹೆಚ್ಚು ಕೆಲಸ ಮಾಡಿರುವ ಗಣಿ, ಕುಲುಮೆ ಕಾರ್ಮಿಕರಲ್ಲಿ ಸಿಲಿಕ ಬೇನೆ ಕಂಡುಬರುತ್ತದೆ. ಪ್ರಾರಂಭದಲ್ಲಿ ಏರುಸಿರುಂಟಾಗಿ ಉಸಿರಿನ ಕೊರತೆಯಾಗಬಹುದು. ರೋಗ ಮುಂದುವರಿದಂತೆ ಇದು ಹೆಚ್ಚಾಗಿ, ಗಂಟಲು – ಶ್ವಾಸನಾಳಗಳ ಉರಿತ, ಕೆಮ್ಮು ಉಂಟಾಗಬಹುದು. ಬೇಗನೆ ಮೈತೂಕ ಕಡಿಮೆಯಾಗಿ ಮಾಂಸಖಂಡಗಳು ಸವೆಯುತ್ತವೆ. ಬೆರಳುಗಳು ದುಂಡಾಗುವುದು (clubbing of fingers) ಮತ್ತು ಪಿತ್ತಜನಕಾಂಗ ದುರ್ಬಲವಾಗಬಹುದು.

ಈ ರೋಗ ಚಿಹ್ನೆಗಳು ಕಂಡುಬರುವ ಬಹಳ ಮುಂಚೆಯೇ ಶ್ವಾಸಕೋಶದಲ್ಲಿನ ಬದಲಾವಣೆಗಳು ವಿಕಿರಣ ಚಿತ್ರದಲ್ಲಿ ತೋರುತ್ತವೆ. ಆದ್ದರಿಂದ ಆಗಾಗ್ಗೆ ಈ ಕಾರ್ಮಿಕರನ್ನು ವೈದ್ಯಕೀಯ ಹಾಗೂ ವಿಕಿರಣ ಪರೀಕ್ಷೆಗೊಳಪಡಿಸಬೇಕು.

ಧೂಳಿಗೆ ಸಿಕ್ಕಿದ ಕಾರ್ಮಿಕರ ಎದೆಗೂಡಿನ ವಿಕಿರಣ ಚಿತ್ರದಲ್ಲಿ ಸಿಲಿಕ ಗಂಟುಗಳು ಮಸುಕುಗಳಾಗಿರುತ್ತವೆ. ಜಿನಿವಾದ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ

ನಿಯಮಾವಳಿಯ ಪ್ರಕಾರ ಸಿಲಿಕ ಬೇನೆಯನ್ನು ವಿಕಿರಣ ಚಿತ್ರದಲ್ಲಿನ ಅಸ್ಪಷ್ಟತೆಯ ವಿವರದ ಮೇಲೆ 9 ವರ್ಗಗಳಾಗಿ ವರ್ಗೀಕರಿಸುತ್ತಾರೆ.

ಸಿಲಿಕ ಬೇನೆಯಿಂದ ನರಳುತ್ತಿರುವವರಿಗೆ ಆಗಿಂದಾಗ್ಯೆ ಕ್ಷಯಕ್ಕಾಗಿ ಪರೀಕ್ಷೆ ನಡೆಸುವುದು ಅತ್ಯಾವಶ್ಯಕ. ಆದರೆ, ಸಿಲಿಕ ಬೇನೆಗೆ ಸೂಕ್ತ ಚಿಕಿತ್ಸೆಯೂ ಇಲ್ಲ – ಪರಿಹಾರವೂ ಇಲ್ಲ. ಉಸಿರಿನ ಕೊರತೆ – ಕೆಮ್ಮನ್ನು ನಿವಾರಿಸಲು ಔಷಧಿಗಳಿವೆ. ಧೂಮಪಾನ – ಮದ್ಯಪಾನ ತ್ಯಜಿಸಬೇಕು. ತಂಗಾಳಿ, ಮಂಜು, ಧೂಳು, ಇತ್ಯಾದಿ ಶ್ವಾಸಕೋಶವನ್ನು ಕೆರಳಿಸುವುದರಿಂದ ಅವುಗಳಿಂದ ಸಾಧ್ಯವಾದಷ್ಟು ದೂರವಿರಬೇಕು. ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಸೇವಿಸುವುದರಿಂದ ಸಿಲಿಕ ಬೇನೆಯನ್ನು ತಡೆಗಟ್ಟಬಹುದೆನ್ನುವ ಅಭಿಪ್ರಾಯಕ್ಕೆ ಆಧಾರಗಳಿಲ್ಲ. ಸಿಲಿಕ ರೋಗಿಗಳ ಉಗುಳಿನ ಪರೀಕ್ಷೆಯಲ್ಲಿ ಕ್ಷಯ ರೋಗಾಣುಗಳು ಕಂಡುಬರದಿದ್ದರೂ, ಕ್ಷಯ ವಿರುದ್ಧ ಚಿಕಿತ್ಸೆ ನೀಡುವುದು ಕ್ಷೇಮವೆಂದು ಕೆಲವರ ಅಭಿಪ್ರಾಯ.

ಧೂಳುನಿಯಂತ್ರಣದಿಂದ ಬಹುಮಟ್ಟಿಗೆ ಸಿಲಿಕಬೇನೆಯನ್ನು ತಡೆಗಟ್ಟಬಹುದು. ಧೂಳು ಉತ್ಪನ್ನವಾಗುವ ಸ್ಥಳಗಳಲ್ಲಿ ಸಿಲಿಕ – ಸಿಲಿಕೇಟ್‌ಗಳಿಂದ ಕೂಡಿದ ವಸ್ತುಗಳನ್ನು ತೊರೆಯಬೇಕು ಇಲ್ಲವೇ ನಿರಪಾಯಕಾರೀ ವಸ್ತುಗಳನ್ನು ಬಳಸಬೇಕು. ಉದಾಹರಣೆಗೆ ಪಿಂಗಾಣೀ ತಳಗಟ್ಟಿಗೆ ಚಕಮಕಿ (flint) ಕಲ್ಲಿನ ಪುಡಿ ಬದಲಾಗಿ ಅಲ್ಯೂಮಿನಿಯಂ ಹೈಡ್ರಾಕ್ಸೈಡ್ ಉಪಯೋಗಿಸಬಹುದು. ಕುಲುಮೆಗಳಲ್ಲಿ ಸಿಲಿಕ ಪುಡಿಯ ಬದಲಾಗಿ ಆಲಿವಿನ್ ಬೇರ್ಪಡಿಸುವ ಪುಡಿಯನ್ನುಪಯೋಗಿಸಬೇಕು. ಉಕ್ಕಿನ ಕುಲುಮೆಗಳಲ್ಲಿ, ಕಲ್ಲಿದ್ದಲು ಭಟ್ಟಿಗಳಲ್ಲಿ ಸಿಲಿಕ ಇಟ್ಟಿಗೆಗಳ ಬದಲಾಗಿ ಮ್ಯಾಗ್ನೆಸೈಟ್‌ಗಳನ್ನು ಬಳಸಬೇಕು.

ಬದಲಾವಣೆ ಅಸಾಧ್ಯವಾದರೆ, ಧೂಳು ನಿಯಂತ್ರಣಕ್ಕಾಗಿ ಸುತ್ತಲೂ ಆವರಣ ಕಟ್ಟಬೇಕು, ಅಥವಾ ಹೆಚ್ಚುವೇಗದಲ್ಲಿ, ಸಣ್ಣ ಪ್ರಮಾಣದಲ್ಲಿ ಹೊರತೆಗೆಯುವ ಗಾಳಿಯಿಂದ (High Velocity - Small Volume Air Extractor) ಧೂಳನ್ನು ಹೊರದೂಡಬೇಕು. ಅದನ್ನು ಹೊರಗಿನ ವಾತಾವರಣದೊಂದಿಗೆ ಬಿಡುವ ಮುಂಚೆ ಧೂಳನ್ನು ಸ್ವಚ್ಛಗೊಳಿಸಬೇಕು. ಉತ್ಪತ್ತಿಯಾಗುವ ಧೂಳನ್ನು ಅಡಗಿಸುವುದಕ್ಕೆ ಆಳವಾದ ಗಣಿಗಳಲ್ಲಿ ಉಪ್ಪುನೀರನ್ನು ತುಂತುರಾಗಿ ಸಿಂಪಡಿಸುತ್ತಾರೆ. ಇದು ಕಾರ್ಯ್ಯಾಚರಣೆಯಲ್ಲಿ ಅಸಾಧ್ಯವಾದರೆ, ಇತರ ಕ್ರಮಗಳನ್ನು ಕೈಗೊಳ್ಳಬೇಕು. ಉದಾಹರಣೆಗೆ – ಗಣಿಗಳಲ್ಲಿ ನೀರಿನಿಂದ ನಡೆವ ಬೈರಿಗೆ ಯಂತ್ರವನ್ನು ಉಪಯೋಗಿಸಬೇಕು. ಒಣ ಬೈರಿಗೆಯ ಬದಲು ಬಂಡೆನೆಲ ಅಥವಾ ಕಲ್ಲುಗಣಿ (Quarry) ಮಾಡಬೇಕು. ದೊಡ್ಡ-ದೊಡ್ಡ ಎರಕ ಹೊಯ್ಯುವೆಡೆಗಳಲ್ಲಿ ಮದ್ದಿನ ಸಿಡಿತದ ಬದಲು ನೀರಿನಿಂದ ಸಿಡಿಸಬೇಕು. ತಲೆಯಮೇಲೆ ಶಿರಸ್ತ್ರಾಣಗಳನ್ನು ಧರಿಸಿ, ಅಲ್ಪ ಒತ್ತಡದ

ಸ್ವಚ್ಛಗಾಳಿಯನ್ನು ಒದಗಿಸಬೇಕು. ಧೂಳುಕಣಗಳನ್ನು ಸ್ವಚ್ಛಗೊಳಿಸುವ ಊಸಿರಾಟದ ಯಂತ್ರಗಳ ಉಪಯೋಗ ಸಿಲಿಕ ಬೇನೆಯನ್ನು ತಡೆಗಟ್ಟುವುದರಲ್ಲಿ ಸಹಕಾರಿ.

ಸರ್ಕಾರದ ಕಾರ್ಮಿಕ ನಿಯಮಗಳಿಗನುಸಾರವಾಗಿ, ಗಣಿ ಉದ್ಯಮದ ಮಾಲೀಕರು ಆಗಿಂದಾಗ್ಯೆ ತಮ್ಮ ಕಾರ್ಮಿಕರನ್ನು ಸಿಲಿಕ ಬೇನೆಯ ಲಕ್ಷಣಗಳಿಗಾಗಿ ವೈದ್ಯಕೀಯ ಮತ್ತು ವಿಕಿರಣ ಪರೀಕ್ಷೆಗೆ ಒಳಪಡಿಸಬೇಕು. ಸಿಲಿಕ ಬೇನೆಯಿಂದ ನರಳುತ್ತಿದ್ದರೆ, ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಸಿಲಿಕ ಬೇನೆಯ ವರ್ಗೀಕರಣಕ್ಕನುಸಾರವಾಗಿ ಪರಿಹಾರ ಧನ ನೀಡಬೇಕು. ಇಷ್ಟೇ ಅಲ್ಲದೆ, ಧೂಳು ನಿಯಂತ್ರಣ ಕ್ರಮಗಳನ್ನು ಪಾಲಿಸುವುದು ಅತ್ಯವಶ್ಯಕ. ಕಾರ್ಮಿಕನಿಗೆ ಸಿಲಿಕ ಬೇನೆಯಿರುವ ಸಂದೇಹ ಉಂಟಾದರೆ ಸರ್ಕಾರಕ್ಕೆ ತಿಳಿಸಿದಲ್ಲಿ ತಜ್ಞರ ಮಂಡಳಿಯೊಂದು ಅವನನ್ನು ಪರೀಕ್ಷಿಸಿ ರೋಗವಿರುವುದು ಸಾಬೀತಾದಲ್ಲಿ ಪರಿಹಾರಧನ ಕೊಡಿಸುವ ಅವಕಾಶ ಸರ್ಕಾರ ಮಾಡಿದೆ.

ಕಲ್ನಾರು ಬೇನೆ

ಕಲ್ನಾರನ್ನು ಭೂಗರ್ಭದಿಂದ ಅಥವಾ ಬಂಡೆನೆಲದಿಂದ ತೆಗೆದು ಅದನ್ನು ಪುಡಿ ಮಾಡಿ ನಾರುಗಳನ್ನಾಗಿ ಬಿಡಿಸಿ ಹೊಸೆಯುತ್ತಾರೆ. ಕಾಗದ, ರಟ್ಟು, ಕಲ್ಲುಗಾರೆ, ವಿದ್ಯುದ್ರಕ್ಷಾಕವಚಗಳ ತಯಾರಿಕೆಯಲ್ಲಿ ಕಲ್ನಾರನ್ನು ಉಪಯೋಗಿಸುತ್ತಾರೆ.

ಕಲ್ನಾರು ನೀರಂಶವಿರುವ ಮೆಗ್ನೀಸಿಯಂ ಅಲ್ಯೂಮಿನಿಯಂ ಸಿಲಿಕೇಟ್. ಇದರ ಎಳೆಗಳನ್ನು ಉದ್ದುದ್ದವಾಗಿ ಎಲ್ಲೆಯ ಮಿತಿಯಿಲ್ಲದೆ ಎಷ್ಟು ಬೇಕಾದರೂ ಬಿಡಿಸಬಹುದು.

ಉಸಿರಿನ ಮೂಲಕ ಸೇವಿಸಲ್ಪಟ್ಟ ಕಲ್ನಾರು ತಂತುಗಳು ಶ್ವಾಸಕೋಶದ ತುದಿಯಲ್ಲಿರುವ ಶ್ವಾಸನಾಳಗಳಲ್ಲಿ ಶೇಖರವಾಗುತ್ತವೆ. ಇಪ್ಪತ್ತು ಮೈಕ್ರಾನ್‌ಗಳಿಗಿಂತ ಕಡಿಮೆ ಇರುವ ತಂತುಗಳು ನಿರಪಾಯಕಾರಿ. ಕಲ್ನಾರು ತಂತುಗಳು ಶ್ವಾಸಕೋಶದ ಊತಕಗಳನ್ನು ಛೇದಿಸಿಕೊಂಡು ಹೋಗುತ್ತವೆ. ಇದರ ವಿರುದ್ಧ ಹೋರಾಡಲು, ದೇಹ ದೈತ್ಯಾಕಾರದ ರಕ್ತಕಣಗಳನ್ನು ತಯಾರಿಸುತ್ತದೆ. ಅವು ಈ ತಂತುಗಳನ್ನು ನುಂಗಲು ಯತ್ನಿಸಿದಾಗ ತಂತುವಿನ ಉದ್ದ ಹೆಚ್ಚಿರುವುದರಿಂದ ಪೂರ್ತಾ ನುಂಗಲು ಸಾಧ್ಯವಾಗದೆ ದೈತ್ಯಾಕಾರದ ಕೋಶಗಳ ಸುತ್ತಮುತ್ತಲೂ ತಂತುಗೂಡುತ್ತದೆ.

ಕಲ್ನಾರು ತಂತು ದೈತ್ಯರಕ್ತಕಣದ ಪ್ರೋಟೀನ್ ಕವಚದೊಂದಿಗೆ ಸೇರಿದಾಗ ಪ್ರಭಾವೀ ಅಂಶವೊಂದು ಉತ್ಪತ್ತಿಯಾಗುತ್ತದೆ. ಇದು ರೋಗಜನಕದಂತೆ, ತಂತು ಗೂಡಿಸುತ್ತವೆ. ಇದರ ಜತೆಗೆ ಶ್ವಾಸನಾಳದ ಮೇಲ್ಪದರದ ಬೆಳವಣಿಗೆ ಅತಿಯಾಗಿ ಮುಂದೆ ಕ್ಯಾನ್ಸರ್‌ಗೆ ಪರಿವರ್ತಿಸುತ್ತದೆ.

ಸಿಲಿಕ ಬೇನೆಯಂತಪ ರೋಗಲಕ್ಷಣಗಳನ್ನೊಳಗೊಂಡ ಕಲ್ನಾರು ಬೇನೆಯಲ್ಲಿ ಕಾಣುವ ವ್ಯತ್ಯಾಸ – ಶ್ವಾಸಕೋಶದ ಕ್ಯಾನ್ಸರ್ ಲಕ್ಷಣಗಳು ಮತ್ತು ಉಗುಳಿನಲ್ಲಿ ಕಾಣುವ ಮುದ್ಗರ ಆಕಾರದ (Dumb-Bell shaped) ಕಲ್ನಾರು ಬೊಡ್ಡೆಗಳು. ವಿಕಿರಣ ಚಿತ್ರದಲ್ಲಿ, ಕಲ್ನಾರಿನಿಂದಾಗುವ ತಂತುಗೂಡುವಿಕೆ 'ಚುಕ್ಕಿಗಳಿಂದ ಕೆತ್ತಿದಂತೆ' ಕಲೆಗಳು ಕಂಡು ಬರುತ್ತವೆ. ಜತೆಗೆ ಕ್ಯಾನ್ಸರ್‌ನ ಲಕ್ಷಣವೂ ಇರಬಹುದು.

ಕಲ್ನಾರು ಬೇನೆಗೆ ಯಾವ ಚಿಕಿತ್ಸೆಯೂ ಇಲ್ಲ. ಕ್ಯಾನ್ಸರ್‌ನಿಂದ ಅಕಾಲ ಮರಣವಾಗಬಹುದು.

3. ಉರಿತವೇಳಿಸುವ ಪುಪ್ಪುಸ ಧೂಳು ತುಂಬಿಕೆ ರೋಗಗಳು

ವೆನಡಿಯಂ, ಬೆರಿಲಿಯಂ, ಮ್ಯಾಂಗನೀಸ್, ಕ್ಯಾಡ್ಮಿಯಂ, ಅಲ್ಯೂಮಿನಿಯಂ ಇತ್ಯಾದಿಗಳಿಂದ ಮಲಿನವಾಗಿರುವ ಧೂಳನ್ನು ಸೇವಿಸಿದಾಗ ಶ್ವಾಸಕೋಶದ ಉರಿತವಾಗಿ ಕಾರ್ಮಿಕರು ಸದಾಕಾಲದ ಕೆಮ್ಮಿನಿಂದ ನರಳುತ್ತಿರುತ್ತಾರೆ.

ವೆನಡಿಯಂ ಧೂಳು ಸೇವನೆಯಿಂದ ಆ ಕಾರ್ಮಿಕರು ಬಹಳ ಬೇಗನೆ ಹೃದಯ ಬೇನೆಗೆ ತುತ್ತಾಗುತ್ತಾರೆ. ಕಾರಣ, ವೆನೆಡಿಯಂ ಹೃದಯದ ಜೀವಕೋಶಗಳಿಗೆ ವಿಷಕಾರಿ.

ಮ್ಯಾಂಗನೀಸ್ ಧೂಳುಸೇವನೆಯಿಂದಾಗುವ ಶ್ವಾಸಕೋಶದುರಿತ (Pneumonia) ತನ್ನಷ್ಟಕ್ಕೆ ತಾನೇ ಮೂರು ವಾರದಲ್ಲಿ ವಾಸಿಯಾಗುತ್ತದೆ. ಆದರೆ ಈ ಧೂಳು ರಕ್ತದ ಮೂಲಕ ಕೇಂದ್ರದ ನರಮಂಡಲ ಸೇರಿದಾಗ ಒಂದು ರೀತಿಯ ನರಬೇನೆ ಏಳಬಹುದು.

ಅಣುಸಂಶೋಧನಾ ಕೇಂದ್ರಗಳಲ್ಲಿ ಬೆರಿಲಿಯಂ ಉಪಯೋಗಿಸುವುದರಿಂದ ಅಲ್ಲಿನ ಕಾರ್ಮಿಕರಿಗೆ 'ಬೆರಿಲಿಯಂ ವಿಷಮತೆ' ಆಗಬಹುದು. ಉಸಿರಿನ ಕೊರೆ, ತೂಕ ಕಡಿಮೆ, ದೈಹಿಕ ಸುಸ್ತು – ಇವೇ ಮೊದಲಾದ ರೋಗ ಲಕ್ಷಣಗಳು ಕಂಡು ಬರುತ್ತವೆ. ಎದೆಗೂಡಿನ ವಿಕಿರಣ ಚಿತ್ರದಲ್ಲಿ ಒಂದು ರೀತಿಯ 'ಹರಳು ಕಣಗಳ ಒಳಪಸರಿಕೆ' (Granulomatous Infiltration) ಕಂಡು ಬರಬಹುದು.

ಬೆರಿಲಿಯಂ ವಿಷಮತೆಯನ್ನು ತಡೆಗಟ್ಟುವುದಕ್ಕಾಗಿ ಧೂಳು ಮತ್ತು ಶಾಖ ನಿಯಂತ್ರಣ ಅತ್ಯಗತ್ಯ, ಕಾರಣ, ಅಚ್ಚೊತ್ತುವ ಎಡೆಗಳು, ಯಂತ್ರಾಗಾರ ಮತ್ತು ಮಿಶ್ರಲೋಹ ತಯಾರಿಕೆಯಲ್ಲಿ ಉತ್ಪನ್ನವಾಗುವ ಶಾಖ ಬೆರಿಲಿಯಂ ಹಬೆಯನ್ನು ತಯಾರಿಸುತ್ತದೆ. ಬೆರಿಲಿಯಂ ಕಾರ್ಮಿಕರು ಒತ್ತಿಬಿಡುವ ಗಾಳಿಗೊಳವೆಗಳಿಂದ (Positive Pressure Airline Respirator) ಉಸಿರಾಡುವಂತೆ ಏರ್ಪಡಿಸಬೇಕು. ಬೆರಿಲಿಯಂ ಕಾರ್ಮಿಕರು ಮನೆಗೆ ಹೋಗುವ ಮುಂಚೆ ಕೆಲಸ ಮಾಡುವಾಗಿನ ಬಟ್ಟೆ

ಕಳಚಿ, ಸ್ನಾನ ಮಾಡಿ ನಂತರ ಬೇರೆ ಉಡುಪು ತೊಟ್ಟು ಹೋಗಬೇಕು. ಬೆರಿಲಿಯಂ ಹಬೆಯನ್ನು ಧೂಳು ಹೀರುವ ಯಂತ್ರಗಳ ಸಹಾಯದಿಂದ ಹೊರಕ್ಕೊಯ್ದು ಅದನ್ನು ಸ್ವಚ್ಛಗೊಳಿಸಿ ವಾತಾವರಣಕ್ಕೆ ಹೊರದೂಡಬೇಕು. ಇಲ್ಲದಿದ್ದಲ್ಲಿ ಕಾರ್ಖಾನೆಯ ಸುತ್ತ ವಾಸಿಸುವ ಜನರಲ್ಲಿ ಕೂಡ ಬೆರಿಲಿಯಂ ವಿಷಮತೆ ಕಂಡು ಬರಬಹುದು.

'ಧೃಢ ಮಿಶ್ರ ಲೋಹ' (Hard Metal) ವನ್ನು ಇತರ ಗಟ್ಟಿ ಲೋಹ ಗಳನ್ನು ಕತ್ತರಿಸುವುದಕ್ಕೆ ಉಪಯೋಗಿಸುತ್ತಾರೆ. ಟಂಗ್‌ಸ್ಟನ್, ಇಂಗಾಲ ಮತ್ತು ಕೋಬಾಲ್ಟ್ ಮಿಶ್ರಣವನ್ನು ಕಾಯಿಸಿದಾಗ ಉತ್ಪತ್ತಿಯಾಗುವ ಕಾರ್ಬೈಡ್ ಅಂಶವೇ ಧೃಢ ಮಿಶ್ರ ಲೋಹ. ಇದನ್ನು ಯಂತ್ರೋಪಕರಣಗಳಿಗೆ ಅಳವಡಿಸುವಾಗ ಧೂಳು ಏಳುತ್ತದೆ. ಕೋಬಾಲ್ಟ್‌ನ ಅಂಶವಿರುವುದರಿಂದ ಈ ಧೂಳು ಸೇವನೆ ಯಿಂದ ಶ್ವಾಸಕೋಶದ ಕ್ಯಾನ್ಸರ್ ಬರಬಹುದು.

ಕ್ಯಾಡ್ಮಿಯಂ ಧೂಳು ಸೇವನೆಯಿಂದ ಗಂಟಲು-ಶ್ವಾಸನಾಳದ ಉರಿತದೊಂದಿಗೆ ಮೂತ್ರ ಪಿಂಡದಲ್ಲಿ ಹರಳುಗಳುಂಟಾಗಬಹುದು. ಅಲ್ಯೂಮಿನಿಯಂ ಧೂಳು ಸೇವನೆಯಿಂದ ಕೇಂದ್ರ ನರಮಂಡಲದಲ್ಲಿ ಬದಲಾವಣೆಗಳಾಗಿ ಅಂತಹ ಕಾರ್ಮಿಕರಲ್ಲಿ ಸೆಳೆವು (Fits) ತಲೆದೋರಬಹುದು.

4. ದೇಹಕ್ಕೆ ಒಗ್ಗದಿರುವಂತಹ ಧೂಳಿನಿಂದಾಗುವ ರೋಗಗಳು

ಕಳೆದ ಶತಮಾನದಲ್ಲಿ ಲಂಕಾಷೈರ್‌ನ ಹತ್ತಿಗಿರಣಿಯ ಕೆಲವು ಕಾರ್ಮಿಕರಿಗೆ ಒಂದು ರೀತಿಯ ವಿಚಿತ್ರ ಉಬ್ಬಸ ಬರುತ್ತಿತ್ತು – ಶನಿವಾರ ಭಾನುವಾರದ ರಜೆಯ ನಂತರ ಸೋಮವಾರ ಬೆಳಿಗ್ಗೆ ಕೆಲಸ ಪ್ರಾರಂಭಿಸುವ ಸಮಯದಲ್ಲಿ ಉಸಿರಿನ ಕೊರತೆ ಯಿಂದ ನರಳುತ್ತಿದ್ದರು. ಇದನ್ನು 'ಅರಳೆ ಬೇನೆ (byssinosis) ಅಥವಾ ಹತ್ತಿ ಧೂಳಿ ಉಬ್ಬಸ ಎನ್ನುತ್ತಾರೆ.

ಹತ್ತಾರು ವರ್ಷ ಗಿರಣಿಯಲ್ಲಿ ಕಲಸಮಾಡಿದವರಿಗೆ ಹತ್ತಿಯ ಧೂಳು ಅವರ ದೇಹಕ್ಕೆ ಒಗ್ಗದೇ ಇದ್ದಲ್ಲಿ ಅರಳೆಬೇನೆ ಕಂಡುಬರುತ್ತದೆ. ಅವರಲ್ಲಿಯೂ ಗಿರಣಿಯ ಬಿಡಿಸುವ ಮತ್ತು ಹಿಂಜುವ ವಿಭಾಗದ ಕಾರ್ಮಿಕರಲ್ಲಿ ಹೆಚ್ಚು. ಇದು ಸೆಣಬು, ಅಗಸೆ ನಾರಿನ ಕೆಲಸಗಾರರಲ್ಲಿಯೂ ಸಾಮಾನ್ಯ.

ಹಲವಾರು ವರ್ಷಗಳ ಸಂಶೋಧನೆಯಿಂದಾಗಿ ಹತ್ತಿಯ ಸಾರಕದಲ್ಲಿ ಹಿಸ್ಟಮಿನ್ ಎಂಬಂಶವೂ ಮತ್ತು ನಯ ಸ್ನಾಯುಗಳು ಸಂಕುಚಿತಗೊಳಿಸುವಂತಹ ಪ್ರಚೋದಕವೂ ಇದೆಯೆಂದು ತಿಳಿದಿದೆ. ಈ ಅಂಶದಿಂದ ಕಾರ್ಮಿಕನ ಶ್ವಾಸಕೋಶದ ಸ್ನಾಯುಗಳು ಸಂಕುಚಿತಗೊಂಡು ಉಸಿರಿನ ಕೊರೆ ಉಂಟಾಗುತ್ತದೆ.

ವಾರದ ರಜೆ ನಂತರ ಕೆಲಸದ ಮೊದಲಲ್ಲಾಗುವ ಈ ರೋಗ ಲಕ್ಷಣಗಳು ಕಾಲಕ್ರಮೇಣ ಕೆಲಸಮಾಡುವ ಎಲ್ಲಾ ಸಮಯದಲ್ಲಿಯೂ ಕಂಡುಬಂದು ಅವನ ಕೆಲಸಕ್ಕೆ ಅಡಚಣೆ ಮಾಡುತ್ತವೆ.

ಅರಳೆ ಬೇನೆಯ ರೋಗಿಯಲ್ಲಿ ವಿಕಿರಣ ಚಿತ್ರವಾಗಲೀ, ರಕ್ತಪರೀಕ್ಷೆಯಾಗಲೀ ಯಾವ ಬದಲಾವಣೆಯನ್ನೂ ತೋರಿಸುವುದಿಲ್ಲ. ಈ ಬೇನೆಗೆ ತುತ್ತಾದವರು ಮತ್ತೊಂದು ಸೂಕ್ತ ಉದ್ಯೋಗ ಹಿಡಿಯುವುದೊಂದೇ ಮಾರ್ಗ.

ಕೆಲವರು ರೈತರಲ್ಲಿ 'ಅಣಬೆ ಧೂಳಿನ ಗೂರಲು' (Farmer's Lung) ಕಂಡುಬರುತ್ತದೆ. ಹುಲ್ಲಿನ ಮೆದೆಗಳು ಮಳೆಗಾಲದಲ್ಲಿ ನೀರಿನಿಂದ ನೆನೆದಾಗ ಪ್ರಭಾವೀ ಅಂಶವೊಂದು ಉತ್ಪತ್ತಿಯಾಗುತ್ತದೆ. ಆ ಧೂಳನ್ನು ಸೇವಿಸಿದ ಐದಾರು ಗಂಟೆಗಳಲ್ಲಿ ಆ ಧೂಳಿಗೆ ಒಗ್ಗದ ರೈತನಲ್ಲಿ ಆಲಸಿಕೆ, ತಲೆನೋವು ಪ್ರಾರಂಭವಾಗಿ ಜ್ವರ ಮೈದೋರುತ್ತದೆ. ಜತೆಗೆ ಉಸಿರು ಕೊರೆ, ಕೆಮ್ಮು, ರಕ್ತಸಿಕ್ತ ಉಗುಳೂ ಸಹ ಕಂಡುಬರಬಹುದು. ಇತರ ರೋಗ ಚಿಹ್ನೆಗಳು ಕೆಲವೇ ದಿನಗಳಲ್ಲಿ ಮಾಯವಾದರೂ ಉಸಿರುಕೊರೆ ತಿಂಗಳುಗಟ್ಟಲೆ ಬಾಧಿಸುತ್ತದೆ. ರೋಗಿ ಪೂರ್ತಿಯಾಗಿ ಚೇತರಿಸಿಕೊಂಡರೂ ಪುನಃ ಈ ಧೂಳನ್ನು ಸೇವಿಸಿದರೆ ರೋಗ ಮರುಕಳಿಸಬಹುದು.

ಕಬ್ಬಿನ ರಸ ತೆಗೆದನಂತರ ಉಳಿಯುವ ಹಿಪ್ಪೆಯನ್ನು ಕಾಗದ, ರಟ್ಟು ಮತ್ತು ವಿದ್ಯುದ್ರಕ್ಷಕ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಈ ಹಿಪ್ಪೆಯ ಕಟ್ಟುಗಳನ್ನು ಪುಡಿಮಾಡುವುದು ಧೂಳೇಳಿಸುವ ಕೆಲಸ. ಇದರ ಧೂಳುಸೇವನೆಯಿಂದ 'ಅರಳೆ ಬೇನೆ'ಯಂತಹ ಸ್ಥಿತಿ ಉಂಟಾಗಬಹುದು.

ಮರವನ್ನು ಗರಗಸದಿಂದ ಕೊಯ್ದಾಗ ಏಳುವ ಧೂಳುಸೇವನೆಯಿಂದ ಮತ್ತು ಮುದ್ರಣ ಉದ್ಯಮದಲ್ಲುಂಟಾಗುವ ಜಾಲಿಗೋಂದಿನಿಂದ ಕೆಲವರಿಗೆ ಗೂರಲಾಗಬಹುದು.

ದೇಹಕ್ಕೆ ಒಗ್ಗದಿರುವಂತಹ ಧೂಳಿನಿಂದೇಳುವ ರೋಗಗಳಿಗೆ ಉದ್ಯೋಗ ಬದಲಾವಣೆಯೊಂದೇ ಪರಿಹಾರ ಮಾರ್ಗ.

○ ○ ○ ○ ○

ಧೂಳಿನಿಂದೇಳುವ ಭಯಂಕರ ಪರಿಣಾಮಗಳು ಇವು. ಸರಿಯಾದ ಧೂಳು ನಿಯಂತ್ರಣ ಮತ್ತು ಸಕಾಲಿಕ ವೈದ್ಯಕೀಯ ತಪಾಸಣೆಯಿಂದ ಈ ರೋಗಗಳನ್ನು ತಡೆಗಟ್ಟಬಹುದು. ಉಸಿರಾಟದ ಅಂಗಗಳು ಊನವಾದವರನ್ನೂ ಕ್ಷಯದಿಂದ ನರಳುತ್ತಿರುವವರನ್ನೂ ಧೂಳುಂಟುಮಾಡತಕ್ಕಂತಹ ಉದ್ಯಮಗಳಿಗೆ ಅನರ್ಹರನ್ನಾಗಿ ಮಾಡುವುದು ಅತ್ಯಾವಶ್ಯಕ. ವಿಜ್ಞಾನದ ಕೈಗಾರಿಕಾ ಪ್ರಗತಿಯಲ್ಲಿ ಧೂಳಿನಿಂದೇಳುವ ರೋಗಗಳೂ ಮಾಯವಾಗುವುದೆಂದು ಆಶಿಸೋಣವೇ ?

ಗ್ರಂಥ ಋಣ

1. Indian Mining and Engineering Journal - March 75, Oct. 75.
2. Diseases of Occupations – Donald Hunter.
3. Text Book of Preventive & Social Medicine - J. Park.
4. Principles and Practice of Medicine - Price.
5. ಡಾ॥ ಡಿ. ಎಸ್. ಶಿವಪ್ಪನವರ ವೈದ್ಯಪದಕೋಶ.
   (ಸಿಲಿಕ ಬೇನೆಯ ಕುರಿತು ಅಧ್ಯಯನ ಮಾಡುವುದಕ್ಕೆ ಮತ್ತು ಲೇಖನಕ್ಕೆ ಬೇಕಾಗುವ ಪ್ರತ್ಯಕ್ಷ ಅಂಶಗಳನ್ನು ಒದಗಿಸಿದ ಹಟ್ಟಿ ಚಿನ್ನದ ಗಣಿಯ ಮುಖ್ಯ ವೈದ್ಯಾಧಿಕಾರಿ ಡಾ॥ ಡಿ. ಕೆ. ನಾರಾಯಣರಾಯರಿಗೆ ಲೇಖಕ ಚಿರಋಣಿ)

ತಪಸ್ಸಿನ ಎರಡು ಕೋಡುಗಳು : ಒಂದು ಪ್ರತಿಕ್ರಿಯೆ

ಜನ್ನನ 'ಯಶೋಧರಚರಿತೆ'ಯ ಪದ್ಯವೊಂದರಲ್ಲಿ ಬರುವ "ತಪಕೆ ಬೇಱೆ ಕೋಡೆರಡೊಳವೇ" ಎಂಬ ಪ್ರಸಿದ್ಧವಾದ ಮಾತನ್ನೆತ್ತಿಕೊಂಡು (ಮಂಥನ, ಸಾಧನೆ, ೫.೪), "ಪರೀಷಹ ಜಯಮೆ ತಪಂ" ಎಂಬಲ್ಲಿ ತಪಸ್ಸಿನ ಒಂದು ಕೋಡು ಉಕ್ತವಾಗಿದೆಯೆಂದೂ ಇನ್ನೊಂದು ಕೋಡನ್ನು ಜನ್ನ ಹೇಳಿದ್ದರೂ ಅದನ್ನು ಬಹಳ ಜನ ಗಮನಿಸಿಲ್ಲವೆಂದೂ ಎಂ. ಚಿದಾನಂದ ಮೂರ್ತಿಯವರು ತಿಳಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಾರೂಪವಾಗಿ ಎರಡು ಮಾತುಗಳನ್ನು ಹೇಳುವುದು ಇಲ್ಲಿ ನನ್ನ ವಿವಕ್ಷೆ.

ಮೂಲಭೂತವಾಗಿ ಲಕ್ಷಿಸಬೇಕಾದ ಸಂಗತಿಯೆಂದರೆ, 'ಎರಡು ಕೋಡು' ಎಂಬುದು ಒಂದು ನುಡಿಗಟ್ಟು (idiom), ಲೆಕ್ಕಾಚಾರಕ್ಕೆ ಸಂಬಂಧಿಸಿದ್ದಲ್ಲ ಎಂಬುದು. "ಅವನಿಗೇನು ಎರಡು ಕೋಡುಗಳಿವೆಯೋ ?" (ಎಂದರೆ, ಯಾರಿಗೂ ಇಲ್ಲದ ದೊಡ್ಡಸ್ತಿಕೆ ಅವನಿಗೇನಿದೆ ?) ಎಂಬಂತಹ ಮಾತು ಇಂದಿಗೂ ಚಾಲ್ತಿಯಲ್ಲಿದೆ. ಹೀಗೆ ಹೇಳುವಾಗ, ಎರಡರಲ್ಲಿ ಒಂದು ಕೋಡು ಯಾವುದು, ಮತ್ತೊಂದು ಕೋಡು ಯಾವುದು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ ; ಅಂಥ ತಾರ್ಕಿಕ ಪ್ರಶ್ನೆಗೆ ಅರ್ಥವೂ ಇರುವುದಿಲ್ಲ. ಆದ್ದರಿಂದ ಜನ್ನನ ಮಾತಿನಲ್ಲಿ ಎರಡು ಕೋಡುಗಳನ್ನು ಎರಡು ಕಡೆ ಹುಡುಕಲು ಮೂರ್ತಿಯವರು ಮಾಡಿರುವ ಪ್ರಯತ್ನ ಅನಗತ್ಯವೆಂದು ತೋರುತ್ತದೆ.

ಸಂಬಂಧಿಸಿದ ಜನ್ನನ ಪೂರ್ತಿ ಪದ್ಯ ಹೀಗಿದೆ :

ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ

ಈ ಪದ್ಯದಲ್ಲಿ ಬರುವ "ಪೆತ್ತ ಪರೀಷಹಜಯಮೆ ತಪಂ, ತಪಕೆ ಬೇಱೆ ಕೋಡೆರಡೊಳವೇ" ಎಂಬುದನ್ನಷ್ಟೆ ತೆಗೆದುಕೊಂಡು, "ಬಂದ ನೋವು, ಕ್ಲೇಶ ಇತ್ಯಾದಿ ಪರೀಷಹಗಳನ್ನು ಜಯಿಸುವುದೇ ತಪಸ್ಸು ; ತಪಸ್ಸಿಗೆ ಬೇರೆ ಎರಡು ಕೋಡುಗಳಿಲ್ಲ" ಎಂದು ಸಾಮಾನ್ಯವಾಗಿ ಅರ್ಥೈಸಲಾಗುತ್ತದೆ ಎಂದು ಮೂರ್ತಿಯವರ ಆಕ್ಷೇಪಣೆ. ಇದು ಸರಿಯಲ್ಲವೆಂದು ಹೇಳಬೇಕಾಗಿದೆ. "ನಿಯತಿಯನಾರ್ ಮೀಱಿದಪರ್, ಭಯಮೇವುದೊ" ಎಂಬುದನ್ನು ಬಿಟ್ಟರೆ, ಮುಂದಿನ ಪದ್ಯಭಾಗದ ಅನ್ವಯ

ವನ್ನು ಎಚ್ಚರದಿಂದ ಮಾಡಿಕೊಳ್ಳಬೇಕು ಎಂದು ಮೂರ್ತಿಯವರು ಸೂಚಿಸಿ, "ನಯ ವಿದೆ, ಕೇಳ್, ಮುಟ್ಟಿದೆಡೆಗೆ ಸೈರಿಸುವುದೆ, ಪೆತ್ತ ಪರೀಷಹ ಜಯಮೆ ತಪಂ ; ತಪಕೆ ಬೇಱೆ ಕೋಡೆರಡೊಳವೇ ?'' ಎಂದು ಅನ್ವಯಕ್ರಮವನ್ನು ಕೊಟ್ಟು, ಹೀಗೆ ಅನುವಾದಿಸಿದ್ದಾರೆ : "ಎಲೈ ನಯುವಿದೆಯೇ ಕೇಳು, ನಾವು ಹೋದ ಅಥವಾ ಸೇರಿದ ಜಾಗವನ್ನು ಅಥವಾ ಸ್ಥಿತಿಯನ್ನು ಸಹಿಸಿಕೊಳ್ಳಬೇಕು (ಅರ್ಥಾತ್ ನಾವು ಪಡೆದ ಮಾನುಷ ಜನ್ಮವನ್ನು ಸುಮ್ಮನೆ ಒಪ್ಪಿಕೊಳ್ಳಬೇಕು) ; ಮತ್ತು. ನಮ್ಮ ಸಾಧನೆಯಲ್ಲಿ ಒದಗುವ ಪರೀಷಹಗಳನ್ನು ಗೆಲ್ಲಬೇಕು—ಇವೇ ತಪಸ್ಸು. ಇವನ್ನು ಬಿಟ್ಟರೆ ತಪಸ್ಸಿಗೆ ಬೇರೆ ಎರಡು ಕೋಡುಗಳಿಲ್ಲ''.

ಪ್ರಸಕ್ತ ಭಾಗವನ್ನು ಮೂರ್ತಿಯವರ ಮಾರ್ಗದಲ್ಲೆ ಅರ್ಥೈಸುವ ಪ್ರಯತ್ನ ಗಳು ಹಿಂದೆಯೆ ನಡೆದಿವೆಯೆಂಬುದು ಗಮನಾರ್ಹ. ನಿದರ್ಶನಕ್ಕೆ ಎಚ್. ಎಂ. ಶಂಕರನಾರಾಯಣರಾಯರು ಹೀಗೆ ಅರ್ಥಮಾಡಿದ್ದಾರೆ: "ಜೈನ ಮಾರ್ಗವನ್ನು ಅರಿತವಳೆ, ಕೇಳು,...ಆಪತ್ತು ಬಂದ ಸಂದರ್ಭದಲ್ಲಿ ಅದನ್ನು ತಡೆದುಕೊಳ್ಳುವುದೇ (ತಪಂ). ಹೊಂದಿದ ತಪೋವಿಘ್ನಕಾರಿಗಳಾದ ಹಸಿವು, ನೀರಡಿಕೆ ಮೊದಲಾದ ಕ್ಲೇಶಗಳನ್ನು ಗೆಲ್ಲತಕ್ಕದೆ ತಪಸ್ಸು. ಹಾಗಲ್ಲದೆ ತಪಸ್ಸಿಗೆ ಪ್ರತ್ಯೇಕವಾಗಿ ಎರಡು ಕೊಂಬು ಉಂಟೇ ?''[1] ("ಮುಟ್ಟಿದೆಡೆಗೆ ಸೈರಿಸುವುದು'' ಎಂಬುದಕ್ಕೆ ಖಚಿತವಾಗಿ ಏನರ್ಥ ? ರಾಯರ ವಿವರಣೆಯೆ ಹೆಚ್ಚು ಯುಕ್ತವಾಗಿ ಕಾಣುತ್ತದೆ. "ನಾವು ಹೋದ ಅಥವಾ ಸೇರಿದ ಜಾಗವನ್ನು ಅಥವಾ ಸ್ಥಿತಿಯನ್ನು ಸಹಿಸಿಕೊಳ್ಳಬೇಕು" ಎಂಬ ಮೂರ್ತಿಯವರ ವಿವರಣೆಯನ್ನು ಒಪ್ಪಬಹುದಾದರೂ, "ನಾವು ಪಡೆದ ಮಾನುಷ ಜನ್ಮವನ್ನು ಸುಮ್ಮನೆ ಒಪ್ಪಿಕೊಳ್ಳಬೇಕು'' ಎಂಬುದನ್ನಂತೂ ಒಪ್ಪುವುದು ಅಸಾಧ್ಯ. ಅಭಯ ಮತಿಯ ಪ್ರತ್ಯುತ್ತರ ಇದಕ್ಕೆ ಪೋಷಕವೆನಿಸುವುದಿಲ್ಲ.)

ವಾಸ್ತವವಾಗಿ, ಶಂಕರನಾರಾಯಣರಾವ್, ಚಿದಾನಂದ ಮೂರ್ತಿ ಇಬ್ಬರ ಅನ್ವಯಕ್ರಮವೂ ಸಾಧುವಾಗಿ ತೋರುವುದಿಲ್ಲ. "ಮುಟ್ಟಿದೆಡೆಗೆ ಸೈರಿಸುವುದೆ'' ಎಂಬುದೂ "ಪೆತ್ತ ಪರೀಷಹಜಯಮೆ ತಪಂ" ಎಂಬುದೂ ಬೇರೆ ಬೇರೆ ಸ್ವತಂತ್ರ ವಾಕ್ಯಗಳಾಗಿ ನಿಲ್ಲುತ್ತವೆ ಎಂಬುದು ಇಲ್ಲಿ ಸೂಚಿಸಬೇಕಾದ ಮುಖ್ಯಾಂಶ. "ಕೇಳ್, ನಯವಿದೆ'' ಎಂಬ ಸಂಬೋಧನೆ ಎರಡನ್ನೂ ಬೇರ್ಪಡಿಸುತ್ತದೆ. ಹಾಗಲ್ಲದೆ ಅಷ್ಟೂ ಒಂದು ವಾಕ್ಯ ಎನ್ನುವುದಾದರೆ ಅಂಥ ವಾಕ್ಯರಚನೆ ವಿಲಕ್ಷಣವಾಗಿ ಭಾಸವಾಗದಿರದು. 'ತಪ' ಎಂಬ ಮಾತು "ಪೆತ್ತ ಪರೀಷಹಜಯ"ಕ್ಕೆ ಮಾತ್ರ ಅನ್ವಯಿಸುತ್ತದೆ, "ಮುಟ್ಟಿದೆಡೆಗೆ ಸೈರಿಸುವುದೆ'' ಎಂಬುದಕ್ಕಲ್ಲ, "ಮುಟ್ಟಿದೆಡೆಗೆ ಸೈರಿಸುವುದೆ'' ಎಂದರೆ, "ವಿಪತ್ತು ಬಂದಾಗ ಸಹಿಸಿಕೊಳ್ಳಬೇಕಷ್ಟೆ"ಎಂಬ ಅರ್ಥ ಸ್ಪಷ್ಟ : "ಇನ್ನೇನು,

1. 'ಯಶೋಧರ ಚರಿತೆಯ ಸಂಗ್ರಹದ ವಿವರಣೆ', ೧೯೪೯, ಪು. ೧೫.

ಮನೆಗೆ ಹೋಗುವುದೆ" ಎಂದಾಗ, ''ಮನೆಗೆ ಹೋಗತಕ್ಕದ್ದೇ, ಗತ್ಯಂತರವಿಲ್ಲ" ಎಂದು ಅರ್ಥವಾಗುವಂತೆ.

ಆದ್ದರಿಂದ, ''ಪೆತ್ತ ಪರೀಷಹಜಯಮೆ ತಪಂ" ಎಂಬುದಕ್ಕೆ ''ಮುಟ್ಟಿದೆಡೆಗೆ ಸೈರಿಸುವುದೆ'' ಎಂಬುದನ್ನು ಲಗತ್ತಿಸುವುದು ಅನವಶ್ಯಕ. ಅದಕ್ಕೊಂದು ಕೋಡು, ಇದಕ್ಕೊಂದು ಕೋಡು ಹಂಚುವುದು ಅಸಹಜ ಮತ್ತು ತಕ್ಕಮಟ್ಟಿಗೆ ಅನುಚಿತ. ಅಲ್ಲದೆ, "ಮುಟ್ಟಿದೆಡೆಗೆ ಸೈರಿಸುವುದು", "ಪೆತ್ತ ಪರೀಷಹಜಯ"—ಎರಡೂ ತಪ ಎಂದಾಗ ಪುನರುಕ್ತಿದೋಷಕ್ಕೂ ಎಡೆಯಾಗುತ್ತದೆ. ಏಕೆಂದರೆ, (ಕ್ಲೇಶವನ್ನು) ಸೈರಿಸುವುದು ಬೇರೆಯಲ್ಲ, ಪರೀಷಹಜಯ ಬೇರೆಯಲ್ಲ.

ಈ ದೃಷ್ಟಿಯಿಂದ, ಪ್ರಸಕ್ತ ಭಾಗವನ್ನು ಹೀಗೆ ಅನುವದಿಸಬಹುದು : "ಬಂದ ಅವಸ್ಥೆಯನ್ನು (ಆಪತ್ತನ್ನು) ಸಹಿಸಿಕೊಳ್ಳುವುದೇ ಸರಿ. ನಯವಿದೆ, ಕೇಳು : ಉಂಟಾದ ಪರೀಷಹಗಳನ್ನು ಗೆಲ್ಲುವುದೆ ತಪಸ್ಸು. ತಪಸ್ಸಿಗೆ ಬೇರೆ ಎರಡು ಕೋಡುಗಳುಂಟೆ ?''

ಇಲ್ಲಿ ''ಪೆತ್ತ ಪರೀಷಹಜಯಮೆ ತಪಂ" ಎಂಬುದು ಸೂತ್ರಪ್ರಾಯವಾದ ನುಡಿ. ಅದಕ್ಕೆ ವ್ಯಾಖ್ಯಾನದಂತಿದೆ "ಮುಟ್ಟಿದೆಡೆಗೆ ಸೈರಿಸುವುದೆ" ಎಂಬ ಮಾತು ; ಅದಕ್ಕೆ ಅಷ್ಟೇನೂ ಪ್ರಾಮುಖ್ಯವಿಲ್ಲ. ಜನ್ನನ ಕಾವ್ಯಕ್ಕೆ ಆಕರವಾದ ವಾದಿರಾಜನ ಸಂಸ್ಕೃತ 'ಯಶೋಧರ ಚರಿತ'ದಲ್ಲಿ, "ಪೆತ್ತ ಪರಿಷಹಜಯಮೆ ತಪಂ'' ಎಂಬುದಕ್ಕೆ ಸಂವಾದಿಯಾಗಿ "ಕಿಂಚ ತೀವ್ರಂ ತಪಃ ಪ್ರಾಹುಃ ಪರೀಷಹ ಜಯಂ ಬುಧಾಃ" (ಬಲ್ಲವರು ಪರೀಷಹ ಜಯವನ್ನು ತೀವ್ರವಾದ ತಪವೆನ್ನುತ್ತಾರೆ)[2] ಎಂದಷ್ಟೆ ಬಂದಿರುವುದನ್ನು ಅವಶ್ಯವಾಗಿ ಲಕ್ಷಿಸಬೇಕು.

ಸಾರಾಂಶವಿಷ್ಟು : ಜನ್ನ ತಪಸ್ಸಿನ ಎರಡು ಪ್ರಕಾರಗಳನ್ನು ಹೇಳಿಲ್ಲ. ಅವನು ಹೇಳಿರುವುದು ಒಂದೇ ತಪಸ್ಸನ್ನು. ಅದು "ಪರೀಷಹಜಯ"; ಎರಡು ಕೋಡುಗಳೂ ಅದಕ್ಕೇ ಇರತಕ್ಕವು, ಅದರ ವಾಚ್ಯಾರ್ಥದಲ್ಲಲ್ಲ.

ಆದಕಾರಣ, ಸಾಮಾನ್ಯವಾಗಿ ಮಾಡುವಂತೆ. ಜನ್ನನ ಸದರಿ ಪದ್ಯದ ''ಪೆತ್ತ ಪರೀಷಹ ಜಯಮ ತಪಂ, ತಪಕೆ ಬೇಱೆ ಕೋಡೆರಡೊಳವೇ" ಎಂಬಷ್ಟನ್ನೇ ತೆಗೆದುಕೊಂಡು, ಅದಕ್ಕೆ "ಪರೀಷಹಗಳನ್ನು ಜಯಿಸುವುದೇ ತಪಸ್ಸು ; ತಪಸ್ಸಿಗೆ ಬೇರೆ ಎರಡು ಕೋಡುಗಳಿಲ್ಲ" ಎಂದು ಅರ್ಥಕಲ್ಪಿಸುವುದು ತಪ್ಪಾಗಲಾರದು. ಹಾಗೆ ಮಾಡಿದರೆ, ಅದು ಸಹಜವಾಗಿ ತೋರುತ್ತದೆ, ಮೂಲಕ್ಕೂ ಹೊಂದಿಕೊಳ್ಳುತ್ತದೆ.

---

2. ಪೂರ್ಣ ಪದ್ಯವಿದು :
ತಸ್ಮಾದವಶ್ಯಮನುಭೋಕ್ತವ್ಯೇ ಕಿಮುದ್ವೇಗಃ ಕರಿಷ್ಯತೇ
ಕಿಂಚ ತೀವ್ರಂ ತಪಃ ಪ್ರಾಹುಃ ಪರೀಷಹ ಜಯಂ ಬುಧಾಃ (೧-೩೮)

ಜನ್ನ "ತಪಸ್ಸಿನ ಎರಡು ಕೋಡುಗಳನ್ನೂ ಹೇಳಿದ್ದಾನೆ. ಒಂದನ್ನು ಮಾತ್ರ ಹೇಳಿ ತಪ್ಪು ಮಾಡಿದ್ದಾನೆ ಎಂದು ಅವನನ್ನು ಆಕ್ಷೇಪಿಸುವಂತಿಲ್ಲ" ಎನ್ನುತ್ತಾರೆ ಚಿದಾನಂದ ಮೂರ್ತಿಯವರು. ಹಾಗೆಂದು ಯಾರು ಆಕ್ಷೇಪಿಸಿದ್ದಾರೆ ಜನ್ನನನ್ನು ?

ಸಿ. ಪಿ. ಕೆ.

ತೆಲುಗು ಸಂಖ್ಯಾವಾಚಕ : ಒಕ

'ಒಕ' ಎಂಬುದು ತೆಲುಗು ಭಾಷೆಯಲ್ಲಿ 'ಒಂದು' ಎಂಬುದಕ್ಕೆ ಇರುವ ಜ್ಞಾತಿಶಬ್ದ. ಇದಕ್ಕೆ ಇತರ ದ್ರಾವಿಡ ಭಾಷೆಗಳ ಜ್ಞಾತಿಶಬ್ದಗಳು ಈ ರೀತಿ ಇವೆ :

ತಮಿಳ್ : ಒನ್ರು
ಕನ್ನಡ : ಒನ್ದು
ಮಲಯಾಳಂ : ಒನ್ನು
ತುಳು : ಒಞ್ಜಿ
ಕೋತ : ಒದ್ದ್
ತೊದ : ವೀದ್
ಕೊಡಗು : ಒನ್ದು
ಗೊಂಡಿ : ಒನ್ದೀ
ಕೊಂಡ : ಉನ್ದೀ
ಕುರುಖ್ : ಓನ್ದ್
ಮಲ್ತೋ : ಒರ್ತ್
ಬ್ರಾಹೂಈ : ಅಸಿಟ್
ಕೂಈ : ರೊಂಡೆ
ಕುವಿ : ರೊಂದಿ.

ತೆಲುಗಿನಲ್ಲಿ ಒಂದು ಎನ್ನಲು 'ಒಕಟಿ' ಎಂಬ ಮಾತೂ ಇದೆ. ಇಲ್ಲಿ '-ಟಿ' ಎಂಬುದು ಪ್ರತ್ಯಯ. ದ್ರಾವಿಡ ಭಾಷೆಗಳಲ್ಲಿ ಎಲ್ಲಿಯೂ 'ಒಕ' ಎಂಬಲ್ಲಿರುವ ಕಂಠ್ಯ ವ್ಯಂಜನ ಕಂಡುಬರುವುದಿಲ್ಲ. ಇದರಲ್ಲಿ ಕಂಠ್ಯ ಪರುಷ ಸ್ಪರ್ಶವರ್ಣ ಹೇಗೆ ಬಂತು ಎಂಬುದನ್ನು ಯಾವ ಭಾಷಾ ವಿಜ್ಞಾನಿಯೂ ಇಷ್ಟರವರೆಗೆ ಸಾಧಿಸಿ ತೋರಿಸಿಲ್ಲ. ಇದರ ಬಗೆಗೆ R. Caldwell ಹೀಗೆ ಹೇಳಿದ್ದಾನೆ :

"Is the Telugu Oka derived as has sometimes been supposed, from the Sanskrit 'e : ka', one ? It will be seen also that the root of 'Oka' is probably Dravidian. Are the Tamil

'Or' and the Telugu 'Oka' related ? I think there can be little doubt of their relationship"[1].

ಇಲ್ಲಿ R. Caldwell 'Oka' ಎಂಬುದರ ಮೂಲ 'ಒರ್' ಎಂಬುದಿರಬಹುದು; ಅದರಲ್ಲಿ ಏನೂ ಸಂದೇಹವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ದ್ರಾವಿಡ ಭಾಷೆಯ ಶಿಷ್ಟ ಭಾಷೆಗಳ ಸಂಖ್ಯಾ ವಾಚಕಗಳನ್ನು ನೋಡಿದರೆ ನೂರರ ವರೆಗೆ ಅನ್ಯದೇಶ್ಯಗಳು ಬರುವುದಿಲ್ಲ. ಎಲ್ಲ ದ್ರಾವಿಡ ಭಾಷೆಗಳಲ್ಲಿಯೂ ಒಂದು ಎಂಬುದರ ಧಾತು ದ್ರಾವಿಡವೇ ಆಗಿದೆ. ಹೀಗೆ ತೆಲುಗಿನ 'ಒಕ' ಎಂಬುದು ವಿಚಿತ್ರವೂ, ಅಪೂರ್ವವೂ ಆಗಿದೆ. ಅದರ ನಿಷ್ಪತ್ತಿ ಹೇಗೆ ಎಂಬ ವಿಚಾರದಲ್ಲಿ ಏನಾದರೂ ಸ್ವಲ್ಪ ಮುಂದುವರಿಯುವುದು ಸಾಧ್ಯವೇ, ನೋಡೋಣ.

ಕನ್ನಡದ ಸಂಖ್ಯಾವಾಚಕಗಳಲ್ಲಿ ಕೆಲವದರಲ್ಲಿ ದ್ವಿರುಕ್ತಿಗಳು ಕಂಡುಬರುತ್ತವೆ. ಉದಾ :

ಛಪ್ಪನ್ನೈವತ್ತಾರು :	**ಛಪ್ಪನ್ನ (ಹಿಂದಿ)**	= **56**
	ಐವತ್ತಾರು (ಕನ್ನಡ)	= **56**
ಪಂಚೈವರು[2] :	**ಪಂಚ (ಸಂಸ್ಕೃತ)**	= **5**
	ಐವರು (ಕನ್ನಡ)	= **5 ಮಂದಿ**
ಈರೇಳು ಹದಿನಾಲ್ಕು :	**ಈರೇಳು**	= **14**
	ಹದಿನಾಲ್ಕು	= **14**
ಸಪ್ತೇಳು[3] :	**ಸಪ್ತ**	= **7**
	ಏಳು	= **7**

ಹೀಗೆಯೇ ತೆಲುಗು ಭಾಷೆಯ 'ಒಕ' ಎಂಬುದೂ ಒಂದು ದ್ವಿರುಕ್ತಿ.

ಒರ್ + ಏಕ = ಒಕ

ದ್ರಾವಿಡ (ಧಾತು) + (ಸಂಸ್ಕೃತ)

ಇವೆರಡು ಶಬ್ದಗಳು ಸೇರುವಾಗ 'ಒರ್' ಎಂಬುದರ ವ್ಯಂಜನವೂ, 'ಏಕ' ಎಂಬುದರ ದೀರ್ಘಸ್ವರವೂ ಲೋಪವಾಗಿ 'ಒಕ' ಎಂಬ ದ್ವಿರುಕ್ತಿ ಜನಿಸಿದೆ. ಇದನ್ನು ಹೀಗೆ ತೋರಿಸಬಹುದು :

or/ + e/: ka > Oka

---

1. R. Caldwell : A Comparative Grammar of Dravidian or South Indian Family of Languages : pp. 322–323
2. ಹಂತಿಯ ಹಾಡುಗಳು : ಡಾ॥ ಬಿ. ಎಸ್. ಗದ್ದಗೀ ಮಠ
3. ಗರತಿಯ ಹಾಡು

ಆದುದರಿಂದ ತೆಲುಗು ಸಂಖ್ಯಾವಾಚಕವಾದ 'ಒಕ' ಎಂಬುದು ಒಂದು ದ್ರಾವಿಡ ಪ್ರಕೃತಿಯೂ, ಇನ್ನೊಂದು ಸಂಸ್ಕೃತ ಸಂಖ್ಯಾವಾಚಕವೂ ಸೇರಿ ದ್ವಿರುಕ್ತಿಯ ಸ್ವರೂಪದಲ್ಲಿರುವ ಶಬ್ದವಾಗಿದೆ.

ಗುಂಡ್ಮಿ ಚಂದ್ರಶೇಖರ ಐತಾಳ

ಪುನರುಕ್ತ ತ್ರುಟಿತ ತ್ರಿಪದಿ

ನಮ್ಮ ವಿದ್ವಾಂಸರ ಅಧ್ಯಯನ, ಸಂಶೋಧನೆಗಳ ಫಲವಾಗಿ ಶಾಸನಗದ್ದುಗೆಯನ್ನಲಂಕರಿಸಿದ ತ್ರಿಪದಿಯ ಸಂಖ್ಯೆ ದಿನದಿಂದ ದಿನಕ್ಕೆ ಅಧಿಕವಾಗುತ್ತಿರುವುದು, ತ್ರಿಪದಿ ಛಂದಸ್ಸಿನ ಅಧ್ಯಯನಕ್ಕೆ ತುಂಬ ಒಳ್ಳೆಯದು.

ಡಾ॥ ಎಂ. ಚಿದಾನಂದಮೂರ್ತಿ ಅವರು "ಎರಡು ಶಾಸನೋಕ್ತ ಸೇರಿ ಒಟ್ಟು ಐದು ತ್ರಿಪದಿಗಳು"[1] ಎಂಬ ಲೇಖನದಲ್ಲಿ ಸೊರಬ ತಾಲೂಕಿನ ಕಲ್ಲೂರ ಗ್ರಾಮದ ಶಾಸನದಲ್ಲಿರುವ ತ್ರಿಪದಿಯನ್ನು ಉಲ್ಲೇಖಿಸಿದ್ದಾರೆ. ಈ ಶಾಸನದ ಕಾಲ ಕ್ರಿ. ಶ. 1138. ಚಿದಾನಂದಮೂರ್ತಿ ಅವರು ಉಲ್ಲೇಖಿಸಿದ ತ್ರಿಪದಿ, ಅದೇ (ಕಲ್ಲೂರ) ಗ್ರಾಮದ ಕ್ರಿ. ಶ. ಸು. 1280 (?)ರ ಶಾಸನದಲ್ಲಿ ಪುನರುಕ್ತಗೊಂಡಿರುವುದನ್ನು ತಿಳಿಸುವುದು ಈ ಲೇಖನದ ಉದ್ದೇಶ.

ಕ್ರಿ. ಶ. ಸು. 1280 (?)ರ ಕಲ್ಲೂರ ಗ್ರಾಮದ ಶಾಸನದಲ್ಲಿರುವ ತ್ರುಟಿತ ತ್ರಿಪದಿ[2] :

7. ......॥ ಜಿ। ಣೇ ಮಾರ್ವ್ವಲಮತಿತಂಣ.
8. ತ್ತಳ... ವುಂಣ ನೆತ್ತರಲ ನೆಲನಾ. ಯಿಱಯಲು
9. ....

ಡಾ॥ ಎಂ. ಚಿದಾನಂದಮೂರ್ತಿ ಅವರು ಉಲ್ಲೇಖಿಸಿದ ಕ್ರಿ. ಶ. 1138ರ ಕಲ್ಲೂರ ಗ್ರಾಮದ ಶಾಸನೋಕ್ತ ತ್ರಿಪದಿ[3] :

ಜೀರ್ಣೇ ಮಾರ್ಮಲವನ ತೀರ್ಣಮಾ ತಳವಾರ
ಪುಣ್ಣ ನೆತ್ತರಲು ನೆಲನಾಲೆಯಿಱಯಲು ಬೇ
ಳಣ್ಣನೆ ಬಲ್ಲ ಭುವನದಲು ॥ 4

---

1. ಸಾಧನೆ 5–3. ಪುಟ : 164–165.
2. Ec. VIII ಸೊರಬ 297–ಕಲ್ಲೂರ.
3. ಸಾಧನೆ 5–3. ಪುಟ : 164.
4. ಲೇಖಕರು ಈ ತ್ರಿಪದಿಯನ್ನು ಅಲ್ಲಲ್ಲಿ ಪರಿಷ್ಕಾರಗೊಳಿಸಿದ್ದಾರೆ.

ಎರಡೂ ಶಾಸನಗಳಲ್ಲಿ ಇದನ್ನು ತ್ರಿಪದಿಯೆಂದು ಹೆಸರಿಸಿಲ್ಲ. ಪ್ರಾಸ ಹಾಗೂ ಛಂದಸ್ಸನ್ನು ಗಮನಿಸಿ, ತ್ರಿಪದಿಯೆಂದು ಗುರುತಿಸಲಾಗಿದೆ.

ಒಂದು ಶಾಸನದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ತ್ರಿಪದಿಗಳು ದೊರೆತಿವೆ. ಆದರೆ ಒಂದು ಶಾಸನದಲ್ಲಿ ಉಕ್ತವಾದ ತ್ರಿಪದಿ, ಮತ್ತೆ ಬೇರೆ ಶಾಸನಗಳಲ್ಲಿ ಪುನರುಕ್ತವಾದ ಉದಾಹರಣೆಗಳು ಇಲ್ಲಿಯವರೆಗೆ ದೊರೆತಿರಲಿಲ್ಲ. ಇಲ್ಲಿ ನಾನು ಉಲ್ಲೇಖಿಸಿದುದು, ಸುಮಾರು ಒಂದು ಶತಮಾನದ ನಂತರ ಶಾಸನದಲ್ಲಿ ಪುನರುಕ್ತವಾದ ಪ್ರಥಮ ತ್ರಿಪದಿ. ಪುನರುಕ್ತಗೊಂಡ ಈ ತ್ರುಟಿತ ತ್ರಿಪದಿಯ ನಷ್ಟಭಾಗವನ್ನು ಈ ಕೆಳಗಿನಂತೆ ತುಂಬಿಕೊಡಲು ಸಾಧ್ಯವಿದೆ :

ಜಿಣೇ ಮಾರ್ವ್ವಲಮತಿ ತಂಣ [ಮಾ]ತ್ತಳ[ವಾರ]
ವುಂಣ ನೆತ್ತರಲು ನೆಲನಾ[ಲೆ]ಯಿಱಿಯಲು[ಬೇ]
[ಳಣ್ಣನೆ ಬಲ್ಲ ಭುವನದಲು ॥] 5

ಬಿ. ಆರ್. ಹಿರೇಮಠ

ಅಪ್ರಮಾಣಕೂಡಲಸಂಗಮದೇವಾಂಕಿತ ವಚನವೊಂದನ್ನು ಕುರಿತು

ಬಾಲಸಂಗಯ್ಯನ ವಚನಗಳು[1] ಕೃತಿಯಲ್ಲಿ ಪುಟ 193 ರಲ್ಲಿನ ಕ್ರಮಾಂಕ 8ನೆಯ ವಚನ ಈ ರೀತಿ ಪ್ರಕಟವಾಗಿದೆ :

'ಬ್ರಹ್ಮವಿಷ್ಣ್ವಾದಿಗಳು ತಾನಿರ್ದಲ್ಲಿ
ರುದ್ರ ಈಶ್ವರರು ತಾನಿರ್ದಲ್ಲಿ
ಪಂಚಮುಖ ದಶಭುಜವನುಳ್ಳ ಸದಾಶಿವ
ಜನಲೋಕ ತಾನಿರ್ದಲ್ಲಿ
ತಪೋಲೋಕ ತಾನಿರ್ದಲ್ಲಿ......... ..

ಮೇಲಿನ ವಚನದಲ್ಲಿನ 'ಬ್ರಹ್ಮವಿಷ್ಣ್ವಾದಿಗಳು......ಸದಾಶಿವ'—ಎಂಬ ಭಾಗ ಒಂದು ಪ್ರತ್ಯೇಕವಚನದ ಆರಂಭವಾಗಿದ್ದು ಉಳಿದ ಅಚ್ಚಿನ ಭಾಗವೆಲ್ಲ ಅದೇ ಪ್ರಕಟಿತ ಕೃತಿಯ[1] ಪುಟ 195ರಲ್ಲಿನ ಕ್ರಮಾಂಕ 13ನೆಯ ವಚನಕ್ಕೆ ಸೇರಿದುದಾಗಿದೆ.

---

5. ಚೌಕ ಕಂಸಿನಲ್ಲಿರುವ ಅಕ್ಷರಗಳನ್ನು Ec. VIII ಸೊರಬ ೨೮೯ ಕಲ್ಲೂರ (ಕ್ರಿ. ಶ. ೧೧೩೮) ಶಾಸನೋಕ್ತ ತ್ರಿಪದಿಯ ಸಹಾಯದಿಂದ ತುಂಬಿಕೊಳ್ಳಲಾಗಿದೆ.

* ಈ ಲೇಖನದ ಬರೆವಣಿಗೆಯಲ್ಲಿ ಸಲಹೆ–ಸೂಚನೆಗಳನ್ನು ನೀಡಿದ ಡಾ॥ ಎಂ. ಎಂ. ಕಲಬುರ್ಗಿ ಅವರಿಗೆ ಕೃತಜ್ಞತೆಗಳು.

1. ಸಂ : ಎಂ. ಎಸ್. ಸುಂಕಾಪುರ, ಕ.ವಿ.ವಿ., ಧಾರವಾಡ (1976)

ಮೇಲಿನ 'ಬ್ರಹ್ಮವಿಷ್ಣ್ವಾದಿಗಳು...' ಎಂಬ ವಚನದ ಪೂರ್ಣಪಾಠ ಡಾ॥ ಫ. ಗು. ಹಳಕಟ್ಟಿಯವರ "ವಚನ ಶಾಸ್ತ್ರಸಾರ" ಭಾಗ 1, ಪೂರ್ವಾರ್ಧ (1931–ದ್ವಿ. ಆವೃತ್ತಿ) ಪುಟ 15 ರಲ್ಲಿ ಪ್ರಕಟವಾಗಿದೆ. ಅಲ್ಲಿಂದ ವಚನದ ಸಮಗ್ರ ಪಾಠವನ್ನು ಉಲ್ಲೇಖಿಸಿದೆ.

> 'ಬ್ರಹ್ಮವಿಷ್ಣ್ವಾದಿಗಳು ತಾನಿರ್ದಲ್ಲಿ
> ರುದ್ರ ಈಶ್ವರರು ತಾನಿರ್ದಲ್ಲಿ
> ಪಂಚಮುಖದಶಭುಜವನುಳ್ಳ ಸದಾಶಿವರು ತಾನಿರ್ದಲ್ಲಿ
> ನಾಲ್ವತ್ತೆಂಟು ಸಾವಿರ ಮುನಿಗಳು ತಾನಿರ್ದಲ್ಲಿ
> ಮೂವತ್ತುಮೂರು ಕೋಟಿ ದೇವತೆಗಳು ತಾನಿರ್ದಲ್ಲಿ
> ತಾನೇ ಅಖಂಡ ಪರಿಪೂರ್ಣನಾಗಿ, ಮಹಾಘನವಲ್ಲದೆ
> ತನ್ನಿಂದಧಿಕವಪ್ಪ ಘನವಿಲ್ಲನೋಡಾ,
> ಅಪ್ರಮಾಣ ಕೂಡಲ ಸಂಗಮದೇವಾ'

ಎಸ್. ಶಿವಣ್ಣ

ಏಳನೆಯ ಅಖಿಲಭಾರತ ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನ, ಜೂನ್ 2–4, 1977

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮತ್ತು ತಿರುವಾಂಕೂರಿನ ದ್ರಾವಿಡ ಭಾಷಾವಿಜ್ಞಾನ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಇದೇ ಜೂನ್ 2 ರಿಂದ 4 ರವರೆಗೆ ಏಳನೆಯ ಅಖಿಲಭಾರತ ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನ ನಡೆಯಿತು. ಈ ಸಮ್ಮೇಳನ ಅನೇಕ ದೃಷ್ಟಿಗಳಿಂದ ವೈಶಿಷ್ಟ್ಯಪೂರ್ಣವಾಗಿದ್ದಿತು. ಹೆಚ್ಚಿನ ಸಂಖ್ಯೆಯ ವಿದ್ವಾಂಸರು, ಸಂಶೋಧಕರು (ಸುಮಾರು ನೂರೈವತ್ತು) ಇದರಲ್ಲಿ ಭಾಗವಹಿಸಿದ್ದರು (ಬಹುಶಃ ಬೆಂಗಳೂರಿನ ಆಕರ್ಷಣೆ!) ಮತ್ತು ಇವರಲ್ಲಿ ಯುವಕರು ಹೆಚ್ಚು ಸಂಖ್ಯೆಯಲ್ಲಿದ್ದುದು ಭಾಷಾವಿಜ್ಞಾನಕ್ಕೆ



ಸಮ್ಮೇಳನ ಪ್ರಾರಂಭೋತ್ಸವ

ಡಾ॥ ಎಂ. ಚಿದಾನಂದಮೂರ್ತಿ, ಡಾ॥ ಜಿ. ಎಸ್. ಶಿವರುದ್ರಪ್ಪ, ಡಾ॥ ಎಚ್. ನರಸಿಂಹಯ್ಯ, ಡಾ॥ ಸಿ. ಆರ್. ಶಂಕರನ್, ಡಾ॥ ವಿ. ಐ. ಸುಬ್ರಹ್ಮಣ್ಯಂ, ಡಾ॥ ಜಿ. ಕೆ. ಪಣಿಕ್ಕರ್.

ಭಾರತವಲ್ಲಿ ಒಳ್ಳೆಯ ಭವಿಷ್ಯವಿದೆಯೆಂಬುದನ್ನು ತೋರುವಂತಿದ್ದಿತು. ದೆಹಲಿ, ಕಲ್ಕತ್ತ, ಕಾನ್ಪುರ, ಬೊಂಬಾಯಿ, ಪುಣೆ, ಕುರುಕ್ಷೇತ್ರ ಮುಂತಾದ ಉತ್ತರ, ಮಧ್ಯ ಭಾರತದ ವಿಶ್ವವಿದ್ಯಾಲಯಗಳಿಂದ ಮಾತ್ರವಲ್ಲದೆ, ಪರರಾಷ್ಟ್ರಗಳಿಂದಲೂ ಹಲವರು ಆಗಮಿಸಿದ್ದರು. ದಕ್ಷಿಣ ಭಾರತದ ಬಹುತೇಕ ಎಲ್ಲ ವಿಶ್ವವಿದ್ಯಾನಿಲಯಗಳಿಂದಲೂ ಸದಸ್ಯರು ಭಾಗವಹಿಸಿದ್ದರು.

ಈ ಸಮ್ಮೇಳನದ ಅವಕಾಶವನ್ನುಪಯೋಗಿಸಿಕೊಂಡು ಮೇ 31 ಮತ್ತು ಜೂನ್ 1 ರಂದು Dravidian Aspectual System ಎಂಬ ವಿಷಯದ ಬಗ್ಗೆ ಒಂದು ವಿಚಾರ ಗೋಷ್ಠಿ ನಡೆದು, ಅದರಲ್ಲಿ ಹತ್ತು ಹದಿನೈದು ಮಂದಿ ವಿದ್ವಾಂಸರು ಮೇಲ್ಕಂಡ ವಿಷಯವಾಗಿ ಪ್ರಬಂಧಗಳನ್ನು ಮಂಡಿಸಿದ್ದು ಮಾತ್ರವಲ್ಲದೆ, ಅದರ ಬಗ್ಗೆ ಆಳವಾಗಿ ಚರ್ಚಿಸಿದರು. ಜೂನ್ 1 ನೇ ತಾರೀಕು ತಿರುವಾಂಕೂರಿನ ದ್ರಾವಿಡ



ಪುಸ್ತಕ ಬಿಡುಗಡೆ

ಬಿಡುಗಡೆಯಾದ ಪುಸ್ತಕಗಳನ್ನು ಉಪಕುಲಪತಿಯವರು ಡಾ॥ಮಾಸ್ತಿಯವರಿಗೆ ಅರ್ಪಿಸುತ್ತಿರುವುದು.

ಭಾಷಾವಿಜ್ಞಾನ ಸಂಸ್ಥೆಯ ಅಂಗವಾಗಿ ರೂಪುಗೊಳ್ಳುತ್ತಿರುವ International School of Dravidian Linguistics ಎಂಬ ಸಂಸ್ಥೆಯ ರೂಪುರೇಷೆಗಳನ್ನು ನಿರ್ಧರಿಸಲು ಅಡ್ವೈಸರಿ ಕಮಿಟಿಯ ಪ್ರಥಮ ಸಭೆ ನಡೆದು ಆ ಸಂಸ್ಥೆಯ ಬಗ್ಗೆ ಮಹತ್ವದ ನಿರ್ಣಯಗಳನ್ನು ಕೈಗೊಂಡಿತು.

ಜೂನ್ 2ನೇ ತಾರೀಕು ಬೆಳಿಗ್ಗೆ ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಸೆನೆಟ್ ಭವನದಲ್ಲಿ ಪುಣೆಯ ಡೆಕನ್ ಕಾಲೇಜಿನ ಪ್ರಾಧ್ಯಾಪಕ, ಸುಪ್ರಸಿದ್ಧ ಭಾಷಾ ವಿಜ್ಞಾನಿ ಡಾ॥ ಸಿ. ಆರ್. ಶಂಕರನ್ ಅವರು ಸಮ್ಮೇಳನವನ್ನು ಉದ್ಘಾಟಿಸಿ ತಮ್ಮ ಸಮ್ಮೇಳನಾಧ್ಯಕ್ಷ ಭಾಷಣವನ್ನು ಓದಿದರು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ಎಚ್. ನರಸಿಂಹಯ್ಯನವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ, ದ್ರಾವಿಡ ಭಾಷಾವಿಜ್ಞಾನ ಸಂಸ್ಥೆ ಪ್ರಕಟಿಸಿರುವ "A History of Malayalam Metre" ಮತ್ತು "The Commonness in the Metre of Dravidian Languages" ಎಂಬ ಗ್ರಂಥಗಳನ್ನು ಬಿಡುಗಡೆ ಮಾಡಿದರು. ಸಭೆಯ ಆರಂಭದಲ್ಲಿ ಸುಪ್ರಸಿದ್ಧ ವಿದ್ವಾಂಸ, ಭಾಷಾವಿಜ್ಞಾನಿ ದಿವಂಗತ ಡಾ॥ ಸುನೀತಿ ಕುಮಾರ ಚಟರ್ಜಿ ಅವರ ನಿಧನದ ಬಗ್ಗೆ ಸಭೆ ತನ್ನ ಗೌರವಾಂಜಲಿಯನ್ನು ಸಮರ್ಪಿಸಿತು. ಡಾ॥ ಜಿ. ಎಸ್. ಶಿವರುದ್ರಪ್ಪನವರು ತಮ್ಮ ಸ್ವಾಗತ ಭಾಷಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಪ್ರತ್ಯೇಕವಾಗಿ ಭಾಷಾವಿಜ್ಞಾನ ವಿಭಾಗವೊಂದನ್ನು ತೆರೆಯಲು ಒತ್ತಾಯಪಡಿಸಿದರು.

ಜೂನ್ 2ರ ಮಧ್ಯಾಹ್ನ, ಜೂನ್ 3ರ ಬೆಳಿಗ್ಗೆ ಮತ್ತು ಮಧ್ಯಾಹ್ನ – ಹೀಗೆ ಒಟ್ಟು ಮೂರು ಅಧಿವೇಶನಗಳಲ್ಲಿ, ಒಂದೊಂದು ಅಧಿವೇಶನದಲ್ಲೂ ಒಟ್ಟಿಗೆ ಮೂರು ಗೋಷ್ಠಿಗಳಂತೆ ಒಟ್ಟು ಒಂಬತ್ತು ಗೋಷ್ಠಿಗಳು ನಡೆದು ನೂರಿಪ್ಪತ್ತಕ್ಕೆ ಮೇಲ್ಪಟ್ಟು ಪ್ರಬಂಧಗಳು ಮಂಡಿತವಾದುವು. ವಿಶೇಷವಾಗಿ ದ್ರಾವಿಡಭಾಷೆಗಳಿಗೆ ಸಂಬಂಧಿಸಿದಂತೆ ಸ್ವನಿಮವಿಜ್ಞಾನ, ಆಕೃತಿಮವಿಜ್ಞಾನ, ವಾಕ್ಯವಿಜ್ಞಾನ, ಶೈಲಿ ವಿಜ್ಞಾನ, ಐತಿಹಾಸಿಕ-ತೌಲನಿಕ ವಿಜ್ಞಾನ, ಅನುವಾದ, ಸಾಮಾಜಿಕ ಭಾಷಾವಿಜ್ಞಾನ, ಶಬ್ದನಿಷ್ಪತ್ತಿ, ಸಾಂಪ್ರದಾಯಿಕ ವ್ಯಾಕರಣಗಳು, ಅರ್ಥವಿಜ್ಞಾನ, ಭಾಷಾಬೋಧನೆ, ಜಾನಪದ ಅಧ್ಯಯನ, ನಾಮವಿಜ್ಞಾನ (onomastics), ಛಂದಸ್ಸು ಇತ್ಯಾದಿ ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಬಂಧಗಳು ಚರ್ಚಿತವಾದುವು. ಪ್ರಬಂಧಗಳ ಗುಣಮಟ್ಟ ಹಿಂದಿಗಿಂತ ಉನ್ನತವಾಗಿತ್ತು ಎಂದು ಹಿಂದಿನ ಎಲ್ಲ ಸಮ್ಮೇಳನಗಳಲ್ಲಿ ಭಾಗವಹಿಸಿದ್ದವರ ಅಭಿಪ್ರಾಯವಾಗಿತ್ತು. ಇದೂ ಸಹಜವೇ – ಮತ್ತು ವರ್ಷದಿಂದ ವರ್ಷಕ್ಕೆ ಹೀಗೆ ಗುಣಮಟ್ಟ ಹೆಚ್ಚುತ್ತಿರುವುದು ಶುಭದ ಸೂಚನೆಯಾಗಿದೆ.

2ನೇ ತಾರೀಕು ಮಧ್ಯಾಹ್ನ, ಊಟದ ವೇಳೆಯಲ್ಲಿ, ಮೊದಲ ಅಧಿವೇಶನಕ್ಕೆ ಮುಂಚೆ ಡಾ॥ ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ "Mass Education and the role of Linguists" ಎಂಬ ಚರ್ಚೆ ನಡೆಯಿತು. ಅದರಲ್ಲಿ ಸಮ್ಮೇಳನಕ್ಕಾಗಿ ಬಂದಿದ್ದ ಭಾಷಾವಿಜ್ಞಾನಿಗಳಲ್ಲದೆ, ಬೆಂಗಳೂರಿನ ಇತರ ವಿದ್ವಾಂಸರು, ಸಾಮಾಜಿಕ ಕಾರ್ಯಕರ್ತರು ಭಾಗವಹಿಸಿದ್ದರು. 3ನೇ ತಾರೀಕು ಬೆಳಗಿನ ಅಧಿವೇಶನದ ಗೋಷ್ಠಿ

ಯೊಂದರಲ್ಲಿ ಪ್ರಬಂಧಗಳ ಚರ್ಚೆಗೆ ಸಮಯ ಸಾಲದೆಂದು ಕೆಲವರು—ಮುಖ್ಯವಾಗಿ ಯುವಕರು—ಆಕ್ಷೇಪಿಸಿದ್ದರಿಂದ, ಮಧ್ಯಾಹ್ನ Transformation ಬಗ್ಗೆ ಒಂದು ವಿಶೇಷ ಗೋಷ್ಠಿ ಏರ್ಪಡಿಸಿ, ಅದರಲ್ಲಿ ಬೇರೆ ಗೋಷ್ಠಿಗಳಲ್ಲಿ ಪ್ರಬಂಧ ಓದಿದವರು ಮತ್ತೊಮ್ಮೆ ಅವನ್ನು ಮಂಡಿಸಿ ಚರ್ಚಿಸಲು ಅವಕಾಶಮಾಡಲಾಯ್ತು.

ಅದೇ 2ನೇ ತಾರೀಕು ದ್ರಾವಿಡ ಭಾಷಾವಿಜ್ಞಾನ ಸಂಘದ ಸಾಮಾನ್ಯ ಸದಸ್ಯರ ಸಭೆ ನಡೆದು ಹಿಂದಿನ ಆಯವ್ಯಯವನ್ನಲ್ಲದೆ, ಸಂಘದ ಚಟುವಟಿಕೆಗಳ ಬಗ್ಗೆಯೂ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಿತು. ಮುಂದಿನ ವರ್ಷದ ದ್ರಾವಿಡ ಭಾಷಾವಿಜ್ಞಾನ ಸಂಘದ ಅಧಿಕಾರವರ್ಗವನ್ನೂ ಚುನಾಯಿಸಲಾಯ್ತು.

ಕರ್ನಾಟಕದಿಂದ ಡಾ॥ ಎಂ. ಚಿದಾನಂದಮೂರ್ತಿಯವರು ಉಪಾಧ್ಯಕ್ಷರಲ್ಲೊಬ್ಬರಾಗಿ, ಡಾ॥ ಜೆ. ಎಸ್. ಕುಳ್ಳಿಯವರು ಕಾರ್ಯದರ್ಶಿಗಳಲ್ಲೊಬ್ಬರಾಗಿ, ಡಾ॥ ಕೆಂಪೇಗೌಡ ಮತ್ತು ಡಾ॥ ಬಿ. ಬಿ. ರಾಜಪುರೋಹಿತ ಅವರು ಸದಸ್ಯರಲ್ಲಿಬ್ಬರಾಗಿ ಚುನಾಯಿತರಾದರು.



ಮುಕ್ತಾಯ ಭಾಷಣ

ಡಾ॥ ಎಂ. ಚಿದಾನಂದಮೂರ್ತಿ, ಡಾ॥ ಜಿ. ಎಸ್. ಶಿವರುದ್ರಪ್ಪ, ಡಾ॥ ವಿ. ಐ. ಸುಬ್ರಹ್ಮಣ್ಯಂ. ಡಾ॥ ಸಿ. ಆರ್. ಶಂಕರನ್, ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್.

4 ನೆಯ ತಾರೀಕು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3.45 ರ ವರೆಗೆ (ಮಧ್ಯೆ ಎರಡು ಗಂಟೆ ಭೋಜನವಿರಾಮ ಬಿಟ್ಟು), (ದಿ) ಆರ್. ನರಸಿಂಹಾಚಾರ್ ಸ್ಮಾರಕ ದತ್ತಿ ಉಪನ್ಯಾಸಗಳು ನಡೆದವು. ದತ್ತಿ ಉಪನ್ಯಾಸಗಳ ವಸ್ತು "ಸಾಮಾಜಿಕ ಭಾಷಾವಿಜ್ಞಾನ" (Sociolinguistics). ಈ ದತ್ತಿ ಉಪನ್ಯಾಸಗಳನ್ನು ಸಮ್ಮೇಳನ ನಡೆಯುವ ಆಯಾ ಪ್ರದೇಶದ, ಈಗ ದಿವಂಗತರಾಗಿರುವ ಮತ್ತು ಈ ಶತಮಾನದ ಮೊದಲ ದಶಕಗಳಲ್ಲಿದ್ದ ವಿದ್ವಾಂಸರೊಬ್ಬರ ಸ್ಮಾರಕವಾಗಿ ದ್ರಾವಿಡ ಭಾಷಾ ವಿಜ್ಞಾನ ಸಂಘವು ಏರ್ಪಡಿಸುತ್ತದೆ. ಇದೊಂದೇ ಗೋಷ್ಠಿಯಾದ್ದರಿಂದ ಸಮ್ಮೇಳನದ ಎಲ್ಲ ಸದಸ್ಯರೂ ಭಾಗವಹಿಸಿ ಚರ್ಚೆಗಳಲ್ಲಿ ಪಾಲ್ಗೊಂಡರು. ಪ್ರೊ॥ ಎಂ. ಇ. ಭರತರಾಜ್ ಸಿಂಗ್ ಅಧ್ಯಕ್ಷತೆ ವಹಿಸಿದ್ದರು.

ಸಂಜೆ 4-00 ಗಂಟೆಯ ಮುಕ್ತಾಯ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಸಾಹಿತಿ ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಆಗಮಿಸಿದ್ದರು. ದ್ರಾವಿಡ ಭಾಷಾವಿಜ್ಞಾನ ಸಂಘದ ಉಪಾಧ್ಯಕ್ಷರಲ್ಲೊಬ್ಬರಾದ ಡಾ॥ ವಿ. ಐ. ಸುಬ್ರಹ್ಮಣ್ಯಂ ಅವರು ಅಧ್ಯಕ್ಷತೆ ವಹಿಸಿದ್ದರು. ಇವರೂ ಬೆಂಗಳೂರು ವಿಶ್ವವಿದ್ಯಾಲಯ ಭಾಷಾವಿಜ್ಞಾನದ ಪ್ರತ್ಯೇಕ ಶಾಖೆಯೊಂದನ್ನು ತೆರೆಯಲು ಒತ್ತಾಯಪಡಿಸಿದರಲ್ಲದೆ, ಅಂತಹ ನಿರ್ಣಯವೊಂದನ್ನು ಸಂಘದ ಸಾಮಾನ್ಯ ಸದಸ್ಯರ ಸಭೆ ಸ್ವೀಕರಿಸಿದ್ದನ್ನು ಸಭಿಕರ ಗಮನಕ್ಕೆ ತಂದರು.

ಈ ಸಮ್ಮೇಳನದ ಏರ್ಪಾಟಿಗಾಗಿ ರಚಿತವಾಗಿದ್ದ ಸ್ವಾಗತಸಮಿತಿಗೆ ಉಪಕುಲಪತಿ ಡಾ॥ ಎಚ್. ನರಸಿಂಹಯ್ಯನವರು ಅಧ್ಯಕ್ಷರಾಗಿ, ಡಾ॥ ಜಿ. ಎಸ್. ಶಿವರುದ್ರಪ್ಪ ಮತ್ತು ಡಾ॥ ಎಂ. ಚಿದಾನಂದಮೂರ್ತಿಯವರು ಸ್ಥಳೀಯ ಕಾರ್ಯದರ್ಶಿಗಳಾಗಿ, ಪ್ರೊ॥ ಎಂ. ಇ. ಭರತರಾಜ್ ಸಿಂಗ್, ಶ್ರೀ ಕೆ. ಟಿ. ಪಾಂಡುರಂಗಿ, (ಶ್ರೀಮತಿ) ಡಾ॥ ಅಮೀನ ಖಿಟೂನ್, ಡಾ॥ ಸರಗು ಕೃಷ್ಣಮೂರ್ತಿ, ಡಾ॥ ಟಿ. ವಿ. ಸುಬ್ಬಾರಾವು, ಶ್ರೀ ಹಂಪ ನಾಗರಾಜಯ್ಯ ಇವರು ಸದಸ್ಯರಾಗಿ, ಶ್ರೀ ಕೆ. ಪಿ. ಭಟ್ ಖಜಾಂಚಿಯಾಗಿ ಇದ್ದು ಎಲ್ಲ ವ್ಯವಸ್ಥೆಗಳನ್ನೂ ನೋಡಿಕೊಂಡರು.

ಈ ಸಂಚಿಕೆಯ ಲೇಖಕರು

ವೇಣುಗೋಪಾಲ ಸೊರಬ, ಎಂ.ಎ.	ರೂರಲ್ ಕಾಲೇಜು, ಕನಕಪುರ 562117
ಸೂ. ವೆಂ. ಅರಗ	ರೀಡರ್, ಕನ್ನಡ ವಿಭಾಗ ಸೆಂಟ್ ಜೋಸೆಫ್ ಕಾಲೇಜ್ ಬೆಂಗಳೂರು 560001
ದಾಮೋದರ ಕೃಷ್ಣ ಸೋತುವಲ್ ಎಂ.ಕಾಂ.	ವಾಣಿಜ್ಯ ವಿಭಾಗದ ಅಧ್ಯಾಪಕರು ಮಂಗಳ ಗಂಗೋತ್ರಿ, ಕೊಣಾಜೆ ಮಂಗಳೂರು 574152
ಗಾಜುಲ ವೀರಯ್ಯ, ಎಂ.ಎ.	ತೆಲುಗು ಅಧ್ಯಾಪಕರು ವಿಜಯನಗರ ಕಾಲೇಜು ಹೊಸಪೇಟೆ
ಎಚ್. ಎಚ್. ಗಂಗಾಧರಾಚಾರ್	ಸಹಾಯಕ ಅಧ್ಯಾಪಕ ಎಸ್. ಜೆ. ಪಾಲಿಟೆಕ್ನಿಕ್, ಭದ್ರಾವತಿ
ಎಚ್. ರೇವಣಸಿದ್ದಪ್ಪ, ಎಂ.ಎ.	ಇತಿಹಾಸ ಅಧ್ಯಾಪಕರು ಶ್ರೀ ಸಿದ್ಧಗಂಗಾ ಕಾಲೇಜು ತುಮಕೂರು 572102
ಮ. ಸು. ಕೃಷ್ಣಮೂರ್ತಿ	ರೀಡರ್, ಹಿಂದೀ ವಿಭಾಗ ಮಾನಸಗಂಗೋತ್ರಿ ಮೈಸೂರು 570006
ದೊಡ್ಡರಂಗೇಗೌಡ, ಎಂ.ಎ.	ಅಧ್ಯಾಪಕ, ಕನ್ನಡ ವಿಭಾಗ ಎಸ್. ಎಲ್. ಎನ್. ಕಾಲೇಜು ಬೆಂಗಳೂರು 560 002

ಎಂ. ವಿ. ಶ್ರೀನಿವಾಸಮೂರ್ತಿ ಎಂ.ಎ.	ಪ್ರವಾಚಕ ಮತ್ತು ವಿಭಾಗ ಮುಖ್ಯಸ್ಥರು ಕಲ್ಪತರು ಕಾಲೇಜು ತಿಪಟೂರು
ಎಂ. ಜಿ. ಬಿರಾದಾರ	ರೀಡರ್, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ ಗುಲ್ಬರ್ಗ 585205
ಘಟ್ಟಮರಾಜು ಮತ್ತು ಗರಣಿರಾಜು	53, 2ನೇ ಬ್ಲಾಕ್, ಟಿ. ಆರ್. ನಗರ ಬೆಂಗಳೂರು 560 028
ಭುಜೇಂದ್ರ ಮಹಿಷವಾಡಿ, ಎಂ.ಎ.	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಗೋಪಾಲಕೃಷ್ಣ	ಪ್ರಕಾಶನ ಸಮಿತಿ ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳ, ಬೆಂಗಳೂರು 560 024
ಎಚ್. ಜೆ. ವಾಮನ ಮತ್ತು ಟಿ. ಶ್ರೀವೆಂಕಟರಮಣ	ಅಧ್ಯಾಪಕರು ಸಂಖ್ಯಾಕಲನ ವಿಜ್ಞಾನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560 009
ಎಂ. ಎನ್. ಜೈಪ್ರಕಾಶ್, ಎಂ.ಎ.	ಸರಕಾರಿ ಜೂನಿಯರ್ ಕಾಲೇಜು ಮುಲ್ಕಿ (ದ. ಕ.), 574154
ಪಿ. ಬಸವಣ್ಣ	ನ್ಯಾಯವಾದಿಗಳು ಕೊಳ್ಳೇಗಾಲ
ಕೆ. ಎಚ್. ರಾಮಯ್ಯ, ಎಂ.ಎ.	ಯೋಜನಾ ಸಹಾಯಕ ಕಮ್ಯುನಿಕೇಶನ್ ಡಿಪಾರ್ಟ್‌ಮೆಂಟ್ 125, ಯು.ವಿ.ಸಿ.ಇ., ಕೆ.ಆರ್. ಸರ್ಕಲ್ ಬೆಂಗಳೂರು 560 001

ಜಿ. ಆರ್. ವಿಜಯಕುಮಾರ್	ರೋಗನಿರೋಧಕ ಮತ್ತು ಸಾಮಾಜಿಕ ವೈದ್ಯ ವಿಭಾಗ ಸೈಂಟ್‌ಜಾನ್ ಮೆಡಿಕಲ್ ಕಾಲೇಜ್ ಬೆಂಗಳೂರು 560 034
ಸಿ. ಪಿ. ಕೃಷ್ಣಕುಮಾರ್	ರೀಡರ್, ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು 570 006
ಗುಂಡ್ಮಿ ಚಂದ್ರಶೇಖರ ಐತಾಳ ಎಂ.ಎ.	ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ ಕೊಣಾಜೆ, ಮಂಗಳೂರು 574152
ಬಿ. ಆರ್. ಹಿರೇಮಠ	ಸಂಶೋಧನ ಸಹಾಯಕ ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
ಎಸ್. ಶಿವಣ್ಣ, ಎಂ.ಎ.	ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ ಜ್ಞಾನ ಭಾರತಿ, ಬೆಂಗಳೂರು 560 056

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಸಂಪುಟ	1	ಕನ್ನಡ ಸಾಹಿತ್ಯ ಸಮೀಕ್ಷೆ	...	ಜಿ. ಎಸ್. ಶಿವರುದ್ರಪ್ಪ
ಸಂಪುಟ	2	ಶಾಸನ ಮತ್ತು ಗದ್ಯ	...	ಹು. ಕಾ. ಜಯದೇವ್
ಸಂಪುಟ	3	ಶಾಸ್ತ್ರ ಸಾಹಿತ್ಯ	...	ಎಂ. ವಿ. ಸೀತಾರಾಮಯ್ಯ
ಸಂಪುಟ	4	ಚಂಪೂ ಕವಿಗಳು	...	ಪಿ. ವಿ. ನಾರಾಯಣ
ಸಂಪುಟ	5	ವಚನ ಸಾಹಿತ್ಯ	...	ಎಂ. ಚಿದಾನಂದಮೂರ್ತಿ
ಸಂಪುಟ	6	ಷಟ್ಪದಿ ಸಾಹಿತ್ಯ	...	ಕೆ. ಮರುಳಸಿದ್ದಪ್ಪ
ಸಂಪುಟ	7	ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ	...	ಕಾಳೇಗೌಡ ನಾಗವಾರ
ಸಂಪುಟ	8	ಕೀರ್ತನಕಾರರು	...	ಎಚ್. ಎಸ್. ವೆಂಕಟೇಶ ಮೂರ್ತಿ
ಸಂಪುಟ	9	ಸಾಂಗತ್ಯ ಕವಿಗಳು	...	ಹಂಪ. ನಾಗರಾಜಯ್ಯ
ಸಂಪುಟ	10	ಹೊಸಗನ್ನಡ ಸಾಹಿತ್ಯ	...	ಎಲ್. ಎಸ್. ಶೇಷಗಿರಿ ರಾವ್

ಪ್ರತಿ ಸಂಪುಟದ ಬೆಲೆ : ರೂ. 4–00

ಈ ಸಂಪುಟಗಳನ್ನು ಕೊಳ್ಳುವ ಸಲುವಾಗಿ
ಸುಲಭ ಕಂತುಗಳಲ್ಲಿ ಸಾಲ ಸೌಲಭ್ಯವನ್ನು ಕೆನರಾ ಬ್ಯಾಂಕ್ ಒದಗಿಸಿದೆ.
ಕೆನರಾ ಬ್ಯಾಂಕ್‌ನ ಕರ್ನಾಟಕದ ಯಾವುದೇ ಶಾಖೆಯಲ್ಲಿ ಈ ಬಗ್ಗೆ
ವಿವರಗಳನ್ನು ಪಡೆಯಬಹುದು.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು